ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭	ಜನವರಿ ೧೯೩೮	ವರ್ಷ ೯ ಸಂ. ೧೦

ಪ್ರಾಥಮಿಕ ಶಿಕ್ಷಣದ ಹೊಸಯೋಜನೆ

ಶ್ರೀ. ಡಿ. ವ್ಹಿ. ಕಾಳೆ ಬಿ. ಎ., ಎಡಿಟರರು ಪ್ರಾಥಮಿಕ ಶಿಕ್ಷಣ ಧಾರವಾಡ

ರಾಜಕೀಯ ಯೋಜನೆಗಳಿಲ್ಲ ಹೋಗಿ ಹೊಸಹೊಸ ಯೋಜನೆಗಳು ಬರುವ ಭ್ರಾಂತಿಯ ಕಾಲವು ಈಗಿನದು. ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಹೊಸಹೊಸ ಗತಿಗಳು ರೂಢಿಯಲ್ಲಿ ಬರುತ್ತಿರುವವು. ಅದೇ ಮೇರೆಗೆ ಶಿಕ್ಷಣದಲ್ಲಿಯೂ ಹೊಸಹೊಸ ಪದ್ಧತಿಗಳು ಬಳಕೆಯಲ್ಲಿ ಬರಲಿರುವವು. ನಮ್ಮ ಶಿಕ್ಷಣ ಕ್ರಮವು ಸಾಯಾಗಿರುವದಿಲ್ಲ. ಅದರಲ್ಲಿ ಅನೇಕ ಕೊರತೆಗಳಿರುವವು; ಈಗಿನ ಶಿಕ್ಷಣವು ಸ್ವಾವಲಂಬಿಯಾದ ನಾಗರಿಕರನ್ನು ಮಾಡಲು ಸಮರ್ಥವಿಲ್ಲ; ಕೈಕೆಲಸವನ್ನು ಮಾಡಲು ಬಾಲಕರಲ್ಲಿ ಅಭಿರುಚಿಯನ್ನು ಹುಟ್ಟಿಸುವಂತಿಲ್ಲ; ಎಂಥ ಕೆಲಸವಾದರೂ ಕೀಳ್ಯತೆಯಲ್ಲಿ ಇದು ಹೀನವಾದದ್ದಲ್ಲೆಂಬ ಭಾವನೆಯನ್ನು ಅದು ಹುಟ್ಟಿಸಿಲ್ಲ; ಒಂದು ಉಪಜೀವನ ಸಾಧನವಾಗಿಲ್ಲ ಈ ಮೊದಲಾದ ವಿಚಾರಗಳು ಜನರಲ್ಲಿದ್ದು ಹೇಳುತ್ತಿದ್ದರೂ ಅದನ್ನು ಕಿತ್ತೊಗೆದು ಬೇರೊಂದು ಉಪಯುಕ್ತವಾದ ಯೋಜನೆಯನ್ನು ರೂಢಿಯಲ್ಲಿ ತರಲು ಇದುವರೆಗೆ ಪ್ರಯತ್ನಮಾಡಿದವರು ತೀರ ವಿರಳ.

ಆದರೆ ಕಾಂಗ್ರೆಸ ಪಕ್ಷದವರು ಅಧಿಕಾರಾರೂಢರಾದಂದಿನಿಂದ ಈ ದಲ್ಲಿಯ ಕೊರತೆಗಳನ್ನು ಹೊರಗೆ ಹಾಕಲು ಭಗೀರಥ ಪ್ರಯತ್ನವಾಯಿತು. **ಮಹಾತ್ಮಾ ಗಾಂಧಿಯವರು** ಅಕ್ಟೋಬರ ತಿಂಗಳ ಕೊನೆಗೆ 'ವರ್ಧಾ' ಎಂಬಲ್ಲಿ ಬೇರೆ ಪ್ರಾಂತ್ಯಗಳಿಂದ ಶಿಕ್ಷಣ ವಿಶಾರದರನ್ನು ಕರೆಯಿಸಿ ದೊಡ್ಡದೊಂದು ಯನ್ನು ಕೂಡಿಸಿ ತಮ್ಮ ಬಹುದಿವಸಗಳಿಂದ ಅನುಭವ ಪಡೆದ ಅಭಿಪ್ರಾಯಗಳ ಆ ಜನರ ಮುಂದಿಟ್ಟರು. ಹಿಂದುಸ್ತಾನದ ಶಿಕ್ಷಣದ ಇತಿಹಾಸದಲ್ಲಿ ಇದೊಂ ಮಹತ್ವದ ಸಂಗತಿಯು. ಆ ಸಭೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾ ಕೂಡಲೆ ಪ್ರಚಾರದಲ್ಲಿ ಹೇಗೆ ತರಬಹುದು, ಅದಕ್ಕೆ ಬೇಕಾಗುವ ಧನವನ್ನು ಹ ಒದಗಿಸಬಹುದು, ಒತ್ತಾಯದ ಶಿಕ್ಷಣವನ್ನು ಯಾವ ವಯಸ್ಸಿನವರೆಗೆ ತಕ್ಕದ್ದು, ಪ್ರಾಥಮಿಕ ಶಿಕ್ಷಣದಲ್ಲಿ ಕೈಗಾರಿಕೆಯನ್ನು ಸೇರಿಸಿ ವ್ಯಯ ದೃಷ್ಟಿಯಿ ಅದನ್ನು ಸ್ವಯಂಪೋಷಕವಾಗಿ ಮಾಡಬಹುದೋ ಎಂಬಿವೇ ಮೊದಲಾದ ಈ ವಿಚಾರಗಳು ನಡೆದವು; ಬಳಿಕ ಡಾ. ಝಾಕೀರ ಹುಸೇನರ ಅಧ್ಯಕ್ಷತೆಯಲ್ಲಿ ಒ ದೊಂದು ಸಮಿತಿಕೂಡಿ ಒಂದು ತಿಂಗಳಿನಲ್ಲಿಯೇ ಒಂದು ವರದಿಯನ್ನು ಹೊರ ಬೇಕೆಂಬದಾಗಿ ಗೊತ್ತಾದ ಮೇರೆಗೆ ಆ ಸಮಿತಿಯವರ ಅಭಿಪ್ರಾಯಗ ವೃತ್ತಪತ್ರಗಳಲ್ಲಿ ಈಗ ಪ್ರಕಟವಾಗಿರುವವು.

ಶಿಕ್ಷಣವು ತತ್ವದೃಷ್ಟಿಯಿಂದ ದೋಷರಹಿತವಾಗಿರಬೇಕಾದರೆ ಆ ಶಿಕ್ಷಣ ಯಾವುದಾದರೊಂದು ಕೈಗಾರಿಕೆಯ ಶಿಕ್ಷಣವನ್ನು ಮುಖ್ಯವಾಗಿ ಇವಲಂಬಿ ಬೇಕು. ಅಂದರೆ ಪ್ರಾಮುಖ್ಯವಾಗಿ ಬಾಲಕರು ಶಾಲೆಯಲ್ಲಿ ಒಂದು ಕೈಗಾ ಯನ್ನು ಕಲಿಯುವಂತೆ ಇರಬೇಕು; ಅದರ ಸಂಗಡ ವಿಷಯಜ್ಞಾನವನ್ನು ಸಂ ದಿಸಲು ಅವಕಾಶವಿರಬೇಕು. ವಿಷಯ ಜ್ಞಾನದಿಂದ ಆಗಬೇಕಾದ ಸಾಂಸ್ಕೃತಿ ಲಾಭವನ್ನು ಉಪೇಕ್ಷಿಸದೆ ಧನೋತ್ಪಾದನ ಸಾಧನವಾದ ಕೈಗಾರಿಕೆಯ ಬಾಲಕರು ಹೊಂದಬೇಕು. ಒತ್ತಾಯದ ಈ ಪ್ರಾಥಮಿಕ ಶಿಕ್ಷಣವು ಬಾಲ ೭ನೆಯ ವರ್ಷದಿಂದ ಮೊದಲ್ಗೊಂಡು ಏಳುವರ್ಷಗಳವರೆಗೆ ಅಂದರೆ ಬಾಲ ೧೪ನೆಯ ವರ್ಷದವರೆಗೆ ಸಾಗತಕ್ಕದ್ದು. ಇದು ಹೆಣ್ಣುಮಕ್ಕಳಿಗೂ ಗಂಡುಮ ಳಿಗೂ ಈ ವಯಸ್ಸಿನಲ್ಲಿ ಒತ್ತಾಯದ ಶಿಕ್ಷಣವು ಆಗಿರುವದು. ಇಂದಿನ ಸ್ಯಾಟ್ರಿ ಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದುವ ಬಾಲಕರ ಯೋಗ್ಯತೆಯ ಸಾಮರ್ಥ್ಯವು ಬರುವ ಹಾಗೆ ಈ ಶಿಕ್ಷಣದಲ್ಲಿ ವಿಷಯಗಳ ಸಮಾವೇಶ ಮ ಲಾಗಿದೆ. ಆದರೆ ಇಂಗ್ಲಿಷ ಭಾಷೆಯನ್ನು ಹೊರತುಪಡಿಸಿ ಇತರ ವಿಷಯಗಳಿಗೆ ಈ ಅಭ್ಯಾಸ ಕ್ರಮದ ರಚನೆಯಿರುವದು. ಏಳುವರ್ಷದವರಿಗಿಂತಲೂ ಚಿಕ್ಕವರಿ

ಲೆಗಳಿದಕ್ಕದ್ದು; ಆದರೆ ಆಗಿನ ಶಿಕ್ಷಣವು ಐಚ್ಛಿಕವಾದದ್ದಲ್ಲದೆ ಒತ್ತಾಯದಾ
ರವಿರಲಿಲ್ಲ.

ಈ ಅಭ್ಯಾಸಕ್ರಮದಲ್ಲಿ ೧. ಕೈಗಾರಿಕೆ, ೨. ಮಾತೃಭಾಷೆ, ೩. ಗಣಿತ, ಸಾಮಾಜಿಕ ವಿಷಯಗಳು, ೫. ಶಾಸ್ತ್ರ. ೬. ಗಾಯನ, ೭. ಹಿಂದುಸ್ಥಾನೀ ಭಾಷೆ ಮೊದಲಾದ ವಿಷಯಗಳು ಸೇರಿರುವವು. ಅವುಗಳಲ್ಲಿ

೧. **ಕೈಗಾರಿಕೆ:—** ಇದು ಪ್ರಥಮಪದವನ್ನು ಹೊಂದಿರುವದು. ಈ ಅಭ್ಯಾಸಕ್ರಮಾನುಸಾರವಾಗಿ ಶಿಕ್ಷಣ ಹೊಂದಿದವನು ತನ್ನ ಆಯುಷ್ಯದಲ್ಲಿ ಆ ಉದ್ಯೋಗವನ್ನು ಸಾಗಿಸಿಕೊಂಡು ತನ್ನ ಉಪಜೀವನ ಕ್ಷಮನಾಗಬೇಕೆಂಬುದೇ ಇದರ ಹೆಗ್ಗುರಿಯು. ಇನ್ನು ಇಂಥದೊಂದೇ ಕೈಗಾರಿಕೆಯೆಂದು ಹೇಳದೆ ಹಲವು ಬೇರೆ ಬೇರೆ ವ್ಯವಸಾಯಗಳು ಈ ಕ್ರಮದಲ್ಲಿ ಸೇರಿವೆ. ಅವು ಯಾವುವೆಂದರೆ–

೧. ನೂಲುವದು ಹಾಗು ನೆಯ್ಯುವದು.

೨. ಬಡಗಿತನ.

೩ ಒಕ್ಕಲತನ.

೪. ಕಾಯಿ–ಪಲ್ಲೆ ಇಲ್ಲವೆ ಹಣ್ಣು–ಹಂಪಲಗಳನ್ನು ಬೆಳೆಸುವದು.

೫. ಚರ್ಮಗಾರಿಕೆ.

೬. ಇವಲ್ಲದೆ ಪರಿಸ್ಥಿತ್ಯನುಸಾರವಾಗಿ ಬೇಕಾದ ಬೇರೊಂದು ವ್ಯವಸಾಯವನ್ನೂ ಅನುಸರಿಸಬಹುದು.

ಬೇರೆ ಬೇರೆ ಉದ್ಯೋಗಗಳನ್ನು ಅನುಸರಿಸಿದರೂ ಪ್ರತಿಯೊಬ್ಬನಿಗೆ ಅವಶ್ಯವಾದ ಹತ್ತಿಯನ್ನು ಹಿಂಜುವದೂ ಕದರಿನಿಂದ ನೂಲುವದೂ ತಕ್ಕಮಟ್ಟಿಗೆ ಬರಲೇಬೇಕು. ಇಲ್ಲದೆ ಒಕ್ಕಲತನದ ಹೋರೆಗಳ ಜ್ಞಾನವೂ ಇರಬೇಕು.

೨. **ಮಾತೃಭಾಷೆ.—** ಈ ವಿಷಯದ ಜ್ಞಾನವು ಎಲ್ಲ ವಿಷಯಗಳ ಜ್ಞಾನಕ್ಕೆ ತಳಹದಿಯಾಗಿರುವದು. ಸಮರ್ಪಕವಾಗಿ ಮಾತಾಡಲು ಬಾರದಿದ್ದ ಮತ್ತು ಮಾತೃಭಾಷೆಯಲ್ಲಿ ವಾಚನ ಲೇಖನ ಸಾಮರ್ಥ್ಯವಿಲ್ಲದವನೂ ತಕ್ಕಷ್ಟು ವಿಚಾರಶೀಲನಾಗಲಾರನು; ಅವನಲ್ಲಿ ಸರಿಯಾದ ವಿಚಾರಗಳು ಹುಟ್ಟಲಾರವು; ಹಾಗು ಹುಟ್ಟಿದ ವಿಚಾರಗಳಲ್ಲಿ ಸ್ಪಷ್ಟತೆ ಉಂಟಾಗಲಾರದು; ಅವನಲ್ಲಿ ಮನೋವಾಸನೆಗಳು ಮನೋವೃತ್ತಿಗಳು ಸ್ಥಿರವಾಗಲಾರವು; ಸಮಾಜ-ಬಂಧನ, ರೀತಿ–

ನೀತಿಗಳು ಅವನಲ್ಲಿ ಹುಟ್ಟಲಾರವು; ಆದಕಾರಣ ಇವೆಲ್ಲ ಸಾಧಿಸುವ ಪ್ರಾ
ಮಾತೃಭಾಷೆಯ ಅಭ್ಯಾಸವಿರಬೇಕೆಂಬುದೇ ಹೊಸ ಯೋಜನೆಯ ಉದ್ದೇಶ;
ಏಳುವರ್ಷಗಳವರೆಗೆ ಶಿಕ್ಷಣವನ್ನು ಹೊಂದಿದವನಲ್ಲಿ ಕೆಳಗೆ ಹೇಳಿದ ಮೇ
ಬಲಗಳಿರಬೇಕು.

೧. ತನ್ನ ಪರಿಚಯದೊಳಗಿನ ಯಾರೊಬ್ಬರು, ಯಾವುದೊಂದು ವಸ್ತು
ಇಲ್ಲವೆ ಯಾವುದೊಂದು ನಡೆದ ಸಂಗತಿ ಇವುಗಳ ವಿಷಯವಾಗಿ ಸ್ಪಷ್ಟವಾಗಿಯೂ
ಸರಿಯಾಗಿಯೂ ಶುದ್ಧವಾದ ಭಾಷೆಯಲ್ಲಿ ನುಡಿಯಲು ಸಮರ್ಥನಿರಬೇಕು.

೨. ಪ್ರತಿನಿತ್ಯ ವ್ಯವಹಾರದ ಯಾವದೊಂದು ವಿಷಯವನ್ನು ಕುರಿ
ಸಮಂಜಸವಾಗಿಯೂ ಸ್ಪಷ್ಟವಾಗಿಯೂ ಧೈರ್ಯದಿಂದಲೂ ಮಾತಾಡಲು ಶ
ವುಳ್ಳವನಿರಬೇಕು.

೩. ಸಾಧಾರಣ ವಾಡಿಕೆಯಲ್ಲಿರುವ ಹಸ್ತಲಿಖಿತ ಪತ್ರಗಳನ್ನು ಅ
ಬೋಧವಾಗುವ ಹಾಗೆ ಓದಲು ಬರಬೇಕು. ಅದೇಮೇರೆಗೆ ವರ್ತಮಾನಪ
ಗಳನ್ನು ಅರ್ಥಬೋಧವಾಗುವಹಾಗೆ ಮೌನದಿಂದ ಓದಬೇಕು.

೪. ಗದ್ಯ-ಪದ್ಯಗಳನ್ನು ಎರಡನೆಯವರಿಗೆ ಅರ್ಥಬೋಧವಾಗುವ ಹಾ
ಓದಿದ ಭಾಗವನ್ನು ತಿಳಿದುಕೊಂಡು ಆನಂದಬಡುವ ಹಾಗೂ ಸ್ಪಷ್ಟವಾಗಿ ಓದ
ಬರಬೇಕು.

೫. ಯಾವದೊಂದು ಪುಸ್ತಕದಲ್ಲಿ ಕೊಟ್ಟ ಅನುಕ್ರಮಣಿಕೆ ಪರಿಶಿಷ್ಟ
ಉಪಯೋಗವನ್ನು ತಿಳಿದಿರಬೇಕು; ಶಬ್ದಕೋಶಗಳ ಉಪಯೋಗ ಮಾಡ
ಗೊತ್ತಿರಬೇಕು. ಒಟ್ಟಿಗೆ ಪುಸ್ತಕಾಲಯ- ವಾಚನಾಲಯಗಳ ಲಾಭ ಕೊಂಡ
ಬಲವಿರಬೇಕು.

೬. ಸರಿಯಾಗಿಯೂ ಸ್ಪಷ್ಟವಾಗಿಯೂ ಹೆರವರಿಗೆ ಅರ್ಥಬೋಧವಾಗ
ಹಾಗೆಯೂ ಬರೆದು ತಿಳಿಸುವ ಸಾಮರ್ಥ್ಯವಿರಬೇಕು. ಅದರಲ್ಲಿ ತಕ್ಕಹಾ ಗತಿಯ
ವೇಗವೂ ಇರಬೇಕು.

೭. ಲೇಖನದಿಂದ ತನ್ನ ಹಳ್ಳಿಯಲ್ಲಿ ನಡೆದ ಸಂಗತಿಯನ್ನು ತಿಳಿಸ
ಸಾಮರ್ಥ್ಯವಿರಬೇಕು. ಯಾವುದಾದರೊಂದು ಸಹಕಾರಸಂಘದ ಕಾರ್ಯ
ರಿಪೋರ್ಟು ಮಾಡಲು ಬರಬೇಕು.

೮. ಮನೆತನದ ಇಲ್ಲವೆ ಅಂಗಡಿಯ ವ್ಯವಹಾರಗಳ ಪತ್ರಲೇಖನದಲ್ಲಿ ಶಕ್ತ
ಬೇಕು.

೯. ಪ್ರಸಿದ್ಧ ಲೇಖಕರ ಗ್ರಂಥಗಳ ಪರಿಚಯವಿರಬೇಕು. ಆ ಗ್ರಂಥಗಳ
ಷಯವಾಗಿಯೂ ಲೇಖಕರ ವಿಷಯವಾಗಿಯೂ ಬಾಲಕನಲ್ಲಿ ಅಭಿರುಚಿ
ರಬೇಕು.

೩. **ಗಣಿತ:**— ಬಾಲಕನಲ್ಲಿ ತನ್ನ ಕೈಗಾರಿಕೆಯ ಎಣಿಕೆಯ ಲೆಕ್ಕಗಳನ್ನು
ಪ್ರದಿಂದ ಬಿಡಿಸಲು ಬಲ ಬರಬೇಕು. ಅದೇಮೇರೆಗೆ ತನ್ನ ಮನೆತನದ ಹಾಗು
ಸಾಜಿಕ ವ್ಯವಹಾರಗಳನ್ನು ಅಂದರೆ ಲೆಕ್ಕಗಳನ್ನು ಬಿಡಿಸಲು ಬರಬೇಕು. ಲೆಕ್ಕ
ಕ್ರಗಳ ವ್ಯವಹಾರಜ್ಞಾನವೂ ಜಮಾಖರ್ಚಿನ ಪರಿಚಯವೂ ಆಗಬೇಕು. ಭೂವಿ
ಯ ಜ್ಞಾನವೂ ಆಗಬೇಕು. ಇಷ್ಟು ಬಲ ಉಂಟಾಗಬೇಕಾದರೆ ಅವನಿಗೆ
ುಂದಿನ ವಿಷಯಜ್ಞಾನವಾಗಬೇಕು:—

೧. ತ್ರೈರಾಶಿಕ, ೨ ಪಂಚರಾಶಿಕ, ೩ ವ್ಯವಹಾರಿ ಅಪೂರ್ಣಾಂಕ, ೪
ಕಮಾನ ಪದ್ಧತಿ, ೫ ಸರಳಬಡ್ಡಿ, ೬ ಕ್ಷೇತ್ರಫಲ, ೭ ವ್ಯಾವಹಾರಿಕ,
ಿಮಿತಿ, ೮ ಜಮಾಖರ್ಚಿನ ಮೂಲತತ್ವಗಳು.

ಕಲಿಸುವ ಪದ್ಧತಿ:— ಕೇವಲ ಸಂಖ್ಯೆ ಇಲ್ಲವೆ ಎಣಿಕೆಗಳ ಜ್ಞಾನದಿಂದ
ಯೋಜನವಿಲ್ಲ. ಮೂಲಭೂತವಾಗಿ ತಾನು ಕಲಿಯುವ ಕೈಗಾರಿಕೆಯನ್ನು ಒಳ
ಗೊಂಡ ಲೆಕ್ಕಗಳ ಜ್ಞಾನವು ಅವನಿಗೆ ಆಗಬೇಕು. ತನ್ನ ಸಾಲೆ– ಮನೆ– ಹಾಗು
ಸಾಜಿಕ ಇವುಗಳ ಸಮಸ್ಯೆಗಳನ್ನು ಒಳಕೊಂಡ ಗಣಿತ ಜ್ಞಾನವು ಅವನಿಗೆ ಬೇಕು.
ಬಾಲಕನಲ್ಲಿ ವಿಚಾರಶಕ್ತಿಯನ್ನು ಬೆಳಿಸಲು ಇಂಥ ಗಣಿತ ವಿಷಯವು ಅನುಕೂಲ
ವಾದ ಸಾಧನ.

೪. **ಸಾಮಾಜಿಕ ವಿಷಯಗಳು:**—ಈ ವಿಷಯವನ್ನು ಕಲಿಸುವ ಉದ್ದೇಶ.

೧. ಸಾಮಾನ್ಯವಾಗಿ ಇಡಿಯ ಮಾನವಕುಟುಂಬದ ವಿಷಯವಾಗಿ ಬಾಲಕ
ಲ್ಲಿ ಆಸ್ಥೆ–ಪ್ರೀತಿ–ಅಭಿರುಚಿಗಳು ಹುಟ್ಟಬೇಕು. ಅವು ವಿಶೇಷವಾಗಿ ಹಿಂದು
ಸ್ತಾನದ ವಿಷಯವಾಗಿ ಹೆಚ್ಚಾಗಿರಬೇಕು.

೨. ಬಾಲಕನ ಸುತ್ತುಮುತ್ತಲಿನ ಸಾಮಾಜಿಕ ಹಾಗು ಭೌಗೋಲಿಕ
ರಿಸ್ಥಿತಿಯ ಪರಿಚಯವುಂಟಾಗಿ ಅದನ್ನು ಸುಧಾರಿಸುವ ಹಂಬಲವು ಅವನಲ್ಲಿ
ುಟ್ಟಬೇಕು.

೩. ಒಟ್ಟಿಗೆ ಸ್ವದೇಶಪ್ರೀತಿಯು ಮೊಳೆತು, ಪ್ರಾಚೀನ ಸಂಗತಿ
ವಿಷಯವಾಗಿ ಆದರಹುಟ್ಟಿ, ಭವಿಷ್ಯಕಾಲದ ಸುಸ್ಥಿತಿಯ ವಿಷಯವಾಗಿ ಭಕ್ತಿ
ಮೂಡಬೇಕು. ಇದೆಲ್ಲ ಪ್ರೇಮ, ಸತ್ಯ, ನ್ಯಾಯ್ಯವಂತಿಕೆಗಳ ಆಧಾರದಮೆ
ಉಂಟಾಗಬೇಕು. ಸಮಾಜದಲ್ಲಿ ಸಹಕಾರದ ಮಹತ್ವವನ್ನು ಬಾಲಕನು ತಿಳಿ
ಬೇಕು.

೪. ನಾಗರಿಕನ ಕರ್ತವ್ಯಗಳ ಹೊಣೆಗಾರಿಕೆಯೂ ಅವನ ಹಕ್ಕು
ಜ್ಞಾನವೂ ಆಗಬೇಕು.

೫. ಬಾಲಕರಲ್ಲಿ ವೈಯಕ್ತಿಕ ಹಾಗು ಸಾಮಾಜಿಕ ಗುಣಗಳು ಮೂ
ಬಾಲಕನೆಂದರೆ ಒಬ್ಬ ಸಂಬಿಗಸ್ತ ಸಂಗಡಿಗನೂ ವಿಶ್ವಸನೀಯ ನೆರೆಹೊರೆಯವನ
ಎಂಬ ಹಾಗೆ ಆಗಬೇಕು.

೬. ಪೃಥ್ವಿಯೊಳಗಿನ ಬೇರೆ ಬೇರೆ ಧರ್ಮಗಳ ವಿಷಯವಾಗಿ ಪರಸ್ಪರ
ಆದರ ಹುಟ್ಟಬೇಕು.

ಇತಿಹಾಸ, ಭೂಗೋಲ; ಸಮಾಜಶಾಸ್ತ್ರ, ಹಾಗು ಪೃಥ್ವಿಯೊಳಗಿನ
ಧರ್ಮಗಳ ಆದರಪೂರ್ವಕ ಅಭ್ಯಾಸ ಇವು ಆದರೆ ಮೇಲೆ ಹೇಳಿದ ಉದ್ದೇಶಗ
ಕೈಗೂಡುವವು. ಬಾಲಕನ ಪರಿಸ್ಥಿತಿಯ ಪ್ರಶ್ನೆಗಳ ವಿಚಾರವೇ ಈ ವಿಷಯ
ಪ್ರಥಮ ಪಾಠವಾಗಬೇಕು. ಜನರು ತಮ್ಮ ತಮ್ಮ ಬೇಡಿಕೆಗಳನ್ನು ಎ
ವಿಧವಾಗಿ ಪೂರೈಸಿಕೊಳ್ಳುವರೆಂಬದನ್ನು ಬಾಲಕನು ತಿಳಿದುಕೊಳ್ಳಬೇ
ಸ್ತ್ರೀಯರೂ ಪುರುಷರೂ ಮಾಡುವ ಕಾರ್ಯಗಳ ವಿಷಯವಾಗಿ ಈ ಅಭ್ಯಾಸ
ಅವನಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಬೇಕು.

೧. ಹಿಂದುಸ್ತಾನದೇಶದ ಇತಿಹಾಸದ ರೂಪರೇಷೆಯ ಅಭ್ಯಾಸ
ಸಾಕಷ್ಟಾಗಬೇಕು. ಆದರೆ ಆಗಾಗ ಆ ಇತಿಹಾಸದಲ್ಲಿ ಸಾಮಾಜಿಕ ಹಾ
ಸಾಂಸ್ಕೃತಿಕ ವೃದ್ಧಿಗಳು ಜನರ ಜೀವನದಲ್ಲಿ ಹೇಗೆ ಬೆರೆತುಕೊಂಡವೆಂಬದ
ಹೆಚ್ಚು ಸ್ಪಷ್ಟವಾಗಿ ತಿಳಿಸಿ ಹೇಳಬೇಕು. ಈ ರೀತಿಯಿಂದ ರಾಜಕೀಯ ವಿಷ
ದಲ್ಲಿ ವಿಶಾಲದೃಷ್ಟಿಯೂ ಸಾಂಸ್ಕೃತಿಕ ದೃಷ್ಟಿಯಿಂದ ಏಕರೂಪತೆಯೂ ಹೆ
ಬೆಳೆದೆವೆಂಬದು ಬಾಲಕರಿಗೆ ತಿಳಿಯುವಂತೆ ಅಭ್ಯಾಸಕ್ರಮವಿರಬೇಕು. ಒ
ಮನುಷ್ಯರ ಆಯುಷ್ಯದ ಉಚ್ಚಧ್ಯೇಯಗಳು ಯಾವವು ಇರಬೇಕು, ಸತ್ಯ, ನ್ಯಾ
ವಂತಿಕೆ, ಸಹಕಾರ ಭಾವನೆ, ರಾಷ್ಟ್ರೀಯ ಐಕ್ಯ, ಹಾಗು ಭಿನ್ನಭಿನ್ನ ವರ್ಗ
ಜನರಲ್ಲಿಯೂ ಬಾಂಧವ್ಯ ಸಮಾನತೆ ಇವುಗಳ ಹೆಚ್ಚು ಭಾರವನ್ನು ಕೊ

ಕ್ಷಣವು ನಡೆಯಬೇಕು. ಕೆಳಗಿನ ಇಯತ್ತೆಗಳಲ್ಲಿ ಬೇರೆ ಬೇರೆ ಜನರ ಚರಿತ್ರೆ
ಳನ್ನು ಕಲಿಸಬೇಕು, ಮೇಲಿನ ವರ್ಗಗಳಲ್ಲಿ ಸಾಂಸ್ಕೃತಿಕ ಹಾಗು ಸಾಮಾಜಿಕ
ಷಯಗಳನ್ನು ಹೇಳಿಕೊಡಬೇಕು. ಹಿಂದಿನ ಸಂಸ್ಕೃತಿಯ ಅಭಿಮಾನವು ಇಂದಿನ
ಷ್ಟ್ರೀಯ ಭಾವನೆಯಲ್ಲಿ ಒಣ ಹೆಮ್ಮೆಯನ್ನು ಹುಟ್ಟಿಸಬಾರದು. ಜನಜೀವನದ
ುದ್ಧಾರಕರ ಚರಿತ್ರವೂ ಶಾಂತತೆಗಾಗಿ ಅವರು ಮಾಡಿದ ಪ್ರಯತ್ನಗಳ ಸಾಫ
ನ್ನೂ ಈ ಅಭ್ಯಾಸಕ್ರಮದಲ್ಲಿ ಪ್ರಾಶಸ್ತ್ಯಪದವನ್ನು ಸಂಪಾದಿಸಿರಬೇಕು.
ಾಂತತೆಯನ್ನು ಉಂಟುಮಾಡಿದ ಸಂಗತಿಗಳಿಗೆ ಪಾಠಗಳ ಕ್ರಮದಲ್ಲಿ ಹೆಚ್ಚಿನ
ೆಯಿರಬೇಕು. ಹಿಂಸೆ, ವಂಚನೆ ಅತ್ಯಾಚಾರಗಳಿಗಿಂತ ಅಹಿಂಸೆಯು ಹೆಚ್ಚು
ಕಾರಿಯಾದದ್ದು ಎಂಬದನ್ನು ಬಾಲಕರು ಮನಗಾಣುವಂತೆ ಇರಬೇಕು.
ಂದುಸ್ಥಾನದಲ್ಲಿ ರಾಜಕೀಯ ಭಾವನೆ ಹೇಗೆ ಹುಟ್ಟಿತು, ಅದು ಹೇಗೆ ವೃದ್ಧಿ
ೊಂದಿತು, ಸಾಮಾಜಿಕ, ರಾಜಕೀಯ ಹಾಗು ಆರ್ಥಿಕ ಸ್ವಾತಂತ್ರ್ಯವನ್ನು
ಡೆಯಲು ಹಿಂದುಸ್ಥಾನವು ಹೇಗೆ ಕಷ್ಟಪಡುತ್ತಿರುವದು ಈ ವಿಷಯಗಳ
ಜ್ಞಾನವು ಸರಿಯಾಗಿ ಆದರೆ ಬಾಲಕರು ತಮ್ಮ ಆಯುಷ್ಯದಲ್ಲಿ ಕರ್ತವ್ಯಪಾಲನ
ಮರು ಆಗಬಲ್ಲರು. ಪ್ರತಿಯೊಂದು ಶಾಲಾಭ್ಯಾಸ ಕ್ರಮದಲ್ಲಿ ರಾಷ್ಟ್ರೀಯ
ಾರಗಳಿಗೆ ಮಹತ್ವದ ಸ್ಥಾನವಿರಬೇಕು.

೨. ಸಾರ್ವಜನಿಕ ಸೇವಾಸಂಸ್ಥೆ, ಪಂಚಾಯತ ಸಮಿತಿಗಳ ಕಾರ್ಯ,
ಹಕಾರಸಂಘ, ಸರಕಾರೀ ಅಧಿಕಾರಸ್ಥರ ಕರ್ತವ್ಯ, ಜಿಲ್ಲಾ ಲೋಕಲ್‌ಬೋರ್ಡು
ುನಿಸಿಪಾಲಿಟಿಗಳ ಘಟನೆ, ಮತಾಧಿಕಾರ ಮಹತ್ವ, ಲೋಕಮತ ಸಂಸ್ಥೆಗಳ
ಾಶಸ್ತ್ಯ ಈ ಮೊದಲಾದವುಗಳ ನಿಜಸ್ಥಿತಿಯ ಪರಿಚಯವು ಬಾಲಕರಿಗೆ
ಗಬೇಕು. ಸ್ವಾಭಾವಿಕ ಪರಿಸ್ಥಿತ್ಯನುಸಾರವಾಗಿ ನಿಜವಾದ ಜ್ಞಾನವಾಗುವ
ಾಗೆ ಈ ವಿಷಯದ ಶಿಕ್ಷಣವು ಇರಬೇಕು. ತಾವೇ ಕಾರಭಾರವನ್ನು ವಹಿಸಿ
ಳ್ಳುವ ಸಂಸ್ಥೆಗಳು ಬಾಲಕರಿಂದ ಸಾಲೆಗಳಲ್ಲಿ ಹೊರಡಬೇಕು. ಬಾಲಕರೇ
ಖನಮುಖಾಂತರ ಹೇಳುವ ಶಾಲಾಪತ್ರಕಗಳಿಂದ ಪ್ರಚಲಿತವಾರ್ತೆಗಳ ಜ್ಞಾನ
ನ್ನು ಹೊಂದಬೇಕು.

೩. ಸಾಮಾಜಿಕ ವಿಷಯಗಳ ಅಭ್ಯಾಸದಲ್ಲಿ ಜಗತ್ತಿನ ಸಾಮಾನ್ಯ
ೂಗೋಲಜ್ಞಾನದ ಸಮಾವೇಶವು ಆವಶ್ಯವಾದದ್ದು. ಈ ಜ್ಞಾನವು ಹಿಂದುಸ್ಥಾ
ನ ವಿಶೇಷ ಭೂಗೋಲಜ್ಞಾನವನ್ನು ಒಳಗೊಂಡಿದ್ದು ಪರಸ್ಪರ ಸಂಬಂಧವನ್ನು
ೂಂದಿಕೊಂಡಿರಬೇಕು. ಹಿಂದುಸ್ಥಾನಕ್ಕೂ ಇತರ ನಾಡುಗಳಿಗೂ ಇರುವ
ಂಬಂಧವನ್ನು ತಿಳಿಸಿಕೊಡಬೇಕು.

ಅ. ಹಿಂದುಸ್ಥಾನದಲ್ಲಿಯೂ ಇತರ ದೇಶಗಳಲ್ಲಿಯೂ ಇರುವ ಜೀವ ಪ್ರಾಣಿಜೀವಗಳ ಅಭ್ಯಾಸವಿರಬೇಕು. ಭೌಗೋಲಿಕ ಯನ್ನು ಈ ಜೀವಗಳು ಹೇಗೆ ಅವಲಂಬಿಸಿರುವವು ಎಂಬ ಕಥಾ-ವರ್ಣನೆ-ಚಿತ್ರ-ನಿರೀಕ್ಷಣ- ಸಂವಾದಗಳಿಂದ ಬಾ ತಿಳಿದುಕೊಳ್ಳಬೇಕು. ಆಗಾಗ ಬಾಲಕರು ಪ್ರಪಂಚದ ಪ ಯನ್ನು ಹೋಲಿಸಿ ನೋಡುತ್ತಿರಬೇಕು.

ಬ. ಹವಾಮಾನದ ಹೆಚ್ಚು ಕಡಿಮೆಯನ್ನು ತಿಳಿದುಕೊಂಡು (Gra ಆ ಲೇಖಗಳಲ್ಲಿ ಅದನ್ನು ತೋರಿಸಬೇಕು. (ಕೋಷ್ಟಕಗಳ್ಲಿ ಅಭ್ಯಾಸ ನಡೆಯದೆ ಹೊರಗೆ ಪ್ರತ್ಯಕ್ಷ ನಿರೀಕ್ಷಣೆಯಿ ಆಗಬೇಕು. ಉದಾ:— ಸೂರ್ಯೋದಯ- ಸೂರ್ಯಾಸ್ತ ನಿರೀಕ್ಷಣ, ಗಾಳಿಯಗತಿ, ಹವಾಮಾನದ ಶೀತೋಷ್ಣತೆಗಳ (ಥರ್ಮಾಮಿಟರಿನಿಂದ) ಮಾಪಕಗಳಿಂದ ತಿಳಿದುಕೊಳ್ಳಬೇ ಮಳೆಯ ಅಳತೆ, ನೈಋತ್ಯಗಾಳಿ ಹಾಗು ಈಶಾನ್ಯಗಾಳಿ ಇವ ಋತುಮಾನುಸಾರವಾದ ಮತ್ತು ದಿವಾ- ರಾತ್ರ್ಯನುಸಾರ ಗತಿ ಇವುಗಳ ಜ್ಞಾನವಾಗಬೇಕು.)

ಕ. **ನಕಾಶಗಳ ಅಭ್ಯಾಸ:**— ನಕಾಶಗಳನ್ನು ಸ್ವತಃ ಮಾಡಬೇ ಪೃಥ್ವಿಯ ಗೊ್ಲೀಬನ್ನು ಮಾಡಬೇಕು. ಬಾಲಕರಿರುವ ಊ ಭೂರಚನೆ, ಬಯಲು- ತೆಗ್ಗು-ತೆವರುಗಳನ್ನು ತೋರಿಸಬೇ ನೆರೆಹೊರೆಯ ಪ್ರದೇಶಗಳ 'ಪ್ಲ್ಯಾನು'ಗಳನ್ನು ಮಾ ಬರಬೇಕು. ವೈಜ್ಞಾನಿಕ ಚಿಹ್ನಗಳನ್ನು ತಿಳಿದುಕೊಳ್ಳಬೇಕ

ಡ. ಜನಜೀವಕ್ಕೆ ಸಂಬಂಧಪಟ್ಟ ಉದ್ಯೋಗಗಳನ್ನು ತಿಳಿದುಕೋ ಈ ಹುಟ್ಟುವಳಿಗಳನ್ನು ಒಯ್ಯುವ ಮಾರ್ಗಗಳ ಹಾಗು ಸಾಹ ಪರಿಚಯಮಾಡಿಕೊಳ್ಳಬೇಕು.

ಇ. **ವ್ಯವಸಾಯಗಳ ಪರಿಚಯ:**- ಸ್ಥಾನಿಕ ಒಕ್ಕಲತನ ಹಾ ಕೈಗಾರಿಕೆಗಳು. (ಹೊಲಗಳಿಗೂ ಉದ್ಯೋಗ ಸ್ಥಳಗಳ ಹೋಗಿ ಪ್ರತ್ಯಕ್ಷ ತಿಳಿದುಕೊಳ್ಳುವದು). ಇವುಗಳ ಜ್ಞಾ ಆರ್ಥಿಕದೃಷ್ಟಿಯಿಂದ ಪ್ರಾಂತ್ಯಗಳು ತಮ್ಮ ಬೇಡಿಕೆಗಳ ತಾವೇ ಪೂರೈಸುವವೋ ? ಬೇರೆ ಬೇರೆ ಪ್ರಾಂತ್ಯಗಳ ಮೆ

ಅವಲಂಬಿಸಿವೆಯೋ ? ಭೌಗೋಲಿಕ ಸ್ಥಿತ್ಯನುಸಾರ ಕೃಷಿ-ಕರ್ಮ-ಹಸ್ತವ್ಯವಸಾಯಗಳಲ್ಲಿರುವ ತಾರತಮ್ಯ. ಇ. ಇಡಿಯ ಹಿಂದು ಸ್ಥಾನದ ಮುಖ್ಯೋದ್ಯೋಗಗಳು.

೫. **ಸಾಮಾನ್ಯ ಶಾಸ್ತ್ರವಿಷಯ:— ಉದ್ದೇಶಗಳು.**

೧. ಸೃಷ್ಟಿಯ ವಿಷಯವಾಗಿ ಬಾಲಕರಲ್ಲಿ ಒಂದು ವಿಶೇಷ ಜ್ಞಾನ ದೃಷ್ಟಿ ಉಂಟಾಗಬೇಕು.

೨. ಸರಿಯಾದ ನಿರೀಕ್ಷಣಾಭ್ಯಾಸವೂ ಚಟಗಳೂ ಬಾಲಕರಲ್ಲಿ ಮೂಡಬೇಕು. ತಮ್ಮ ಪ್ರಯೋಗಗಳ ಅನುಭವವನ್ನು ಪರೀಕ್ಷಿಸಬೇಕು.

೩. ಕೆಳಗೆ ಹೇಳಿದ ವಿಷಯಗಳನ್ನು ಕುರಿತು ವೈಜ್ಞಾನಿಕತತ್ವಗಳ ಜ್ಞಾನವು ಬಾಲಕರಿಗೆ ಆಗಬೇಕು.

೪. ಶಾಸ್ತ್ರಶೋಧಕರ ಹಾಗು ಪ್ರಚಾರಕರ ಚರಿತ್ರಗಳ ಮುಖಾಂತರ ಅವರು ಸತ್ಯಕ್ಕಾಗಿ ಕಷ್ಟಪಟ್ಟ ಸಂಗತಿಗಳ ಜ್ಞಾನವನ್ನು ಮಾಡಿಕೊಡಬೇಕು. ಬಾಲಕರ ಬೆಳೆಯುವ ಮನಸ್ಸಿಗೆ ಒಂದುತರದ ಪರಿಣಾಮವನ್ನು ಇವು ಮಾಡದೆ ಇರಲಾರವು. ಅಭ್ಯಾಸಪತ್ರಿಕೆಯು ಬೇರೆಬೇರೆ ಶಾಸ್ತ್ರಗಳಲ್ಲಿಯ ಕೆಳಗಿನ ವಿಷಯಗಳನ್ನು ಅನುಸರಿಸಬೇಕು.

A. **ಪ್ರಕೃತಿವಿಮರ್ಶೆ:—**

೧. ಸುತ್ತುಮುತ್ತಲಿರುವ ಸಸ್ಯ ಹಾಗು ಬೆಳೆ-ಪಶು-ಪಕ್ಷಿ ಇವುಗಳ ಜ್ಞಾನವು.

೨. ಋತುಮಾನಗಳ ಬದಲಾವಣೆಗಳು; ಸಸ್ಯ ಹಾಗು ಪ್ರಾಣಿ ಇವುಗಳ ಮೇಲೆ ಅವುಗಳಿಂದಾಗುವ ಪರಿಣಾಮಗಳ ಜ್ಞಾನವು.

೩. ಬೇರೆಬೇರೆ ಋತುಗಳಲ್ಲಿ ಹುಟ್ಟುವ ಬೆಳೆಗಳ ಜ್ಞಾನವು.

B. **ಸಸ್ಯಶಾಸ್ತ್ರ:—**

೧. ಸಸ್ಯಗಳ ಬೇರೆ ಬೇರೆ ಭಾಗಗಳ ಜ್ಞಾನವೂ ಅವುಗಳ ವ್ಯಾಪಾರಗಳ ಜ್ಞಾನವೂ.

೨. ಅವು ಹುಟ್ಟುವ, ಬೆಳೆಯುವ ಹಾಗು ಮುಂದಿನ ಬೆಳೆಗೆ ವಾಗುವ ಜ್ಞಾನವು.

೩. ಸಾಲೆಯ ಸುತ್ತಲಿನ ತೋಟ ಹಾಗು ಹೊಲ ಇವುಗ ಬೇರೆ ಬೇರೆ ಕೆಲಸಗಳ ಜ್ಞಾನವು. ಹವೆಯಲ್ಲಿಯ ಉಷ್ಣತೆ, ಪ್ರಕಾಶ ಇವುಗಳ ಪರಿಣಾಮದಿಂದ ಬೀಜಗಳಲ್ಲೀ ಗೊಬ್ಬರದ ಮೇಲೆಯೂ ಉಂಟಾಗುವ ಸ್ಥಿತಿಯ ಜ್ಞಾನವು.

C. **ಪ್ರಾಣಿಶಾಸ್ತ್ರ:—**

ಮಾನವರ ಶತ್ರು-ಮಿತ್ರ [illegible] ಹುಪ್ಪಡಿ ಉರಗಗಳ ಅಭ್ಯಾಸ.

D. **ಶರೀರಶಾಸ್ತ್ರ:—**

ಮನುಷ್ಯ ಶರೀರ, ಅವಯವ ಹಾಗು ಅವುಗಳ ಬೇರೆ ವ್ಯಾಪಾರ.

E. **ಆರೋಗ್ಯಶಾಸ್ತ್ರ:—**

a. ದೇಹಾರೋಗ್ಯ, ಹಲ್ಲು, ನಾಲಗೆ, ಉಗುರು, ಕಣ್ಣು, ಕೂ ಮೂಗು, ಚರ್ಮ, ಬಟ್ಟೆ ಮೊದಲಾದವುಗಳ ಸ್ವಚ್ಛತೆ.

b. ಗೃಹ ಹಾಗು ಗ್ರಾಮಗಳ ಸ್ವಚ್ಛತೆ ಹಾಗು ಆರೋಗ್ಯ, ಯನ್ನು ಕೊನೆಗಾಣಿಸುವ ವಿಚಾರ.

c. ಸ್ವಚ್ಛವಾದ ತಿಳಿ ನೀರು; ಊರಿನ ಬಾನಿ.

d. ಸ್ವಚ್ಛವಾದ ಹವೆ; ಗಿಡಗಳು ಹವೆಯನ್ನು ಸ್ವಚ್ಛವಾಗಿ ಮಾ ರೀತಿ. ಸರಿಯಾದ ಶ್ವಾಸೋಚ್ಛ್ವಾಸ.

e. ಆರೋಗ್ಯ-ಅನಾರೋಗ್ಯಕರ ಅನ್ನ-ಆಹಾರ; ಸರಿಯಾದ ಕಟ್ಟಾದ ಆಹಾರ.

f. ಪ್ರಥಮ ಚಿಕಿತ್ಸೆ ಹಾಗು ರೋಗನಿವಾರಕ ಸಾಮಾನ್ಯೋಪ

g. ಅಂಟುರೋಗಗಳು; ಸಾಂಕ್ರಾಮಿಕ-ರೋಗಗಳು; ಉತ್ಪತ್ತಿ; ಪ್ರತಿಬಂಧಕ ಹಾಗು ನಿವಾರಕ ಉಪಾಯಗಳು.

h. ಆಚಾರಶುದ್ಧತೆಯು ಆರೋಗ್ಯದ ಮೂಲ-ಮುಖ್ಯ ಸಾಧನ.

F. **ಶಾರೀರಿಕ ಶಿಕ್ಷಣ:—**

ಆಟಗಳು, ಗರಡೀಸಾಧನಗಳು, ಡ್ರಿಲ್ಲು. (ದೇಶೀಯ ಆಟಗಳಿಗೆ ಉತ್ತೇಜನ ಕೊಡತಕ್ಕದ್ದು).

G. **ರಸಾಯನಶಾಸ್ತ್ರ:—**

ಹವೆ, ನೀರು, ಆಮ್ಲ, ಕ್ಷಾರಗಳ ಜ್ಞಾನವು.

H **ನಕ್ಷತ್ರಗಳ ಪರಿಚಯ:—**

ಇರುಳಿನಲ್ಲಿ ಅವು ದಿಕ್ಕುಗಳನ್ನೂ ವೇಳೆಯನ್ನೂ ಹೇಗೆ ತೋರಿಸುತ್ತವೆ?

I. **ಪ್ರಸಿದ್ಧ ಶಾಸ್ತ್ರಜ್ಞರ ಹಾಗು ಶೋಧಕರ ಚರಿತ್ರಗಳು.**

ಮಾನವ ಜೀವನವನ್ನು ಸುಖಮಯವನ್ನಾಗಿ ಮಾಡಲು ಅವರು ಪಟ್ಟ ಶ್ರಮ.

೬. **ಚಿತ್ರಕಲೆ-ಉದ್ದೇಶ:—**

೧. ನಿರೀಕ್ಷಣ ಸಾಮರ್ಥ್ಯವನ್ನು ಬೆಳೆಸುವದು; ವರ್ಣ ಹಾಗು ಆಕಾರಗಳ ಪ್ರಮಾಣ- ತಾರತಮ್ಯಗಳನ್ನು ತಿಳಿದುಕೊಂಡು ಚಕ್ಷುರಿಂದ್ರಿಯಬಲವನ್ನು ಬೆಳಿಸುವದು.

೨. ಆಕಾರ ವಿಶೇಷಗಳನ್ನು ನೋಡಿದ ಬಳಿಕ ಅವುಗಳ ಸ್ಮರಣ ಸಾಮರ್ಥ್ಯವು ವೃದ್ಧಿಗೊಳ್ಳಬೇಕು.

೩. ಸೃಷ್ಟಿಯಲ್ಲಿಯೂ ಮನುಷ್ಯನು ಮಾಡಿದ ಕೃತಿಗಳಲ್ಲಿಯೂ ಇರುವ ಸೌಂದರ್ಯಸೇವನೆಯು ಉಂಟಾಗಬೆ

೪. ಚಾತುರ್ಯವುಳ್ಳ ಅಲಂಕಾರ-ಆಕೃತಿಗಳನ್ನು ತೆಗೆಯುಥರ್ಯವು ಹೊರಸೂಸಬೇಕು.

೫ ಮುಂದೆ ರಚಿಸಲಿರುವ ಕೃತಿಗಳ ಆಕೃತಿಗಳನು ಮೊದಲು ಕಲ್ಪನೆಯಿಂದ ತೆಗೆಯುವ ಬಲ ಬರಬೇಕು.

ಈ ಉದ್ದೇಶಗಳು ಕೆಳಗೆ ಹೇಳುವ ಸಂಗತಿಗಳಿಂದ ಸಾಧಿಸಬಹುದು.

a. ಬಾಲಕರು ಓದಿದ ಇಲ್ಲವೆ ಕೇಳಿದ ಪಾಠಗಳ ಸಂಗತಿಗಳನ್ನು ಚಿತ್ರದಿಂದ ಹೇಳಲು ಬರಬೇಕು.

b. ವಸ್ತು ಚಿತ್ರ ಇಲ್ಲವೆ ಸ್ಮೃತಿ ಚಿತ್ರ.
ಸಸ್ಯಗಳ ಚಿತ್ರ; ಪ್ರಾಣಿಗಳ ಚಿತ್ರ; ಮನುಷ್ಯರ ಚಿತ್ರ.

c. ಡಿಝಾಯಿನಿಂಗ (ತರತರದ ಆಕೃತಿಗಳನ್ನು ತೆಗೆಯುವದು).

d. ಪ್ರಮಾಣಾನುಸಾರ ಚಿತ್ರಗಳನ್ನೂ ತೆಗೆಯುವದು; ಆ ಚಿತ್ರಗಳನ್ನು ತಯಾರಿಸುವದು.

೭. **ಸಂಗೀತ ಇಲ್ಲವೆ ಗಾಯನ— ಉದ್ದೇಶ.**— ಮುಖ್ಯವಾಗಿ ಸುಂದರವಾದ ಪದ-ಪದ್ಯಗಳನ್ನು ಅನ್ನಲು ಕಲಿಸುವದೂ ಸಂಗೀತ ವಿಷಯಕುರಿತು ಬಾಲಕರಲ್ಲಿ ಪ್ರೀತಿ-ಅಭಿರುಚಿಗಳನ್ನು ಹುಟ್ಟಿಸುವದೂ ಇರು ಬಾಲಕನು ತಾಲಪ್ರಿಯನಿರುವನು; ಅವನು ಹಾಡುವಾಗ ಕೈಯಿಂದ ತಾಲ ಹಾಕುತ್ತಿದ್ದರೆ ಅವನ ಗಾಯನ-ಪ್ರೀತಿಯು ವೃದ್ಧಿಗೊಳ್ಳುವದು. ನಡೆಯುವಾಗ ಕೂಡ ಒಂದು ತಾಲಕ್ಕೆ ಸರಿಯಾಗಿ ಹೆಜ್ಜೆಗಳನ್ನು ಇರುವಯಿರಬೇಕು; ಒಟ್ಟಿಗೆ ಅವನು ಸಂಗೀತ ಪ್ರೇಮಿಯಾಗಬೇಕು. ಭಾಷಾವಿಚಾರ ಸ್ಫೂರ್ತಿ ಈ ಮೊದಲಾದ ದೃಷ್ಟಿಗಳಿಂದ ಆರಿಸಿದ ಪದ-ಪದ್ಯಗಳು ತ್ಕೃಷ್ಟವಾದವುಗಳೇ ಇರಬೇಕು. ಸ್ವರಮೇಲನದಿಂದ ಹಾಡುವದು ಬಲಿಯಬೇಕು. ಈ ಹಾಡುಗಳು, ಬಾಲಕರಲ್ಲಿ ಉಚ್ಚಭಾವನೆಗಳನ್ನು ಸುಸಂಘಟಿತ ಸ್ಥಿರಮನೋವೃತ್ತಿಗಳನ್ನು ನೆಲೆಗೊಳಿಸಬೇಕು.

೮. **ಹಿಂದುಸ್ತಾನಿ :— ಉದ್ದೇಶ:—** ಹಿಂದುಸ್ತಾನೀ ಭಾಷಾಭಾ ಆವಶ್ಯಕ ವಿಷಯಗಳಲ್ಲಿ ಒಂದು. ಹಿಂದುಸ್ತಾನದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಜನರ ಕೂಡ ವ್ಯವಹಾರವು ಅಬಾಧಿತವಾಗಿ ನಡೆಯುವಂತೆ ಇರಬೇಕೆಂಬುದಾ ವಿಷಯವನ್ನು ಆವಶ್ಯಕವಾಗಿ ಇಟ್ಟಿದೆ. ಈ ರಾಷ್ಟ್ರೀಯ ಸಾಲೆಗಳಲ್ಲಿ ಕಲಿತ ಬರಲ್ಲಿ ಇದೊಂದು ಬಲವು ಉಂಟಾಗಲೇಬೇಕು. ಬೇಕಾದ ಯಾವದೊಂದು ಪ್ರಾಜನರ ಕೂಡ ಈ ಸುಶಿಕ್ಷಿತ ನಾಗರಿಕನು ಸಹಕಾರವನ್ನು ಮಾಡಲು ಸಿದ್ಧನಿರಬೆ ಹಿಂದು-ಮುಸಲ್ಮಾನರ ನಡುವೆ ಸಾಂಸ್ಕೃತಿಕ ಬಳಕೆಯು ಹೆಚ್ಚಾಗು ಮಾಡುವದು ಶಿಕ್ಷಕನ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದ್ದು ಅದಕ್ಕೆ ಈ ಭ್ಯಾಸವು ಬಲವಾದ ಸಾಧನ. ಅವರ ಶ್ರೇಷ್ಠ ವಿಚಾರ ಹಾಗು ಧ್ಯೇಯಗಳಯೆಂದರೆ ಈ ಭಾಷೆಯ ಪರಿಚಯವು. ಈ ಭಾಷೆಯ ಸೌಂದರ್ಯ--ಸಾವ

ಷಯವಾಗಿ ಶ್ರೇಷ್ಠ ಭಾವನೆಗಳು ಅವರಲ್ಲಿ ನೆಲೆಗೊಂಡು ಈ ಭಾಷೆಯ
ಯನ್ನು ಮಾಡಲು ಅವರು ಬದ್ಧಕಂಕಣರಾಗಿರಬೇಕು.

ಈ ಮೇರೆಗೆ ಬೇರೆ ಬೇರೆ ವಿಷಯಗಳ ಸಮಾವೇಶವು ಈ ಅಭ್ಯಾಸಪತ್ರಿಕೆ
ಮಾಡಲಾಗಿದೆ. ಇಂದಿನವರೆಗೆ ಯಾವ ಯಾವ ಬಲಗಳು ಬರಬೇಕಾಗಿದ್ದು
ಳನ್ನು ಸಾಧಿಸಲು ಆಗಿಲ್ಲವೋ ಅವುಗಳನ್ನೆಲ್ಲ ಈ ಅಭ್ಯಾಸಪತ್ರಿಕೆಯಿಂದ
ಸಲು ಶಕ್ಯವೆಂದು ಈ ಸಮಿತಿಯವರ ಅಭಿಪ್ರಾಯ.

ಯಾವದೊಂದು ಅಭ್ಯಾಸಕ್ರಮವು ದೋಷದೂರವಾಗಿ ಪರಿಪೂರ್ಣವಾದ
ಬೇಕಾದರೆ ಅದು ಒಂದು ಕೈಗಾರಿಕೆಯ ಮೇಲೆ ಕಟ್ಟಿದ್ದಾಗಿರಬೇಕು. ಆ
ರಿಕೆಯು ಆ ಶಿಕ್ಷಣಕ್ರಮವನ್ನು ಸ್ವಯಂಗತಿಕವಾಗಿ ಸಾಗಿಸುವಂತೆ ಅದಕ್ಕೆ
ಷಕವಾಗಿರಬೇಕು. ಕೈಕೊಂಡ ಕೈಗಾರಿಕೆಯು ಶೈಕ್ಷಣಿಕ ಧ್ಯೇಯಗಳನ್ನು
ಸಲು ಅನುಕೂಲವಾಗಿರಬೇಕು. ಅಂದರೆ ಶಿಕ್ಷಣದಿಂದ ಬಾಲಕರಲ್ಲಿ
ಾಗಬೇಕಾದ ಬಲಗಳನ್ನು ಒದಗಿಸಿಕೊಡುವಂತೆ ಇರಬೇಕು. ಆ ಕೈಗಾರಿಕೆಯು
ಆಯುಷ್ಯದಲ್ಲಿ ಕೈಕೊಳ್ಳುತ್ತಿರುವ ಜಟುವಟಿಕೆಗಳಿಗೆ ವಿಶೇಷ ಸಂಬಂಧ
ದ್ದಿರಬೇಕು. ಆ ಕೈಗಾರಿಕೆಯು ಜನರ ಅಭಿರುಚಿಯ ವಿಷಯವಾಗಿರ
ು. ಅಲ್ಲದೆ ಸಾಲೆಯಲ್ಲಿ ಕಲಿಸಬೇಕೆಂದು ಗೊತ್ತುಮಾಡಿಕೊಂಡಿರುವ ವಿಷಯ
ನ್ನು ಕಲಿಸಲು ಅನುಕೂಲವಾಗಿರಬೇಕು. ಪರಸ್ಪರ ವಿಷಯಗಳ ಸಂಬಂಧ
ುವಂತೆಯೂ ಇರಬೇಕು. ಹೀಗಿದ್ದರೆ ಮಾತ್ರ ಸಾಂಸ್ಕೃತಿಕ ಬೆಳೆವಣಿಗೆಯ
ಿ ಉಪೇಕ್ಷೆಯುಂಟಾಗದೆ ಉಪಜೀವನಸಾಧಕವಾದ ಕೈಗಾರಿಕೆಯನ್ನು
ಸ್ಥೆಯಿಂದ ಕಲಿಯಲೂ ಕಲಿಸಲೂ ಸಾಧ್ಯವಾಗುವದು.

ಈ ಹಸ್ತವ್ಯವಸಾಯ ಶಿಕ್ಷಣದಿಂದ ಕೇವಲ ಬುದ್ಧಿರಹಿತರಾದ ಕೈಗಾರಿಕೆಯ
ಗಳನ್ನು ಮಾಡುವ ನಾಗರಿಕರನ್ನು ಉಂಟುಮಾಡುವದಿರುವದಿಲ್ಲ. ಆದರೆ
ಸ್ತವ್ಯವಸಾಯದಲ್ಲಿಯ ಗುಣಗಳೂ ವೈಶಿಷ್ಟ್ಯಗಳೂ ಶೈಕ್ಷಣಿಕ ಧ್ಯೇಯಗಳನ್ನು
ಸಲು ಶಕ್ಯವಿರಬೇಕೆಂಬುದೇ ಇರುವದು. ಈ ವ್ಯವಸಾಯವು ಪ್ರಾಮುಖ್ಯ
ಬಂಧು ಹುಟ್ಟುವಳಿಯ ಸಾಧಕವಾಗಿಯೂ ಇತರ ವಿಷಯಗಳನ್ನು ಕಲಿ
ಸ್ಫೂರ್ತಿದಾಯಕವಾಗಿಯೂ ಇರಬೇಕು. ಕಲಿಯುವಾಗ ಎಲ್ಲರೂ ಕೂಡಿ
ಾವದಿಂದ ಕಾರ್ಯಮಾಡಬೇಕೆಂಬ ಹಂಬಲವು ಬಾಲಕರಲ್ಲಿ ಹುಟ್ಟಬೇಕು.
ರಲ್ಲಿ ಮುಂದಾಲೋಚನೆ, ಆಚ್ಚುಕಟ್ಟುತನ, ವೈಯಕ್ತಿಕ ಹೊಣೆಗಾರಿಕೆ
ದಾದ ಗುಣಗಳು ಉಂಟಾಗಬೇಕು. ಹಸ್ತವ್ಯವಸಾಯವು ಈಗಿನಂತೆ
ಾತ್ರಿಕವಾಗಿರದೆ ವೈಜ್ಞಾನಿಕ ದೃಷ್ಟಿಯುಳ್ಳದ್ದಿರಬೇಕೆಂದು ಹೇಳುವ

ಮಹಾತ್ಮ ಗಾಂಧಿಯವರ ಆಶಯವಾದರೂ ಇದೇ ಇರುವದು. ಬಾಲಕರು ಸ್ವ
ನಿರೀಕ್ಷಣದಿಂದಲೂ ಅನುಭವದಿಂದಲೂ ಈ ಹಸ್ತವ್ಯವಸಾಯದ ಅಂಗಾ
ಗಳನ್ನು ತಿಳಿದುಕೊಳ್ಳಬೇಕು. ಈ ವಿಷಯವೊಂದನ್ನು ಹೊಸ ಪದ್ಧತಿಯಿ
ಕಲಿಸಿ ವಿುಕ್ಕ ವಿಷಯಗಳನ್ನು ಹಳೆಯ ಪದ್ಧತಿಯಿಂದ ಕಲಿಸಿದರೆ ಅಪೇಕ್ಷಿಸ
ಗುರಿಗಳು ಕೈಗೂಡಲಾರವು. ಒಟ್ಟಿಗೆ ಎಲ್ಲ ವಿಷಯಗಳನ್ನು ಕಲಿಸುವ ಕೆಲಸ
ಶಿಕ್ಷಕನ ದೃಷ್ಟಿಯು ವೈಜ್ಞಾನಿಕವಾಗಬೇಕು.

ಬಾಲಕರಲ್ಲಿ ನಾಗರಿಕತನದ ಉಚ್ಚ ಭಾವನೆಗಳನ್ನೂ ಸ್ಥಿರಮನೋವೃತ್ತಿ
ಳನ್ನೂ ನೆಲೆಗೊಳಿಸುವದು ಈ ಹೊಸ ಯೋಜನೆಯ ಧ್ಯೇಯವಿರುವದೆಂಬದನ್ನ
ಶಿಕ್ಷಕರೂ ಶಿಕ್ಷಣ ಸಂಸ್ಥೆಗಳೂ ಕಣ್ಮರೆ ಮಾಡಕೂಡದು. ಜನರ ಸಾಮಾಜಿ
ರಾಷ್ಟ್ರೀಯ, ಆರ್ಥಿಕ, ಸಾಂಸ್ಕೃತಿಕ ಜೀವನದಲ್ಲಿ ಬಹುಮುತವಾದ
ಮೂಡದೆ ಇರದೆಂಬದನ್ನು ಮರೆಯಲಾಗದು. ಇಂದಿನ ಬಾಲಕರು ನಾಳಿನ ನಾ
ರಿಕರಾಗತಕ್ಕವರು. ಅವರ ಆಯುಷ್ಯದ ಸಮಸ್ಯೆಗಳು ಶಾಲೆಯಲ್ಲಿಯೇ ಗೊತ್ತಾ
ಗುವದು ಅತ್ಯವಶ್ಯ. ನಾಗರಿಕರಾಗಿ ತಮ್ಮ ಕರ್ತವ್ಯ ಭಾರವನ್ನು ಅವರು ನಿ
ಸುವ ಸಾಮರ್ಥ್ಯವುಳ್ಳವರಾಗಬೇಕಾಗಲು ಶಿಕ್ಷಣದ ಹೊಸ ಯೋಜನೆಯು ಫಲ
ವಾಗಿ ಬೇಕಾಗಿದೆ.

ಸದ್ಯದ ನೂತನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ನಾಗರಿಕನು ತಾನು ಹೊಂ
ಸಮಾಜದ ಕಾರ್ಯಗಳನ್ನು ನಿರ್ವಹಿಸಲು ಸಮರ್ಥನಿರಲೇಬೇಕು. ಈ ವಿ
ಕಾರ್ಯ ಮಾಡುವದು ಅವನ ಕರ್ತವ್ಯಗಳಲ್ಲಿ ಒಂದು ಮುಖ್ಯಾಂಶ. ಸಮಾ
ಸುಸ್ಥಿತಿಯ ಲಾಭವನ್ನು ಪಡೆಯುವ ಪ್ರತಿಯೊಬ್ಬ ನಾಗರಿಕನು ಆ ಸಮ
ಏಳಿಗೆಗಾಗಿ ಮನಃಪೂರ್ವಕವಾಗಿ ಪರಮಾವಧಿ ಕಷ್ಟಪಡುವದು ಅವನಿಗೆ ಆಸ
ಸಂಗತಿಯಾಗಬೇಕು. ಬಡವನಾಗಲಿ ಸಿರಿವಂತನಾಗಲಿ ಪರಾವಲಂಬನೆ
ನಾದರೆ ಸಮಾಜದ ಅಡಿಗಲ್ಲು ಮುಗ್ಗರಿಸದಿರಲಾರದು. ಆದ ಕಾರಣ ಪ್ರತಿಯೆ
ನಾಗರಿಕನು ಕರ್ತವ್ಯಕ್ಷಮನಾಗಬೇಕೆಂಬುದೇ ಈ ಹೊಸ ಯೋಜನೆಯ ಧ್ಯೇ
ವಿರುವದು. ಇಂಥ ಗುಣಗಳುಳ್ಳ ನಾಗರಿಕರನ್ನು ಈ ಹೊಸ ಶಿಕ್ಷಣದ ಯೆ
ನೆಯು ಹೊರಡಿಸುವದೆಂಬುದರಲ್ಲಿ ಸಂದೇಹವಿಲ್ಲ.

ಅಂತರ್ಮನಸ್ಸಿನ ಅಂತಃಕಲಹ

ಲೇಖಕರು— ಶ್ರೀ. ಕೊಪ್ಪಳ ಗುಂಡೇಶಾಯರು, ಬಿ. ಎ. ಅಸಿ. ಮಾ. ಟ್ರೇ. ಸ್ಕೂ. ಧಾರವಾಡ

ಈ ವಿಷಯವನ್ನು ಮೊದಲು ಮುಂದುಮಾಡಿದವನೆಂದರೆ ಫ್ರಾಯಿಡನೆಂಬ ಮೆನ್ನಾ ಪಟ್ಟಣದ ಮಾನಸಶಾಸ್ತ್ರಜ್ಞನು. ಇದನ್ನು ಹೊಸ ಮಾನಸಶಾಸ್ತ್ರ-ನಸ ಪೃಥಕ್ಕರಣ–ಮಾನಸಗಾಹನವೆಂದು ಹೇಳುವದುಂಟು. ದುರ್ಬಲ–ಊನ-ಡಾಳ- ಇಲ್ಲವೆ ಮಾನಸಿಕ ವಿಕೃತಿಗಳಿಗೆ ಒಳಪಟ್ಟ ಬಾಲಕರ ವಿಷಯವಾಗಿ ಕನು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎಂಬುದಾಗಿ ವಿವರಿಸಲ್ಪಟ್ಟಿದೆ. ಖ್ಯವಾಗಿ ಲೈಂಗಿಕ ಪ್ರವೃತ್ತಿಯ ಮೂಲಕ ವಿಕೃತ ಮನಸ್ಸಿನ ವಿಷಯವಾಗಿ ಳಿದಾಗ್ಯೂ ಅದೇ ಇದರ ಮುಖ್ಯಾಂಶವೆಂದು ತಿಳಿಯಕೂಡದು. ಕಾಮವಾಸನಾ ೇರಣೆಯಿಂದ ಮೊದಲು ಪ್ರವೃತ್ತರಾಗುತ್ತಿದ್ದಾಗ್ಯೂ ಅದೇ ಸಕಲ ವಿಷಯ ದು ಮಾತ್ರ ತಿಳಿಯಕೂಡದು.

ಮಾಗ್ಡೂಗಲ್ ಮೊದಲಾದವರು ಫ್ರಾಯಿಡನ ಎಲ್ಲ ವಿಷಯಗಳನ್ನು ಕುರಿತು ಟ್ಟಿಕೊಳ್ಳದಿದ್ದರೂ ಅವನ ಕಾಮವಾಸನಾ ಪ್ರೇರಣೆಗೆ ಪ್ರಾಶಸ್ತ್ಯವನ್ನು ಹೇಳದೆ ರು. ಅಂತರ್ಮುಖ ವಿಚಾರಮಾಡುವ ಮಾನಸಶಾಸ್ತ್ರಜ್ಞರ ವಿಷಯಗಳು ಗ್ರನ್ಮನಸ್ಸಿನ ವ್ಯಾಪಾರಗಳು ಅಂದರೆ ಸಂವೇದನ-ಬೋಧ–ಕಲ್ಪನಾ–ಸ್ಮರಣೆ ದಲಾದವುಗಳು. ಆದರೆ ಈ ಹೊಸ ಮಾನಸಶಾಸ್ತ್ರಜ್ಞರು ಈ ಜಾಗ್ರನ್ಮನಸ್ಸಿನ ವ್ಯಾಪಾರಗಳು ಇಡಿಯ ಮನಸ್ಸಿನ ಮೇಲ್ಭಾಗ ಮಾತ್ರವಾಗಬಹುದಲ್ಲದೆ ಅದರ ತಳಾಳದಲ್ಲಿ ಇನ್ನು ಅನೇಕ ವಿಷಯಗಳ ಸಮಾವೇಶವಿರುವದೆಂದು ಹೇಳುವರು; ದೆ ಈ ವಿಷಯಗಳೇ ಸಂಖ್ಯೆಯಿಂದಲೂ ಮಹತ್ವದಿಂದಲೂ ಹೆಚ್ಚಿನವೆಂದು ುವರು. ಈ ವಿಚಾರಗಳು ಅಂತರ್ಮುಖ ವಿಚಾರಪದ್ಧತಿಗೆ (Introspection) ಕಾರವೆ. ತನ್ನ ಜಾಗ್ರನ್ಮನಸ್ಸಿನ ವ್ಯಾಪಾರಗಳನ್ನೆಲ್ಲ ಈ ಮನಸ್ಸು ವಶದ ಟ್ಟಿಕೊಂಡು ಸಾಗಿಸುತ್ತದೆ.

" ಮನಸ್ಸು ಒಂದು ಅಮೂರ್ತ ವಸ್ತುವಿದ್ದು ವ್ಯಾಪಾರಗಳಿಂದ ಮಾತ್ರ ಸ್ಸು ತಿಳಿಯಬಲ್ಲೆವು. ಅನುದ್ಬುದ್ಧ ಮನಸ್ಸಿನ ಸಾಮರ್ಥ್ಯವಾದರೂ ದ್ವಿವಿಧ ಗಿರುವದು. (ಅ) ಹಿಂದಿನ ಅನುಭವಗಳ ಮೇರೆಗೆ ಅವುಗಳನ್ನು ಸಂಗ್ರಹ

ವ...ಡಿಡುವದು. (ಬ) ಆ ಅನುಭವಗಳ ಮೇರೆಗೆ ಕಾರ್ಯದಲ್ಲಿ ನಿಶ್ಚಯ ಬ
ಯಿಂದ ಪ್ರವೃತ್ತವಾಗುವದು. ೨ ಈ ಅನುಭವಗಳನ್ನು ಒಂದು ವರ್ಗವನ್ನಾ
ಮಾಡಿಕೊಂಡು ಆದೊಂದು ಇಡಿಯ ಜ್ಞಾನವಾಗುವಂತೆ ಮಾಡಿಕೊಳ್ಳುವದ
ಆದರೆ ಈ ವ್ಯಾಪಾರಗಳು ಮನಸ್ಸಿನ ಅಂತರಾಳದಲ್ಲಿ ನಡೆಯುವ ಕಾರಣ ಅವು
ಮನುಷ್ಯನಿಗೆ ತಿಳಿಯದೆ ನಡೆಯುತ್ತಿರುವವ್ರ.

ಪ್ರತಿಯೊಬ್ಬನಲ್ಲಿ ತನ್ನ ಅನುಭವಗಳಿಂದ ಸುಧಾರಣೆಯು ನಡೆದಿರುತ್ತಿದ್ದ
ಒಬ್ಬನಲ್ಲಿ ಒಂದು ಜಾತಿಗತ ಸುಧಾರಣೆಗಳೆಲ್ಲ ಉಂಟಾಗುವವೆಂದು ಹೇಳ
ದುಂಟು. ಈ ಸುಧಾರಣೆಗಳೆಲ್ಲ ಆ ಮನುಷ್ಯನಿಗೆ ತಿಳಿಯದೆ ಈ (ಅಸುದ್ಬುದ್ಧ
ಅಂತರ್ಮನಸ್ಸಿನಲ್ಲಿ ನಡೆದಿರುತ್ತವೆ. ಅದನ್ನು ಆ ಮನುಷ್ಯನು ತಿಳಿಯಲಾರ
ಅನುಭವಗಳಿಂದ ಸಂಸ್ಕಾರವು ಒಂದು ರಾಶಿಯಾಗಿ ಉಳಿದು ವ್ಯರ್ಥವಾಗದ
ಈ ಅಂತರ್ಮನಸ್ಸಿನಲ್ಲಿ ಕಾರ್ಯವನ್ನು ಪ್ರಚೋದನಗೊಳಿಸಲು ಬಲವಾದ ಸಾಧ
ವಾಗಿರುವದು. ಈ ರೀತಿ ಅನುಭವಗಳಿಂದ ಸಂಸ್ಕಾರ, ಸಂಸ್ಕಾರದಿಂದ ಭಾವ
ಸಾಮಾನ್ಯಭಾವನೆ ಉಚ್ಚಭಾವನೆಗಳು ಇಲ್ಲವೆ ಸ್ಥಿರ ಮನೋವೃತ್ತಿಗಳು ಇ
ಗಳಿಂದ ಒಂದುಬಗೆಯ ಕಾರ್ಯ ಪ್ರವೃತ್ತಿಯು ಈ ರೀತಿ ವಿವಿಧ ವ್ಯಾಪಾರಗ
ನಡೆದಿರುವವು.

ಈ ರೀತಿಯ ಬೆಳೆವಣಿಗೆಯು ಎಲ್ಲ ಕಾಲದಲ್ಲಿಯೂ ಸುಸೂತ್ರವಾಗಿ ಸ
ಏನೂ ತೊಂದರೆ ಇಲ್ಲ; ಆದರೆ ಹಾಗಿರದೆ ನಡುನಡುವೆ ತಡೆಗಳಿರುವವು. ಒಮ್ಮೆ
ಭಾವನೆಗಳಾಗಲಿ ಉಚ್ಚಭಾವನೆಗಳಾಗಲಿ ವಿರುದ್ಧವಾಗಿ ನಡೆಯುತ್ತಿರು
ಒಮ್ಮೆ ಒಂದು ಭಾವನೆಯು ಒಂದು ಕಡೆಗೆ ಎಳೆಯುತ್ತಿದ್ದರೆ ಇನ್ನೊಂದು
ನೆಯು ವಿರುದ್ಧ ದಿಕ್ಕಿಗೆ ಎಳೆಯುವದು; ಹೀಗೆ ಒಂದು ಮಹಾಭಾರತ
ಯಾದ ಕಲಹವೇ ಒಳಗೆ ನಡೆಯುವದೆಂದು ಹೇಳುವರು. ಜಡ
ವೈಲಕ್ಷಣ್ಯ– ವೈಪರೀತ್ಯಗಳು ಕಾಣಲು ಈ ಕಲಹವೇ ಕಾರಣ.

ಈ ಕಲಹವನ್ನು ಅನುಭವಿಸುವ ವ್ಯಕ್ತಿಯು ಈ ಪ್ರೇರಣೆಗಳು ತ
ಎರಡು ವಿರುದ್ಧ ದಿಕ್ಕುಗಳ ಕಡೆಗೆ ಕಾರ್ಯದಲ್ಲಿ ಪ್ರವೃತ್ತನನ್ನಾಗಿ ಮಾ
ದನ್ನು ತಿಳಿಯುತ್ತಿರುವನು. ಇದು ಕೇವಲ ಆಂತರಿಕ ಪ್ರೇರಣೆಯಿರು
ಕಾರ್ಯದಲ್ಲಿ ಪ್ರವೃತ್ತನನ್ನಾಗಿಮಾಡಲು ಇವು ಬಲಿಷ್ಠ ಕಾರಣಗಳೆಂದು
ಬಹುದು. ಅಂತರ್ಮುಖ ವಿಚಾರಮಾಡಿ ನೋಡಿದರೆ ಕೋಪ–ಕೋಮಲ
ಕರಣಗಳು ಯಾರಲ್ಲಿ ಯಾದರೂ ಯಾವ ರೀತಿಯಾಗಿ ವಿರುದ್ಧ ದಿಕ್ಕುಗಳಲ್ಲಿ ಕ
ಮಾಡುತ್ತಿರುತ್ತವೆಂಬದನ್ನು ನೋಡಬಹುದು. ಇಂಥ ಆಂತರಿಕಲಹ ಸ

ಪ್ರವೃತ್ತಿಗಳನ್ನೂ ಅವುಗಳ ಕಾರಣವನ್ನೂ ಬಯಲಿಗೆ ಎಳೆದು ತಂದದ್ದೇ ಹೊಸ ಮನಸಶಾಸ್ತ್ರದ ಕಾರ್ಯವಾಗಿರುವದು.

ಅಂತಃಕಲಹವು ದುಃಖದಾಯಕವೂ ಕಷ್ಟಕರವೂ ಆಗಿರುವದು. ಇದರಲ್ಲಿ ಆಗುವ ಮಾನಸಿಕ ಶ್ರಮವು ವ್ಯರ್ಥವೇ ಸರಿ. ಅದನ್ನು ಅನುಭವಿಸುವವನು ಈ ಸ್ಥಿತಿಯನ್ನು ಹೋಗಲಾಡಿಸಲಾರನು. ಅದರಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ. ಯಾವುದೊಂದು ಕಠಿಣ ಪ್ರಸಂಗವು ಉಂಟಾಗಿರಲು ಅದನ್ನು ಇದಿರಿಸಲು ಅವನು ಅಸಮರ್ಥನಾಗುವನು. ಜಾಗ್ರತ್ ಸ್ಥಿತಿಯಲ್ಲಿರುವಾಗಲೇ ಇಂಥ ವಿರುದ್ಧ ಪ್ರೇರಣೆಗಳು ಉಂಟಾದಾಗ ಆಚಾರನನ್ನು ನಿಶ್ಚಯಿಸುವದು ಎಷ್ಟು ಕಠಿಣವಿರುತ್ತದೆಂಬದನ್ನು ತಿಳಿದರೆ ಅನುದ್ಬುದ್ಧ ಮನಸ್ಸಿನಲ್ಲಿ ಅದಕ್ಕೂ ಹೆಚ್ಚಾಗಿ ಎಷ್ಟು ಕಷ್ಟಕರವಾಗಿರುತ್ತದೆಂಬದನ್ನು ಊಹಿಸಬಹುದು. ಇಂಥ ಶ್ರಮವನ್ನು ತಪ್ಪಿಸಿಕೊಳ್ಳುವ ಸಾಮರ್ಥ್ಯವು ಮನುಷ್ಯನಿಗೆ ಇರುವದು. ಈ ಮೇರೆಗೆ ವಿರುದ್ಧ ಪ್ರೇರಣೆಗಳು ಇದ್ದಾಗ ಯಾವರೀತಿಯಾಗಿ ನಡೆದುಕೊಳ್ಳಬೇಕು, ಯಾತರಿಂದ ಮನಸ್ಸಿಗೆ ಸಮಾಧಾನವಾಗುವದು ಎಂಬುದಾಗಿ ಮನಸ್ಸಿಗೆ ಮೊದಲಿನಿಂದ ನಿಶ್ಚಯಮಾಡುವ ಸಾಮರ್ಥ್ಯವು ಉಂಟು. ಆ ರೀತಿ ನಿಶ್ಚಯಮಾಡಿಕೊಂಡು ಮನಸ್ಸು ತಾತ್ಕಾಲಿಕ ಶಾಂತಿಯನ್ನಾದರೂ ಪಡೆಯುವದು.

ಎರಡು ವಿರುದ್ಧದಿಕ್ಕಿನ ಪ್ರೇರಣೆಗಳ ಮೂಲಕ ಅಂತಃಕಲಹವು ಉಂಟಾಗಿ ಅದನ್ನು ನೀಗಿಸುವದೇ ಒಳ್ಳೆಯದು. ಅಂತಃಕಲಹವು ನಡೆದದ್ದು ಅನುಭವಿಸುಗೆ ಯಾವಾಗಲೂ ತಿಳಿಯದಿದ್ದರೂ ನಿರ್ಣಯಮಾಡಿ ಕಾರ್ಯದಲ್ಲಿ ಪ್ರವೃತ್ತನಾಗ ಅದು ಅವನಿಗೆ ಗೊತ್ತಾಗದೆ ಉಳಿಯದು. ಇಂಥದೊಂದು ತೊಡಕು ಆಗಿದೆ ಎಂಬದು ತಿಳಿಯದಿದ್ದರೆ ಅವನು ತನ್ನ ಧ್ಯೇಯಗಳ ಒರೆಗಲ್ಲಿಗೆ ಹಚ್ಚಿನ್ನು ಹಚ್ಚಿ ನಿರ್ಣಯಮಾಡುವ ಬಗೆಯಾದರೂ ಯಾವುದು?

ಸ್ಪಷ್ಟೀಪ್ರಥಕ್ಕರಣ ಶಬ್ದಸಾಹಚರ್ಯ ಮೊದಲಾದ ಪದ್ಧತಿಗಳ ಮೇರೆಗೆ ಮನಸಶಾಸ್ತ್ರವು ಈ ಮಾರ್ಗವನ್ನು ಸುಲಭಮಾಡಿದೆ. ಯಾವನಲ್ಲಿ ವ್ಯವಸ್ಥೆ ಹೆಚ್ಚು ಇರುವದೋ ಅವನಲ್ಲಿ ಈ ವಿರುದ್ಧದಿಕ್ಕಿನಲ್ಲಿ ಎಳೆಯುವ ಪ್ರೇರಣೆಗಳು ಒಂದು ಒಪ್ಪಿಗೆಯಾಗಿ ಆ ಮನುಷ್ಯನಲ್ಲಿ ಒಂದುಬಗೆಯಾಗಿ ಯೋಗ್ಯರೀತಿಯಿಂದ ಕಾರ್ಯಮಾಡಲು ಸಾಧಸವಾಗುವದು. ಮನಸ್ಸಿನ ಸಮತೂಕವಾದರೂ ಅವ್ಯವಸ್ಥೆಯನ್ನೇಲೆಯೇ ಇರುವದು.

ಒಮ್ಮೊಮ್ಮೆ ಈ ರೀತಿಯಾಗಿ ವ್ಯವಸ್ಥೆಯಾಗದೆ ಇರಲು ಒಂದು ಪ್ರಬಲವಾದ ಪ್ರೇರಣೆಯು ಬಲವತ್ತಾಗಿ ಮುಂದೆ ಬರಲು ಆ ಮನುಷ್ಯನ ಆಟವು ಏನೂ ಸಾಗುವ

ದಿಲ್ಲ. ಆಗ ಮಾತ್ರ ಅಂತರ್ಮನಸ್ಸಿನಲ್ಲಿ ಆಗಾಗ್ಯೆ ಅಂತಃಕಲಹವು ಹುಟ್ಟುವ ಆಗ ಒಮ್ಮೆ ಒಂದು ಪ್ರೇರಣೆಯು ಪ್ರಬಲವಾಗಿದ್ದರೆ ಮತ್ತೊಂದು ಕ್ಷಣ ಇನ್ನೊಂದು ಪ್ರಬಲವಾಗಿ ಎದುರಿಗೆ ಬಂದು ನಿಲ್ಲುವದು. ಇದನ್ನೆಲ್ಲ ಅನ್ನು ಸುವ ಮನುಷ್ಯನು ತಾತ್ಕಾಲಿಕವಾಗಿಯಾದರೂ ಒಂದಿಲ್ಲೊಂದು ಪ್ರೇ ವಶವಾಗಿರುವನು.

ಫ್ರಾಯಿಡನು ಈ ಅಂತಃಕಲಹಗಳನ್ನು ಒಂದು ರೂಪಕವಾಗಿ ವರ್ಣಿಸು ಮನೆಯೊಳಗೆ ಒಂದು ದೊಡ್ಡ ಕೋಣೆಯಿದ್ದು ಅದಕ್ಕೆ ಹೊಂದಿನ ಇನ್ನೊಂದು ಕೋಣೆಯಿರುವದೆಂದು ಹೇಳುವನು. ಈ ದೊಡ್ಡ ಕೋಣೆಯೊಳಗಿನ ಚಿಕ್ಕ ಕೊ ಬರಲು ನಾನಾತರದ ಪ್ರೇರಣೆಗಳು ಬಾಗಿಲಿಗೆ ಬಂದು ಒತ್ತುತ್ತಿದ್ದು ಆ ದೆ ಕೋಣೆಯೊಳಗೆ ಬರಲು ಪ್ರಯತ್ನಬಡುತ್ತಿರುವವು. ಜಾಗ್ರನ್ಮನಸ್ಸು ಈ ಬ ವನ್ನು ಕಾಯುತ್ತಿರುವದು. ಈ ಮನಸ್ಸಿನ (Censor) ಅಪ್ಪಣೆಯಿಲ್ಲದೆ ಆ ಕೋಣೆಯೊಳಗೆ ಬರಲಾರವು. ಈ ಮೇರೆಗೆ ಈ ಮನಸ್ಸಿನ ಬಾಗಿಲುಕಾಯು ಅಪ್ಪಣೆ ದೊರೆಯದಿದ್ದ ಪ್ರೇರಣೆಗಳೆಲ್ಲ ಅಸುದ್ಬುದ್ಧ (ಅಂತಃ) ಮನಸ್ಸಿನಲ್ಲಿ ಕೊಂಡಿರುವವು. ರೂಪಾಂತರ ಮಾಡಿಕೊಂಡು ಬಾಗಿಲುಕಾಯುವವನ ಪ್ರಚೋದನ ದೊರೆತರೆ ಪುನಃ ಅವು ಆ ಕೋಣೆಗೆ ಬರಬಹುದು. ಒಟ್ಟಿಗೆ ಫ್ರಾಂ ಅಭಿಪ್ರಾಯದಮೇರೆಗೆ ಅಸುದ್ಬುದ್ಧ ಮನಸ್ಸು ವಿಚಾರಗಳ ರಾಶಿಗೆ ಸಾ ಸಹಾ ಅವುಗಳನ್ನು ಜಾಗ್ರನ್ಮನಸ್ಸಿನ ಕೈಯಲ್ಲಿ ಕೊಡದೆ ಇಟ್ಟುಕೊಳ್ಳುವದು. ರೂಪಕದಲ್ಲಿ ಹೇಳಿದ ಭಿನ್ನಭಿನ್ನ ಕೋಣೆಗಳು ಮನಸ್ಸಿನ ವ್ಯಾಪಾರಗಳನ್ನು ಕೊಳ್ಳುವ ಮಟ್ಟಿಗೆ ಮಾತ್ರ ಸರಿಯೆಂಬದನ್ನು ಮರೆಯಬಾರದು. ಕನಸಿನ ಪ್ರೇರಣೆಗಳು ಬೇರೆ ಬೇರೆ ರೂಪಗಳನ್ನು ಹೊಂದುವವು. ಆಗ ಬಾಗಿಲು ಕಾಯು ವವನನ್ನು ಕಣ್ಮರೆಮಾಡಿ ತನ್ನ ರೂಪಗಳನ್ನು ಬದಲಾಯಿಸಿಕೊಂಡುವದು. ನಿಗ್ರಹಮಾಡಿದ ಭಾವನೆಗಳು ಕನಸಿನಲ್ಲಿ ತಲೆದೋರುವವು. ಆದರೆ ಈ ಕನ ಗಳನ್ನು ಕೂಡಲೇ ಮರೆತುಬಿಡುವದು ಮನುಷ್ಯನ ಸ್ವಭಾವವಾಗಿರುವದ ಒಂದುವೇಳೆ ನಮಗೆ ಜಾಗ್ರದವಸ್ಥೆಗಳಲ್ಲಿ ಆ ವಿಷಯಗಳ ನೆನಪು ಬಂದರೆ ಆ ನಾಚಿಕೆಗೇಡಿ ವ್ಯಾಪಾರಗಳ ಬಗ್ಗೆ ನಮಗೆ ಜುಗುಪ್ಸೆ ಉಂಟಾಗುವದು. ಇ ಇವುಗಳನ್ನು ಮರೆಯುವದು ಕೂಡ ಸ್ವಲ್ಪ ಕಠಿಣವಾಗಿರುವದು; ಆಗ ಅಂತಃ ನಸ್ಸಿನಲ್ಲಿ ಕಲಹವಿರುವ ಕಾರಣ ನಮಗೆ ಮರೆತು ಬಿಡಲು ಶ್ರಮವಾಗುವ ಎಷ್ಟೆಷ್ಟೊ ಕನಸುಗಳಲ್ಲಿ ನಮ್ಮ ನಿಗ್ರಹಮಾಡುವ ಸ್ವಭಾವವು ಇರುವ ಮೂ ಅವು ನಾಶವಾಗದೆ ಒಂದಿಲ್ಲೊಂದು ರೂಪದಿಂದ ಹೊರಬೀಳುವವು. ಮಾ

ಸಕ್ಕರಣಕಾರರು ಕನಸುಗಳಲ್ಲಿ ನಾವು ಕಾಣುವ ರೂಪಗಳ ಅರ್ಥವನ್ನು ಹೇಳು
ಾ. ಆರಸನನ್ನು ಕಂಡರೆ ತಂದೆಯೆಂತಲೂ ನಕ್ಷತ್ರಗಳು ಬಂಧುಗಳೆಂತಲೂ ಹೀಗೆ
ಾಬಗೆಯಾಗಿ ಹೇಳುವರು.

ಬಾಲ್ಯದಲ್ಲಿಯೂ ಕೌಮಾರ್ಯದಲ್ಲಿಯೂ ಆಗಾಗ್ಗೆ ಕನಸಿನಲ್ಲಿ ಅಂಜಿಕೆಯು
ತ್ತಿರುವದುಂಟು. ಕೂಡಲೆ ನಮಗೆ ಎಚ್ಚರಾಗುವದು; ಭಯಕಾರಣವೇನೆಂ
ನಮಗೆ ಹೇಳಲು ಬರುವದಿಲ್ಲ. ನಿಗ್ರಹಮಾಡಿದ ವಾಸನಾಮಯ ಪ್ರೇರಣೆ
ರೂಪುಗೊಂಡು ನಮ್ಮಲ್ಲಿ ಹೆದರಿಕೆಯನ್ನು ಉಂಟುಮಾಡುವವೆಂದು ಫ್ರಾಯಿಡ
ದಲಾದ ಶಾಸ್ತ್ರಜ್ಞರು ಹೇಳುವರು. ಅಷ್ಟರಲ್ಲಿ ಎಚ್ಚರಾಗಲು ಮನುಷ್ಯನು
ನಿಗ್ರಹಮಾಡುವನು. ಮೇಲಿನಿಂದ ಒಮ್ಮೊಮ್ಮೆ ಎಲ್ಲಿಯೋ ಬಿದ್ದಂತೆ ಕನಸು
ುವದು. ಇದು ಸ್ವಾಭಿಮಾನಕ್ಕೆ ಭಂಗಬಂದ ಪ್ರಸಂಗದ ಗುರುತೆಂದು
ುವರು.

ಒಮ್ಮೊಮ್ಮೆ ಕೆಲವರು ಕನಸಿನಲ್ಲಿಯೇ ಓಡಾಡುವರು. ಇದಾದರೂ ನಿಗ್ರಹ
ಡಿದ ಪ್ರೇರಣೆಗಳ ರೂಪವೆಂದು ಮಾನಸ ಶಾಸ್ತ್ರಜ್ಞರು ಹೇಳುವದುಂಟು.
ರ ಅರಿವು ಆ ಮನುಷ್ಯನಿಗೆ ಇರುವದಿಲ್ಲ.

ಇನ್ನು ಕೆಲವು ಚಟಗಳ ಕಾರಣಗಳನ್ನು ಕೂಡ ಹೇಳಲು ಬರುವದಿಲ್ಲ.
ಲ್ಲ ಒಂದಿಲ್ಲೊಂದು ಪ್ರೇರಣೆಯನ್ನು ನಿಗ್ರಹಮಾಡಿದ್ದರಿಂದಲೇ ಬಂದ ಚಟ
ುದು ಹೇಳುವದುಂಟು. ಉದಾ:— ತಂದೆಯ ಹೆದರಿಕೆಯನ್ನು ನಿಗ್ರಹಮಾಡಿದ
ಣ ಬಾಲಕನಲ್ಲಿ ಕುಗ್ಗು ನುಡಿಯಾಗಿರಬಹುದು ಎಂದು ಹೇಳಬಹುದು.
ಮಾರ್ಯವು ಇಂಥ ನಾನಾಬಗೆಯ ಚಟಗಳ ಕಾಲವೆಂದು ಅಭಿಪ್ರಾಯ. ಈ
ಲದಲ್ಲಿ ಕೆಲವರಿಗೆ ಕೆಲಕೆಲವು ವಸ್ತುಗಳನ್ನಾಗಲಿ ಮನುಷ್ಯರನ್ನಾಗಲಿ, ಪ್ರಾಣಿ
ನ್ನಾಗಲಿ ಕಂಡಕೂಡಲೇ ಭಯಬರುವದುಂಟು. ಈ ಮಾನಸಗಾಪನಪದ್ಧತಿ
ಂದ ಮಾತ್ರ ಅವುಗಳ ಕಾರಣಗಳನ್ನು ಕಂಡುಹಿಡಿಯಲು ಸಾಧ್ಯವೆಂದು
ೀರುತ್ತದೆ.

ಯಾರೊಬ್ಬರ ಬಾಯಿಯಿಂದ ಆಡಬಾರದ ಮಾತುಗಳು ಹೊರಬೀಳುವವು.
ಳವೆ ಮಾಡಬಾರದ ಕೆಲಸಗಳು ಕೈಯಿಂದ ಆಕಸ್ಮಿಕವಾಗಿ ತಪ್ಪಿ ಆಗುವವು;
ಲ್ಲ ಇಂಥ ಪ್ರೇರಣೆಗಳ ನಿಗ್ರಹದಿಂದ ಆಗುವವೆಂದು ಫ್ರಾಯಿಡ ಮೊದಲಾದ
ಅಭಿಪ್ರಾಯ. ನಾವು ಒಳ್ಳೆ ಜಾಗ್ರತೆಯಿಂದ ಕೆಲಸಮಾಡುವಾಗ ಆಗಬಾರದ
ಸಗಳು ಆಗಿ ಹೋಗುವವು; ಎಚ್ಚರಿಕೆಯಿಂದ ಬರೆಯುವಾಗ ಮಸಿ ಬೀಳುವದು.

ಬರೆಯಬಾರದ ಸಂಗತಿಯನ್ನು ಬರೆಯುವದುಂಟು. ಇವೆಲ್ಲ ಕ್ಷುದ್ರವೆಂದು ತೋರುತ್ತಿದ್ದಾಗ್ಯೂ ಅವುಗಳ ಕಾರಣಗಳೆಲ್ಲ ಈ ಅನುದ್ಬುದ್ಧ ಮನಸ್ಸಿನಲ್ಲಿರುವೆಂಬ ಸಂಗತಿಯನ್ನು ಮರೆಯಬಾರದು. ಈ ಮನಸ್ಸಿನ ಬಾಗಿಲು ಕಾಯುವವನು (ಉದ್ಬುದ್ಧ ಮನಸ್ಸು) ಅಪ್ಪಣೆಕೊಟ್ಟ ಮೇರೆಗೆ ನಿಗ್ರಹಮಾಡಿ ಪ್ರೇರಣೆಗಳೆಲ್ಲ ಭಿನ್ನಭಿನ್ನ ರೂಪುಗೊಂಡು ಹೊರಬೀಳುವವು. ವರ್ಗದಲ್ಲಿ ಶಿಕ್ಷಕನು ಪುಸ್ತಕಗಳನ್ನು ಜಾಗ್ರತೆಯಿಂದ, ಸ್ವಚ್ಛತೆಯಿಂದ, ಅಚ್ಚುಕಟ್ಟತನದಿಂದ ಇಡಲು ಬಾಲಕರನ್ನು ನಿಗ್ರಹಿಸುವದುಂಟು; ಈ ಸಂಗತಿಯು ಬಾಲಕನ ಸೇರದಿರಲು ಅವರು ಮನಃಪೂರ್ವಕವಾಗಿ ತಮ್ಮ ಪುಸ್ತಕಗಳನ್ನು ಅಸಹ್ಯವಾ ಇಟ್ಟುಕೊಳ್ಳುತ್ತಿದ್ದರೆ ಇಂಥ ಒಂದು ಅಂತಃಕಲಹದ ಮೂಲಕವಾಗಿ ಆಗು ದುಂಟೆಂದು ತಿಳಿಯಬೇಕು.

ಅಗತ್ಯದ ಪತ್ರಗಳನ್ನು ತಪ್ಪದೆ ಬರೆಯಬೇಕೆಂದು ಮನಸ್ಸು ಮಾಡುವಾಗ್ಯೂ ನಾವು ಮರೆಯುವೆವು. ಒಂದು ವೇಳೆ ಬರೆದಿಟ್ಟ ಪತ್ರಗಳನ್ನು ಹಾಕಲು ಮರೆಯುವೆವು. ಇವುಗಳಿಗೆಲ್ಲ ಇಂಥ ಅಂತಃಕಲಹವು ಕಾರಣವಾಗಿರುವದೆಂದು ಫ್ರಾಯಿಡ ಮೊದಲಾದವರು ಹೆಮ್ಮೆಯಿಂದ ಹೇಳುವರು.

ಒಮ್ಮೊಮ್ಮೆ ಒಂದು ವಿಷಯದಲ್ಲಿ ದುರ್ಲಕ್ಷ್ಯವಿದ್ದರೆ ಇನ್ನೊಂದು ವಿಷಯದಲ್ಲಿ ನಾವು ಅತ್ಯುತ್ಕಟ ಲವಲವಿಕೆಯನ್ನೂ ಜಾಗ್ರತೆಯನ್ನೂ ತೋರಿಸುವೆವು. ನೈತಿಕ ನಡೆಯಲ್ಲಿ ಹೀನನಾದವನು ಒಳ್ಳೆಯ ಧಾರ್ಮಿಕನಂತೆ ನಟಿಸುವನು. ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಇದೊಂದು ಹಂಚಿಕೆಮಾಡುವನೆಂದು ಫ್ರಾಯಿಡನು ಹೇಳುವನು. ಮಹಾಪರಾಧಿಯು ಸ್ವಚ್ಛತೆಯ ವಿಷಯವಾಗಿ ಎಚ್ಚರಪಡುವದೂ ಅಶಕ್ತನು ಮಹಾಪ್ರಯಾಸದಿಂದ ಅಸಾಧ್ಯ-ದುಃಸಾಧ್ಯವಾ ಕೆಲಸಗಳನ್ನು ಮಾಡುವ ಪ್ರಯತ್ನಗಳನ್ನು ತೋರಿಸುವದೂ ಇಂಥ ನಿಗ್ರಹಮಾಡಿದ ಪ್ರೇರಣೆಯಿಂದ ಉಂಟಾದ ಅಂತಃಕಲಹಮೂಲಕವಾಗಿ ಆಗುವದುಂಟೆಂದು ಹೇಳುವದು.

ಇವೆಲ್ಲ ಕಾರಣಗಳನ್ನು ತಿಳಿದುಕೊಂಡು ಊನರೋಗ, ಹೀನರೋಗ, ಉಪಾಧಿಗಳಾದ, ವಿಕೃತಿಗಳಿಗೆ ಒಳಗಾದ ಬಾಲಕರ ನಡೆ-ನುಡಿಗಳನ್ನು ತಿದ್ದಿಕೊಳ್ಳುವ ಸಲುವಾಗಿ ಶಿಕ್ಷಕನು ಬಲ್ಲವನಾಗಿರುವದು ಅತ್ಯವಶ್ಯ. ವಿಶೇಷವಾಗಿ ೧೨ರಿಂದ ೧೫-೧೬ ವರ್ಷಗಳ ಬಾಲಕರ ವಿಷಯವಾಗಿ ಈ ವಿಷಯವು ಹೆಚ್ಚಾಗಿ ಸಂಬಂಧಪಡುವದು. ಮಿಕ್ಕ ಮಾನಸಶಾಸ್ತ್ರ ತತ್ವಗಳಿಗಿಂತ ಈ ತತ್ವಗಳು ಹೆಚ್ಚು ಮಹತ್ವವುಳ್ಳವು.

ಾವಸ್ಥೆಯಲ್ಲಿ ಬಾಲಕರು ಇಂಥ ಅಂತಃಕಲಹಗಳಿಗೆ ಹೆಚ್ಚು ಒಳಪಟ್ಟಿರು
ದು. ಇವರಲ್ಲಿ ಯೋಗ್ಯವಾದ ನಡೆ-ನುಡಿಗಳು ಮೂಡುವಂತೆ ಮಾಡುವದು
ಕ್ಷಕನ ಕರ್ತವ್ಯ ಭಾರವಾಗಿರುವದು.

ಬಾಹ್ಯಪರಿಸ್ಥಿತ್ಯನುರೂಪವಾಗಿ ತನ್ನನ್ನು ಸಜ್ಜುಗೊಳ್ಳಿಸಿಕೊಳ್ಳುವದೊಂದು
ಲಕರ ಮುಖ್ಯ ಕರ್ತವ್ಯವಾಗಿರುವದು. ಆಗ ಅವನು ತನ್ನ ವಿಚಾರಗಳಲ್ಲಿಯೇ
ವಾಗಲು ಮಗ್ನನಾಗಿರುವ ಸ್ವಭಾವದವನಾಗುವನು. ಬಾಹ್ಯ ಸ್ಥಿತಿಗಿಂತಲೂ
ಂತರದಾಳದಲ್ಲಿ ನಡೆಯುತ್ತಿರುವ ವ್ಯಾಪಾರಗಳಿಗೆ ಅವನು ಹೆಚ್ಚಾಗಿ ವಶವಾಗಿ
ವನು. ತನ್ನ ವಿಚಾರಗಳಿಗೆ ವಶವಾದವನು ತನ್ನ ಜೀವನವನ್ನು ಸುಖದಾಯಕ
ನ್ನಾಗಿ ಮಾಡುವದು ಬಹಳ ಕಷ್ಟಕರವಾಗಿರುವದು. ಅದರಿಂದ ಬಾಹ್ಯ ಪರಿಸ್ಥಿತಿ
ಲ್ಲಿ ಅವನಿಗೆ ವಿಪರೀತವಾಗಿ ತೋರುವವು. ಆಗ ಇಂಥ ಬಾಲಕನು ಹಗಲು
ಸುಗಳಿಗೆ ಒಳಪಟ್ಟು ತನ್ನ ಮನೋರಾಜ್ಯಗಳಲ್ಲಿಯ ಇಷ್ಟವಸ್ತುಗಳಿಂದ
ಿಬಿಡಲು ಪ್ರಯತ್ನ ಪಡುವನು. ಆಸರಿಕೆ ಬೇಸರಿಕೆ ಬೇನೆ ಮೊದಲಾದವುಗಳು
ಟಾಗಿವೆಯೆಂದು ತಿಳಿದುಕೊಂಡು ಯಾವಾಗಲೂ ಮುಲಗಿಕೊಳ್ಳಬೇಕೆಂದು
ರುವನು, ನಿಜವಾಗಿ ವಿಚಾರಮಾಡಿ ನೋಡಿದರೆ ಅವನು ಈ ಮಾನಸಿಕ
ಂತಃಕಲಹಕ್ಕೆ ಒಳಗಾಗಿದ್ದು ಬಾಹ್ಯ ಪರಿಸ್ಥಿತಿಯನ್ನು ಇದಿರಿಸಲು ಅಸಮರ್ಥ
ಗಿರುವನೆಂಬದು ಕಂಡುಬರುವದು. ಇಂಥ ಶ್ರಮಕ್ಕೆ ವಿಶ್ರಾಂತಿಯು ಔಷಧ
ು; ಯಾಕೆಂದರೆ ಈ ಉಪಾಯವು ರೋಗವನ್ನು ಹೆಚ್ಚಿಸುವದು. ಅದಷ್ಟು
ಬೇಗ ಅವನನ್ನು ಒಂದಿಲ್ಲೊಂದು ಉದ್ಯೋಗದಲ್ಲಿ ಜಾಗ್ರತೆಯಿಂದ ತೊಡಗಿರು
ಿ ಮಾಡುವದೇ ಒಳ್ಳೆಯದು. ಆಟಗಳು ಇಂಥ ರೋಗನಿವಾರಣೆಗೆ ಒಳ್ಳೆಯ
ವು; ಯಾಕಂದರೆ ಸಂತೋಷವನ್ನು ತಂದುಕೊಡುವ ಆತ್ಮಾವಿಷ್ಕರಣಕ್ಕೆ
f-expression) ಹೆಚ್ಚು ಅವಕಾಶವಿರುವದು. ಹೆಚ್ಚಿನ ರೋಗಗಳಿಗೆ ವಿಶೇಷ
ಸ್ಸೇ ಬೇಕಾಗುವದು.

ಹಗಲುಗನಸುಗಳು ಮುಂದಿಡುವ ಅಡಿಯನ್ನು ಹಿಮ್ಮೆಟ್ಟುವವು, ಅಂದರೆ
ಗಳನ್ನು ಅನುಭವಿಸುವವನು ತನ್ನ ಹಿಂದಿನ ಸ್ಥಿತಿರೀತಿಗಳನ್ನೇ ಪುನಃ ಪುನಃ
ಡುವವನಾಗುವವನು; ಅಂದರೆ ಅವನ ಧ್ಯಾನದಲ್ಲಿ ಅವೇ ವಿಷಯಗಳು
ಂದ ಮೇಲೆ ಬರುವವು. ಹೊಸ ಭಾವನೆಗಳು ಅವನಲ್ಲಿ ಉಂಟಾಗಬೇಕಾದರೆ
ು ಹೆಚ್ಚು; ಆಲ್ಲದೆ ರೂಢಬದ್ಧಸ್ವಭಾವದವನಿರುವದರಿಂದ ಹಿಂದಿನ ಸ್ಥಿತಿಗಳನ್ನೇ
ನುವನು. ಹೊಸ ಭಾವನೆಗಳು ಅವನಿಗೆ ಎಳ್ಳಷ್ಟಾದರೂ ಶಾಂತತೆಯನ್ನು
ಿಲಾರವು ಎಂದು ಅವನ ನಂಬಿಗೆ. ಈ ಮೇರೆಗೆ ಒಂದೇ ಸ್ಥಿತಿಯಲ್ಲಿ ಉಳಿಯುವ

ಭೀತಿ ಹೆಚ್ಚಾಗಿ ಅವನಲ್ಲಿ ಸುಧಾರಣೆಯಾಗುವದಿಲ್ಲ. ತಾಯ್ತಂದೆಗಳಿಂದ ಒಮ್ಮೆ ಸಹಾಯವಾಗುವ ಬದಲು ಅಪಾಯವಾಗುವ ಸಂಭವವಿರುವದು. ಅಲ್ಲದೆ ಕರು ಕೂಡ ಹೆಚ್ಚಿಗೆ ಉತ್ಸಾಹವುಳ್ಳವರಾಗಿ ಬಾಲಕರ ಪ್ರಗತಿಯಲ್ಲಿ ಹೆಚ್ಚು ಗಳನ್ನು ಉಂಟುಮಾಡಬಹುದು. ಇದರಿಂದ ಸ್ವಾವಲಂಬಿಯಾಗುವ ಬಾಲ ಪರಾವಲಂಬಿಗಳಾಗುವ ಸಂಭವವುಂಟು.

ಕೌಮಾರಾವಸ್ಥೆಯ ಬಾಲಕರು ಚಿಂತಾಕ್ರಾಂತರಾಗಿದ್ದರೆ ಅವರು ಇ ವಿಕಾರಗಳಿಗೂ ಅಂತಃಕಲಹಗಳಿಗೂ ವಶವಾಗಿರುವರೆಂದು ತಿಳಿದುಕೊಳ್ಳಬೇ ತನಗೆ ತಿಳಿಯದೆ ಕೆಲವೊಂದು ವಿಕಾರಗಳಿಗೆ ಮೊದಲು ವಶವಾಗಿದ್ದು ಈಗ ಅವ ಕಾರಣಗಳನ್ನು ತಿಳಿಯದೆ ಈ ಮೇರೆಯ ಚಿಂತೆಗೆ ಅವನು ಒಳಗಾಗುವನು. ಅವ ಸಿಟ್ಟು ಸಿಡುಕುತನವನ್ನು ತೋರಿಸುತ್ತಿದ್ದರೆ ಹೊರಗಿನ ಪ್ರಪಂಚವು ಅವ ಬೇಸರಾಗಿದೆ ಎಂಬದನ್ನು ಸೂಚಿಸುವನು. ಆವಕಾರಣ ಅವನಕೂಡ ಸಹಾ ಭೂತಿಯಿಂದ ಇರುವದೇ ಯೋಗ್ಯವಾದ ದಾರಿಯು.

ಈ ಕಾಲದಲ್ಲಿ ಇಂಥ ಬಾಲಕರು ನಿಯಮಗಳನ್ನು ಉಲ್ಲಂಘಿಸುವ ವ್ಯ ಯವರಾಗುವರೆಂದರೆ ಬಂದುವೇಳೆ ಅತಿಶಯೋಕ್ತಿಯೆನಿಸಬಹುದು. ಅಲ್ಲದೆ ಎಷ್ಟೊ ಬಾಲಕರು ಈ ಅವಧಿಯಲ್ಲಿಯೇ ದುರ್ಮಾರ್ಗಗಾಮಿಗಳಾಗುತ್ತಾರೆಂದರೆ ಏನ ತಪ್ಪಾಗಲಾರದು, ಕೆಲವು ವರ್ಷಗಳ ಹಿಂದೆ ಇಂಥ ಸ್ವಭಾವದವರಾಗಲು ಹಿ ಮಾಡಿದ ಮುಹತ್ಪಾಪಗಳೇ ಕಾರಣವೆಂದು ಹೇಳುತ್ತಿದ್ದರು. ಆದರೆ ಈಗ ಹೊ ಮನಾಸ ಶಾಸ್ತ್ರವು ಬಾಲಕರಲ್ಲಿ ಉಂಟಾಗುವ ಅಂತಃಕಲಹಗಳೇ ಕಾರಣವೆಂ ದನ್ನು ಶೋಧಿಸಿದ್ದರಿಂದ ಅವರ ಕೂಡ ಸಹಾನುಭೂತಿಯಿಂದ ವರ್ತಿಸುವ ಯೋಗ್ಯವೆಂದು ಹೇಳುವದುಂಟು, ಪರಿಸ್ಥಿತ್ಯನುರೂಪ ವರ್ತನವನ್ನು ಇಡ ಬಾರದಿರುವದೇ ಇಂಥ ಅಪರಾಧಗಳ ಕಾರಣವೆಂದು ಹೇಳುವರು; ಅಲ್ಲದೆ ನಿಗ್ರ ಮಾಡಿದ ಸಹಜ ಪ್ರವೃತ್ತಿಗಳೇ ಸಮಾಜಬಾಹ್ಯಮಾರ್ಗಗಳ ಕಾರಣವೆಂದು ಹೆ ಬಹುದು. ಲೈಂಗಿಕ ಪ್ರವೃತ್ತಿಯೇ ಇಂಥ ಅಪರಾಧಗಳ ಮುಖ್ಯಕಾರ ಈ ಪ್ರವೃತ್ತಿಯ ಮೂಲಕ ಸಮಾಜವಿರುದ್ಧ ಕಾರ್ಯಗಳು ಅಂಥವರಿಂದ ಆ ವವು. ಅಲ್ಲದೆ ಸ್ವೈರವೃತ್ತಿಯಿಂದ ಇರಬೇಕು ಎಂದು ಅಂಥವರಿಗೆ ಎನಿಸುವ

ಎಷ್ಟೋ ಪ್ರಸಂಗಗಳಲ್ಲಿ ಯುವಕರು ತಾವು ಮಾಡುವ ಅಪರಾಧಗಳ ತಿಳಿಯದೆ ಇರುವದೇ ಇಂಥ ಅಂತಃಕಲಹಗಳೇ ಕಾರಣವೆಂದು ಹೇಳಲು ಹೆಚ ಸಾಮರ್ಥ್ಯವುಂಟಾಗಿದೆ. ಆಂತರಿಕ ಯಾವದೊಂದು ಕಾರಣ ಮೂಲಕ ಅವ ಅಕಾರ್ಯಗಳನ್ನು ಮಾಡುವರು. ಅವರನ್ನು ಪ್ರತಿಬಂಧಿಸುವದು ಕೂಡ ಆಗ

ಇನ್ನು ಕೆಲವರು ಪಾತ್ರ ಸುಧಾರಿಸುವ ಹಾಗೆ ಇರುವದೇ ಇಲ್ಲ. ಆದರೆ ಬ್ಬೇ ಜನರಲ್ಲಿ ಯೋಗ್ಯವಾದ ದಾರಿಗಾಣದ ಮೂಲಕ ಇಂಥ ದುರ್ಮಾರ್ಗ ವೃತ್ತಿಯು ಅವರಲ್ಲಿ ಉಂಟಾಗಿರುವದು. ಎಷ್ಟೋಜನ ಅಪರಾಧಿಗಳು ಮಾನಸಿಕ ರ್ಬಲ್ಯಗಳುಳ್ಳವರಿರುವರೆಂಬುದು ನಿಜವಾಗಿದ್ದರೂ ಎಲ್ಲ ಅಪರಾಧಗಳು ಥ ನಿಕೃತಿಗಳಿಂದಲೇ ಆಗುತ್ತವೆಂದು ಹೇಳಲಾಗದು. ಪ್ರೇರಣೆಗಳನ್ನು ನಿಗ್ರ ವ ಸಾಮರ್ಥ್ಯವಿಲ್ಲದಿರುವದೇ ಅಪರಾಧಗಳ ಕಾರಣವೆಂದು ಹೇಳಬಹುದು.

ಈ ಅಪರಾಧಗಳು ಈ ವಯಸ್ಸಿನ ಬಾಲಕರಲ್ಲಿ ನಾನಾವಿಧವಾಗಿರುವವು. ಾಳರಾಗಿ ತಿರುಗಬೇಕೆಂಬ ಸ್ವಭಾವವು ಕೆಲವರಲ್ಲಿ ಹುಟ್ಟುವದು. ಇಂಥ ುಗಳಲ್ಲಿ ತಾಯ್ತಂದೆ ಹಾಗು ಶಿಕ್ಷಕರಮೇಲೆ ಭಾರವು ಹೆಚ್ಚು ಬರುವದು. ಿ ಆಳಿಕೆಯನ್ನು ತಪ್ಪಿಸಿ ಎಲ್ಲಿಯಾದರೂ ಓಡಿಹೋಗಬೇಕೆಂಬ ಪ್ರವೃತ್ತಿಯು ನಲ್ಲಿ ಪ್ರಬಲವಾಗಿರಬಹುದು. ತಂದೆಯ ಬಿಗಿಕಟ್ಟಿನಿಂದ ದೂರಾಗಿರಬೇಕೆಂದೂ ಾತ್ರವಾಗಬೇಕೆಂದೂ ಅವನಲ್ಲಿ ಅಂತಃಕಲಹವು ಉಂಟಾಗಿರಬಹುದು.

ಅಸತ್ಯವಾಕ್ಯುಗಳನ್ನು ನುಡಿಯುವ ಪ್ರವೃತ್ತಿಯೊಂದು ಶಿಕ್ಷಕರ ಮಾರ್ಗ ಕಂಟಕವು. ಶಿಕ್ಷೆಯನ್ನು ತಪ್ಪಿಸಿಕೊಳ್ಳಬೇಕು, ಇಲ್ಲವೆ ಕಠಿಣ ಪ್ರಸಂಗವನ್ನು ಬೇಕು ಎಂಬ ಪ್ರಸಂಗಗಳು ಒದಗಿದಾಗ ಬಾಲಕರು ಸುಳ್ಳು ನುಡಿಯುವರು; ಕೂಡ ಎಷ್ಟೋ ವೇಳೆ ಅಂತಃಕಲಹಗಳ ಮೂಲಕ ಹೀಗೆ ಮಾಡುವರೆಂಬ ಶಿಕ್ಷಕರು ಮರೆಯಕೂಡದು. ಇದು ಅವನಿಗೆ ತಿಳಿಯದೆ ಆಗುವದು. ಾ ಪ್ರವೃತ್ತಿಯು ಬಾಲಕರಲ್ಲಿರುವ ಮೂಲಕ ಸತ್ಯಾಸತ್ಯತೆಗಳ ವಿವೇಕ ಕಾರಣ ಬಾಲ್ಯದಲ್ಲಿ ಸುಳ್ಳು ನುಡಿಯುವದುಂಟು; ಆದರೆ ಕೌಮಾರಾವಸ್ಥೆ ಹಗಲುಗನಸುಗಳಿಗೆ ಒಳಪಟ್ಟ ಮೂಲಕ ಅಸತ್ಯವನ್ನಾಡುವ ಸಂಭವವಿರ ಮಾನಸಿಕ ಅಂತಃಕಲಹವು ಅಸಹ್ಯವಾದ ಅಸತ್ಯಗಳನ್ನಾಡುವ ಮುಖ್ಯ ಣವೆಂದು ನಿಶ್ಚಯವಾಗಿ ಹೇಳಬಹುದು. ಪ್ರವೃತ್ತಿಗಳನ್ನು ನಿಗ್ರಹಮಾಡಿದ ಣ ಅಂತಃಕಲಹವು ಉಂಟಾಗಿರುವದು. ಇನ್ನು ಎಷ್ಟೋ ಜನರು ಳು ಸುಳ್ಳು ಹೇಳುತ್ತಿದ್ದರೂ ಅವುಗಳನ್ನು ಸತ್ಯವೆಂದೂ ವ್ಯವಹಾರ್ಯ ವರು. ಹೀಗೆ ಹೇಳುವಾಗ ತಮ್ಮ ಮನೋರಥಗಳು ಪೂರ್ಣವಾಗುವವೆಂದು ುವರು.

ಯಾವ ಸಾಲೆಯಲ್ಲಿಯಾದರೂ ಯಾವನೊಬ್ಬನು ಒಂದು ವಸ್ತುವನ್ನು ಳು ಮಾಡಿರುವನು ಎಂಬದು ಕೇಳದೆ ಇರುವದು ತೀರ ಅಪರೂಪ, ಆದಕಾರಣ ರಾದವರು ಇಂಥ ಸಮಯದಲ್ಲಿ ಆ ಬಾಲಕನನ್ನು ಹೊರದೂಡಬೇಕೋ

ಹೇಗೋ; ಸಾಲೆಯಲ್ಲಿ ಇಂಥವನನ್ನು ಇಟ್ಟುಕೊಳ್ಳುವದಾದರೂ ಹ್ಯಾ
ಯಾಕಂದರೆ ಈ ರೋಗವು ಸಾಂಕ್ರಾಮಿಕವು; ಹೊರಗೆ ಹಾಕಬೇಕೆಂದರೆ ಬಾ
ಅಪರಾಧವೆಷ್ಟು? ವಿಮರ್ಶೆಮಾಡಿ ನೋಡಲು ಬಾಲಕರಲ್ಲಿ ಸಂಜಯಪ್ಪನ
ಯಿದ್ದು ಈ ಕಾರಣ ಮೂಲಕವಾಗಿಯೇ ಇಂಥ ಅಕಾರ್ಯದಲ್ಲಿ ಬಾಲ
ಪ್ರವೃತ್ತನಾಗಿದ್ದರೆ ಅವನನ್ನು ಪ್ರಪಂಚದಲ್ಲಿ ದೂಡುವದರಿಂದ ಶಿಕ್ಷಕನ ಕಾರ್ಯ
ಹೇಗೆ ಸರಿಯಾಯಿತು? ಇನ್ನು ಎಷ್ಟೋ ಸಾರೆ ಒಳ್ಳೆಯ ಸಭ್ಯಗೃಹಸ್ಥರು ಕ
ಎರಡನೆಯವರಿಂದ ತೆಗೆದುಕೊಂಡ ಹೋದ ಪುಸ್ತಕಗಳನ್ನು ತಿರುಗಿ ಕೊ
ದನ್ನು ಮರೆಯುವರು. ಉಗಿಬಂಡಿಯಲ್ಲಿ ಪ್ರವಾಸಮಾಡುವಾಗ ತಿಕಿಟುಗಳ
ಕೊಳ್ಳುವದಿಲ್ಲ; ಸಣ್ಣ-ಪುಟ್ಟ ಕರಗಳನ್ನು ತಪ್ಪಿಸುವರು; ಇವೆಲ್ಲ ಅಪರಾಧಗಳ
ಎಣಿಸಿದಾಗ್ಯೂ ಶಿಕ್ಷೆಯಿಲ್ಲದೆ ಅವರು ಪಾರಾಗುತ್ತಿದ್ದರೆ ಈ ಬಾಲಕರನ್ನು ಶಿ
ಗುರಿಮಾಡುವದು ಎಂದಿಗೂ ಸರಿಯಾಗಲಾರದು. ಇನ್ನು ದುಷ್ಟ ಮಾರ್ಗ
ಪ್ರವೃತ್ತಿಯನ್ನು ಸುಷ್ಟುಮಾರ್ಗದಲ್ಲಿಯಾದರೂ ಹೋಗುವಂತೆ ಹೇಗೆ ಮ
ಬೇಕು? ಇವೆಲ್ಲ ಶಿಕ್ಷಕನಿಗೆ ದೊಡ್ಡ ಪ್ರಶ್ನೆಗಳು. ಕಳವುಮಾಡುವಂಥ
ಯಾವುದೊಂದು ಪ್ರವೃತ್ತಿಯು ವಿಶೇಷವಾಗಿ ಲೈಂಗಿಕ ಪ್ರವೃತ್ತಿಯು ಸ
ಮೂಲಕವಾಗಿ ಆಗಿರಬಹುದು. ಮಾನಸ ಪ್ರಥಕ್ಕರಣದಿಂದ ಮಾತ್ರ ಇಂಥ
ಮಾಡಿದ ಪದಾರ್ಥಗಳು ಲೈಂಗಿಕ ಪ್ರವೃತ್ತಿಯ ಪ್ರತ್ಯಕ್ಷ ಕುರುಹು ಎಂಬ
ತಿಳಿಯಬಹುದು. ಪ್ರವೃತ್ತಿಗಳನ್ನು ನಿಗ್ರಹಮಾಡಿದರಲು ಅವು ಅಂತಃಕಲ
ಮೂಲಕ ಈ ರೂಪವನ್ನು ಹೊಂದುವವೆಂದು ಹೇಳುವದುಂಟು. ಪ್ರೇರಣೆ
ನಿಗ್ರಹದಿಂದ ನಾಶವಾಗಲಾರವು. ಅವು ಇಂಥ ವಸ್ತುಗಳ ಸಂಪಾದನೆ
ಪರಿವರ್ತಿಸುವದುಂಟು. ಒಟ್ಟಿಗೆ ಕಾರ್ಯಮಾಡಬೇಕೆಂಬ ಮೂಲಪ್ರವೃತ್ತಿ
ಒಂದುಮಾರ್ಗದಿಂದ ಇನ್ನೊಂದುಮಾರ್ಗದಲ್ಲಿ ಬಂದಂತೆ ಆಯಿತೆಂದು
ಬಹುದು ಸಂಪಾದನೆಮಾಡುವದೇ ಪ್ರವೃತ್ತಿಯ ಪ್ರೇರಣೆಯು ಕಳವು ಮಾ
ಕಾರಣವಾಯಿತು.

ಒಮ್ಮೊಮ್ಮೆ ಈ ವಯಸ್ಸಿನ ಬಾಲಕರು ಉದ್ದಾಮತನದಿಂದ ವರ್ತಿ
ಪ್ರವೃತ್ತಿಯುಳ್ಳವರಾಗುವರು. ಹಿರಿಯರ ಕೂಡ ಅನಿಧೇಯವಾಗಿರಬೇ
ಶೀಲವು ಅವರಲ್ಲಿ ಬರುವದು. ಆದರೆ ಸಹಾನುಭೂತಿಯಿಂದ ಅವರನ್ನು ತ
ಕೊಂಡು ಬುದ್ಧಿಯ ಮಾತುಗಳನ್ನು ಹೇಳಿದರೆ ಅವರು ಉತ್ಕೃಷ್ಟ ಸಮ
ಸೇವೆಯನ್ನು ಮಾಡಬಲ್ಲವರಾಗುವರು. ಸುವ್ಯವಸ್ಥಿತ ಸಾಲೆಯಲ್ಲಿ ಮ
ಇಂಥದು (ಶೋಧನವು) ಉಂಟಾಗಲು ಸಾಧ್ಯವಿರುವದು.

ಒಟ್ಟಿಗೆ ಈ ವಯಸ್ಸಿನ ಬಾಲಕರಲ್ಲಿ ಉಂಟಾಗಿರುವ ಪ್ರೇರಣೆಗಳು ಅಂತಃ
ಕರಣವನ್ನು ಹುಟ್ಟಿಸಿ ಅವರನ್ನು ಅಪರಾಧಗಳನ್ನು ಮಾಡುವ ಹಾಗೆ ಪ್ರವರ್ತಿ
ಸಿಬಂಬದನ್ನು ತಿಳಿದುಕೊಂಡರೆ ಈ ಮಾನಸಶಾಸ್ತ್ರದ ಇತಿ ಕರ್ತವ್ಯವಾಯಿತು.
ನ್ನು ತಿಳಿದ ಬಳಿಕ ದುರ್ಮಾರ್ಗದಲ್ಲಿದ್ದ ಪ್ರವೃತ್ತಿಯನ್ನು ಸನ್ಮಾರ್ಗದಲ್ಲಿ
ಳಗುವ ಹಾಗೆ ಮಾಡಬೇಕು. ಶಿಕ್ಷೆಯು ಎಷ್ಟು ಮಾತ್ರಕ್ಕೂ ತಕ್ಕುದಲ್ಲ.
ಂದ ಅಪರಾಧ ಪ್ರವೃತ್ತಿಯು ಕುಗ್ಗದೆ ಬೆಳೆಯುತ್ತ ಹೋಗುವದು. ದಂಡ
ಪ ಶಿಕ್ಷಣದಿಂದ ಬಾಲಕರಲ್ಲಿ ಹಿರಿಯರ ವಿಷಯವಾಗಿ ಜುಗುಪ್ಸೆಯನ್ನು
ತ್ರ ಹುಟ್ಟಿಸುವದು. ನಾವು ನಡೆ-ನುಡಿಗಳಿಗೆ ಯಾವಾಗಲೂ ಒಂದು ಕಾರಣ
ನ್ನ ಹೇಳುವ ಶೀಲವುಳ್ಳವರಿರುವೆವು. ಆದರೆ ಈ ಹೊಸ ಮಾನಸಶಾಸ್ತ್ರವು
ರಣಗಳೇ ಮುಖ್ಯ ಕಾರಣಗಳೆಂಬದನ್ನು ಗೊತ್ತುಮಾಡಿಕೊಟ್ಟಿರುವದು. ಈ
ಸ ಶಾಸ್ತ್ರ ತತ್ವಗಳಿಗೆ ಅನುರೂಪವಾದ ರೀತಿಯಿಂದ ಇಂಥ ಅಪರಾಧಿಗಳನ್ನು
ಕ್ಷಿಸುವ ನೋಡುವದೇ ತಕ್ಕುದ್ದು ಎಂಬದನ್ನು ಹೇಳುತ್ತದೆ. ಶಿಕ್ಷಕರೆಲ್ಲ
ಸು ಪ್ರಯೋಗಶಾಲೆಯನ್ನು ಇಡಬೇಕೆಂದು ತಿಳಿಯಕೂಡದು. ಈ ಹೊಸ
ಟ್ಟಿಯಿಂದ ಸಹಾನುಭೂತಿಯಿಂದ ಶಾಂತತೆಯಿಂದ ಬಾಲಕರ ಕೂಡ ವರ್ತಿಸಿದರೆ
ಬ್ಬೀ ಕಾರ್ಯಭಾಗವನ್ನು ಆಗುಮಾಡಿ ಆಗುವದು.

ಪ್ರಾಥಮಿಕ ಶಾಲೆಗಳಲ್ಲಿಯ ಅಂಕಗಣಿತ ಶಿಕ್ಷಣವು

ಲೇ—ಶ್ರೀ. ತಟ್ಟಿ ಶಾಮರಾಯರು, ಬಿ. ಎ. ಅ. ಮಾ. ಹೆ. ಟ್ರೇ. ಕಾ. ಧಾರವಾಡ

ಶಾಲೆಗಳಲ್ಲಿ ಅಂಕಗಣಿತವನ್ನು ಕಲಿಸುವ ಉದ್ದೇಶಗಳಾವವು ? ಹುಡುಗರಿಗೆ
ಗಣಿತವು ಬರಬೇಕೆಂದು ಮೊದಲನೆಯ ಉದ್ದೇಶ; ಎಂದರೆ ಅಂಕಗಣಿತವೆಂಬ
ದು ವಿದ್ಯೆಯು; ವಿದ್ಯೆಯಿಂದ ಮನುಷ್ಯನ ಕೆಲಸಮಾಡುವ ಯೋಗ್ಯತೆಯು
ು ಅವನು ಸುಖಿಯಾಗುವನೆಂದು ನಾವು ತಿಳಿದಿರುವದರಿಂದ ಅಂಕಗಣಿತವೆಂಬ
ಸುನ್ನು ಕಲಿಸುವೆವು. ಹೀಗೆ ಅಂಕಗಣಿತವನ್ನು ಕಲಿಸುವ ಹಿಂದು ಉದ್ದೇಶವು
ಸುನ್ನು ಕೊಡುವ ಉದ್ದೇಶಗಳಲ್ಲಿ ಸಮೋವೇಶವಾಗುತ್ತದೆ. ಅಂತೂ ವ್ಯವ
ವ ಲೆಕ್ಕಗಳನ್ನು ಮಾಡಲಿಕ್ಕೆ ಬರಬೇಕೆಂಬುವದು ಅಂಕಗಣಿತವನ್ನು ಕಲಿಸು

ವದರ ಒಂದು ಮುಖ್ಯ ಪ್ರಯೋಜನವಾಗಿರುತ್ತದೆ. ಈ ಸಂದರ್ಭದಲ್ಲಿ 'ವ್ಯವಹಾ
ಎಂಬ ಶಬ್ದದ ವ್ಯಾಪಕವಾದ ಅರ್ಥವನ್ನು ಶಿಕ್ಷಕರು ತಿಳಿದಿರುವದು ಅಗತ್ಯವಿ
ತ್ತದೆ. ವ್ಯವಹಾರವೆಂದರೆ ದುಡ್ಡನ್ನು ಕೊಡಕೊಳ್ಳುವ ವ್ಯವಹಾರವೆಂದು ಮಾ
ತಿಳಿಯಬಾರದು. ಇದು ಜಮಾಖರ್ಚಿನಲ್ಲಿ ಆ ಶಬ್ದಕ್ಕೆ ಇರುವ ಅರ್ಥ. ಆ
ಅಂಕಗಣಿತದಲ್ಲಿ ಅದಕ್ಕೆ ಬಹಳ ವ್ಯಾಪಕವಾದ ಅರ್ಥವಿರುವದೆಂಬದು ಸ
ಲಕ್ಷ್ಯದಲ್ಲಿ ಸಹಸಾ ಬರುವದಿಲ್ಲ. ಎಲ್ಲತರದ ಉದ್ಯೋಗಗಳಲ್ಲಿ ಲೆಕ್ಕ, ಆ
ಇದ್ದೇ ಇರುವವು. ಆಧುನಿಕ ಶಾಸ್ತ್ರೀಯ ಜ್ಞಾನದಿಂದ ಅನೇಕ ಯಾಂ
ಸಾಧನಗಳನ್ನು ಮಾಡಲಿಕ್ಕೆ ಬರುವುದು. ಇವುಗಳನ್ನು ನಿರ್ಮಾಣಮಾಡ
ಸೂಕ್ಷ್ಮವಾದ ಲೆಕ್ಕಗಳನ್ನು ಮಾಡಬೇಕಾಗುವದು. ನಮ್ಮ ವ್ಯವಹಾರ
ಹವೆ, ಮಳೆ, ಗ್ರಹಣ, ಮುಹೂರ್ತ ಮೊದಲಾದವುಗಳನ್ನು ಮುಂಚಿತ
ತಿಳಿಯುವ ಅಗತ್ಯವಿರುತ್ತದೆ. ಅದಕ್ಕೆ ಜ್ಯೋತಿರ್ಗಣಿತವು ಬೇಕು. ಸುಂದರ
ಭವನಗಳನ್ನು, ಪೂಲುಗಳನ್ನು ದೀಪಸ್ತಂಭಗಳನ್ನು, ಹಡಗುಗಳನ್ನು ಕಟ್ಟ
ಗಣಿತವು ಬೇಕು; ಹಡಗುಗಳನ್ನು ನಡಿಸಲಿಕ್ಕೆ ಗಣಿತವು ಬೇಕು. ಭೂಮಿಯ
ಅಳೆಯಲಿಕ್ಕೆ, ಬಂದ ಅಳತೆಗಳ ಮೇಲಿಂದ ನಕಾಶಗಳನ್ನು ಮಾಡಲಿಕ್ಕೆ ಗಣಿ
ಬೇಕು. ಇಂಥ ಎಷ್ಟೋ ಕೆಲಸಗಳಲ್ಲಿ ತೊಡಗಿರುವ ಸಾಮಾನ್ಯ ಮನುಷ
ಅನೇಕ ವಿಧವಾದ ಕೋಷ್ಟಕಗಳನ್ನೂ ಸಾರಣಿಗಳನ್ನೂ ಉಪಯೋಗಿಸುವರು.
ಸಾರಣಿಗಳನ್ನು ಉಪಯೋಗಿಸಲಿಕ್ಕೆ ಸಾಧಾರಣ ಅಂಕಗಣಿತದ ಜ್ಞಾನವು ಬೇ
ಅವುಗಳನ್ನು ಸ್ವತಃ ಮಾಡಲಿಕ್ಕೆ ಗಣಿತಶಾಸ್ತ್ರದ ಉಚ್ಚ ಜ್ಞಾನವು ಬೇಕು.
ಉಚ್ಚ ತರದ ಜ್ಞಾನವು ವಾಸ್ತವ ಪ್ರಪಂಚಕ್ಕೆ ನಿರುಪಯುಕ್ತವಾದದ್ದೆಂದು
ರೆನ್ನುವದು ವ್ಯವಹಾರಶಬ್ದದ ವ್ಯಾಪಕ ಅರ್ಥವು ತಿಳಿಯದಿದ್ದ ಮೂಲಕ ಪ್ರ
ದಿಂದ ಹೇಳುವ ಮಾತು. ಅಂಕಗಣಿತವು ಗಣಿತಶಾಸ್ತ್ರದ ಮೊದಲನೆಯ ಮೆ
ಈ ಮೆಟ್ಟಿನಿಂದ ಪ್ರಾರಂಭಿಸಿ ಅನೇಕ ಒಂದಕ್ಕಿಂತ ಒಂದು ಹೆಚ್ಚು ಕಠಿಣ
ಮೆಟ್ಟುಗಳಿರುವವು. ಹೀಗೆ ಅಂಕಗಣಿತ ಜ್ಞಾನದ ಪ್ರಯೋಜನವು ದೊ
ರೆಲ್ಲರಿಗೂ ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ, ತಮಗೆ ಹೇಗೆ
ಬರಲಿ, ಬರದಿರಲಿ ಮನಸ್ಸಿನಲ್ಲಿ ಹೊಳೆದಿರುವದಾದಕಾರಣ ಅಂಕಗಣಿತಕ್ಕೆ ಪ್ರಾ
ಮಿಕ ವಿದ್ಯಾಭ್ಯಾಸದಲ್ಲಿ ಮಹತ್ವವುಳ್ಳ ಸ್ಥಾನವಿರುವದು. ಇನ್ನು ಎರಡ
ಉದ್ದೇಶವು ಹುಡುಗರಿಗೆ ಯಾವದೊಂದು ವಿಷಯದ ಪೂರ್ವಾಪರ ಸಂಗತಿಗ
ಪರ್ಯಾಲೋಚಿಸಿ ಸರಿಯಾದ ನಿರ್ಣಯಗಳನ್ನು ಮಾಡಿಕೊಳ್ಳುವ ರೂಢಿ
ಉಂಟಾಗಿ ಮುಂದೆ ಅವರು ದೊಡ್ಡವರಾದ ಮೇಲೆ ಬಿಡಿಸಬೇಕಾಗುವ ಆ
ತೊಡಕಿನ ಪ್ರಶ್ನೆಗಳನ್ನು ತಮ್ಮ ಬುದ್ಧಿಯಿಂದ ಬಿಡಿಸಲಿಕ್ಕೆ ಸಮರ್ಥರಾಗಬೇಕ

ಸತ್ತದೆ ಈ ಉದ್ದೇಶವನ್ನು ಕಣ್ಣ ಮುಂದೆ ಯಾವಾಗಲೂ ಇಟ್ಟುಕೊಂಡು ಸಿದರೆಯೇ ಈ ಲಾಭವು ದೊರೆಯುವದು. ಹೇಗಾದರೂ ಅಂಕಗಣಿತದ ತಿಗಳ ಜ್ಞಾನವನ್ನು ಮಾಡಿಕೊಂಡವರು ಆರ್ಥಿಕ, ಸಾಮಾಜಿಕ, ರಾಜಕೀಯ ವಹಾರದ ತೊಡಕುಳ್ಳ ಪ್ರಶ್ನೆಗಳಲ್ಲಿ ದಿಕ್ಕುತೋರದೆ ಕೂಡುವಡಕ್ಕೆ ಇದೇ ಣವು.

ಮೂರನೆಯ ಉದ್ದೇಶವು ಗಣಿತಶಾಸ್ತ್ರವನ್ನು ಅಭ್ಯಾಸಮಾಡುವ ಅಭಿ ಜಯು ಅವರಲ್ಲಿ ಹುಟ್ಟಬೇಕೆಂದು; ಅಥವಾ ಹುಡುಗರು ಮುಂದೆ ಮಾಧ್ಯಮಿಕ ಲಿ, ಕಾಲೇಜುಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗುವರು; ಅದಕ್ಕೆ ಸಹಾಯ ಆಯಾಗುವಂತೆ ಈಗಿನ ಅಂಕಗಣಿತದ ಅಭ್ಯಾಸವನ್ನು ಮಾಡಿಸುವದು.

ಕೊನೆಯದು— ಆದರೂ ಇದು ಸಣ್ಣದಲ್ಲ–ಅವಧಾನ, ವ್ಯವಸ್ಥೆಯ ಪ್ರೀತಿ, ಷ್ಟಕಟ್ಟುತನ, ಮುಖ್ಯಾಮುಖ್ಯಾಂಶಗಳನ್ನು ತಿಳಿಯುವ ವಿವೇಕ ಮುಂತಾದ ವು ಅಭ್ಯಾಸಗಳು ಅವರಲ್ಲಿ ನೆಲೆಗೊಳ್ಳಬೇಕೆಂದು ಇರುತ್ತದೆ.

ಅಂಕಗಣಿತವನ್ನು ಕಲಿಸುವ ಉದ್ದೇಶಗಳನ್ನು ತಿಳಿದುಕೊಂಡ ಮೇಲೆ ಅದನ್ನು ಸುವ ಪದ್ಧತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ವಿಚಾರಿಸುವ. ನಯುಗದಲ್ಲಿ ಕಲಿಯುವ ಜ್ಞಾನದ ಭಾರವು ಹೆಚ್ಚಾಗಿದೆ. ಅದಕ್ಕಾಗಿ ಆ ರವು ಹಗುರಾಗುವದಕ್ಕೆ ತಕ್ಕ ಪದ್ಧತಿಗಳನ್ನು ಉಪಯೋಗಿಸಬೇಕಾಗಿದೆ. ಸ್ಲದೆ ಮಕ್ಕಳಲ್ಲಿ ಜ್ಞಾನದ ವಿಕಾಸವು ಹೇಗಾಗುವದು ಎಂಬ ಶಾಸ್ತ್ರವು ಈಗ ಷ್ಟು ಬೆಳೆದಿರುತ್ತದೆ. ಕಲಿಸುವ ಪದ್ಧತಿಗಳಮೇಲೆ ಈ ಶಾಸ್ತ್ರದ ಪರಿಣಾಮ ಆಗುವದು ಸ್ವಾಭಾವಿಕ. ಯಾವ ಯುಗದಲ್ಲಿಯಾಗಲಿ ಕಲಿಯುವದು ಮತ್ತು ಸಿಸುವದು ಬುದ್ಧಿ ವಿಕಾಸದ ತತ್ವಗಳಿಗನುಸರಿಸಿಯೆ ಇರುವದು. ಆಧುನಿಕ ಣವೇ ಮಾನಸಶಾಸ್ತ್ರದ ತತ್ವಗಳಮೇಲೆ ರಚಿಸಲ್ಪಟ್ಟಿರುತ್ತದೆಂದು ತಿಳಿಯುವದು ಷ್ಟು. ಪ್ರತಿಯೊಂದು ಕಾಲದ ಶಿಕ್ಷಣವು ಆ ಕಾಲಕ್ಕೆ ಉಪಲಬ್ಧವಿರುವ ಶಾಸ್ತ್ರದ ತ್ಯಗಳಿಗೆ ಹೊಂದಿಕೆಯಾಗಿಯೆ ಇರುವದು. ಆದರಿಷ್ಟೆ, ಈ ಶಾಸ್ತ್ರದ ಜ್ಞಾನವು ಷ್ಟು ಸೂಕ್ಷ್ಮವಾದದ್ದೂ ಹೆಚ್ಚು ಸುಸಂಗತವಾದದ್ದೂ ಆದಂತೆ ಹಿಂದಿನ ತತ್ವ ಗಳೆಲ್ಲ ತಪ್ಪು ಎನ್ನುವ ರೂಢಿಯುಂಟು. ಆದ್ದರಿಂದ ಯೋಗ್ಯವಾದ ಪದ್ಧತಿ ಯೋಗ್ಯವಾದ ಪದ್ಧತಿ ಎಂಬವು ಸಾಪೇಕ್ಷವಾದ ಮಾತುಗಳು ಎಂಬದನ್ನು ವು ಸ್ವಲ್ಪ ಮೇಲೆಂದಮೇಲೆ ನೆನಪಿಗೆ ತಂದುಕೊಳ್ಳುತ್ತಿದ್ದರೆ ಪ್ರತಿವರ್ಷವೂ ಸ ಹೊಸದೆಂದು ಕೂಗುವ ಧೂರ್ತರಾದ ಪಾರಿಸದ ಚಿಪ್ಪಿಗರ ಬಟ್ಟೆಗಳಂತಿ ವು ಈ 'ಹೊಸ' ಪದ್ಧತಿಗಳ ವಿಪರೀತ ಹುಚ್ಚು ಹಿಡಿದು ನಾವು ಕುಣಿಯ

ಲಿಕ್ಕಿಲ್ಲ. ಇರಲಿ; ಪ್ರಕೃತಕ್ಕೆ ಅಂಕಗಣಿತವನ್ನು ಹೇಗೆ ಕಲಿಸಬೇಕು. ಈ ಬಗ್ಗೆ ಏತದ್ದೇಶೀಯರಾದ ನಮಗೆ ಹೆಚ್ಚಾಗಿ ಉಪಲಬ್ಧವಾಗಿರುವ ಉದ್ಗ್ರಂಥಗಳೆಂದರೆ ಇಂಗ್ಲಂಡಿನ ವಿದ್ವಾಂಸ ವಿದುಷಿಯರು ಬರೆದವುಗಳಾಗಿರುತ್ತವೆ. ಪುಸ್ತಕಗಳಲ್ಲಿ ಪ್ರತಿಪಾದಿಸಿದ ತತ್ವಗಳು ಅಥವಾ ಪದ್ಧತಿಗಳು ಸರ್ವಸ್ವವಾ ಮಾನ್ಯವೆಂದು ನಮ್ಮ ದೇಶಕಾಲ ಪರಿಸ್ಥಿತಿಗಳನ್ನು ಪರಿಶೀಲಿಸದೆ ತಟ್ಟನೆ ಗ್ರಹಿಸಬಾರದು. ಯಾವದಾದರೊಂದು ಶಿಕ್ಷಣದ ಹೊಸ ಪದ್ಧತಿಯಲ್ಲಿ ಜನರು ವಿಶ್ವಾಸವನ್ನಿಡಬೇಕಾದರೆ ಅದರಲ್ಲಿ ಮೂರು ಮುಖ್ಯ ಗುಣಗಳಿರಬೇಕು.

(೧) ಅದು ನಮ್ಮ ದೇಶದ ಹುಡುಗರ ಸ್ವಭಾವಕ್ಕೆ ಸರಿಯಾದದ್ದಿರಬೇಕ

(೨) ಅದು ಸಾಮಾನ್ಯ ಶಿಕ್ಷಕರಿಗೆ ಕಲಿಸಲಿಕ್ಕೆ ಸುಲಭವಾಗಿರಬೇಕು.

(೩) ಅದರಿಂದ ಕಲಿತ ಹುಡುಗರು ಬುದ್ಧಿವಂತರಾಗಬೇಕು.

ಈಗಿನ ಅಂಕಗಣಿತ ಶಿಕ್ಷಣ ಪದ್ಧತಿಯಲ್ಲಿ ಈ ಮೂರು ಗುಣಗಳಿರುವವೇನೆಂ ಬದನ್ನು ಪರೀಕ್ಷಿಸುವ. ಈ ಹೊಸ ಪದ್ಧತಿಗಳು ಬಹಳಮಟ್ಟಿಗೆ ಹುಡುಗರ ಸ್ವಭಾವಕ್ಕೆ ಸರಿಯಾದಂಥವು ಇರುವವು; ಇದರಲ್ಲಿ ಏನೂ ಸಂಶಯವಿಲ್ಲ. ಆದ ಒಂದು ಮಾತಿನ ಬಗ್ಗೆ ಇಲ್ಲಿ ನಮ್ಮ ಜನರನ್ನು ಎಚ್ಚರಿಸುವದು ಯೋಗ್ಯವೆಂದ ತೋರುತ್ತದೆ. ಅದಾವದೆಂದರೆ ನಮ್ಮದೇಶದ ಹುಡುಗರ ಬುದ್ಧಿ ಒಲವುಗಳ ಇಂಗ್ಲಿಷ ಹುಡುಗರ ಬುದ್ಧಿ ಒಲವುಗಳು ಒಂದೇ ಇರುವವೆಂದು ಗ್ರಹಿಸಿ ಆದ ಮೇಲೆ ನಮ್ಮ ಶಿಕ್ಷಣ ಪದ್ಧತಿಯನ್ನು ರಚಿಸುವದು. ಭಿನ್ನ ಭಿನ್ನ ದೇಶದ ಜನ ಬುದ್ಧಿಗೆ ಬೀಜ ಭೂತವಾಗಿರುವ ಅನುವಂಶಿಕ ಸಂಸ್ಕಾರವು ಅಥವಾ ಭಿನ್ನ ಭಿ ದೇಶದ ಜನರ ಮಕ್ಕಳು ಮೊದಲು ಶಾಲೆಗೆ ಸೇರುವ ವಯೋಮಾನಕ್ಕೆ ಆ ಬುದ್ಧಿಯಲ್ಲಾದ ವಿಶೇಷ ಸಂಸ್ಕಾರವು ಒಂದೇಬಗೆಯಾಗಿರುವದೋ ಇಲ್ಲವೆ ಎಂಬ ಮಾತನ್ನು ಸಿದ್ಧಾಂತಿಸದೆ ಈ ಬುದ್ಧಿ ಸಂಸ್ಕಾರವು ಒಂದೇ ಇದ್ದೀ ಇರುವ ಎಂದು ಗ್ರಹಿಸಿ ಅದರ ಮೇಲೆ ಪದ್ಧತಿಯ ಸ್ವರೂಪವನ್ನು ರಚಿಸುವದು ಯೋ ವಾಗಲಾರದೆಂದು ತಿಳಿದವರು ಒಪ್ಪಲೇಬೇಕು. ನಾವು ಕೆಲವು ಕೇಜಾಂವ ಪ್ರ ಗಳಿಗೆ ವಾಚಕರು ಸರಳವಾಗಿಯೂ ಖಂಡಿತವಾಗಿಯೂ ಉತ್ತರಕೊಡಲಿ. ನಮ್ಮ ದೇಶದ ಒಬ್ಬ ಸಾಮಾನ್ಯ ಗೃಹಸ್ಥನು ಲೆಕ್ಕದಲ್ಲಿ ಚುರುಕು ಇರುವಷ್ಟು ಒ ಸಾಮಾನ್ಯ ಇಂಗ್ಲಿಷ ಗೃಹಸ್ಥನು ಇರುವನೇನು? (ನಮ್ಮ ದೇಶದ ಒಬ್ಬ ೫ ವರ್ಷದವನನ್ನು ತಕ್ಕೊಂಡರೆ ಇಂಗ್ಲಂಡದ ಒಬ್ಬ ೫೦ ವರ್ಷದವನನ್ನು ತಕ್ಕೊ ಳ್ಳಿರಿ; ನಮ್ಮಲ್ಲಿಯ ಹಳ್ಳಿಯವನನ್ನು ತಕ್ಕೊಂಡರೆ ಅಲ್ಲಿಯ ಹಳ್ಳಿಯವನನ್ನ ತಕ್ಕೊಳ್ಳಿರಿ, ಇತ್ಯಾದಿ.) ಈ ಪ್ರಶ್ನೆಗೆ ಉತ್ತರಕೊಡುವದು ಕಠಿಣವೆಂದು ತೋ

ದು: ಯಾಕೆ ?– ಹಾಗೆಯೇ ಬಾಯಿಮಾತಿನಿಂದ ಜಗಳಬೇಡ, ಈಗ ಬುದ್ಧಿ
ಕ್ಷೆಯ ಅನೇಕ ಸರಸರೀಸ ಸಾಧನಗಳು ಹೊರಟಿವೆಯಷ್ಟೆ. ಅಂಥ ಒಂದು
ಸದಿಂದ ನಾನು ಕೇಳುವ ಪ್ರಶ್ನೆಯು ಇತ್ಯರ್ಥವನ್ನು ಮಾಡುವದು ಅಸಾಧ್ಯ
ಅಲ್ಲಿಯವರೆಗೆ ಭೂಮಿಯಮೇಲಿನ ಎಲ್ಲ ಹುಡುಗರ ಮಾನಸಿಕ ಸಂಸ್ಕಾ
ಒಂದೇಬಗೆಯಾಗಿ ಇರುವದೆಂದು ಯಾರಾದರೂ ಸುಮ್ಮನೆ ಬಾಯಿಬಡಿದು
ದರೆ ಅದನ್ನು ಸಂಬಭಾರದು.

ಇನ್ನೊಂದು ವಿಚಾರ. ಪ್ರೊಫೆಸರ್ ಗೋಖಲೆ, ರಾಧಾಕೃಷ್ಣಯ್ಯರ್ ಈ
ಶಯರು ಬರೆದ ಅಂಕಗಣಿತಗಳು ಈಗಲೂ ಅಸಂಕ್ರಮವಾಗಿ ನಮ್ಮ ಇಲಾಖೆ
ಮದ್ರಾಸ ಇಲಾಖೆಯ ಸಾಲೆಗಳಲ್ಲಿ ಒಳಕೆಯಲ್ಲಿರುವವು. ಇವ್ರಗಳಲ್ಲಿರುವ
ಗಳ ಕಠಿಣತೆಯನ್ನು ನೋಡಿರಿ. ಅದರಂತೆ ಇಂಗ್ಲಂಡದ ಸಾಲೆಗಳಲ್ಲಿ ವಿಶೇಷ
ಯಲ್ಲಿರುವ ಅಂಕಗಣಿತದ ಪುಸ್ತಕಗಳಲ್ಲಿಯ ಪ್ರಶ್ನೆಗಳ ಕಠಿಣತೆಯನ್ನು
ರಿ. ನಮ್ಮಲ್ಲಿ ಸಾಮಾನ್ಯ ಹುಡುಗರು ಬಿಡಿಸುವ ಲೆಕ್ಕಗಳನ್ನು ಅಲ್ಲಿಯ
ವಯಸ್ಸಿನ ಅದೇ ಇಯತ್ತೆಯ ಹುಡುಗರು ಬಿಡಿಸಲಾರರೆಂಗೇ ನನ್ನ ಆಶಯ.
ನಾ ಬಿಡಿಸಬಹುದೇ ಎಂಬ ಸಂಶಯ. "ಲೆಕ್ಕಗಳನ್ನು ಬಿಡಿಸಿದರೇನಾಯಿತು"
ೀಡಿರಿ. ಹೆಚ್ಚು ಕಠಿಣವಾದ ಲೆಕ್ಕಗಳನ್ನು ಬಿಡಿಸಲಿಕ್ಕೆ ಹೆಚ್ಚು ಬುದ್ಧಿಯು
ಾಗದಿದ್ದರೆ ಅಂಥ ಲೆಕ್ಕಗಳನ್ನು ಪ್ರೌಢ ವಿದ್ಯಾರ್ಥಿಗಳಿಗಾಗಿ ಬರೆದ ಅಂಕಗಣಿತ
ಯಾದರೂ ಏತಕ್ಕೆ ಕೊಡುವರು? ಸಾಲೆಗಳಲ್ಲಿ ಲೆಕ್ಕಗಳನ್ನು ಹೇಳಿ ಅಂಕ
ವನ್ನು ಯಾಕೆ ಕಲಿಸುವರು? ಮತ್ತೊಂದು ಪ್ರಶ್ನೆ. ಪ್ರಾಚೀನ ಹಿಂದೀ
ಗಳಿಗೆ ಗೊತ್ತಿದ್ದ ವಿಷಯಗಳು ಅದೇ ಕಾಲದ ಆಂಗ್ಲ ಪಂಡಿತರಿಗೆ ವಿದಿತ
ವಿದ್ದುವೇನು? ಆ ಬುದ್ಧಿಯು ಪರಂಪರೆಯು ಅನುವಂಶಿಕವಾಗಿ ನಮ್ಮ ಮಿದುಳಿ
ವಿಕಾಸನವನ್ನು ಉಂಟುಮಾಡಿಲ್ಲವೆಂದು ಯಾವ ಪ್ರಾಣಿಶಾಸ್ತ್ರಜ್ಞನು ಸಿದ್ಧ
ಸಬಲ್ಲನು? ಇಂಗ್ಲಂಡದ ಜನರನ್ನು ಬಿಡಿರಿ. ನಮ್ಮ ಇಲಾಖೆಯಲ್ಲಿ ಸರಕಾರಿ
ಯ ಉಚ್ಚಸ್ಥಾನಗಳಲ್ಲಿ ಅಕೌಂಟನ್ಸಿ ಮೊದಲಾದ ವಿಷಯಗಳಲ್ಲಿ ನಿಷ್ಣಾತ
ವರು ಮದ್ರಾಸಿಗಳೇಕಿರಬೇಕು? ರಾಮಾನುಜಂ ರಂಥ ಬುದ್ಧಿಶಾಲಿಗಳು
ಸ್ರಾಸು ಇಲಾಖೆಯಲ್ಲಿ ಹೆಚ್ಚು ಜನರು ಏಕೆ ಹೊರಡಬೇಕು? ಮ್ಯಾಥಮ್ಯಾಟಿ
ಜರ್ನಲ್‌ಗಳು, ಮ್ಯಾಥಮ್ಯಾಟಿಕಲ್ ಸೊಸಾಯಿಟಿಗಳು ಎಲ್ಲಿ ಹೆಚ್ಚಾಗಿವೆ
ರಿರಿ. ಅಂಥ ಸೊಸಾಯಿಟಿಗಳ ಮೆಂಬರರ ಹೆಸರುಗಳಲ್ಲಿ ಹೆಚ್ಚಾಗಿ ಮದ್ರಾಸಿ
ಹೆಸರುಗಳೇಕೆ ಸಿಗುವವು? ಮುಂತಾದ ಸಂಗತಿಗಳನ್ನು ನಾವು ನಿಷ್ಪಕ್ಷಪಾತ
ದಿಂದ ಪರಿಶೀಲಿಸಿದರೆ ಬೇರೆ ಬೇರೆ ದೇಶದ ಹುಡುಗರ ಬುದ್ಧಿಸಂಸ್ಕಾರವು
ಬೇರೆಯಾಗಿರುವದೆಂಬ ಮಾತನ್ನು ಅಗತ್ಯವಾಗಿ ಒಪ್ಪಬೇಕಾಗುವದು. ಒಪ್ಪ

ದಿದ್ದರೂ ಈ ವಿಷಯವನ್ನು ಶಾಸ್ತ್ರೀಯವಾದ ರೀತಿಯಿಂದ ಪರೀಕ್ಷಿಸಿ ನೋಡಿ
ಹಿಂದೀ ಹುಡುಗನ ಬುದ್ಧಿಯೇನು ಇಂಗ್ಲಿಷ ಹುಡುಗನ ಬುದ್ಧಿಯೇನು ?
ಒಂದೇ ಎಂದು ಹೇಳುವವರನ್ನು—ಅವರಲ್ಲೂ ಹೀಗೆ ಹೇಳುವ ಸೂರ್ತಿ
ಇಂಗ್ಲಿಷ ಜನರನ್ನು—ನಂಬಲಾಗದು. ಇನ್ನು, ವಿಶೇಷವಾದ ಭೇದವಿರಬಾರ
ಎಂದು ಹೇಳುವ ಮಾತನ್ನು ಯಾರಾದರೂ ಒಪ್ಪಬಹುದು; ಆದರೆ ದೇಶದ
ಹುಡುಗರ—ಅದರಲ್ಲಿಯೂ ಪೌರ್ವಾತ್ಯ ಮತ್ತು ಪಾಶ್ಚಾತ್ಯ ದೇಶಗಳ ಹುಡುಗ
ಸ್ವಾಭಾವಿಕವಾದ ಒಲವುಗಳಲ್ಲಿ ಏನೂ ಹೆಚ್ಚುಕಡಿಮೆ ಇರುವದಿಲ್ಲ ಎಂಬ
ಮಾತು ಮಾನಸಶಾಸ್ತ್ರಸಮ್ಮತವಾದುದಲ್ಲ. "ಸ್ವಲ್ಪ (ಭೇದವು; ಇದ್ದರೆ ಇ
ಆದರಿಂದೇನು ?" ಎನ್ನಕೂಡದು. ಸ್ವಲ್ಪ ಭೇದವಿದೆ ಎಂಬ ಮಾತು ಒ
ನಿಷ್ಕರ್ಷೆಯಾದರೆ ಇಂಗ್ಲಿಷ ಶಿಕ್ಷಣ ಪುಸ್ತಕಗಳ ಮೇಲಿಂದ ಪದ್ಧತಿಗಳನ್ನು ಇ
ಕ್ಕಿದ್ದ ಹಾಗೆಯೇ ನಕಲುಮಾಡುವದು ತಪ್ಪು ಎಂಬ ಮಾತು ಸಿದ್ಧವಾಗುವ
ಪ್ರಮಾಣದ ಲೆಕ್ಕಗಳನ್ನು ಮೊದಮೊದಲಿಗೆ ಹುಡುಗರು ಏಕಮಾನಪದ್ಧತಿಯ
ಬಿಡಿಸುವದು ಒಳ್ಳೆಯದೆಂದು ಕೆಲವು ವರ್ಷಗಳ ಹಿಂದೆ ಒಂದು ಇಂಗ್ಲಿಷು ಪುಸ
ದಲ್ಲಿ ಬರೆದದ್ದನ್ನು ನೋಡಿ ನಾವೂ " ಸರಿ, ಸರಿ, ಏಕಮಾನಪದ್ಧತಿಯೇ ಪ್ರಾರ
ದಲ್ಲಿ ಜಲೋ ಪದ್ಧತಿ " ಎಂದು ಅಂಧರಾಗಿ ಅನ್ನುತ್ತ ಪ್ರಾರಂಭದಲ್ಲಿ ಬೇರೆ ಪದ್ಧ
ಯನ್ನು ಯಾರಾದರೂ ಧೈರ್ಯ ಮಾಡಿ (ತಿಳಿದು) ಅನುಸರಿಸಿದರೆ ಅದು ನಿಜವ
ಶಿಕ್ಷಣವಲ್ಲ—ಒಬ್ಬಿಯ ಜ್ಞಾನವನ್ನು, ಚೀಲದಲ್ಲಿ ಕಾಳು ತುಂಬಿದಂತೆ, ಹುಡು
ತಲೆಯಲ್ಲಿ ತುಂಬುವದು ಎಂದು ಮೊದಲಾಗಿ ನಮ್ಮ ಎಂಜಲು ಪಾಂಡಿತ್ಯವ
ಮೆರಿಸುವೆವು. ಈ ಉದಾಹರಣೆಯು ನಿಮ್ಮ ಮನಸಿಗೆ ಅಷ್ಟೊಂದು ಚಾರದಿ
ಅವಯವಗಳಿಂದ ಗುಣಾಕಾರ ಭಾಗಾಕಾರ ಮಾಡುವ ರೀತಿಗಳನ್ನು ತೆಗ
ಕೊಳ್ಳಿರಿ. ನಮ್ಮ ಟ್ರೇನಿಂಗ ಸಂಸ್ಥೆಗಳ ಸಾಲೆಗಳಲ್ಲಿ ಅಥವಾ ಸಭೆಗಳಲ್ಲಿ ನಡೆಯ
ಪಾಠಗಳಲ್ಲಿ ಈ ಪದ್ಧತಿಗಳು ಎಲ್ಲಿಯಾದರೂ ಪ್ರವೇಶ ಮಾಡಿದ್ದರೆ ಅದು ಕೇ
ಇಂಗ್ಲಿಷು ಪುಸ್ತಕಗಳೊಳಗಿನ ಪದ್ಧತಿಗಳ ಅಂಧ ಅನುಕರಣ. ಈ ಪದ್ಧತಿಗಳ
ಕಲಿಸುವ ಅಗತ್ಯವು ಏನೂ ಇರುವದಿಲ್ಲ. ಆದರೂ ಯಾರಾದರೂ ಯುರೋ
ಯನ್ ಇನ್‌ಸ್ಪೆಕ್ಟರರು ಇಲ್ಲವೆ ಹೆಡ್‌ಮಾಸ್ತರರು ಇದು ಒಳ್ಳೆಯ ಪದ್ಧತಿ ಎಂ
ಎಲ್ಲಿಯಾದರೂ ಒಂದು ಕಡೆ ಶಿಫಾರಸು ಮಾಡುವದೊಂದೇ ತಡ ನಾವು ಅದ
ಅವಲಿನಲ್ಲಿ ತುನೆವು. ಇದರಂತೆ ಪ್ರಾರಂಭದಲ್ಲಿ ಏಕಮಾನಪದ್ಧತಿಯು ಒಳ್ಳೆ
ದಿರಬಹುದು ಅಥವಾ ಇರಲಿಕ್ಕಿಲ್ಲ. ಆದರೆ ಇಂಗ್ಲಿಷಿನವರು ಅದು ಒಳ್ಳೆಯದೆಂ
ಅನ್ನುವದೇ ಅದರ ಶ್ರೇಷ್ಠತೆಯಸಾಕ್ಷಿ ಎಂದು ಮಾತ್ರ ನಾವು ಹಟಹಿಡಿಯಬಾರ
ಈ ಎರಡೂ ಪದ್ಧತಿಗಳನ್ನು (ತ್ರೈರಾಶಿಕ ಹಾಗು ಏಕಮಾನಪದ್ಧತಿ) ಅವರೇ

ಸೀಕೆನ್ನ ಹತ್ತಿರುವದು. ಉದ್ದ ಭಾಗಾಕಾರವು ಇಂಗ್ಲಿಷು ಹುಡುಗರಿಗೆ ಷ್ಟವರಿಗೂ ಏನೋ !) ಪ್ರಾಣಸಂಕಟವಂತೆ; ಅದಕ್ಕಾಗಿ ಅವಯವಗಳಿಂದ ಸುವ ಪದ್ಧತಿಯು ಮೊದಲು ಅವರಲ್ಲಿ ರೂಢಿವಾಯಿತು. ಆನಂತರ ಈಗ ಸ್ಸ (ಮುತ್ತು ಅವಯವಗಳ ಗುಣಾಕಾರವನ್ನು ಸಹ) ಕಲಿಸುವದು ಣ ತತ್ವಗಳ ದೃಷ್ಟಿಯಿಂದ ಅಷ್ಟೊಂದು ಹಿತಕರವಲ್ಲವೆಂದು ಅವರೊಳಗೆ ್ಟ ತಿಳಿದವರು ಹೇಳಹತ್ತಿದ್ದಾರೆ. ಆದರಂತೆ ಏಕಮಾನಪದ್ಧತಿಯಿಂದ ಂದೆ ಸಾಗಿ ಗುಣೋತ್ತರದ ಪದ್ಧತಿ (ಅಪೂರ್ಣಾಂಕದ ಪದ್ಧತಿ) ಅಥವಾ ಶಾಸ್ತ್ರೀಕರಿಸಿದ ಪದ್ಧತಿಗೆ ಹೋಗುವದು ಅಷ್ಟೊಂದು ಸಮಂಜಸವಾಗಿ ರುವದಿಲ್ಲವೆಂದು ಮಿಸ್. ಟಾಮ್‌ಸನ್ ಎಂಬುವ ಆಂಗ್ಲ ವಿದುಷಿಯು ಪುಸ್ತಕದಲ್ಲಿ ಅಂದಿದ್ದಾಳೆ. ಆದ್ದರಿಂದ ಅಂಕಗಣಿತವನ್ನು ಕಲಿಸುವ ಪದ್ಧತಿಯು ಯವಾಗಿ ನನ್ನ ಮೊದಲನೆಯ ಸೂಚನೆಯಾವದೆಂದರೆ ಮೇಲೆ ಉಲ್ಲೇಖಿಸಿದ ್ಧಯ ಅಳತೆಯ ಪ್ರಯೋಗವನ್ನು ತಜ್ಞರಾದವರು ಮಾಡಿ ತಮ್ಮ ಫಲಿತವನ್ನು ಗಣಿತ ಶಿಕ್ಷಕರ ಲಾಭಕ್ಕಾಗಿ ತಿಳಿಸಬೇಕು. ಏಕೆಂದರೆ ಸಾಮಾನ್ಯ ಅಂಕ ತ ಶಿಕ್ಷಕರಿಗೆ ಈ ಪ್ರಯೋಗವನ್ನು ಮಾಡಿ ನೋಡುವದಕ್ಕೆ ಬೇಕಾಗುವ ವಿದ್ಯೆ ಧನಗಳು, ವೇಳೆ, ದುಡ್ಡು ಮೊದಲಾದವು ಯಾವವೂ ಇಲ್ಲ.

ಮೇಲೆ ಚರ್ಚಿಸಿದ ಸಣ್ಣ ಮಾತೊಂದನ್ನು ಬಿಟ್ಟರೆ ಒಳ್ಳೆಯ ಪದ್ಧತಿಗಳೆಂದು ನೋಡಲಿಕ್ಕೆ ಸಿಗುವ ಮಾದರಿಗಳು ಹೆಚ್ಚಾಗಿ ಹುಡುಗರು ಸ್ವಾಭಾವಿಕವಾಗಿ ುವ ಕ್ರಮಕ್ಕೆ ಅನುಸರಿಸಿಯೇ ಇರುತ್ತವೆಂದು ಹೇಳಬಹುದು. ಇನ್ನು ಪದ್ಧತಿಯಲ್ಲಿರಬೇಕಾದ ಎರಡನೆಯ ಗುಣವೇನಂದರೆ ಅದು ಸಾಮಾನ್ಯ ಕರಿಗೆ ಕಲಿಸಲಿಕ್ಕೆ ಸುಲಭವಾಗಿರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಅಂಕಗಣಿತದ ಪದ್ಧತಿಯು ಕಲಿಸಲಿಕ್ಕೆ ಸುಲಭವಾಗಿಲ್ಲ. ಇದಕ್ಕೆ ಶಿಕ್ಷಕರು ಹೆಚ್ಚು ತಿಯನ್ನು ಮಾಡಬೇಕಾಗುತ್ತದೆ; ಹೆಚ್ಚು ತೊಂದರೆಪಡಬೇಕಾಗಿರುತ್ತದೆ. ೀ ಆದರೆ ಇದು ದೋಷವಲ್ಲ. ಆದರೆ ಈ ಪದ್ಧತಿಯ ಲಕ್ಷಣಗಳನ್ನು ತಿಳು ಳಿಲಿಕ್ಕೆ ಶಿಕ್ಷಕರಲ್ಲಿ ಹೆಚ್ಚು ವಿದ್ಯೆಯೂ ಜ್ಞಾನವೂ ಬೇಕಾಗುತ್ತದೆ. ಈ ನವು ಅವರಿಗೆ ಆಗದಂತೆ ಟ್ರೇನಿಂಗ ಕಾಲೇಜುಗಳ ಅಭ್ಯಾಸಪತ್ರಿಕೆಯನ್ನು ಣಿ ಖಾತೆಯವರು ತಿದ್ದಿರುತ್ತಾರೆ. ಅಂದರೆ ತಾವು ಅಪೇಕ್ಷಿಸುವ ಸುಧಾರ ಗಿಡದ ಬೇರಿಗೆ ಹುಳವು ಹತ್ತುವಂತೆ ತಾವೇ ಮಾಡಿದ್ದಾರೆ. ಇದು ಮೇಲಧಿ ಗಳ ಲಕ್ಷಕ್ಕೆ ಬರದಿರುವದು ನಮ್ಮ ದುರ್ದೈವವೆಂದು ಹೇಳಬೇಕು.

ಇನ್ನು ಮೂರನೆಯ ಮಾತು; ಅದನ್ನು ಕಲಿತ ಹುಡುಗರು ಬುದ್ಧಿವಂತ ಗಿಸುವರೋ ಹೇಗೆ ಎಂಬದು. ಇದನ್ನು ಹೇಳಲಿಕ್ಕೆ ಮಾರ್ಗವಿಲ್ಲ. ಏಕೆಂದರೆ

ಹೊಸಪದ್ಧತಿಯನ್ನು ಸರಿಯಾಗಿ ತಿಳಿದುಕೊಂಡು ಅದರಲ್ಲಿ ವಿಶ್ವಾಸವಿಟ್ಟು ಬ
ಸಂಖ್ಯಾಕರಾದ ಪ್ರಾಥಮಿಕ ಶಿಕ್ಷಕರು ಅದನ್ನು ಶಾಲೆಗಳಲ್ಲಿ ಇನ್ನೂ ರ
ಯಲ್ಲಿಯೇ ತಂದಿಲ್ಲ. ಹಾಗೆ ಆಗಿ ಅದರಿಂದ ಆಗುವ ಪರಿಣಾಮವು ಜನರ ದೃಷ್ಟಿ
ಬೀಳುವ ತನಕ ಈ ಹೊಸಪದ್ಧತಿಯ ವಿಷಯವಾಗಿ ಸಾಮಾನ್ಯ ತಂದೆತಾಯಿ
ಹಾಗೂ ಶಿಕ್ಷಕರ ಮನಸಿನಲ್ಲಿ ಸಾಶಂಕವೃತ್ತಿಯು ಉಳಿಯುವದು.

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆ ೧೯೩೮

ದಕ್ಷಿಣಭಾಗ

ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಹೋಮವಾ
ತಾ. ೭ನೆಯ ಮಾರ್ಚ ೧೯೩೮ನೆಯ ದಿವಸ ಹಾಗು ಅದರ ಮುಂದಿನ ದಿವಸಗಳ
ನಡೆಯುವದು.

೧ ಧಾರವಾಡ ೨ ಹುಬ್ಬಳ್ಳಿ ೩ ಗದಗ ೪ ಬೆಳಗಾವ ೫ ವಿಜಾಪ
೬ ಕಾರವಾರ ೭ ಕೊಲ್ಲಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯವರು ಪರೀ
ಯನ್ನು ನಡೆಯಿಸುವರು. ಆಯಾ ಕಮಿಟಿಗಳ ಚೆಅರಮನ್ನರು ಕೆಳಗೆ ಕಾಣ
ದಂತೆ ಇರುವರು.

ಧಾರವಾಡ— ಮೆ॥ ಲೇಡೀಸು ಪರಿಂಟಿಂಡೆಂಟರು ಟ್ರೇ. ಕಾಲೇಜ ಫಾ
ಉಮೆನ್ ಧಾರವಾಡ.

ಹುಬ್ಬಳ್ಳಿ— ಮೆ॥ ಹೆಡ್‌ಮಾಸ್ತರರು ಆಂಗ್ಲೋ ಉರ್ದು ಹೈಸ್ಕೂ
ಹುಬ್ಬಳ್ಳಿ

ಗದಗ— ಮೆ॥ ಸೀನಿಯರ ಅಸಿ. ಡೆಪ್ಯೂಟಿ ಎಜ್ಯುಕೇಶನಲ ಇನಸ್ಪೆಕ್ಟರ
ಧಾರವಾಡ.

ಬೆಳಗಾವ— ಮೆ॥ ಹೆಡ್‌ಮಾಸ್ತರರು ಸರದಾರ ಹೈಸ್ಕೂಲು ಬೆಳಗಾವ.

ವಿಜಾಪುರ— ಮೆ॥ ಹೆಡ್‌ಮಾಸ್ತರರು ಗ। ಹೈಸ್ಕೂಲು ವಿಜಾಪುರ.

ಕಾರವಾರ— ಮೆ॥ ಹೆಡ್‌ಮಾಸ್ತರರು ಗ॥ ಹೈಸ್ಕೂಲು ಕಾರವಾರ.

ಕೊಲ್ಲಾಪುರ— ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ಕೊಲ್ಲಾಪುರ.

೩. ಉಮೇದವಾರರು ಪರೀಕ್ಷೆಗೆ ಕೂಡಲಿಚ್ಛಿಸುವ ಸೆಂಟರಿನ ಪರೀಕ್ಷಾ ಬೆಯ ಚೆಅರಮನ್ನರ ಕಡೆಗೆ ಪರವಾನಿಗಿ ಅರ್ಜಿಯನ್ನು ಛಾಪಿಸಿದ ಅರ್ಜಿ ಸಿಗಳಮೇಲೆ ಕಳಿಸತಕ್ಕದ್ದು. ಛಾಪೀ ಅರ್ಜಿ ನಮೂನೆಗಳು ಆಯಾ ಸೆಂಟ ಅರಮನ್ನರ ಕಡೆಗೆ ಇರುವವು. ಬೇಕಾದವರು ತರಿಸಿಕೊಳ್ಳಬೇಕು. ಇವಕ್ಕೆ ಕೊಡಬೇಕಾಗುವದಿಲ್ಲ.

೪. ಉರ್ದು ವ್ಹ. ಫಾ. ಪರೀಕ್ಷೆಯು ಸಹ ಮೇಲೆ ಬಧೀದ ತಾರೀಖುಗಳ ಮೇ ಮೇಲೆ ಬರೆದ ಸೆಂಟರುಗಳಲ್ಲಿ ನಡೆಯುವದು.

೫. ಪರೀಕ್ಷೆಗಳಿಗಾಗಿ ಉಮೇದವಾರರು ಕಳಿಸುವ ಅರ್ಜಿಗಳನ್ನು ಅರ್ಜಿ ರೂ. ಸಹಿತವಾಗಿ ತಮ್ಮ ಸೆಂಟರಿನ ಕಮೀಟಿ ಚೆಅರಮನ್ನರ ಕಡೆಗೆ ೧೫ನೇ ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಕಳಿಸ ತ್ತದ್ದು. ತಡವಾಗಿ ಬಂದ ಅಥವಾ ಫೀ ಇಲ್ಲದೆ ಬಂದ ಅರ್ಜಿಗಳನ್ನು ನಿರಾ ಕರಿಸಲಾಗುವದು.

೬. ಪರೀಕ್ಷೆಗಳಿಗಾಗಿ ನಿಯಮಿಸಿದ ಬುಕ್ಕುಗಳು ಕನ್ನಡ, ಮರಾಠಿ, ಗುಜರಾತಿ ಉರ್ದು ಇತ್ಯಾದಿಗಳು ಮುಂಬಯಿ ಗವರ್ನಮೆಂಟ ಗ್ಯಾಝೀಟ ಭಾಗ ೩. ೧೨ ನವಂಬರ ೧೯೩೬ ನೆಯ ಪಾನು ೨೩೩೧ರಲ್ಲಿ ಪ್ರಸಿದ್ಧಿಸಲ್ಪಟ್ಟಿರುವದು.

೭. ಮೇಲಿನ ಪರೀಕ್ಷೆಯು ಉಮೇದವಾರರ ಪರೀಕ್ಷೆಯ ವಿಷಯಗಳು ವಿದ್ಯಾರ್ಥಿನಿಯರ ವಯಸ್ಸು ಇತ್ಯಾದಿಗಳನ್ನು ಮುಂಬಯಿ ಗವರ್ಮೆಂಟಿನ ಗ್ಯಾಝೀಟಿನ ಮೇಲೆ ವಿವರಿಸಿದ ೨೩೩೧ನೆಯ ಪ್ಯಾರಾದಲ್ಲಿ ನೋಡಿಕೊಳ್ಳಬೇಕು.

೮. ಉರ್ದು ಪರೀಕ್ಷೆಯು ಉಮೇದವಾರರು ಝುನಾನಾ ಉರ್ದುಕೋರ್ಸ ಓದಿದನ್ನು ಓದಿರುವರೋ ಇಲ್ಲವೋ ಎಂಬಬಗ್ಗೆ ಅರ್ಜಿಗಳಲ್ಲಿ ವಿವರಿಸಿರಬೇಕು.

ಎಜ್ಯುಕೇಶನಲ್ ಇನಸ್ಪೆಕ್ಟರ
ಸಾ॥ ರವರ ಕಚೇರಿ.
೧೫—೧೨—೩೭

ಸೈಯ್ಯದ ನೂರುಲ್ಲಾ
ಎ. ಇ. ದ. ಭಾಗ

೧೯೩೬ನೆಯ ಇಸ್ವಿಯಲ್ಲಿ ಆಗುವ ಮಿಡಲ್‌ಸ್ಕೂಲು ಸ್ಕಾಲರಶಿಪ್ ಪರೀಕ್ಷೆಯ ವೇಳಾಪತ್ರಿಕೆ

ತಾರೀಖು	ಸ್ಟಾ. ಟಾಯಿಮ್	ವಿಷಯಗಳು	ಗುಣಗಳು
ಶುಕ್ರವಾರ ೪–೨–೧೯೩೬	೨ ರಿಂದ ೨–೧೫ ರ ವರೆಗೆ	ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
	೨–೩೦ ರಿಂದ ೩–೩೦ ರ ವರೆಗೆ	ಗಣಿತ	೧೦೦
	೪ ರಿಂದ ೪–೪೫ ರ ವರೆಗೆ	ಸಾಮಾನ್ಯ ಜ್ಞಾನ (ಜನರಲ್ ಇನ್‌ಫರ್‌ಮೇಶನ್–) ಕಾಗದ ೧. (ಇತಿಹಾಸ ರಾಜಕೀಯ ಭೂಗೋಲ)	೫೦
	೧೧–೩೦ ರಿಂದ ೧೨–೧೫ ರ ವರೆಗೆ	ದೇಶಭಾಷೆ ಕಾಗದ ೧ ವೌಖಿಕವಾಚನ, ಹಾಗು ಅದನ್ನು	
ಶನಿವಾರ ೫–೨–೧೯೩೬		ತಮ್ಮ ಮಾತಿನಲ್ಲಿ ತಿರುಗಿ ಬರೆಯುವದು ಮತ್ತು ನಿಬಂಧ ಲೇಖನ	೫೦
	೧–೧೫ ರಿಂದ ೩ ರ ವರೆಗೆ	ದೇಶಭಾಷೆ ಕಾಗದ ೨ ಓದುವದು ಮತ್ತು ಅದರ ಭಾವ ವನ್ನು ತಿಳಿದು ಹೇಳುವದು. ಇತ್ಯಾದಿ.	೫೦
	೩ ರಿಂದ ೩–೪೫ ರ ವರೆಗೆ	ಸಾಮಾನ್ಯ ಜ್ಞಾನ ಕಾಗದ ೨ ಪ್ರಾಕೃತಿಕ ಭೂಗೋಲ ಶಾಸ್ತ್ರೀಯ ವಿಷಯ ಇವಕ್ಕೆ ಸಂಬಂಧಿಸಿದ ಸಂಗತಿಗಳು	೫೦

ಸೂಚನೆ—ಮೈ। ಡಾಸುರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನವರ ಅಪ್ಪಣೆಯ ಮೇರೆಗೆ ಗಣಿತ ವಿಷಯದ ಪರೀಕ್ಷೆಯ ವೇಳೆಯು ೧॥ ಹಾಸು ಇಪ್ಪತ್ತು

Reg. No. B. 5691

ಧಾರವಾಡ ರಿಜಿಸ್ಟರ್ಡ್ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಥಮಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ಸಂ.	ವಿಷಯ.	ಪುಟ.
೧.	ಸ್ಪುಟವಿಚಾರ	೧
೨.	ಅಂಕಗಣಿತ ಶಿಕ್ಷಣದ ಮುಖ್ಯ ತತ್ವಗಳು	೫
೩.	ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತು ಪಡಿಸುವ ರೀತಿ	೯
೪.	ಹಿಂದೀಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳೂ ನಮ್ಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ	೧೭
೫.	ಶಿಶುಶಾಲೆಗಳು	೨೩
೬.	ರಿಜಿಸ್ಟರ್ಡ ನೆಯ ಇಸ್ವಿಯ ಗಂ. ಮಕ್ಕಳ ವ್ಹ. ಫಾ. ಪರೀಕ್ಷೆ	೨೬
೭.	ಪತ್ರಗಳ ಸಾರಾಂಶ	೩೦
೮.	ಪ್ರಕಟನೆ	೩೨

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training. School, Dharwar at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹು

	ರೂ. ಆ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಿಕೃತ)	೦-
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧-
ಲಘುವ್ಯಾಕರಣ (ವೈ. ಕಟ್ಟೀಕೃತ)	೦-
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦-
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-
,, ೩ನೇ ,,	೦-
,, ,, ೪ನೇ ,,	೦-
ಅಂಕಗಣಿತ (ಗಾಂವಕರಕೃತ) ೩ನೇ ,,	೦-
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦-
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦-
ಧಾರವಾಡ ಜಿಲ್ಲಾ ,, (ಕುರಡೀಕೃತ)	೦-
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦-
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧-
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧
ಭೂಮಿತಿ (ಚಂದಾವರಕರ ಕೃತ)	೦-
ಸರಸ್ವತೀ ವಿಜಯ (ಬೂದೀಹಾಳಕೃತ)	೦-

ಪತ್ರೆ:—ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬ | ಫೇಬ್ರುವರಿ ೧೯೩೮ | ವರ್ಷ ೯ ಸಂ. ೧೧.

ಸ್ಫುಟವಿಚಾರ

ಹಿಂದುಳಿದ ಬಾಲಕರು

ಪ್ರತಿಯೊಂದು ಸಾಲೆಯಲ್ಲಿ ಪ್ರತಿಯೊಂದು ವರ್ಗದಲ್ಲಿ ಹಿಂದುಳಿದ ಬಾಲಕರ ಪೊಂದು ಶಿಕ್ಷಕನ ಕಾಲುತೊಡಕಾಗಿ ನಿಲ್ಲುವದು. ಈ ಸಮಸ್ಯವನ್ನು ಸಲು ನಮ್ಮ ನಾಡಿನಲ್ಲಿ ಸಾಕಷ್ಟು ಪ್ರಯತ್ನಗಳು ಇದುವರೆಗೆ ಸಮರ್ಪಕವಾಗಿ ಲ್ಲ. ಇದೊಂದು ಶಿಕ್ಷಣ ಪ್ರಪಂಚದಲ್ಲಿನ ದೊಡ್ಡ ಕೊರತೆಯು. ಹಿಂದುಳಿದ ಕರಲ್ಲಿ ಕೆಲವರು ಕಳವು-ತುಡುಗು ಮೊದಲಾದ ಅಪರಾಧಗಳನ್ನು ಮಾಡುವ ಇತ್ತೀಚೆಗೆ ಶೋಧವಾಗಿದೆ. ಈ ಕೊರತೆಯೇ ಅಂಥ ಅಪರಾಧ ಮಾಡುವ ವದ ಕಾರಣವೆಂದು ಹೇಳುವರು. ಆದಕಾರಣ ಇಂಥ ಬಾಲಕರ ಸಂಖ್ಯೆಯು ದಂತೆ ಮಾಡುವದು ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವಾಗಿರುವದು.

ಇವರಲ್ಲಿ ಕೆಲವರು ಬುದ್ಧಿಯಿಂದ ಊನರೂ ಹೀನರೂ ಇರಬಹುದು. ರು ವಿಷಯಜ್ಞಾನದೃಷ್ಟಿಯಿಂದ ಕೊರತೆಯುಳ್ಳವರಿರಬಹುದು. ಬುದ್ಧಿ ತೆಯು ಹುಟ್ಟಿನಿಂದ ಬಂದಿರುವದು. ವಿಷಯಜ್ಞಾನನ್ಯೂನತೆಯು ಪರಿಸ್ಥಿತಿಯ ಾಮದಿಂದ ಉಂಟಾದದ್ದಾಗಿರುವದು. ಈ ಸಂಗತಿಯಲ್ಲಿ ಪ್ರಯತ್ನ ಮಾಡಿದರೆ ನ್ಯೂನತೆಯನ್ನು ನಾಶಮಾಡಲು ಸಾಧ್ಯವಾದ ಮಾತು. ಬುದ್ಧಿಯಿಂದ

ಊನರಾದ ಬಾಲಕರ ವಿಷಯವಾಗಿ ಪಾಶ್ಚಾತ್ಯದೇಶಗಳಲ್ಲಿ ಬೇರೆಬೇರೆ ಶಾಲೆಗಳ
ಹಾಕಿ ಅಲ್ಲಿ ಅವರು ಸುಧಾರಣೆ ಹೊಂದುವ ಹಾಗೆ ಮಾಡುತ್ತಿರುವರು. ಇ
ಈ ನ್ಯೂನತೆಯ ಕಾರಣಗಳನ್ನು ಕುರಿತು ವಿಚಾರಿಸುವಾ– ಇಂದ್ರಿಯ ಸನ್ನಿಕ
ದಿಂದ ಸಂವೇದನವಾಗುವದು; ಈ ಸಂವೇದನವೇ ಅವಠಲ್ಲಿ ಸಾಮಾನ್ಯವಾ
ಬಾಲಕರಲ್ಲಿ ಆಗುವಷ್ಟು ಕ್ಷಿಪ್ರದಿಂದಲೂ ಸ್ಪಷ್ಟತೆಯಿಂದಲೂ ಆಗುತ್ತಿರುವದಿ
ಶ್ರವಣೇಂದ್ರಿಯ– ದರ್ಶನೇಂದ್ರಿಯಗಳು ಆ ಬಾಲಕರಲ್ಲಿ ಅಷ್ಟು ಪಟುತರವಾಗಿ
ವದಿಲ್ಲ; ಆದ್ದರಿಂದ ಸಂವೇದನವು ಸರಿಯಾಗುವದಿಲ್ಲ. ಇದೇಕಾರಣ ಮೂಲ
ವಿಷಯಜ್ಞಾನ ಮೂಡಿಕೊಳ್ಳುವಾಗ ಪೃಥಕ್ಕರಣ ಏಕೀಕರಣ ವ್ಯಾಪಾರಗಳು ಎ
ಬಾಲಕರಲ್ಲಿ ಉಂಟಾಗುವಂತೆ ಇವರಲ್ಲಿ ಸಾಗುವದಿಲ್ಲ. ಅವರ ಅವಧಾನವಾದ
ಒಂದು ವಿಷಯವನ್ನು ಕುರಿತು ದೃಢವಾಗಿರದೆ ಅಸ್ಥಿರವಾಗಿರುವ ಕಾರಣ ಸ್ಮೃ
ಯಲ್ಲಿಯ ಪ್ರತ್ಯಾನಯನ ಕ್ರಿಯೆಯು ಕುಂಠಿತವಾಗುವದು. ಈ ಬಾಲ
ಭಾವನೆ– ಪ್ರೇರಣೆಗಳ ವಿಷಯವಾಗಿಯೂ ಇದೇ ರೀತಿಯಾಗಿ ಹೇಳುವರು ಈ
ಭಾವನಾ ವ್ಯಾಪಾರಗಳಲ್ಲಿ ಸ್ಪಷ್ಟತೆಯೂ ಸಮಾನತೆಯೂ ಇರುವದಿಲ್ಲ. ಆದಕಾ
ಅವರಲ್ಲಿ ನಿರ್ಣಯಬಲವು ಕುಂದುಳ್ಳದ್ದಾಗುವದು.

ಈ ಮಾನಸಿಕ ದೌರ್ಬಲ್ಯಗಳ ಪರಿಣಾಮದಿಂದ ಆ ಬಾಲಕರು ಜಡಬುದ್ಧಿ
ಪರಾಗುವರು; ವ್ಯವಹಾರದಲ್ಲಿ ಅಯಶಸ್ವಿಗಳಾಗುವರು. ಅವರಿಗಾವ
ಮನಸ್ಸಿನ ಶಾಂತತೆ ಸಮಾಧಾನಗಳು ಬೇಕೇಬೇಕು. ಆದಕಾರಣ ಅವರು ಇ
ಬಾಲಕರನ್ನು ಬಿಟ್ಟುಕೊಟ್ಟು ಬೇರೆ ವ್ಯಾಪಾರಗಳಲ್ಲಿ ಈ ಸಮಾಧಾನವ
ಹುಡುಕಿಕೊಳ್ಳುವರು. ಶಿಕ್ಷಕರು ಈ ಬಾಲಕರು ಮಂದಬುದ್ಧಿಯವರು,
ಮತಿಗಳೆಂದು ಮುದ್ರಿಕೆ ಹಾಕುವರು. ಆದನ್ನೇ ತಾಯ್ತಂದೆಗಳು ನುಡಿಯುವ
ಓರಗೆಯವರು ಅದೇ ದನಿಯನ್ನು (ಮುಂದೆ) ಎಳೆಯುವರು. ಅವರ ಪಾ
ಮಂದಬುದ್ಧಿಯಲ್ಲದೆ ಈ ರೀತಿ ಹೀಯಾಳಿಸಿಕೊಳ್ಳುವ ಕಷ್ಟವೊಂದು ಬರುವದು

ಇಂಥ ಕುಂದುಕೊರತೆಗಳುಂಟಾಗಲು ದಾರಿದ್ರ್ಯವೊಂದು ಕಾರಣ
ಕೆಲವರು ತಿಳಿದಿರುವರು. ದಾರಿದ್ರ್ಯಮೂಲಕ ಶಾರೀರಿಕ ಪರಿಪೋಷಣಾ
ದೌರ್ಬಲ್ಯ ಬರಬಹುದು; ಸಾಂಸ್ಕೃತಿಕ ಪ್ರೇರಣೆಗೆ ಹಾನಿಯಾಗಬಹ
ಆದರೆ ದಾರಿದ್ರ್ಯವೇ ಸಕಲ ದೌರ್ಬಲ್ಯಗಳ ಮೂಲಕಾರಣವೆಂದು ಹೇಳ
ತೀರತಪ್ಪೆಂದು ಬರ್ಟನೆಂಬ ಮಾನಸಶಾಸ್ತ್ರಜ್ಞನು ಪ್ರತಿಪಾದಿಸಿರುವನು.
ಆಹಾರಪದಾರ್ಥ ಇವುಗಳ ಪೂರೈಕೆಯೂ ಸಾಕಷ್ಟು ಇಲ್ಲದಿದ್ದರೆ ಶಾರೀರ
ಕುಗ್ಗುವದು. ಎಷ್ಟೋ ಗೃಹಗಳ ವಾತಾವರಣದ ಪರಿಣಾಮದಿಂದ

ಕಣಗಳು ಪ್ರಚೋದನೆಗೊಳ್ಳುವದರಿಂದ ಬುದ್ಧಿಯೂ ಮನಸ್ಸೂ ಸಮತೂಕ ಗಿ ಉಳಿಯಲಾರವು. ಒಟ್ಟಿಗೆ ದೃಷ್ಟಿದೋಷ, ಕರ್ಣಮಾಂದ್ಯ, ನಾಸಿಕಾಬಾಧೆ, ೀಗಪೀಡಿತ ದಂತಪೀಡೆ ಮೊದಲಾದ ಶಾರೀರಿಕ ರೋಗಗಳ ಮೂಲಕ ಶಾರೀರಿಕ ಮಾನಸಿಕ ದೌರ್ಬಲ್ಯಗಳುಂಟಾಗುವವೆಂದು ವೈದ್ಯಶಾಸ್ತ್ರವು ಸಾರುತ್ತದೆ.

ಅನುಪಯುಕ್ತ ಶಿಕ್ಷಣ ಹಾಗು ಪರಿಸ್ಥಿತಿ ಇವುಗಳ ಪರಸ್ಪರ ಪರಿಣಾಮದಿಂದ ಬುದ್ಧಿಮಾಂದ್ಯವಾಗುವದು; ವಿಷಯಜ್ಞಾನ ಮಾಡಿಕೊಳ್ಳಲು ಚಟುವಟಿಕೆಯಿ ವದಿಲ್ಲ. ಕಾರ್ಯಪ್ರವೃತ್ತಿಯಲ್ಲಿಯೂ ಜಾಡ್ಯವು ಬರುವದು. ವಾಚಾ– ಸ್ಪಷ್ಟತೆಯೂ ಬುದ್ಧಿಮಾಂದ್ಯದ ಪ್ರಬಲವಾದ ಕಾರಣವು. ಸರಿಯಾಗಿ ಮಾತಾಡಲು ಬಾರದ ಮಕ್ಕಳ ಬುದ್ಧಿಯು ಮಂದವಾಗಿರುವದೆನ್ನುವ ಪದ್ಧತಿಯುಂಟು.

ಮೇಲೆ ವಿವರಿಸಿದ ದೌರ್ಬಲ್ಯಗಳ ಮೂಲಕ ವಿಷಯಜ್ಞಾನ ಗ್ರಹಣ– ಧಾರಣ– ಪ್ರತ್ಯಾನಯನ ವ್ಯಾಪಾರಗಳಲ್ಲಿ ಕೊರತೆಯಾಗುವದು. ಮಾನಸಿಕ ಸ್ಥಿತಿಯೂ ಈ ಕೊರತೆಗೆ ಕಾರಣವಾಗುವದುಂಟು. ಒಮ್ಮೊಮ್ಮೆ ಬಾಲಕರು ಹತ್ತೋ ಇಪ್ಪತ್ತು ದಿವಸಗಳ ವರೆಗೆ ಸಾಲೆಗೆ ಬರುವದಿಲ್ಲ. ಸಾಲೆಯ ವ್ಯವಸ್ಥೆಯಲ್ಲಿಯೇ ಅನೇಕ ಏರ್ಪಾಟುಗಳಾಗುವವು. ಶಿಕ್ಷಕರು ವರ್ಗವಾಗಿ ಹೋಗುವರು. ಶಿಕ್ಷಣ ಪದ್ಧತಿ– ಪದ್ಧತಿಗಳಲ್ಲಿ ವ್ಯತ್ಯಾಸಗಳಾಗುವವು. ಎಷ್ಟೋ ಮನೆಗಳಲ್ಲಿ ಯೋಗ್ಯ ವಾದ ವಾತಾವರಣವಿರುವದಿಲ್ಲ. ತಾಯಿತಂದೆಗಳು ಶಿಕ್ಷಕರ ಕೂಡ ಸಹಕಾರ ಮಾಡುವದಿಲ್ಲ. ಇವೆಲ್ಲ ಕಾರಣಗಳು ಒಟ್ಟುಗೂಡಿ ಮಾನಸಿಕ– ಬೌದ್ಧಿಕ ದೌರ್ಬಲ್ಯಗಳನ್ನು ತಂದುಕೊಡುವವು.

ಮಂದಮತಿ ಜಡಮತಿಗಳೆಂದು ಎಲ್ಲರಿಂದಲೂ ಮುದ್ರೆಹಾಕಿಸಿಕೊಂಡ ಬಾಲಕರ ಸ್ವಭಾವವೇ ಒಂದು ರೀತಿಯಾಗಿ ಪರಿಣಮಿಸುವದುಂಟು. ತಮ್ಮ ಸುತ್ತಿನ ಬಾಲಕರಷ್ಟು ದೈವಿಗಳು ತಾವು ಇರುವದಿಲ್ಲೆಂಬ ವಿಚಾರವು ಅವರನ್ನು ಯಾಗಲೂ ಅಳುಕಿಸುತ್ತಿರುವದು. ಇದರಲ್ಲಿ ಅವರ ಅಪರಾಧವೇನೂ ಇಲ್ಲ ವರೂ ತಾವು ಮಿಕ್ಕ ಬಾಲಕರನ್ನು ಯಾವುದರಲ್ಲಿಯೂ ಸರಿಗಟ್ಟಲಾರೆವೆಂಬ ಸಂಶಯವು ಅವರಲ್ಲಿ ಹುಟ್ಟುವದು. ಆದಕಾರಣ ಉಳಿದ ಬಾಲಕರು ಕಾರ್ಯ ಪ್ರವೃತ್ತರಾಗುವಾಗ ಆ ಕಾರ್ಯವನ್ನು ಬಿಟ್ಟು ಅವರ ಮನಸ್ಸು ಭಿನ್ನ ವಿಷಯಕ್ಕೆ ಎಳೆದೊಯ್ಯುವದು. ಭಿನ್ನವ್ಯಾಪಾರದಲ್ಲಿಯೇ ಅವರ ಮನಸ್ಸು ತೊಡಗಿಕೊಂಡು ಅವರು ಉದ್ದೇಶರಹಿತ ಶೀಲವುಳ್ಳವರಾಗುವರು. ಹೀಗಾಗಿ ಸಾಮಾಜಶೀಲತೆಗೆ ವಿರುದ್ಧ ನಡೆವಳಿಕೆಯು ಅವರಲ್ಲಿ ನೆಲೆಗೊಳ್ಳುವದು.

ಈ ರೀತಿ ರೋಗಗಳಿರುತ್ತವೆಂಬದನ್ನು ನಾವು ಒಪ್ಪಿಕೊಂಡರೆ ಚಿಕಿತ್ಸೆಗೂ ರೋಗನಿವಾರಣೆಮಾಡುವದು ನಮ್ಮ ಕರ್ತವ್ಯವಾಯಿತು. ಬೇರೆ ಬೇರೆ ಬಾಲಕ ರೋಗಚಿಕಿತ್ಸೆಯನ್ನು ಬೇರೆ ಬೇರೆಯಾಗಿಯೇ ಮಾಡಬೇಕು. ಪ್ರತಿಯೊ ಬಾಲಕನ ಬೇನೆಯ ಮೂಲ ಕಾರಣವನ್ನು ಹುಡುಕಬೇಕು. ಅಂದರೆ ಆ ಬುದ್ಧಿಪರೀಕ್ಷೆಯನ್ನು ವಿಶಿಷ್ಟಪದ್ಧತಿಯಿಂದಲೇ ಮಾಡಬೇಕು. **ಬುದ್ಧಿಮಾಪ ದಲ್ಲಿ** ಹೇಳಿದಂತೆ ಪ್ರಶ್ನಮಾಲಿಕೆಗಳನ್ನು ಮಾಡಿಕೊಂಡು ಅವರನ್ನು ಪರೀಕ್ಷಿ ಬೇಕು. ಬುದ್ಧಿಮಾಪನ ಪ್ರಶ್ನಮಾಲಿಕೆಯಲ್ಲಿ ವಾಚಾಪರೀಕ್ಷೆಯು ವಿಶೇ ವಿರುವದು; ಹಾಗೆ ಮಾಡದೆ ಚಿತ್ರಮಾಲಿಕೆಯ ಮುಖಾಂತರ ಅಂದರೆ ಕೆಲವೊಂ ಚಿತ್ರಗಳ ಗುಂಪುಗಳನ್ನು ಮಾಡಿ ಅವುಗಳ ಸಹಾಯದಿಂದ ಅವರ ಬುದ್ಧಿಪರೀ ಮಾಡಬೇಕು. ಅದೇಮೇರೆಗೆ ಸಾಮಾನ್ಯತಿಳಿವಳಿಕೆಯ ಪರೀಕ್ಷೆ ಮಾಡುವ ವಾಚನ, ಗಣಿತ, ವಾಕ್ಯರಚನೆ, ವಾಕ್ಯಲೇಖನ ಮೊದಲಾದ ವಿಷಯಗ ಪರೀಕ್ಷೆಯನ್ನು ಈ ಬಾಲಕರ ವಿಷಯವಾಗಿ ಮಾಡಬೇಕು. ಅವರ ಭಾವನೆ ಪರೀಕ್ಷೆಯನ್ನು ಸೂಕ್ಷ್ಮರೀತಿಯಿಂದ ಮಾಡಬೇಕು. ಈ ರೀತಿಯ ಪರೀಕ್ಷೆಯ ಬಾಲಕರು ಹುಟ್ಟಿನಿಂದ ಕುಂದುಳ್ಳವರಿರುವರೋ ಇಲ್ಲವೋ ಎಂಬದನ್ನು ತಿ ಕೊಡುವದು. ಆ ಕೊರತೆಗಳನ್ನು ನಾಶಮಾಡಲು ಇಲ್ಲವೆ ಕಡಿಮೆಮಾಡ ಸಾಧ್ಯವೋ ಇಲ್ಲವೋ ಎಂಬದೂ ಗೊತ್ತಾಗುವದು.

ಇಂಥ ಕೊರತೆಗಳನ್ನು ನಿವಾರಿಸಲು ಅಭ್ಯಾಸಪದ್ಧತಿಕೆಯ ವಿಷಯಮಾಲಿ ಗಳಲ್ಲಿ ತಕ್ಕ ಮಾರ್ಪಾಟಗಳನ್ನು ಮಾಡಬೇಕೆನ್ನುವ ವಾಡಿಕೆಯಿರುವದು. ವಿಷಯ ಗಳು ಹೆಚ್ಚು ವ್ಯವಹಾರ್ಯವಿರಬೇಕೆನ್ನುವರು. ಈ ರೀತಿ ವ್ಯತ್ಯಾಸಗಳ ನಾಗರಿಕತೆಯನ್ನುಂಟುಮಾಡಲು ಅಷ್ಟು ಸಾಮರ್ಥ್ಯವುಳ್ಳವುಗಳಿರುವದಿಲ್ಲೆಂ ದನ್ನು ಮರೆಯಕೂಡದು. ಬಾಲಕರು ಸಮಾಜದಲ್ಲಿ ಯಾವ ರೀತಿಯಾ ಇರುವರು; ಅವರ ಬಾಳ್ವೆಯು ಎಂಥದಿರುವದು ಎಂಬ ವಿಷಯಗಳೇ ಹೆಚ್ಚು ಮಹತ್ವದವಿರುವವು. ವಿಷಯಜ್ಞಾನ ಶಿಕ್ಷಣಕ್ಕಿಂತ ಅವರ ಬಾಳ್ವೆಯ ರೀತಿಯ ಹೆಚ್ಚು ಮಹತ್ವದ್ದು. ಆ ಬಾಲಕರಲ್ಲಿ ಯೋಗ್ಯವಾದ ಧ್ಯೇಯಗಳನ್ನೂ ಅವುಗಳ ತಕ್ಕಂತೆ ಉತ್ಸಾಹವನ್ನೂ ಹುಟ್ಟಿಸುವದು ಹೆಚ್ಚು ಒಳ್ಳೆಯದು. ವಿಷಯ ಜ್ಞಾ ಸಂಪಾದನ- ಸಂಗ್ರಹಗಳಿಗಿಂತ ಅವರ ಅನುಭವವೂ ಚಟುವಟಿಕೆಯೂ ಬೆಳೆಯು ವಂತೆ ಅವರ ಅಭ್ಯಾಸಕ್ರಮವಿರಬೇಕು. ಹಿಂದುಳಿದ ಬಾಲಕರ ಸಾಲೆಯ ಶಿಕ್ಷಕನ ವಿಚಾರಗಳು ಈ ರೀತಿ ಬಾಲಕರು ವಿಚಾರಪೂರ್ವಕ ಚಟುವಟಿಕೆಗಳ ತೊಡಗುವಂತೆ ಇರಬೇಕು. ಅವರಲ್ಲಿ ಶೋಧಕಬುದ್ಧಿಯೂ ಬೆಳೆಯಬೇಕು.

ಬೇಸರ ಬಂದವರಿಗೆ ಬೇನೆಯು ಯಾವದು ಅದರ ಪರಿಣಾಮವೇನಾಗುವದು ಬ ಸಂಗತಿಗಳು ಅವರಿಗೆ ತಿಳಿಯದೆ ಇರುವದು ಹೇಗೆ ಉಪಯುಕ್ತವಾಗುವದೋ ಗೆಯೇ ಬಾಲಕರಿಗೆ ತಾವು ಮಂದಬುದ್ಧಿಯವರು ಎಂಬುದು ಅವರಿಗೆ ತಿಳಿಯದೆ ಸವದು ಒಳ್ಳೆಯದು. ಈ ಕಾರಣ ಮೂಲಕವೇ ಈ ಸಾಲೆಯು ಮಂದಬುದ್ಧಿ ುಳ್ಳವರ ಸಂಸ್ಥೆಯು ಈ ವರ್ಗವು ಹಿಂದುಳಿದ ಬಾಲಕರ ವರ್ಗವು ಎಂಬ ಹೆಸರು ಸ್ಸು ಹೊಂದಬಾರದು. ಆದಾಗ್ಯೂ ಈ ಬಾಲಕರನ್ನು ಒಟ್ಟುಗೂಡಿಸಿದರೆ ಅವರ ಯವಾಗಿ ಶಿಕ್ಷಕರಿಗೆ ಹೆಚ್ಚು ಜಾಗರೂಕರಾಗಿರಲು ಅನುಕೂಲ್ಯವು ವಿಶೇಷ ಗಿರುವದೆಂಬುದನ್ನು ಮರೆಯಬಾರದು. ಅವರಿಗಾಗಿಯೇ ಸುಲಭ ವಿಷಯಗಳನ್ನು ದುಕೊಂಡು ಕಾರ್ಯದಲ್ಲಿ ಗೆಲವು ತಂದುಕೊಟ್ಟು ಚಟುವಟಿಕೆಯನ್ನೂ ಉತ್ಸಾ ನ್ನೂ ಉಂಟುಮಾಡಲು ಸಾಧ್ಯವಾಗುವದು. ಎಷ್ಟೋ ಸಾಲೆಗಳಲ್ಲಿ ಒಳ್ಳೆಯ ತ್ಸಾಹವುಳ್ಳ ನಿಷ್ಣಾತ ಶಿಕ್ಷಕನು ಆಗಾಗ್ಯೆ ಇಂಥ ವರ್ಗಗಳನ್ನು ಕಲಿಸಲು ೀಗುವದುಂಟು. ಆದರೆ ನಡುನಡುವೆ ಇಂಥವರು ಬಂದು ಅವರಲ್ಲಿ ಹೆಚ್ಚಿನ, ುಪು ಹುಟ್ಟಿಸಲು ಶಕ್ಯವಿದ್ದಾಗ್ಯೂ ಈ ಬಾಲಕರನ್ನು ಅವ್ಯಾಹತವಾಗಿ ಶ್ರಮದಿಂದಲೂ ಸಹಾನುಭೂತಿಯಿಂದಲೂ ನೋಡುವ ಶಿಕ್ಷಕನೇ ಹೆಚ್ಚು ಕಾರಕನಾಗುವನು.

ದ ಮುಖ್ಯ ತತ್ವಗಳು

ಕ:— ಶ್ರೀ ತಟ್ಟಿ ಶಾಮರಾಯರು ಬಿ. ಎ. ಅ. ಮೂ. ಹೆ. ಮ. ಟ್ರೇ. ಕಾ. ಧಾರವಾಡ.

೧. ಅಂಕಗಣಿತದೊಳಗಿನ ಕಲ್ಪನೆಗಳನ್ನು ಪ್ರತ್ಯಕ್ಷವಸ್ತುಗಳ ಎಣಿಕೆ, ಗಳನ್ನು ಕೂಡಿಸುವದು, ಕಳೆಯುವದು, ಅವುಗಳಲ್ಲಿ ಗುಂಪುಗಳನ್ನು ಮಾಡು ಅವುಗಳನ್ನು ಹಂಚುವದು, ಅವುಗಳಲ್ಲಿ ಸರಿಯಾದ ಭಾಗಗಳನ್ನು ಮಾಡು ಮೊದಲಾದ ನಿತ್ಯದ ಅನುಭವಗಳ ಮೂಲಕ ಮಾಡಿಕೊಡಬೇಕು.

೨. ಮುಡುಗರಿಗೆ ಮಾಡಲಿಕ್ಕೆ ಹೇಳಿದ ಉದಾಹರಣೆಗಳು ಸಾಲೆಯ ಗಿನ ಅಳಿಯುವ, ತೂಗುವ, ಲೆಕ್ಕಮಾಡುವ ವ್ಯವಹಾರಗಳಲ್ಲಿ ಬರುವಂಥ ಕು.

೩. ಲೆಕ್ಕಗಳ ರೀತಿಯ ಬರಹವು ಕ್ರಮಬದ್ಧವಾಗಿಯೂ ಅಚ್ಚುಕಟ್ಟಾಗಿಯೂ ಇದ್ದು, ಮನಸ್ಸಿನಲ್ಲಿ ಮಾಡಲಿಕ್ಕೆ ಬಾರದ ಕೃತಿಗಳನ್ನು ಮಾತ್ರ ಕಾಗದದ ಮೇಲೆ ಹಚ್ಚಬೇಕು.

೪. ಲೆಕ್ಕದ ರೀತಿಯನ್ನು ಬರೆಯುವಾಗ ಮುಖ್ಯವಾದ ಮೆಟ್ಟುಗಳು ಒಡೆದು ಕಾಣುವಂತೆ ಇರಬೇಕು.

೫. ಯಾವದಾದರೊಂದು ರೀತಿಯನ್ನು ಇಲ್ಲವೆ ಸಾಮಾನ್ಯ ನಿಯಮವನ್ನು ಎಲ್ಲ ಸಂಖ್ಯೆಗಳಿಗೂ ಕಣ್ಣುಮುಚ್ಚಿಕೊಂಡು ಹಚ್ಚಬಾರದು. ಕೊಟ್ಟ ಸಂಖ್ಯೆಗಳ ಸುಲಭತೆ ಕಠಿಣತೆಯ ಮೇಲಿಂದ ಆ ರೀತಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿಕೊಳ್ಳಲಿಕ್ಕೆ ಹುಡುಗರಲ್ಲಿ ಬುದ್ಧಿಯು ಬರಬೇಕು.

೬. ಅಂಕಗಣಿತವು ಒಂದು ಕಲೆಯೂ ಹೌದು ಶಾಸ್ತ್ರವೂ ಹೌದು. ಇವರೆಗೆ ನಾವು ಅದನ್ನು ಹೆಚ್ಚಾಗಿ ಒಂದು ಕಲೆಯಂತೆಯೇ ಕಲಿಸುತ್ತ ಬಂದೆವು ಅಂದರೆ ಇಂಥಿಂಥ ಕೃತಿಯನ್ನು ಹೀಗೆ ಹೀಗೆ ಮಾಡಬೇಕು ಎಂದು ಮಾತ್ರ ಹೇಳಿ ಅದರಂತೆ ಆ ಕೃತಿಯ ರೂಢಿ ಮಾಡಿಸುತ್ತಿದ್ದೆವು. ಸರಿಯಾದ ಉತ್ತರ ಬರುವದೊಂದೇ ಈ ರೀತಿಗಳ ಪರೀಕ್ಷೆಯಲ್ಲ ; ಆದರೆ ಈ ರೀತಿಗಳು ನಮ್ಮ ಬುದ್ಧಿಗೆ ಸಮಂಜಸವಾದವು ಇರುತ್ತವೆ ಎಂಬ ಮಾತೂ ಹುಡುಗರಿಗೆ ಭಾಸವಾಗಬೇಕು. ಆದ್ದರಿಂದ ಯಾಕೆ? ಹೇಗೆ? ಎಂಬ ಪ್ರಶ್ನೆಗಳನ್ನು ಹುಡುಗರಿಗೆ ಕೇಳಿ ಮೇಲಿಂದಮೇಲೆ ಉತ್ತೇಜನ ಕೊಟ್ಟು ಅವರಿಗೆ ತಿಳುಕೊಳ್ಳುವ ಶಕ್ತಿಯಿದ್ದಷ್ಟು ಆ ರೀತಿಗಳ ಕಾರಣಗಳನ್ನು ತಿಳಿಸಬೇಕು.

೭. ಕಲಿತ ರೀತಿಗಳ ರೂಢಿಯಾಗಬೇಕೆಂದು ಸುಮ್ಮನೆ ದೊಡ್ಡ ದೊಡ್ಡ ಸಂಖ್ಯೆಗಳನ್ನು ಹೇಳುತ್ತ ಕೂಡ್ರಬಾರದು. ಅಥವಾ ಹುಡುಗರು ಬೇಗನೆ ಬಿಡಿಸಿಯುವ ಲೆಕ್ಕಗಳನ್ನು ಮೇಲಿಂದ ಮೇಲೆ ಹೇಳಬಾರದು.

೮. ಹುಡುಗರಿಗೆ ಲೆಕ್ಕಗಳನ್ನು ತಾವೇ ರಚಿಸಲಿಕ್ಕೆ ಉತ್ತೇಜನ ಕೊಡಬೇಕು.

೯. ಬೇರೆ ಬೇರೆ ಹುಡುಗರು ತಮಗೆ ಹೆಚ್ಚುಕಡಿಮೆ ಕಠಿಣವೆನಿಸುವ ಉದಾಹರಣೆಗಳನ್ನು ಮಾಡುತ್ತಿರಬೇಕು. ಇಡಿ ವರ್ಗವು ಒಂದೇ ಲೆಕ್ಕ ಮಾಡುತ್ತಿರಬೇಕೆಂಬ ನಿರ್ಬಂಧವಿರಕೂಡದು.

೧೦. ಬೇರೀಜಿನ ಸಂಗತಿಗಳು, ಮಗ್ಗಿಗಳು, ಕೋಷ್ಟಕಗಳು, ಆರು ನಾಲ್ಕು ಕೃತಿಗಳು, ಅರ್ಧ, ಗಿರ್ಧ ಮೊದಲಾದ ವ್ಯವಹಾರದೊಳಗಿನ ಅವುಗಳು, ಪ್ರಮಾಣದ ಕಲ್ಪನೆ ಬರುವ ಉದಾಹರಣೆಗಳು, ಅವಯವಗಳನ್ನು ತೆ

ಕ್ಯವನ್ನು ಸುಲಭ ಮಾಡುವ ರೀತಿಗಳು—ಇದರಂತೆ ಭೂಮಿತಿ ಜಮಾಖರ್ಚಿನ ಮುಖ್ಯ ಅಂಶಗಳು– ಇಷ್ಟು ಮಾತ್ರ ವಿಶೇಷ ವ್ಯವಹಾರದಲ್ಲಿ ಮೇಲಿಂದ ಮೇಲೆ ಉಪಯೋಗವಾಗುವದರಿಂದ ಇವುಗಳನ್ನು ಎಂದೂ ಮರೆಯದಂತೆ ಗಟ್ಟಿಮುಟ್ಟಾಗಿ ತಿಳಿಸಬೇಕು.

೧೧. ಅಂಕಗಣಿತವನ್ನು ಶಾಲೆಯಲ್ಲಿ ಕಲಿಸುವ ಇತರ ವಿಷಯಗಳಿಗೆ— ಉದಾ:–ಭೂಗೋಲ, ಕೈಕೆಲಸ, ಡ್ರಾಯಿಂಗು, ಹೊಲಿಗೆ ಇವುಗಳಿಗೆ ಸಂಬಂಧಿಸಿ ತಿಳಿಸಬೇಕು; ಅಂದರೆ ಅಂಕಗಣಿತವನ್ನು ಕಲಿಸುವಾಗ ಭೂಗೋಲದ ಒಂದು ಉದಾಹರಣೆಯನ್ನು ಹೇಳಿದರೆ ತಪ್ಪಲ್ಲ. ಅಥವಾ ಭೂಗೋಲವನ್ನು ಕಲಿಸುವಾಗ ಯಾವ ಗಣಿತವನ್ನು ತರುವದು ಪದ್ಧತಿಗೆ ವಿರುದ್ಧವಾದದ್ದೆಂದು ತಿಳಿಯಬಾರದು.

೧೨. ಮುಖ್ಯ ರೀತಿಯಲ್ಲಿ ಸಣ್ಣ ಸಣ್ಣ ಸುಲಭವಾದ ಮೆಟ್ಟಿಗಳನ್ನು ಹಾಕಿಕೊಂಡು ಅವು ಮನದಟ್ಟಾಗುವಂತೆ ಸಣ್ಣ ಸಣ್ಣ ಲೆಕ್ಕಗಳನ್ನು ಬಾಯಿಂದ ಹಾಕಿಸಬೇಕು. ಇದಕ್ಕಾಗಿ ಅಂಕಗಣಿತದ ಪ್ರತಿಯೊಂದು ಪಾಠದ ಮೊದಲಿನ ೫ ಹತ್ತು ಮಿನಿಟುಗಳನ್ನು ಕೊಡಬೇಕು.

೧೩. ಅಂಕಗಣಿತದ ರೀತಿಗಳ ಯಥಾರ್ಥ ಸ್ವರೂಪವು ದೃಕ್ಪ್ರತ್ಯಯಕ್ಕೆ ಬರುವಂತೆ ಕಾಗದ ಕತ್ತರಿಸುವದು, ಮಡಿಚುವದು, ಚೌಕು ಮನೆಗಳ ಕಾಗದವನ್ನು ಉಪಯೋಗಿಸುವದು, ಆಕೃತಿಗಳನ್ನು ತೆಗೆಯುವದು, ರೇಖೆಗಳನ್ನು ಗೆಯುವದು ಮೊದಲಾದ ದೃಶ್ಯಸಾಧನಗಳಿಂದ ಮಾಡಿದ ರೀತಿಗಳು ವಿದ್ಯಾರ್ಥಿಗಳ ಒಂದು ಪುಸ್ತಕದಲ್ಲಿ ಅಚ್ಚುಕಟ್ಟಾಗಿ ಮಾಡಿಸಿದಂಥವಿರಬೇಕು. ಇವು ಹುಡುಗರ ಕಣ್ಣಿಗೆ ಆಗಾಗ್ಗೆ ಬೀಳುತ್ತಿದ್ದರೆ ಅವುಗಳಲ್ಲಿ ಗರ್ಭಿತವಾದ ರೀತಿಯು ಅವರ ಮನದಟ್ಟಾಗುವದು,

೧೪. ಹುಡುಗರು ಮಾಡಿದ ಪ್ರತಿಯೊಂದು ಲೆಕ್ಕವನ್ನು ಶಿಕ್ಷಕನು ನೋಡಿ ಸರಿಯಾಗಿದ್ದರೆ ಗುರ್ತಮಾಡಬೇಕು; ತಪ್ಪಿದರೆ ಎಲ್ಲಿ ತಪ್ಪಿರುವದೆಂಬದನ್ನೂ ಹೇಗೆ ತಪ್ಪಿರುವದೆಂಬದನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿ ಗೊತ್ತು ಹಚ್ಚಬೇಕು. ಇದನ್ನು ವಿದ್ಯಾರ್ಥಿಯು ಅದಷ್ಟು ತಾನೇ ಕಂಡುಹಿಡಿಯಬೇಕು. ಸಾಕಷ್ಟು ಪ್ರಯತ್ನ ಮಾಡಿಯೂ ತಿಳಿಯದಿದ್ದರೆ ಶಿಕ್ಷಕನು ತೋರಿಸಿ ತಿದ್ದಿಕೊಳ್ಳಲಿಕ್ಕೆ ಹೇಳಬೇಕು.

೧೫. ಹುಡುಗರಿಗೆ ಹೇಳಿದ ಲೆಕ್ಕಕ್ಕೆ ಅವರಿಂದ– ನನಗೆ ಇದು ಒರುವ ಹಾಗಿ– ಂದು ಎಂದೂ ಉತ್ತರ ಬರದಂತೆ ವ್ಯವಸ್ಥೆಯನ್ನಿಡಬೇಕು. ಅಂದರೆ ಎಲ್ಲರಿಗೂ ಅವರ ಯೋಗ್ಯತೆ ಮೀರಿದಂಥ ಲೆಕ್ಕವನ್ನು ಮಾಡಲಿಕ್ಕೆ ಹೇಳಲೇ

ಬಾರದು. ಅವರಿಗೆ ಬರುವ ಲೆಕ್ಕವನ್ನು ಹೇಳಿದಮೇಲೆ ಅವರು ಅದನ್ನು ಬಿಡಿ
ಲಿಕ್ಕೆ ಸ್ವಲ್ಪಾದರೂ ಪ್ರಯತ್ನಮಾಡದೆ ಶಿಕ್ಷಕನನ್ನು ಕೇಳಬಾರದು.

೧೬. ಶಿಕ್ಷಕರು ಹುಡುಗರಿಗೆ ರೀತಿಯ ಮಾದರಿಗಳನ್ನು ತೋರಿಸಿ ಅವ
ಅವುಗಳನ್ನು ಅನುಸರಿಸುವಂತೆ ಮಾಡಬೇಕು. ಅಂದರೆ ಪ್ರತಿಯೊಬ್ಬ ಹುಡುಗ
ತನಗೆ ಬೇಕು ಬೇಕಾದಂತೆ ಹೆಚ್ಚು ಕಡಿಮೆ ಅನವಶ್ಯಕವಾದ ಸಂಗತಿಗಳನ್ನ
ಬರೆಯಕೂಡದು. ಆದರೆ ಮುಖ್ಯ ಮುಖ್ಯ ಮೆಟ್ಟುಗಳನ್ನು ತನಗೆ ಇಷ್ಟವಾ
ತೋರುವ ಮೈಚಿತ್ರ್ಯವನ್ನು ತೋರಿಸಿ ಮಾಡಲಿಕ್ಕೆ ಆತಂಕವಿರಬಾರದು.

೧೭. ಪ್ರತಿಯೊಂದು ಲೆಕ್ಕದಲ್ಲಿ ಕೊಟ್ಟ ಮಾತುಗಳು, ಕೇಳಿದ ಮಾತುಗ
ಇವು ಹುಡುಗರಿಗೆ ಸ್ಪಷ್ಟವಾಗಿ ತಿಳಿದಿರುವವೋ ಇಲ್ಲವೋ ಎಂಬದ
ನೋಡಬೇಕು.

೧೮. ಲೆಕ್ಕವನ್ನು ಮಾಡಲಿಕ್ಕೆ ಹತ್ತುವದರ ಮುಂಚೆ ಅದನ್ನು ಹೇ
ಮಾಡಬೇಕೆಂಬದನ್ನು ಮೊದಲು ವಿದ್ಯಾರ್ಥಿಯು ಸಂಕ್ಷೇಪವಾಗಿ ಹೇಳಿ
ಕಲಿಯಬೇಕು; ಆದರೆ ಹೀಗೆ ಹೇಳುವಾಗ ಮುಖ್ಯ ಮುಖ್ಯ ಮೆಟ್ಟುಗಳನ್ನ
ಮಾತ್ರ ಹೇಳುವಂತೆ ನಿರ್ಬಂಧಪಡಿಸಬೇಕು. ಮೊದಲು ಏನನ್ನು ತೆಗೆಯಬೇಕ
ಆ ಮೇಲೆ ಅದರ ಸಹಾಯದಿಂದ ಏನನ್ನು ತೆಗೆಯಬೇಕು– ಹೀಗೆ ಕಡೆಯ
ಲೆಕ್ಕದಲ್ಲಿ ಕೇಳಿದ ಮಾತನ್ನು ಹೇಗೆ ತೆಗೆಯಬಹುದು. ಎಂಬದನ್ನು ಅಚ್ಚುಕಟ್ಟಾ
ಹೇಳಲಿಕ್ಕೆ ಹುಡುಗರಿಗೆ ಕಲಿಸಬೇಕು.

೧೯. ಬಂದ ಉತ್ತರವು ಸಮಂಜಸವಾಗಿ ಎಂದರೆ ಲೆಕ್ಕದಲ್ಲಿ ಕೆ
ಮಾತು ಒಂದು, ನಾವು ಉತ್ತರ ಇಡುವದೊಂದು; ಇಲ್ಲವೆ ಕೇಳಿದ ಮಾತಿಗೆ ಇ
ಉತ್ತರವಾದರೂ ಅದು ರೂಢಿಯನ್ನು ಬಿಟ್ಟು ನಗೆ ಬರುವಂತಿರಬಾರದು. ಅಥ
ಕೇಳಿದ ಮಾತಿಗೆ ಇದು ಅಶಕ್ಯವಾದ ಉತ್ತರವಿರಬಾರದು. ಬಂದ ಉತ್ತ
ಸರಿಯಿರುವದೆಂಬದನ್ನು ನೋಡುವ ಸುಲಭವಾದ ವಾಡಿಕೆಯ ಕಲೆಗಳ
ಕಲಿಸಬೇಕು.

೨೦. ಪರೀಕ್ಷೆಯಲ್ಲಿ, ಎಲ್ಲರಿಗೂ ಅವಶ್ಯವಾಗಿ ಬರಬೇಕಾದ ರೀತಿ
ಸಂಗತಿಗಳು– ಇವುಗಳನ್ನು ಮಾತ್ರ ಕೇಳಬೇಕಲ್ಲದೆ ಹುಡುಗರನ್ನು ತಪ್ಪಿಸಬೇ
ಒಂದೇ ಇಚ್ಛೆಯಿಂದ ಪ್ರಶ್ನೆಗಳನ್ನು ರಚಿಸಬಾರದು. ಪರೀಕ್ಷೆಯಲ್ಲಿ ಹುಡು
ತಿಳುವಳಿಕೆ, ವ್ಯವಸ್ಥೆಯ ಪ್ರೀತಿ, ಮುಖ್ಯ ಮೆಟ್ಟುಗಳ ಜ್ಞಾನ ಇವು
ಸಾಕಷ್ಟು ಮಾರ್ಕುಗಳನ್ನು ಕೊಡಬೇಕು. ಇವು ಇಲ್ಲದಿದ್ದವರಿಗೆ ಕ
ಮಾರ್ಕುಗಳು ದೊರೆಯಬೇಕು.

ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತುಪಡಿಸುವ ರೀತಿ

ಲೇ:— ಶ್ರೀ ಬಾಳಕೃಷ್ಣ ನಾರಾಯಣ ಜೇರೆ ಬಿ. ಎಸ್. ಸಿ., ಬಿ. ಟಿ.
ಅಸಿ। ಮಾ। ಹೆ. ಮಕ್ಕಳ ಆಂಗ್ಲೋ ವ್ಹ. ಸ್ಕೂಲು ಧಾರವಾಡ.

ಇರುಳಿನಲ್ಲಿ ವೇಳೆಯನ್ನು ಹೇಗೆ ಗೊತ್ತುಪಡಿಸಬೇಕು ಎಂಬುದನ್ನು ವಿಚಾ
ವ ಪೂರ್ವದಲ್ಲಿ ಹಗಲು ನಾವು ಗಡಿಯಾರವನ್ನು ಪಯೋಗಿಸದೆ ಹೇಗೆ ವೇಳೆ
ನ್ನು ತಿಳಿದುಕೊಳ್ಳುವೆವೆಂಬುದರ ಬಗ್ಗೆ ವಿಚಾರಿಸಿದರೆ ನಮಗೆ ರಾತ್ರಿಯಲ್ಲಿ
ಯನ್ನು ಗೊತ್ತುಪಡಿಸುವ ಒಂದು ರೀತಿಯು ಗೊತ್ತಾಗುವದು.

ಸೂರ್ಯನು ಮುಂಜಾನೆ ಪೂರ್ವದಲ್ಲಿ ಉದಯಿಸಿ ಮಧ್ಯಾಹ್ನಕ್ಕೆ ನಮ್ಮ
ಯಮೇಲೆ ಬಂದು ಸಾಯಂಕಾಲಕ್ಕೆ ಪಶ್ಚಿಮದಿಕ್ಕಿನಲ್ಲಿ ಮುಳಗುವದು ಎಲ್ಲರಿಗೂ
ತವಾದ ವಿಷಯವೇ ಸರಿ. ಅಂದರೆ ಕ್ಷಿತಿಜದ ಮೇಲೆ ಕಾಣಿಸಿ ನಮ್ಮ
ಮ್ಯೋತ್ತರ (ದಕ್ಷಿಣೋತ್ತರ) ವೃತ್ತದ (Meridian circle) ಮೇಲೆ ಬರಲಿಕ್ಕೆ
ಸುಮಾರು ಹೆಚ್ಚು ಕಡಿಮೆ ಆರು ತಾಸುಗಳು ಬೇಕಾಗುವವು. ಅಂದರೆ ಸೂರ್ಯೋ
ವಾಗಿ ಮಧ್ಯಾಹ್ನವಾಗಲಿಕ್ಕೆ ಸುಮಾರು ಆರು ತಾಸು ಬೇಕು. ಆಕಾಶದಲ್ಲಿ
ಜದಿಂದ ನಮ್ಮ ಯಾಮ್ಯೋತ್ತರವೃತ್ತದವರೆಗೆ ಆರು ಕಾಲ್ಪನಿಕ ಭಾಗಗಳನ್ನು
ಡಿ ಸೂರ್ಯನು ಯಾವ ಭಾಗದಲ್ಲಿರುವನೆಂಬುದನ್ನು ನೋಡಿ ಸೂರ್ಯೋ
ವಾಗಿ ಇಂತಿಷ್ಟು ವೇಳೆ ಆಯಿತು ಎಂದು ಹೇಳುವದು ಎಲ್ಲರಿಗೂ ಗೊತ್ತಿದ್ದ
ುವಾಗಿದೆ. ಒಕ್ಕಲಿಗರು "ಈಗ ಮಾರು ಹೊತ್ತು ಏರಿದೆ" ಎಂದು
ನವರ ಅರ್ಥವಾದರೂ ಹೀಗೆ. ಇಲ್ಲಿ ಮಾರು ಎಂದರೆ ಒಂದು ತಾಸು ಎಂದು

ಬಟ್ಟಿನಮೇಲೆ ಹೇಳಬೇಕಾದರೆ ಸೂರ್ಯನು ಕ್ಷಿತಿಜದಿಂದ ಎಷ್ಟುಮೇಲೆ
ನೆಂಬುದನ್ನು ನೋಡಿ ಸಾಧಾರಣ ವೇಳೆಯನ್ನು ಹೇಳಲಿಕ್ಕೆ ಬರುತ್ತದೆ.

ಇರುಳಿನಲ್ಲಿ ಸೂರ್ಯನಿರುವದಿಲ್ಲ. ಆದರೆ ಆಕಾಶದಲ್ಲಿ ಎಷ್ಟೋ ನಕ್ಷತ್ರಗಳು
ುತ್ತವೆ. ಆದರೆ ಯಾವ ನಕ್ಷತ್ರವನ್ನು ನೋಡಿ ವೇಳೆಯನ್ನು ತಿಳಿದುಕೊಳ್ಳ
ಬಹುದು, ಆಶ್ವಿನಿ, ಕಾರ್ತಿಕ ಮುಂತಾದ ಚಾಂದ್ರಮಾನ ತಿಂಗಳ ಹೆಸರು
ಆ ತಿಂಗಳುಗಳಿಗೆ ಹೇಗೆ ಬಂದವೆಂಬುದನ್ನು ವಿಚಾರಿಸಿದರೆ ತಿಳಿಯುವದು.

ಒಂದು ಚಾಂದ್ರಮಾನ ತಿಂಗಳಿಗೆ ಸುಮಾರು ೨೯½ (೨೯·೫೩೧) ದಿನಗ
ಗುತ್ತವೆ. ಚಂದ್ರನು ಸುಮಾರು ೨೭½ ದಿನಗಳಲ್ಲಿ ನಕ್ಷತ್ರಪಥದಲ್ಲಿ ಒಂದು ಸು
ಹಾಕುವನು. ಒಂದು ಹುಣ್ಣಿಮೆಯಾಗಿ ಇನ್ನೊಂದು ಹುಣ್ಣಿಮೆಯ ಬ
ತಿಂಗಳು ದಾಟುವಷ್ಟರಲ್ಲಿ ಚಂದ್ರನು ನಕ್ಷತ್ರಪಥದಲ್ಲಿ ಒಂದು ಸುತ್ತು ಸ
ಇನ್ನೂ ಎರಡು ನಕ್ಷತ್ರಗಳನ್ನು ದಾಟುವನು. ಹೀಗಾಗಿ ಒಂದು ಹುಣ್ಣಿ
ಚಂದ್ರನು ಅಶ್ವಿನಿಯೊಂದಿಗೆ ಇದ್ದರೆ ಅದರ ಮುಂದಿನ ಹುಣ್ಣಿಮೆಗೆ ಒಂದು ಸು
ಮಾಡಿ, ಅಶ್ವಿನೀ ಮತ್ತು ಭರಣೀ ಇವೆರಡು ನಕ್ಷತ್ರಗಳನ್ನು ದಾಟಿ ಕೃತ್ತಿ
ನಕ್ಷತ್ರದೊಂದಿಗೆ ಉದಯಿಸುವನು. ಈ ಕಾರಣದಿಂದ ಪ್ರತಿಯೊಂದು ಹುಣ್ಣಿ
ಆ ಚಂದ್ರನ ಹತ್ತಿರಿರುವ ನಕ್ಷತ್ರದ ಹೆಸರು ಬಂತು. ಉದಾ:— ಅಶ್ವಿನಿ
ಆಶ್ವೀನ, ಕೃತ್ತಿಕಾ—ಕಾರ್ತೀಕ, ಮೃಗಶೀರ್ಷ—ಮಾರ್ಗಶೀರ್ಷ, ಪುಷ
ಪೌಷ, ಮಘಾ—ಮಾಘ, ಉತ್ತರಾ (ಫಲ್ಗುಣೀ)—ಫಾಲ್ಗುಣ, ಚಿತ್ರ
ಜ್ಯೈತ್ರ, ವಿಶಾಖಾ—ವೈಶಾಖ, ಜ್ಯೇಷ್ಠಾ—ಜ್ಯೇಷ್ಠ, ಉ. ಆಷಾಢಾ—ಆಷ
ಶ್ರವಣಾ - ಶ್ರಾವಣ, ಉ. ಭಾದ್ರಪದಾ—ಭಾದ್ರಪದ ಹೀಗೆ ಹುಣ್ಣಿಮೆ
ಹೆಸರು ಬಂದವು. ಆ ಹುಣ್ಣಿಮೆಗಳ ಹೆಸರುಗಳು ತಿಂಗಳುಗಳಿಗೆ ಬಂದಿರು

पुष्ययुक्ता पौर्णमासी पौषी मासेतु यत्र सा ।
नात्रा स पौषो माघाद्याश्चैवमेकादशापरे ॥ १ ॥

ಅಮರಕೋಶ:

" साऽस्मिन् पौर्णमासीति " ಕೌಮುದೀ ಸೂತ್ರ (4-I-2I)

ಹುಣ್ಣಿಮೆಯ ದಿವಸ ಸೂರ್ಯಾಸ್ತವು ಮತ್ತು ಚಂದ್ರೋದಯವು ಏ
ಲಕ್ಕೆ ಆಗುವವು. ಅಂದರೆ ಹುಣ್ಣಿಮೆಯ ದಿವಸ ಚಂದ್ರನನ್ನು ನೋಡಿ
ವೇಳೆಯನ್ನು ತಿಳಿದುಕೊಳ್ಳಬಹುದು. ಆದರೆ ಪ್ರತಿಪದೆಯ ದಿವಸ
ಸೂರ್ಯಾಸ್ತಕ್ಕೆ ಕಾಣುವದೇ ಇಲ್ಲ. ಅವನು ಮುಂಜಿನ ದಿನಕ್ಕಿಂತ ಳ
ಟುಗಳನಂತರ ಉದಯಿಸುವನು. ಆದ್ದರಿಂದ ಹುಣ್ಣಿಮೆಯ ದಿವಸ ಚಂದ್ರನ ಜ
ಲ್ಲಿರುವ ನಕ್ಷತ್ರದಿಂದ ನಾವು ವೇಳೆಯನ್ನು ಮುಂದೆ ಕೆಲವು ದಿವಸಗಳ
ತಿಳಿದುಕೊಳ್ಳಬೇಕು. ನಕ್ಷತ್ರಗಳು ಸೂರ್ಯ ಚಂದ್ರ ಗ್ರಹಗಳಂತೆ ತಮ್ಮ
ಗಳನ್ನು ಬದಲಿಸುವದಿಲ್ಲ. ಹುಣ್ಣಿಮೆಯಿಂದ ಏಳು (೭) ದಿವಸ ಮೆ
ಮತ್ತು ನಂತರ ಏಳು ದಿವಸ ಆ ಹುಣ್ಣಿಮೆಯ ಹೆಸರಿರುವ ನಕ್ಷತ್ರವನ್ನು
ವೇಳೆಯನ್ನು ತಿಳಿದುಕೊಳ್ಳಬೇಕು. ಮತ್ತು ಅಮಾವಾಸ್ಯೆಕ್ಕಿಂತ ಏಳು
ಮೊದಲು ಮತ್ತು ಏಳುದಿವಸಸಂತರ ಆ ತಿಂಗಳ ಹೆಸರಿನ ಮುಂದಿನ ನಕ್ಷತ್ರ
ನೋಡಿ ವೇಳೆಯನ್ನು ಗೊತ್ತುಪಡಿಸಬೇಕು. ಉದಾ:— ಮಾಘ ಶುದ್ಧ ಪ

ಸ ಮಾಘ ಬಹುಳ ಅಷ್ಟಮಿಯವರೆಗೆ ಮಘಾ ನಕ್ಷತ್ರವನ್ನೂ ಮಾಘಬಹುಳ
ಮಿಯಿಂದ ಫಾಲ್ಗುಣಶುದ್ಧ ಅಷ್ಟಮಿಯವರೆಗೆ ಪೂರ್ವಾ (ಫಲ್ಗುಣೀ, ಹುಬ್ಬೀ)
ತ್ರವನ್ನು ನೋಡಿ ತಿಳಕೊಳ್ಳಬೇಕು.

ಮೇಲೆ ಹೇಳಿದ ರೀತಿಯು ಅಷ್ಟೇನು ಸೂಕ್ಷ್ಮವಾದದ್ದಲ್ಲ. ನಕ್ಷತ್ರ
ನ್ನು ನಿರೀಕ್ಷಿಸಿ ಗಣಿತ ಮಾಡಿ ಬಂದ ವೇಳೆಯು ಹೆಚ್ಚು ಸರಿಯಾದದ್ದಿರುತ್ತದೆ.
ಗಣಿತ ಮಾಡಬೇಕಾದರೆ ವೇಳೆಯ ಬಗ್ಗೆ ಜ್ಯೋತಿಃಶಾಸ್ತ್ರದ ಕೆಲವು ಪಾರಿಭಾ
ಷಿಕ ಶಬ್ದಗಳ ಪರಿಚಯವು ಅವಶ್ಯವಾದದ್ದು. ಗಡಿಯಾರದ ಬಗ್ಗೆ ಕೆಲವು ತಪ್ಪು
ಕಲ್ಪನೆಗಳಿರುವವು. ಸೂರ್ಯೋದಯವಾದಾಗ ಗಡಿಯಾರದಲ್ಲಿ ಯಾವಾಗಲೂ
೬ ಹೊಡೆದಿರುವದೆಂಬುದು, ಮತ್ತು ಮಧ್ಯಾಹ್ನ (ಸೂರ್ಯನು ಯಾಮ್ಯೋ
ತ್ತರವೃತ್ತಕ್ಕೆ ಬಂದಾಗ್ಗೆ) ಸರಿಯಾಗಿ ಹನ್ನೆರಡು ಗಂಟೆಗೆ ಆಗುವದೆಂಬುದು.
ಹಾಗಾಗದಿರುವದಕ್ಕೆ ಸೂರ್ಯನ ಅನಿಯಮಿತ ಗತಿಯೇ ಒಂದು ಮುಖ್ಯ ಕಾರಣ
ವಾಗಿದೆ.

ಸೂರ್ಯನು ಒಮ್ಮೆ ಯಾಮ್ಯೋತ್ತರವೃತ್ತಕ್ಕೆ ಬಂದು ಮತ್ತೊಮ್ಮೆ ಬರ
ಲಿಕ್ಕೆ ತಗಲುವ ವೇಳೆಗೆ ಸೌರದಿವಸ (ಸ್ಫುಟಸಾವನ ದಿವಸ Solar day) ವೆನ್ನು
ವರು. ಈ ಅವಧಿಯು ಪ್ರತಿದಿವಸ ಕೆಲವು ಕಾರಣಗಳ ಮೂಲಕ ಅಷ್ಟೇ ಇರುವ
ದಿಲ್ಲವಾದ್ದರಿಂದ ವರ್ಷದಲ್ಲಿಯ ಎಲ್ಲ ಸೌರದಿವಸಗಳ ಸರಾಸರಿಗೆ (Average
Day) ಮಧ್ಯಮ ಸೌರದಿವಸ (ಮಧ್ಯಮ ಸಾವನದಿವಸ Mean Solar
Day) ವೆನ್ನುವರು. ನಮ್ಮ ಜನರು ಈ ಅವಧಿಯಲ್ಲಿ ೬೦ ಭಾಗಗಳನ್ನು ಮಾಡಿ
ಒಂದಕ್ಕೆ ಘಟಿಕಾ (ಸಾವನ ಘಟಿಕಾ) ಎನ್ನುವರು. ಪಾಶ್ಚಿಮಾತ್ಯರು ೨೪
ಗಳನ್ನಾಗಿ ಮಾಡಿ ಒಂದೊಂದಕ್ಕೆ ತಾಸು ಎನ್ನುವರು. ಹೀಗೆ ನಿಯಮಿತ ಗತಿಯಿಂದ
ಖಗೋಲವೃತ್ತದಮೇಲೆ ತಿರುಗುವ ಸೂರ್ಯನನ್ನು ಕಲ್ಪಿಸಿಕೊಂಡು ಅವನಿಗೆ
ಮಧ್ಯಮ ಸೂರ್ಯ (Mean Sun) ವೆನ್ನುವರು. ಹೀಗೆ ಮಧ್ಯಮ ಸೂರ್ಯನು
ನಿಯಮಿತಗತಿಯಿಂದ ತಿರುಗಿ, ಸೂರ್ಯನು ಎಷ್ಟು ಅವಧಿಯಲ್ಲಿ ಒಂದು ವರ್ಷದ
ಕೆಲಸವನ್ನು ಮುಗಿಸುವನೋ ಅಷ್ಟೇ ಅವಧಿಯಲ್ಲಿ ಮುಗಿಸುವನು. ಮಧ್ಯಮ
ಸೂರ್ಯನು ಯಾಮ್ಯೋತ್ತರ ವೃತ್ತಕ್ಕೆ ಬಂದಾಗ್ಗೆ ೧೨ ಹೊಡೆಯುವದು. ಮತ್ತು
ಆಗ ಗಡಿಯಾರಗಳು ತೋರಿಸುವ ವೇಳೆಯು ಇದೇ. ಪೃಥ್ವಿಯು ತನ್ನ ಮೈಸುತ್ತು
ತಿರುಗುವದಿಂದ ಪೂರ್ವಕ್ಕೆ ತಿರುಗುವದು. ಆಕಾಶ ಮತ್ತು ಆದರಲ್ಲಿ ಕಾಣುವ
ಸೂರ್ಯ ಚಂದ್ರ ನಕ್ಷತ್ರ ಗ್ರಹಾದಿಗಳು ನಮ್ಮ ಸುತ್ತಲೂ ಪೂರ್ವದಿಂದ ಪಶ್ಚಿ
ಮಕ್ಕೆ ತಿರುಗಿದಂತೆ ಕಾಣುತ್ತವೆ. ಈ ಪೃಥ್ವಿಯ ದೈನಂದಿನಗತಿಯು ನಿಯಮಿತ

ವಾದದ್ದಿರುತ್ತದೆ (Uniform). ಅಂದಮೇಲೆ ಒಮ್ಮೆ ಒಂದು ನಕ್ಷ
ಯಾಮ್ಯೋತ್ತರ ವೃತ್ತಕ್ಕೆ ಬಂದು ಮತ್ತೊಮ್ಮೆ ಬರಲಕ್ಕೆ ಹತ್ತುವ ಪೀಳಿ
ಯಾವಾಗಲೂ ಅಷ್ಟೇ ಇರಲಿಕ್ಕೇ ಬೇಕು. ಈ ಅವಧಿಗೆ ನಾಕ್ಷತ್ರದಿನವೆಂ
ವರು (Siderial day). ಇದು ಮಧ್ಯಮ ಸೌರದಿನಕ್ಕಿಂತ ಸಾಧಾರಣ ನಾ
ವಿನಿಟು ಕಡಿಮೆ ಇರುತ್ತದೆ. (೨೩ ತಾ. ೫೬ ನಿ. ೪.೧ ಸೇ.)

ಉತ್ತರಧ್ರುವದಿಂದ ಆಕಾಶದಲ್ಲಿ ೯೦° ಅಂಶದಮೇಲೆ ತೆಗೆದ ವೃತ್ತಕ್ಕೆ ನ
ವೃತ್ತವೆನ್ನುವರು (celestial equator). ಸೂರ್ಯನು ವಿಷುವದ್ವೃತ್ತದ್ಲಿ
ಕ್ರಾಂತಿವೃತ್ತದಲ್ಲಿರುವನು. ಈ ಎರಡೂ ವೃತ್ತಗಳು ಒಂದನ್ನೊಂದು ಎ
ಬಿಂದುಗಳಲ್ಲಿ ೨೩½° ಕೋನವಾಗುವಂತೆ ಛೇದಿಸುವವು. ಈ ಬಿಂದು
ಸಂಪಾತಬಿಂದುಗಳೆನ್ನುವರು (Equinoxes). ಸೂರ್ಯನು ವಸಂತ ಋತು
(ಮಾರ್ಚ ೨೨ನೇ ತಾರೀಖಿಗೆ) ಬರುವ ಬಿಂದುವಿಗೆ ವಸಂತಸಂಪಾತವೆನ್ನುವ
(Vernal equinox) ಅಥವಾ ಸಾಯನ ಮೇಷಾರಂಭವೆನ್ನುವ
(First point of aries). ಈ ಸಂಪಾತಬಿಂದುವಿನಿಂದ ವಿಷುವವೃ
ಗುಂಟ ಪೂರ್ವಕ್ಕೆ ಭಾಗಗಳನ್ನು ಮಾಡುತ್ತ ಹೋಗುವರು ಇವು
ಇದ್ದು ಅವಕ್ಕೆ ಅಂಶವೆನ್ನುವರು. ಜ್ಯೋತಿಃಶಾಸ್ತ್ರಜ್ಞರು ಒಮ್ಮೊಮ್ಮೆ ಈ
ಬದಲಾಗಿ ತಾಸುಗಳನ್ನು ಸಯೋಗಿಸುವರು (೩೬೦° = ೨೪ ತಾಸು). ಒ
ನಕ್ಷತ್ರವು ಈ ಸಂಪಾತಬಿಂದುವಿನಿಂದ ೧೦° ಗಳ ಮೇಲೆ ಇದ್ದರೆ ಆ ನಕ್ಷ
ವಿಷುವಾಂಶವು ೧೦° ಎನ್ನುವರು. ಇದನ್ನು ತಾಸಿನಲ್ಲಿ ಅಳೆದರೆ ಅದಕ್ಕೆ ಹೌ
ತ್ಮಕ (horory, ಹೋರಾ=ತಾಸು) ವಿಷುವಾಂಶವೆನ್ನುವರು. ಎಲ್ಲ ನಕ್ಷತ್ರ
ವಿಷುವವೃತ್ತದ ಮೇಲೆಯೇ ಇಲ್ಲ. ಇವುಗಳ ವಿಷುವಾಂಶವನ್ನು ಹೇಗೆ ತೆ
ಕೊಳ್ಳಬೇಕು? ಉತ್ತರ ಧ್ರುವದಿಂದ ನಕ್ಷತ್ರದ ಮೇಲೆ ಹಾಯುವಂತೆ ಒ
ಅರ್ಧ ವರ್ತುಲವನ್ನು ತೆಗೆಯಬೇಕು. ಈ ಅರ್ಧ ವರ್ತುಲವು ವಿಷುವ ವೃತ್ತವ
ಛೇದಿಸುವದು. ಈ ಛೇದನ ಬಿಂದು ಮತ್ತು ವಸಂತ ಸಂಪಾತ ಇವೆರಡರ ನ
ರವೇ ಆ ನಕ್ಷತ್ರದ ವಿಷುವಾಂಶವು. ವಿಷುವಾಂಶಗಳು ಪ್ರತಿವರ್ಷ ಕೆಲವು ಕ
ಗಳ ಮಾಲಕ ಬದಲಾಗುವವು. ಆದರೆ ಆ ಬದಲಾವಣೆಯು ಅಷ್ಟೇನು ಲ
ತಕ್ಕದ್ದಿಲ್ಲ.

ನಕ್ಷತ್ರಗಳ ವಿಷುವಾಂಶ ನಮಗೆ ಗೊತ್ತಿರಬೇಕು. ಕೆಲವು ಮುಖ್ಯ ನಕ್ಷ
ಗಳ ವಿಷುವಾಂಶವನ್ನು ಕೆಳಗೆ ಕೊಟ್ಟಿದೆ. ಈ ಅಂಕಿಗಳನ್ನು ಗ್ರಹಿಣಿಯ ಇನ್ಸ್
ನಾವಿಕರ ಪಂಚಾಂಗದಿಂದ (Nautical Almanac.) ತಕ್ಕೊಂಡಿದೆ.

ಸೂರ್ಯನ ವಿಷುವಾಂಶವು ಮಾರ್ಚ್ ೨೦ನೇ ತಾರೀಖಿಗೆ ೦° ಇರುವದು. ಪರಿ ಅವನು ವಸಂತ ಸಂಪಾತದಲ್ಲಿರುವನು. ಮಧ್ಯಮ ಸೂರ್ಯನಾದರೂ ಆ ೀಖಿಗೆ ಅಲ್ಲಿಯೇ ಇರುವನು. ಮಧ್ಯಮ ಸೂರ್ಯನ ವಿಷುವಾಂಶವು ಪ್ರತಿ ಕ್ಕೆ ಸುಮಾರು ೪ ನಿ (೩ನಿ ೫೬ ಸೇ) ನಿಮಿಟು ಹೆಚ್ಚುತ್ತ ಹೋಗುವದು ನ ವಿಷುವಾಂಶವನ್ನು ಲೆಕ್ಕಮಾಡಿ ತೆಗೆಯಲಿಕ್ಕೆ ಬರುವದು. ಕೆಳಗೆ ಒಂದು ೀಷ್ಟಕ ಕೊಟ್ಟಿದೆ. ಮತ್ತು ವಿಷುವಾಂಶ ತಿಳಕೊಳ್ಳುವ ಕ್ರಮವನ್ನು ಸ್ವಲ್ಪದ ಹೇಳಿದೆ. ಅಂದರೆ ಬೇಕಾದ ದಿವಸದ ಮಧ್ಯಮ ಸೂರ್ಯನ ವಿಷುವಾಂಶ ನ್ನ ತೆಗೆಯಲಿಕ್ಕೆ ಬರುತ್ತದೆ. ನಮ್ಮ ಹತ್ತರ ಇದ್ದ, (೧) ವಿಷುವಾಂಶಗಳ ಪಟ್ಟಿ ತ್ತು (೨) ಮಧ್ಯಮ ಸೂರ್ಯನ ವಿಷವಾಂಶದ ಪಟ್ಟಿ, ಇವೆರಡರ ಸಹಾಯ ದ ವೇಳೆಯನ್ನು ಗೊತ್ತು ಪಡಿಸಲಿಕ್ಕೆ ಬರುತ್ತದೆ.

ಒಂದು ನಕ್ಷತ್ರವು ಯಾಮ್ಯೋತ್ತರ ವೃತ್ತಕ್ಕೆ ಬಂದಿದೆಂದು ಕಲ್ಪಿಸಿರಿ. ಧ್ಯಮ ಸೂರ್ಯನು ಈ ವೃತ್ತಕ್ಕೆ ಬಂದು ದಾಟಿ ಎಷ್ಟು ವೇಳೆಯಾಗಿರುವದೋ ಷ್ಟು ವೇಳೆಯನ್ನು ಗಡಿಯಾರವು ತೋರಿಸುವದು. ಆ ನಕ್ಷತ್ರದ ಮತ್ತು ಆ ಸದ ಮಧ್ಯಮ ಸೂರ್ಯನ ವಿಷುವಾಂಶಗಳ ಅಂತರವೇ ಮಧ್ಯಾಹ್ನದಿಂದ ದ ವೇಳೆಯು ಮತ್ತು ಇದು ಸ್ಥಾನಿಕ ವೇಳೆಯು (Local time) ಇದರಲ್ಲಿ ರಿನ ರೇಖಾಂಶ ಮತ್ತು ಲಂಡನ್ ಅಂಶ ಇವುಗಳ ಅಂತರಕ್ಕೆ ೧೫ ರಿಂದ ಭಾಗಿಸಿ ದ ವೇಳೆಯನ್ನು (ತಾಸು) ಕೂಡಿಸಬೇಕು. ಅಥವಾ ಕಳೆಯಬೇಕು. ಆ ಊರಿನ ಖಾಂಶವು ಲಂಡನ್ ಅಂಶಕ್ಕಿಂತ ಹೆಚ್ಚು ಇದ್ದರೆ ಕೂಡಿಸಬೇಕು. ಕಡಿಮೆ ಇದ್ದರೆ ಯಬೇಕು. ಇದೇ ಸ್ಟ್ಯಾಂಡರ್ಡ ವೇಳೆಯು. (standard time) ಹೀಗೆ ಕಾದ ವೇಳೆಯಲ್ಲಿ ಯಾಮ್ಯೋತ್ತರ ವೃತ್ತಕ್ಕೆ ಇರುವ ನಕ್ಷತ್ರದ ವಿಷುವಾಂಶ ತ್ತು ಆ ದಿವಸದ ಮಧ್ಯಮ ಸೂರ್ಯನ ವಿಷುವಾಂಶ ಇವೆರಡರ ಅಂತರ ತೆಗೆದ ಯಿತು.

ಈ ಯಾಮ್ಯೋತ್ತರ ವೃತ್ತವನ್ನು ನಾವು ಹೇಗೆ ಕಟ್ಟಬೇಕು ದಿಕ್ಸಾಧನ ನ್ನ ಹೇಗೆ ಮಾಡಬೇಕು. ಮತ್ತು ಈ ಕೆಲಸಕ್ಕೆ ನಮಗೆ ಯಾವ ಯಾವ ನಕ್ಷತ್ರ ಪರಿಚಯವಿರಬೇಕೆಂಬದನ್ನು ಮುಂದಿನ ಲೇಖದಲ್ಲಿ ಕೊಡಲಾಗುವದು.

ಮಧ್ಯಮ ರವಿಯ ಹೋಗಾತ್ಮಕ ವಿಷುವಾಂಶ ೧೯೩೮

ತಿಂಗಳು	ತಾ॥	ವಿಷುವಾಂಶ	ತಿಂಗಳು	ತಾ॥	ವಿಷುವಾಂಶ
		ತಾ. ಮಿ. ಸೇ.			ತಾ. ಮಿ. ಸೆ
ಜಾನೇವಾರಿ	೧	೧೪-೪೫-೪೫	ಜುಲೈ	೧೬	೭-೪೯-೪
,,	೧೭	೧೯-೪೮-೫೭	ಆಗಷ್ಟ	೫	೮-೫೮-೫
ಫೆಬ್ರುವರಿ	೬	೨೧- ೭-೫೭	,,	೨೫	೧೦-೧೭-೪
,,	೨೬	೨೨-೨೬-೫೭	ಸಪ್ಟಂಬರ	೧೪	೧೧-೪೬-೫
ಮಾರ್ಚ	೧೪	೨೩-೪೫-೫೭	,,	೨೧	೧೨- ೪-೩
,,	೨೨	೦- ೧-೪೫	ಅಕ್ಟೋಬರ	೪	೧೨-೫೫-೫
ಎಪ್ರಿಲ	೭	೧- ೪-೫೭	,,	೨೪	೧೪-೧೪-೫
,,	೨೭	೨-೨೩-೫೭	ನವ್ಹೆಂಬರ	೧೩	೧೫-೩೩-೫
ಮೇ	೧೭	೩-೪೨-೫೭	ಡಿಸೆಂಬರ	೩	೧೬-೫೨-೫
ಜೂನ	೬	೫- ೧-೫೭	,,	೨೩	೧೮-೧೧-೪
,,	೨೧	೬- ೧-೧೨	,,	೩೧	೧೮-೪೩-೩
,,	೨೬	೬-೨೦-೫೭	ಜಾನೇವಾರಿ ೧೯೩೯	೧	೧೮-೪೭-೩

ಮೇಲಿನ ಕೋಷ್ಟಕದಿಂದ ಯಾವದಾದರೊಂದು ತಾರೀಖಿನ ಮಧ್ಯಮ ರವಿ ವಿಷವಾಂಶವನ್ನು ತೆಗೆಯುವ ರೀತಿ. ಇಲ್ಲಿ ತಾರೀಖಿನ ವಿಷುವಾಂಶವನ್ನು ಮಾ ಕೊಟ್ಟಿದೆ.

ಆ ತಾರೀಖಿಗಿಂತ ಮೊದಲಿನ ತಾರೀಖಿನ ವಿಷುವಾಂಶವನ್ನು ನೋಡಬೇ ಮತ್ತು ಆ ತಾರೀಖಿನನಂತರ ನಮ್ಮ ತಾರೀಖು ಎಷ್ಟು ದಿವಸಗಳನಂತರ ಆ ವದು ಎಂಬದನ್ನು ತೆಗೆದು, ಮೊದಲಿನ ತಾರೀಖಿನ ವಿಷುವಾಂಶದಲ್ಲಿ ಆ ದಿವಸ ಮೂರರಷ್ಟು ಸೇಕಂದುಗಳನ್ನು ಕಡಿಮೆ ಮಾಡಬೇಕು ಮತ್ತು ಆ ದಿವಸ ನಾಲ್ಕುರಷ್ಟು ಮಿನಿಟುಗಳನ್ನು ಹೆಚ್ಚು ಮಾಡಬೇಕು. ಹೀಗೆ ಮಾಡಿದರೆ ಸಾ ಬೇಕಾದ ತಾರೀಖಿನ ರವಿಯ ವಿಷುವಾಂಶವು ಗೊತ್ತಾಗುವದು. ಪ್ರತಿದಿ

ತಾ. ಮಿ. ಸೇ.

ಮಧ್ಯಮರವಿಯ ಗತಿಯು ೦- ೩- ೫೭ ಇರುವದು. ಅವನ ವಿಷುವಾಂ

ತಾ. ಮಿ. ಸೇ.

ಪ್ರತಿದಿನಕ್ಕೆ ೦- ೩- ೫೭ ಇಷ್ಟು ಹೆಚ್ಚುತ್ತ ಹೋಗುವದು.

ಉದಾ:— ಎಪ್ರಿಲ ೨೦ನೇ ತಾರೀಖಿನ ದಿವಸದ ವಿಷುವಾಂಶ ಎಷ್ಟು

ಇದಕ್ಕಿಂತ ಮೊದಲಿನ ತಾರೀಖು ೭ ಎಂಬದು ಕೋಷ್ಟಕದಿಂದ ಕಂಡು ಬರುವದು.

ತಾ. ಮಿ. ಸೇ.

೭ನೇ ತಾರೀಖಿನ ವಿಷುವಾಂಶವು ೧- ೪- ೫೭ ಇಲ್ಲಿ ೧೩ ದಿವಸಗಳ ಅಂತರ ಬರುವದು.

೧೩×೩=೩೯ ಸೇ. ಕಡಿಮೆ ಮಾಡಬೇಕು.

೧೩×೪=೫೨ ಮಿ. ಹೆಚ್ಚು ಮಾಡಬೇಕು.

	ವಿಷುವಾಂಶ	
೭ನೇ ತಾರೀಖಿನ	೧ -೪-೫೭	ಕೆಳಗಿನ ಚಿನ್ಹೆಗಳನ್ನು ನೋಡಿರಿ.
	೫೨-೩೯	
	(+) (-)	
೨೦ನೇ ತಾರೀಖಿನ ವಿಷುವಾಂಶ	೧-೫೬-೧೪	

ಹೀಗೆ ಬೇಕಾದ ತಾರೀಖಿನ ವಿಷುವಾಂಶವನ್ನು ತೆಗೆಯಲಿಕ್ಕೆ ಬರುತ್ತದೆ.

೧೯೩೮ ಜಾನೇವಾರಿ ತಿಂಗಳಿನಲ್ಲಿ ರಾತ್ರಿಯಲ್ಲಿ ೧೨ ಗಂಟೆಯ ವರೆಗೆ ಯಾಮ್ಯೋತ್ತರಕ್ಕೆ ಬರುವ ಕೆಲವು ನಕ್ಷತ್ರಗಳ ವಿಷುವಾಂಶವು

	ನಕ್ಷತ್ರದ ಹೆಸರು ಇಂಗ್ಲಿಷ	ಸಂಸ್ಕೃತ ಹೆಸರು	ವಿಷುವಾಂಶ ತಾ ಮಿ. ಸೇ.
β	Arieties	ಅಶ್ವಿನೀ	೧-೫೧-೧೨
α	,,	,,	೨- ೩-೪೧
ξ¹	Ceti	ತಿಮಿಂಗಿಲ	೨- ೯-೪೨
ξ²	,,	,,	೨-೨೪-೫೦
35	Aricetices	ಭರಣೀ	೨-೩೯-೪೩
41	,,	,,	೨-೪೬-೧೪
γ	Persicei	ಯಯಾತಿ	೩- ೦-೧೬
β	,, (Algol)	,,	೩- ೪- ೦೬
α	,,	,,	೩-೧೯-೫೩
S	,,	,,	೩-೩೪-೩೦
η	Tauri	ಕೃತ್ತಿಕಾ	೩-೪೩-೪೭
ξ	Perscei	ಯಯಾತಿ	೩-೫೦-೧೩
λ	Tauri	—	೩-೫೭-೧೪
γ	,,	ರೋಹಿಣೀ	೪-೧೬-೧೫
t_ϵ	,,	,,	೪-೨೫

α	,, (Aldebarn)	,,	೪–೩೨–೧೧
i	Auriga	—	೪–೫೨–೫೬
n	,,	—	೫– ೨– ೯
α	,, (capella)	ಬ್ರಹ್ಮಹೃದಯ	೫–೧೨– ೬
β	,,	ಅಗ್ನಿ	೫–೨೮–೨೯
ζ	,,	—	೫–೩೩–೫೬
β	Auriga	ಗಾಲವ	೫–೫೫– ೪
υ	Orion	—	೬– ೪– ೦
η	Germini	ಮನು	೬–೧೦–೫೪
μ	,,	ಪರಾಶರ	೬–೧೯–೧೩
γ	,,	—	೬–೩೪– ೭
ξ	,,	—	೬– ೧–೪೮
ζ	,,	—	೭– ೦–೫೬
51	,,	—	೭– ೯–೬೮
δ	,,	ಶುಕ	೭–೧೪–೨೪
β	canis minoris	ಪುನರ್ವಸು	೭–೨೩–೪೭
α	Gemini (castor)	,,	೭–೩೦–೩೪
α	canis monoris (Procyon)	,,	೭–೩೬– ೨
β	Gemini (Pollux)	,,	೭–೪೧–೫೧
ψ	canecri	—	೮– ೨– ೦
β	,,		೮–೧೩– ೯
o	ursa Majoris		೮–೨೫– ೭
γ	canecri		೮–೩೯–೪೧
i	ursa Majoris		೮–೫೪–೫೮
ξ	canecri		೯– ೫–೪೭
θ	ursa Majoris		೯–೨೮–೪೨
υ	,,		೯–೪೬–೫೫
π	Leonis	ಮಘಾ	೯–೯೬–೯೬
α	Regulars	,,	೧೦– ೫– ೬

ಈ ಕೋಷ್ಟಕದಲ್ಲಿ ಮತ್ತು ಮುಖ್ಯಮರವಿಯ ವಿಷುವಾಂಶ ಕೋಷ್ಟಕದಲ್ಲಿ ಸೇರ
ಗಳನ್ನು ಕೊಟ್ಟಿವೆ. ಲೆಕ್ಕ ಮಾಡುವಾಗ ಪೂರ್ಣಮಿನಿಟು (nearest minute) ಹಿ
ಸೂಡಬೇಕು.

ಹಿಂದೀ ಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳೂ ಸಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ

-ಶ್ರೀ. ಕೆ. ಬಿ. ತೇರಗಾವಕರ ಬಿ. ಎಸ್. ಸಿ. ಬಿ. ಟಿ. ಆಸಿ। ಮಾ. ಟ್ರೇ. ಕಾ. ಧಾರವಾಡ

(ಕಳೆದ ತಿಂಗಳಿನಿಂದ ಮುಂದುವರಿದುದು)

ಕ್ಷಾರಗಳು— ದೇಹದೊಳಗಿನ ಅನೇಕ ಇಂದ್ರಿಯಗಳ ಬೆಳವಣಿಗೆಗೂ ಅವು ಮ್ಮ ನಿರ್ದಿಷ್ಟ ಕಾರ್ಯ ಮಾಡುವದಕ್ಕೂ ಕ್ಷಾರಗಳ ಆವಶ್ಯಕತೆ ಇರುತ್ತದೆ. ಗೆಯ ಸಣ್ಣ ಮಕ್ಕಳಿಗಂತೂ ಇವುಗಳ ಆವಶ್ಯಕತೆಯು ಪ್ರೌಢ ವಯಸ್ಕರಿಗಿಂತ ಚ್ಚಿಗಿರುತ್ತದೆ. ಎಲುವುಗಳೂ, ನಮ್ಮ ಹಲ್ಲುಗಳೂ ಬಹಳ ಪ್ರಮಾಣದಿಂದ ್ಷಾರಯುಕ್ತವಾದವುಗಳು. ಇನ್ನು ಕ್ಷಾರಗಳು ದೇಹದ ಇನ್ನಿತರ ಭಾಗಗಳ ಲೂ ಕಂಡುಬರುತ್ತವೆ. ಮುಖ್ಯವಾಗಿ ರಕ್ತದಲ್ಲಿ ಕ್ಷಾರಗಳ ಪ್ರಮಾಣವು ರ್ಷ್ಟವಾಗಿರಲಿಕ್ಕೆ ಬೇಕು. ಅವು ಸ್ವಲ್ಪಾದರೂ ಕಡಿಮೆಯಾದರೆ ರಕ್ತವು ಮ್ಲೆ ಅಮ್ಲಮಯವಾಗಿ ರೋಗಗಳು ಸಂಭವಿಸುವವು. ನಮ್ಮ ದೇಹ ಯ ಇನ್ನಿತರ ಇಂದ್ರಿಯಗಳಾದರೂ ತಮ್ಮ ತಮ್ಮ ಕಾರ್ಯವನ್ನು ಸಾಗಿಸ ಕಾದರೆ ಕ್ಷಾರಗಳ ಆವಶ್ಯಕತೆಯು ಇದ್ದೇ ಇರುತ್ತದೆ. ನಮ್ಮ ದೇಹದಲ್ಲಿ ಿ ಇಡೀ ದೇಹದ ತ್ರಿಕ್ಷ ಪಾಲಿನಷ್ಟು ಇರುತ್ತವೆ. ಇವುಗಳ ಮಹತ್ವವನ್ನು ು 'ಟಶ್ಯೂರೆ ಮಡಿ' ಎಂಬ ಒಂದು ಪದ್ಧತಿಗನುಸರಿಸಿ ರೋಗಗಳಿಗೆ ಚಿಕಿತ್ಸೆ ಡಲು ಮತ್ತು ಯೋಗ್ಯ ಉಪಚಾರಕ್ಕೆಂದು 'ಫೆರಮ್‌ಫಾಸ್' ಕಾಲಿಮೂರ್, ್ರಮ್‌ಮೂರ, ಮುಂತಾದ ಕ್ಷಾರಗಳನ್ನು ಕೊಟ್ಟು ರೋಗಿಗಳನ್ನು ನೆಟ್ಟಗೆ ಡುವ ರೂಢಿಯು ಕೆಲವರಲ್ಲಿ ಉಂಟು. ನಾವು ತಿನ್ನುವ ಉಪ್ಪು ಮತ್ತು ಿಗಳ ವರ್ಗಕ್ಕೆ ಸೇರಿದ ಕ್ಷಾರಗಳು, ಲೋಹದ ವರ್ಗಕ್ಕೆ ಸೇರಿದವುಗಳು, ಫೈರಸ್ ಗಂಧಕ ಮತ್ತು ಕ್ಲೋರಿನ್ ವರ್ಗಕ್ಕೆ ಸೇರಿದ ಕ್ಷಾರಗಳೆಲ್ಲವು ಖ್ಯವಾದವುಗಳು. ಇವೆಲ್ಲವುಗಳು ಯೋಗ್ಯ ಪ್ರಮಾಣದಲ್ಲಿರದಿದ್ದರೆ ನಮ್ಮ ದಲ್ಲಿಯ ಅನೇಕ ರಸಗಳೂ ಮತ್ತು ಇನ್ನಿತರ ಪ್ರವಾಹಿಗಳೂ ಅಮ್ಲಮಯ ಗಲಿ, ಸಬಲಕ್ಷಾರಮಯಗಳಾಗಲಿ ಆಗಿ ಅಪಾಯವನ್ನುಂಟು ಮಾಡುವವು. ಿ ಯಾವುದೇ ಒಂದು ತರದ ಆಹಾರವನ್ನಷ್ಟೇ ಸೇವಿಸಿದರೆ ನಮ್ಮ ದೇಹ

ದಲ್ಲಿಯ ರಸಗಳಲ್ಲಿ ಆಮ್ಲದ ಪ್ರಮಾಣವಾಗಲಿ, ಸಬಲಕ್ಷಾರದ ಪ್ರಮಾಣವಾ
ಹೆಚ್ಚಾಗುತ್ತದೆ. ಉದಾಹರಣೆಗಾಗಿ ಬರೀ ಅಕ್ಕಿ, ಜೋಳ, ಗೋದಿ ಮುಂತಾ
ತೃಣಧಾನ್ಯಗಳನ್ನಷ್ಟೇ ಸೇವಿಸಿದರೆ ಆಮ್ಲದ ಪ್ರಮಾಣವು ಹೆಚ್ಚುತ್ತದೆ. ಆ
ರಿಂದಲೇ ಆದರ ತೀಕ್ಷ್ಣಗುಣತೆಯನ್ನು ಕಡಿಮೆ ಮಾಡಲಿಕ್ಕೆ ಹಸಿ ಪಲ್ಯಗಳನ್ನು, ಗ
ಗೆಣಸುಗಳನ್ನು ಅವುಗಳ ಕೂಡ ಸೇವಿಸಬೇಕಾಗುತ್ತದೆ. ಆದರೆ ಹಾಲಿನಲ್ಲಿ ಪ್ರ
ಇವೆಲ್ಲ ಕ್ಷಾರಗಳು ಯೋಗ್ಯ ಪ್ರಮಾಣದಲ್ಲಿರುತ್ತವೆಂದು ಕಂಡುಬಂದಿರುವ
ಆದ್ದರಿಂದ ಹಾಲನ್ನೂ, ಹಾಲಿನಿಂದ ತಯಾರಿಸಿದ ಮೊಸರು, ಬೆಣ್ಣೆ, ಗಿ
ಮಜ್ಜಿಗೆ ಮುಂತಾದವುಗಳನ್ನೂ ನಾವು ಸೇವಿಸಲೇಬೇಕು.

ಇನ್ನು ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳನ್ನು ವಿವೇಚಿಸೋಣ
ಇವು ಎಲುವುಗಳನ್ನೂ, ಹಲ್ಲುಗಳನ್ನೂ ಬಲಪಡಿಸುತ್ತವೆ. ಇವುಗಳ ಪ್ರಮಾ
ಕಡಿಮೆಯಾದರೆ ಚಿಕ್ಕಮಕ್ಕಳಾಗಲಿ, ಪ್ರೌಢರಾಗಲಿ ಬಲಹೀನರೂ, ನಿಸ್ತೇಜ
ಆಗುವರು. ಚಿಕ್ಕಮಕ್ಕಳಿಗೆ ಪ್ರೌಢರಿಗಿಂತ ಸುಮಾರು ಮೂರು ಪಟ್ಟು
ಕ್ಷಾರಗಳು ಹೆಚ್ಚು ಬೇಕಾಗುತ್ತವೆ. ಇನ್ನು ಈ ಕ್ಷಾರಗಳು ಹಾಲಿನಲ್ಲಿದ
ವೆಂದು ಮೇಲೆ ಹೇಳಿದೆ. ಇದಲ್ಲದೆ ಇಂಗು, ಲವಂಗ, ಅಜಿವಾನ, ಮೆಂ
ಮುಂತಾದ ಮಸಾಲೆ ಸಾಮಾನುಗಳಲ್ಲಿ ಹೆಚ್ಚಿನ ಪ್ರಮಾಣದಿಂದ ಇರುತ
(ಅಜಿವಾನ ೧·೪೨೨ ಲವಂಗ ·೭೫೯ ಇಂಗು ·೬೯೨) ಎಳ್ಳೆಣ್ಣೆಯಲ್ಲಿಯೂ ಹೆ
ವಾಗಿದ್ದುದು ಕಂಡು ಬರುತ್ತದೆ. ೧·೪೫೩. ಎಲ್ಲ ತರದ ಬೇಳೆ ಕಾಳುಗಳಲ್ಲಿಯ
ಹಸಿ ಪಲ್ಲೆಗಳಲ್ಲಿಯೂ ಇವು ತಕ್ಕಷ್ಟು ಇರುತ್ತವೆ. ನಾವು ಪ್ರತಿ ದಿನ ಸುಮ
೧ ಗ್ರ್ಯಾಮಿನಷ್ಟಾದರೂ ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳನ್ನು ಈ ರ
ಗಳಿದ್ದ ಆಹಾರದ ಮುಖಾಂತರ ಸೇವಿಸಬೇಕು.

ಎರಡನೆಯ ಮಹತ್ವದ ಕ್ಷಾರವೆಂದರೆ ನಾವು ದಿನಾಲು ತಿನ್ನುವ ಉ
ಶಾಕಾಹಾರಿಗಳು ಉಪ್ಪನ್ನು ತುಸು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಬೇ
ಯಾಕಂದರೆ ಅವರು ಸೇವಿಸುವ ಆಹಾರದಲ್ಲಿ ಉಪ್ಪಿನ ಅಂಶವು ತೀರ ಕಡಿ
ಅದೇ ಮಾಂಸಾಹಾರಿಗಳಿಗೆ ಇದರ ಆವಶ್ಯಕತೆಯು ಅಷ್ಟೊಂದಿಲ್ಲ. ಯಾಕ
ಮಾಂಸದಲ್ಲಿ ಉಪ್ಪು ತುಸು ಹೆಚ್ಚು ಪ್ರಮಾಣದಲ್ಲಿರುತ್ತದೆಂದು ಕಂಡು ಬಂ
ಉಪ್ಪು ರಕ್ತದ ಪ್ರಮಾಣವನ್ನು ಸರಿಯಾಗಿ ಇಡುತ್ತಿದ್ದರೂ ಅದನ್ನು ಹೆ
ಸೇವಿಸುವದರಿಂದ ಮೂತ್ರ ಪಿಂಡಗಳೂ, ರಕ್ತವಾಹಿನಿಗಳೂ ಅಪಾಯ ಹೊ
ತ್ತವೆ. ಉಪ್ಪನ್ನು ಹೆಚ್ಚು ಸೇವಿಸುವದರಿಂದ ರಕ್ತದ ಒತ್ತಾಟವು ಹೆಚ್ಚುವದೆ
ಡಾಕ್ಟರರ ಮತ.

ಫಾಸ್ಫರಸವು ಎಲುವು ಮತ್ತು ಹಲ್ಲಿನ ಮಹತ್ವವಾದದ್ದೊಂದು ಘಟಕ ವದರಿಂದ ಈ ದ್ರವ್ಯವಿದ್ದಂಥ ಆಹಾರವನ್ನು ಸೇವಿಸಬೇಕು. ಇದಲ್ಲದೆ ಈ ವು ಪ್ರತಿಯೊಂದು ಜೀವಾಣುವಿನಲ್ಲಿರುತ್ತದೆ. ಅವುಗಳ ಬೆಳವಣಿಗೆಗೆ ಅವಶ್ಯ ರುತ್ತದೆ. ನಾವು ದಿನಾಲು ಫಾಸ್ಫರಸ್ ದ್ರವ್ಯವನ್ನು ಸುಮಾರು ೧·೫ ಗ್ರಾಮಿಷ್ಟು ಆ ದ್ರವ್ಯ ಉಳ್ಳ ಆಹಾರಗಳ ಮುಖಾಂತರ ಸೇವಿಸಬೇಕು. ಫ್ಫರಸವು ಗೋದಿ, ಜೋಳ, ರಾಗಿ ಮುಂತಾದ ತೃಣಧಾನ್ಯಗಳಲ್ಲಿ ಸುಮಾರು ·೪ ಪ್ರಮಾಣದಲ್ಲಿಯೂ ಬೇಳೆ ಕಾಳುಗಳಲ್ಲಿ ·೪–·೫ ಪ್ರಮಾಣದಲ್ಲಿಯೂ ತ್ತದೆ. ಸೋಯಾಬೀನದಂಥ ಅವರೆಯಲ್ಲಿ ಅದರ ಪ್ರಮಾಣವು ಇನ್ನೂ ರುತ್ತದೆ. ೦·೬೯. ಕಾಯಿಪಲ್ಯಗಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದರೆ ಎ ಕಾಳುಗಳಲ್ಲಿ ·೭೦೪ ಎಳ್ಳೆಣ್ಣೆಯಲ್ಲಿ ೦·೫೭೪. ಮತ್ತು ಕೆಲವು ಮಸಾಲೆಯು ಾನುಗಳಲ್ಲಿ ತುಸುಮಟ್ಟಿಗೆಯೂ ಇರುವದು, ಮಾಂಸಾಹಾರದಲ್ಲಿ ಈ ವು ·೨–·೪. ಮೀನದಲ್ಲಿ ಇದರ ಪ್ರಮಾಣವು ·೪೩೩ ಪ್ರಮಾಣದಲ್ಲಿರು . ಹಾಲು ಮತ್ತು ಅದರಿಂದ ಉಂಟಾದ ಪದಾರ್ಥಗಳಲ್ಲಿ ಇದು ತುಸು ಾಣದಿಂದ ಇದ್ದೇ ಇರುತ್ತದೆ. ಫಾಸ್ಫರಸ್ ಮತ್ತು ಸುಣ್ಣ ಇವುಗಳ ಕ್ಕೆ ಸೇರಿದ ಕ್ಷಾರಗಳೆರಡೂ ಎಲುವು ಮತ್ತು ಹಲ್ಲುಗಳನ್ನು ಬಲಪಡಿಸು ಬೇಕಾಗುವದರಿಂದ ಅವೆರಡೂ ನಮ್ಮ ದೇಹದಲ್ಲಿಯ ಇಂದ್ರಿಯಗಳಿಗೆ ಗೆ ಸಿಗುವಂತೆ ನಮ್ಮ ಆಹಾರದಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕೆಂಬದು ನೆನಪಿನಲ್ಲಿಡತಕ್ಕ ಸಂಗತಿಯು.

ಅತಿ ಮಹತ್ವದ ಇನ್ನೊಂದು ಕ್ಷಾರವೆಂದರೆ ಲೋಹ. ಯಾಕೆಂದರೆ ಇದು ಾಂಶವಾಗಿ ರಕ್ತದಲ್ಲಿಯ ಹಿಮೋಗ್ಲೋಬಿನ್ ಎಂಬ ದ್ರವ್ಯದಲ್ಲಿರುತ್ತದೆ. ನಿಜವೇ ಪ್ರಾಣವಾಯುವು ಪುಪ್ಪುಸದಿಂದ ದೇಹದ ಎಲ್ಲ ಭಾಗಗಳಿಗೆ ಒಯ್ಯು ಸುತ್ತದೆ ಬೆಳೆಗೆಯ ಚಿಕ್ಕಮಕ್ಕಳಿಗೂ ಸ್ತ್ರೀಯರಿಗೂ ಇದರ ಮಹತ್ವವು ದ್ದು. ನಮ್ಮ ಸಮತೋಲಾದ ಆಹಾರದಲ್ಲಿ ನಮಗೆ ಸುಮಾರು ·೦೫–·೦೪ ಾಮಿನಷ್ಟು ಲೋಹವನ್ನು ಲೋಹವುಳ್ಳ ಆಹಾರದ ಮುಖಾಂತರ ಸೇವಿಸ ಕು. ಲೋಹದ ಪ್ರಮಾಣವು ಕಡಿಮೆಯಾದರೆ ರಕ್ತದ ಪ್ರಮಾಣವು ಕಡಿಮೆ ಾಗುತ್ತದೆ. ಅದರಲ್ಲಿ ಸಾಕಷ್ಟು ಪ್ರಾಣವಾಯುವಿನ ಪೂರೈಕೆಯು ಆಗುವದಿಲ್ಲ. ರಿಂದ ರಕ್ತಕ್ಷಯವೆಂಬ ರೋಗವು ಸಂಭವಿಸುವದು. ಆಗ ಶಕ್ತಿಯು ಕುಂದಿ ನುಷ್ಯನು ಬಲಹೀನನಾಗುವನು. ಈ ರೋಗವು ಗರ್ಭಿಣಿಯರಿಗೆ ಬರುವ ನವು ಹೆಚ್ಚು. ಆದ್ದರಿಂದ ಈ ರೋಗವನ್ನು ಪ್ರತಿಬಂಧಿಸಲಿಕ್ಕೆ ಲೋಹದ ಾಣ ಹೆಚ್ಚಿರುವಂಥ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು. ಲೋಹ

ವುಳ್ಳ ಆಹಾರವನ್ನೇ ಹೆಚ್ಚಾಗಿ ಸೇವಿಸುತ್ತಿದ್ದರೂ ಅದರ ಕೂಡ ಬೇರೆ ಪ
ಜೀವಸತ್ವಗಳುಳ್ಳ ಆಹಾರವನ್ನೂ ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳ
ಆಹಾರವನ್ನೂ ಸೇವಿಸದಿದ್ದರೆ ಆ ಲೋಹವು ದೇಹದಲ್ಲಿಯ ನಿರ್ಮಾಣ ಸಾಮ
ಗಳಲ್ಲಿ ರೂಪಾಂತರ ಹೊಂದುವದಿಲ್ಲ. ಆದ್ದರಿಂದ ಮೂಲ ಉದ್ದೇಶವು ಸ
ವಾದಂತಾಗುವದಿಲ್ಲ.

ಈ ಲೋಹದ ಕ್ಷಾರದ ವಿಷಯವಾಗಿ ಲಕ್ಷದಲ್ಲಿಡತಕ್ಕ ಇನ್ನೊಂದು ಸಂ
ಏನಂದರೆ ಎಲ್ಲ ತರಹ ಆಹಾರ ಪದಾರ್ಥಗಳು ತಮ್ಮಲ್ಲಿಯ ಲೋಹವನ್ನು ಪೂ
ವಾಗಿ ರೂಪಾಂತರಿಸುವದಿಲ್ಲ. ಇಷ್ಟೇ ಅಲ್ಲದೆ ಕೆಲವು ಆಹಾರ ಪದಾರ್ಥ
ತೀವ್ರವಾಗಿ ಹೆಚ್ಚಿನ ಪ್ರಮಾಣದಲ್ಲಿ ರೂಪಾಂತರ ಹೊಂದುವವು. ಕೆಲವು ತಪ್ಪ
ಲೋಹದ ಪ್ರಮಾಣವು ಹೆಚ್ಚಿದ್ದಾಗ್ಯೂ ತಮ್ಮಲ್ಲಿಯ ಲೋಹವನ್ನು ಆ ಪ್ರಮ
ದಲ್ಲಿ ರೂಪಾಂತರಿಸುವದಿಲ್ಲ. ಆದಕಾರಣ ಆಹಾರ ಪದಾರ್ಥವನ್ನು ಆರಿಸು
ಲೋಹದ ಪ್ರಮಾಣದ ಕಡೆಗಷ್ಟೇ ಲಕ್ಷವೂರೈಸದೆ ಆ ಆಹಾರವು ಯಾವ ಪ್ರ
ಣದಲ್ಲಿ ತನ್ನಲ್ಲಿಯ ಲೋಹವನ್ನು ದೇಹದಲ್ಲಿಯ ಘಟಕಗಳಲ್ಲಿ ರೂಪಾಂತರಿ
ದೆಂಬುದನ್ನು ವಿಶೇಷವಾಗಿ ನೋಡಬೇಕಾಗುವದು. ಉದಾಹರಣೆಗಾಗಿ ಗೋದಿ
ತನ್ನಲ್ಲಿಯ ಲೋಹವನ್ನು ೪೭% ರಂತೆ ಮಾತ್ರ ರೂಪಾಂತರಿಸುತ್ತದೆ. ಸೋ
ಬೀನ ಕಾಳುಗಳು ೮೦% ರೂಪಾಂತರಿಸುತ್ತವೆ. ಬದಾಮು ೮೮% ಲೆಟ್ಯೂಸ ೬
ಬಟಗಟ್ಲೆ ೭೨% ಬಾಳೆಹಣ್ಣು ೬೨% ಪ್ರಮಾಣದಲ್ಲಿ ರೂಪಾಂತರಿಸುತ್ತವೆ.
ವಾಗಿಯೂ ಲೋಹವು ಆಹಾರದಲ್ಲಿ ತೀರ ತುಸು ಪ್ರಮಾಣದಲ್ಲಿರುತ್ತದೆ. ಉದ
ತೃಣಧಾನ್ಯಗಳು ಹೆಚ್ಚೆಂದರೆ ಸೆಜ್ಜೆ ·೧೮೪೪%, ಜೋಳ ·೦೬೧೮%, ಸಾಂವಿ ·೦೬

ಬೇಳೆಕಾಳಿಗಳು ಸೋಯಾಬೀನ ·೧೧೫೭%, ಉದ್ದು ·೦೯೪% ಹೆಸರು ·೦೮

ಹಸರುಪಲ್ಯಗಳು– ರಾಜಗಿರಿ ·೨೨೯%, ಕೋತಂಬ್ರಿ · ೯೯೭%, ಕರಿ
·೨೫೩%

ಎಣ್ಣೆಕಾಳುಗಳು ಸಾಸಿವೆ ·೧೭೯, ಎಳ್ಳು ·೧೦೫

ಮಸಾಲೆ ಕಾಳುಗಳಲ್ಲಿ ತುಸು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹು
ಇಂಗು ·೨೨೨, ಅರಿಷಣ ·೧೪೬, ಮೆಣಸು ·೧೬೪%. ಇನ್ನಿತರ ಆಹಾರ ಪದಾ
ಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಬಹುದು.

ಜೀವಸತ್ವಗಳು

ನಾವು ಶಕ್ತಿಪೂರಕಗಳ ಮತ್ತು ನಿರ್ಮಾಣ ಸಾಮಗ್ರಿಗಳನ್ನು ತಯಾ
ವಂಥ ಆಹಾರದ ಕಡೆಗೆ ಲಕ್ಷಕೊಟ್ಟು ನಮ್ಮ ದಿನದ ಆಹಾರವನ್ನು ತಯ

ಂಡಾಗ್ಯೂ ಒಂದು ಮಹತ್ವದ ಸಂಗತಿಯ ಕಡೆಗೆ ಲಕ್ಷ ಕೊಡದಿದ್ದರೆ ನಮ್ಮ
ರ್ಯವು ಸಫಲವಾದಂತಾಗುವದಿಲ್ಲ. ಅನೇಕವೇಳೆ ದೇಹಕ್ಕೆ ಬೇಕಾಗುವ
ವ್ಯಗಳನ್ನು ಪ್ರಮಾಣಕ್ಕನುಸರಿಸಿ ತೆಗೆದುಕೊಂಡಾಗ್ಯೂ ಬೆಳವಣಿಗೆಯು ಸಮಾ
ನಸ್ಕಾರಕವಾದದ್ದು ಕಂಡುಬಂದಿಲ್ಲ. ಉದಾಹರಣೆಗಾಗಿ ನಮಗೆ ಬೇಕಾಗುವ
ಪ್ರೋಟೀನದ್ರವ್ಯ, ನೆಣ, ಕಾರ್ಬೋಹಾಯಡ್ರೇಟ ಕ್ಷಾರ ಮುಂತಾದವುಗಳನ್ನು
ಯೋಗ್ಯ ಪ್ರಮಾಣದಲ್ಲಿ ಬೆರಿಸಿ ತೆಗೆದುಕೊಂಡಾಗ್ಯೂ ಬೆಳವಣಿಗೆಯು ಕುಂಠಿತ
ದ ಕೆಲವು ವಿಶಿಷ್ಟ ರೋಗಗಳೂ ಕಂಡುಬಂದಿವೆ. ಹೀಗಾಗಲು ಕಾರಣ
ನೆಂದರೆ ನಮ್ಮ ಆಹಾರದಲ್ಲಿ ಏನಾದರೊಂದು ಮಹತ್ವವಾದ ಪದಾರ್ಥದ
ಸರತೆ ಇರಲಿಕ್ಕೆ ಸಾಕು. ಅದಕ್ಕೇ ನಾವು ಜೀವಸತ್ವವೆಂದು ಹೆಸರಿಟ್ಟಿದ್ದೇವೆ.
ಜೀವಸತ್ವಗಳನ್ನು ನಾವು ಕಣ್ಣಾರೆ ಕಾಣಲಾರೆವು. ತಕ್ಕಡಿಯಲ್ಲಿ ತೂಗ
ಲಿವು. ಅಥವಾ ಕ್ಷಾರ ನೆಣ ಹೆಡಸಿನ ಪದಾರ್ಥಗಳಂತೆ ಪ್ರತ್ಯೇಕವಾಗಿ
ತಾರಿಸಲಾರೆವು. ಆದರೆ ಈ ಜೀವಸತ್ವಗಳ ಪರಿಣಾಮದ ಮೇಲಿಂದ ಅವುಗಳ
ಮಿಕೆಯನ್ನೂ ಅವುಗಳ ಮಹತ್ವವನ್ನೂ ತಿಳಿಯುವೆವು. ಉದಾಹರಣೆಗಾಗಿ
ಿನಲ್ಲಿ ಇರುವ ವಿಶಿಷ್ಟ ದ್ರವ್ಯಗಳನ್ನು ಎಂದರೆ ಪ್ರೋಟೀನ, ನೆಣ, ಕೇಸಿನ,
ಂತಾದವುಗಳನ್ನು ಪ್ರತ್ಯೇಕವಾಗಿ ತಯಾರಿಸಿ ಸೇವಿಸುವದಕ್ಕೂ ತಾಜಾ
ಆಗ ಹಿಂಡಿದ ಹಾಲನ್ನು ಸೇವಿಸುವದಕ್ಕೂ ಮಹದಂತರವಿರುವದೆಂಬುದು
ನೆ ಹೊಳೆಯದಿರಲಿಕ್ಕಿಲ್ಲ. ಹಾಗಾದರೆ ತಾಜಾ ಹಾಲಿನಲ್ಲಿರುವ ಆ ವಿಶಿಷ್ಟ
ಕ್ಕೆ ಜೀವಸತ್ವವೇ ಕಾರಣವಲ್ಲವೇ.

ಒಟ್ಟಿನ ಮೇಲೆ ಹೇಳಬೇಕಾದರೆ ಈ ಜೀವಸತ್ವಗಳು ಬೆಳವಣಿಗೆಗೆ ಅತಿ ಆವ
ಗಳು. ಆಹಾರವನ್ನು ನಿರ್ದಿಷ್ಟಪಡಿಸುವಾಗ ಈ ಜೀವಸತ್ವಗಳ ಪ್ರಮಾಣವು
ವ ಆಹಾರದಲ್ಲಿ ಹೆಚ್ಚಾಗಿ ಇರುವದೆಂಬುದನ್ನು ಮೊದಲು ಪರೀಕ್ಷಿಸಬೇಕು.
ವಸತ್ವಗಳು ಬೇರೆಬೇರೆ ಪ್ರಕಾರದವಿರುವದರಿಂದ ಮತ್ತು ಬೇರೆಬೇರೆ ಪ್ರಮಾಣ
ಅನೇಕ ತರದ ಆಹಾರ ಪದಾರ್ಥಗಳಲ್ಲಿರುವದರಿಂದ ಪ್ರತಿ ದಿನದ ಆಹಾರದ
ಷ್ಟಕವನ್ನು ತಯಾರಿಸುವಾಗ ಈ ಸಂಗತಿಯ ಕಡೆಗೆ ವಿಶೇಷ ಲಕ್ಷ ಪೂರೈಸ
ಕು. ಈ ಜೀವಸತ್ವಗಳ ವಿಶಿಷ್ಟ ಲಕ್ಷಣವೆಂದರೆ ಇವುಗಳು ತೀವ್ರ ನಾಶ
ಂದುವವು. ಆಹಾರ ಪದಾರ್ಥವನ್ನು ಬಹಳ ದಿವಸಗಳವರೆಗೆ ಇಡಲಾಗಿ
ವಾ ಬಹಳ ಮಟ್ಟಿಗೆ ಬೇಯಿಸುವದರಿಂದ ಇಲ್ಲವೆ ಎಸ್ಸೆ ತುಪ್ಪ ಮುಂತಾದವು
ಲ್ಲಿ ಕರಿಯುವದರಿಂದ ಈ ಜೀವಸತ್ವಗಳು ವಿನಾಶಹೊಂದುವವು. ಆದಷ್ಟು
ಾರವನ್ನು ಸ್ವಾಭಾವಿಕವಾದ ರೀತಿಯಲ್ಲಿಯೇ ಸೇವಿಸಲು ಯತ್ನಿಸಬೇಕು.
ಮ್ಮನೆ ಹೆಚ್ಚು ಬೇಯಿಸುವದನ್ನಾಗಲಿ ಕರಿಯುವದನ್ನಾಗಲಿ ಮಾಡುತ್ತ

ಹೋಗಬಾರದು. ಅದಷ್ಟು ತಾಜಾ ಆಹಾರವನ್ನೇ ಸೇವಿಸುವ ರೂಢಿಯನ್ನು ಪ್ರಚಾರದಲ್ಲಿ ತರಬೇಕು.

ಇನ್ನು ಈ ಜೀವಸತ್ವಗಳ ಭಿನ್ನ ಪ್ರಕಾರಗಳನ್ನೂ ಅವುಗಳ ಸಿಗುವಿಕೆಯನ್ನೂ ಮತ್ತು ಅವುಗಳ ಅಭಾವದಿಂದ ದೇಹದ ಮೇಲೆ ಆಗುವ ದುಷ್ಪರಿಣಾಮಗಳನ್ನೂ ವಿವೇಚಿಸೋಣ.

ಜೀವಸತ್ವ (ಅ) ಈ ಜೀವಸತ್ವವು ಸೂರ್ಯಪ್ರಕಾಶದಲ್ಲಿ ಹಸರು ಗಳೊಳಗೆ ಮತ್ತು ಪಲ್ಲೆಯಲ್ಲಿ ತಯಾರಾಗುತ್ತದೆ. ಎಳೆ ಎಲೆಗಳಲ್ಲಿಯೂ ಬಿಳಿಯ ಕುಡಿಯಲ್ಲಿಯೂ ಇದು ವಿಶೇಷವಾಗಿ ತಯಾರಾಗುತ್ತದೆ.

ಕ್ಯಾಬೇಜ, ಹರಿವೆ, ರಾಜಗಿರಿ ಕೋತಂಬ್ರಿಕಾಳು ಮತ್ತು ಸೊಪ್ಪು, ನುಗ್ಗೆ ಸೊಪ್ಪು, ಹಕ್ಕರಿಕೆ, ಕಿರಕಸಾಲಿ ಮುಂತಾದ ಸೊಪ್ಪುಗಳಲ್ಲಿ ಈ ಜೀವಸತ್ವ ಹೇರಳವಾಗಿ ಕಂಡುಬರುತ್ತದೆ. ಮೂಲಂಗಿ ಹೊರ್ತಾಗಿ ಉಳಿದಗಡ್ಡೆ ಗೆಣಸುಗಳಲ್ಲಿಯಾಗಲಿ ತೃಣಧಾನ್ಯದಲ್ಲಿಯಾಗಲಿ ಅಥವಾ ಬೇಳೆಕಾಳುಗಳಲ್ಲಿಯಾಗಲಿ ಈ ಜೀವಸತ್ವವು ಹೆಚ್ಚಿನ ಪ್ರಮಾಣದಲ್ಲಿ ಕಾಣುವದಿಲ್ಲ. ಹಣ್ಣುಗಳಲ್ಲಿ ಮಾವಿನಹಣ್ಣು ಮತ್ತು ಪಪಯಿ ಹಣ್ಣುಗಳಲ್ಲಿ ಇದರ ಪ್ರಮಾಣವು ಸಮಾಧಾನಕರ. ಈ ಜೀವಸತ್ವವು ಪ್ರಾಣಿಜನ್ಯ ಪದಾರ್ಥದಲ್ಲಿ ಸ್ವಾಭಾವಿಕವಾಗಿ ತಯಾರಾಗದಿದ್ದರೂ ಪ್ರಾಣಿಗಳು ಈ ಜೀವಸತ್ವ ಕೂಡಿದ ಆಹಾರವನ್ನು ವಿಶೇಷವಾಗಿ ಸೇವಿಸುತ್ತವದರಿಂದ ಅವುಗಳ ಯಕೃತ್ತಿನಲ್ಲಿ ಹೋಗಿ ಕೂಡಿಬೀಳುತ್ತದೆ. ಆದ್ದರಿಂದ ಆ ಪ್ರಾಣಿಗಳ ಯಕೃತ್ತಿನಲ್ಲಿ ಈ ಜೀವಸತ್ವದ ಪ್ರಮಾಣವು ಹೆಚ್ಚು. ಕಾಡ್ ಎಂಬ ಮೀನದ ಯಕೃತ್ತಿನಲ್ಲಿಯಾಗಲಿ ಅಥವಾ ಹ್ಯಾಲಿಬಟ್ ಎಂಬ ಇನ್ನೊಂದು ಪ್ರಕಾರದ ಮೀನದಲ್ಲಿಯಾಗಲೀ ಈ ಜೀವಸತ್ವವು ಮಿತಿಮೀರಿ ಇದ್ದುದು ಕಂಡುಬಂದಿದೆ. ಇದೇ ಕಾರಣದಿಂದಲೇ ಚಿಕ್ಕ ಮಕ್ಕಳಿಗೆ ಕಾಡ್‌ಲಿವ್ಹರ ಎಣ್ಣೆಯನ್ನಾಗಲಿ ಅಥವಾ ಹಾಲಿಬಟ್ ಲಿವ್ಹರ ಎಣ್ಣೆಯನ್ನಾಗಲಿ ಪ್ರತಿದಿವಸ ಕೊಡುತ್ತಾ ಹೋದರೆ ಬೆಳವಣಿಗೆಗೆ ಬಹಳ ಸಹಾಯವಾಗುತ್ತದೆಂದು ಕಂಡುಬಂದಿದೆ. ಕೋಳಿಯ ಶರೀರದಲ್ಲಿಯೂ ಕೂಡ ಈ ಸತ್ವವು ಕಂಡುಬರುತ್ತದೆ.

ಈ ಜೀವಸತ್ವವು ಮನುಷ್ಯನಲ್ಲಿಯ ರೋಗ ಪ್ರತೀಕಾರಕ ಶಕ್ತಿಯನ್ನು ಬಲಪಡಿಸುತ್ತದೆ. ಸಾಂಸರ್ಗಿಕ ರೋಗಗಳ ಬಾಧೆಯನ್ನು ಪ್ರತಿಬಂಧಿಸುತ್ತದೆ. ರಕ್ತದ ಪ್ರಮಾಣವನ್ನು ಕಾಯ್ದುತ್ತದೆ. ಇದರ ಅಭಾವದ ಮೂಲಕ ಉತ್ಪನ್ನವಾಗುವ ಅನೀಮಿಯಾ, ಆಗಾಗ್ಗೆ ನೆಗಡಿ, ಕೆಮ್ಮು, ದಮ್ಮು, ಕ್ಷಯ, ಅತಿಸಾರ, ಆಮಾಂಶ, ಪ್ಲೇಗ ಮುಂತಾದ ರೋಗಗಳು ಸಂಭವಿಸುವವು. ನಮ್ಮ ದೇಹದಲ್ಲಿಯ ಶ್ವೇ

ಜೆಯಲ್ಲಿ ರೋಗಕಾರಕ ಜಂತುಗಳು ಬಲು ತೀವ್ರ ಬೆಳೆಯುವವು. ಆದ್ದರಿಂದ ಎಲ್ಲರೂ ಈ ಜೀವಸತ್ವ (ಅ) ದ ಸಿಗುವಿಕೆಯ ಬಗ್ಗೆ ಅದನ್ನು ಯೋಗ್ಯ ಪ್ರಮಾಣ ಲ್ಲಿ ಸೇವಿಸುವ ಬಗ್ಗೆ ಹೆಚ್ಚು ದಕ್ಷತೆಯನ್ನು ವಹಿಸಬೇಕು. ಹೆಚ್ಚಾಗಿ ಜೀಯಿಸು ವುದರಿಂದ ಈ ಜೀವಸತ್ವವು ನಾಶಹೊಂದುವದರಿಂದ ಆದಷ್ಟು ಸ್ವಾಭಾವಿಕ ರೀತಿ ಯಲ್ಲಿಯೇ ಸೇವಿಸಬೇಕು.

(ಮುಂದೆಸಾಗುವದು)

ಶಿಶುಶಾಲೆಗಳು

(ಅಗಷ್ಟ ೧೯೩೬ ನೆಯ ತಿಂಗಳಿನಿಂದ ಮುಂದೆವರಿದುದು)

ಚಟಗಳು (Habits)

ಪರಿಸ್ಥಿತಿಯ ಬದಲಾವಣೆಯಿಂದ ಬಾಲಕರ ಹಲ ಕೆಲವು ಪುನಃ ಪ್ರವೃ ತ್ತಿಯನ್ನು ಸುಧಾರಿಸಬಹುದು. ಪರರ ಹೆಚ್ಚಳವನ್ನು ನೋಡಿ ಮನಸ್ಸಿಗೆ ನೋವ ವಾಗುವ ಪ್ರವೃತ್ತಿಯನ್ನು (ಮತ್ಸರ) ಹೊಟ್ಟೆಕಿಚ್ಚೆಂದು ಹೇಳಬಹುದಷ್ಟೇ. ಈ ಮನಃಪ್ರವೃತ್ತಿಯುಳ್ಳ ಮಗುವಿಗೆ ಆ ಭಾವನೆಯು ಬೆಳವಣಿಗೆಹೊಂದು ವಂಥ ಪರಿಸ್ಥಿತಿಯನ್ನು ತಂದುಕೊಡಲಾಗದು. ಎಂದರೆ ಆ ಮಗುವಿಗಿಂತ ಹೆಚ್ಚಿನ ತರಗತಿಯ ಬಾಲಕರ ಸಹವಾಸವನ್ನು ಆದಷ್ಟು ಒದಗಿಸಲಾಗದು; ಏಕೆಂದರೆ ಬಾಲಕರು ಅಡಿಗಡಿಗೆ ತನ್ನನ್ನು ಹಿಂದಕ್ಕೊತ್ತಿ ತನಗಿಂತ ಹೆಚ್ಚು ಉತ್ಕರ್ಷವನ್ನು ಪಡೆದು ಮುಂದೆಸಾಗುತ್ತಿರುವ ಪರಿಸ್ಥಿತಿಯನ್ನು ಪುನಃ ಪುನಃ ನೋಡುವದರಿಂದ ಆ ಮಗುವಿನ ಮನಸ್ಸಿನಲ್ಲಿ ಮೂಡುತ್ತಿರುವ ಹೊಟ್ಟೆ ಕಿಚ್ಚಿನ ಪ್ರವೃತ್ತಿಯು ಬೆಳವಣಿಗೆಹೊಂದಲು ಅನುಕೂಲವಾಗುವದು. ಚಿಕ್ಕ ಮಕ್ಕಳಲ್ಲಿ ಅನಪೇಕ್ಷಣೀಯವಾದ ಹಲಕೆಲವು ಮನಃ ಪ್ರವೃತ್ತಿಗಳನ್ನು ಉದ್ದೀಪನ ಗೊಳಿಸುವಂಥ ಸಂದರ್ಭಗಳನ್ನು ಪ್ರಯತ್ನಪೂರ್ವಕವಾಗಿ ತಪ್ಪಿಸುತ್ತಹೋಗು ವುದರಿಂದ ಅಂಥ ಪ್ರವೃತ್ತಿಗಳು ಕಾಲಾಂತರದಲ್ಲಿ ಅದೃಶ್ಯವಾಗಿಬಿಡುವದೂ ಉಂಟು. ಒಂದು ವೇಳೆ ಹಾಗೆ ಅವು ಸಂಪೂರ್ಣ ನಾಶವಾಗದೆ ಇದ್ದರೂ ಅವುಗಳ ಶೈಶವಾವಸ್ಥೆಯಂತೂ ಬಹುಮಟ್ಟಿಗೆ ಕುಂದಿಹೋಗಬಹುದು. ಬಾಲಕರ ಕೆಲವೊಂದು ಮನಃಪ್ರವೃತ್ತಿಯು, ಪುನಃ ಪುನಃ ಆವರ್ತನೆಯಾಗುವದರಿಂದ, ಅವರಲ್ಲಿ ಬಲವಾಗಿ ನೆಲೆಗೊಳ್ಳುವದು. ಆಗ ಅದಕ್ಕೆ ಚಟವೆಂಬ ಹೆಸರುಬರುವದು.

ಬಾಲಕರಲ್ಲಿ ಅತಿ ಪ್ರಬಲವಾಗಿ ಕಂಡುಬರುತ್ತಿರುವ ಹಾಗು ಸ್ಥಿರವಾಗಿ

ನೆಲೆಗೊಂಡಿರುವ ಎಲ್ಲ ಜಟಗಳು ಅವರ ಒಂದಿಲ್ಲೊಂದು ಮೂಲ ಮನಃಪ್ರವೃ
ಯನ್ನು ಅವಲಂಬಿಸಿಕೊಂಡೇ ಇರುವವು. ಆರಂಭದಲ್ಲಿ ಒಳ್ಳೆಯದು ಇಲ್ಲ
ಕೆಟ್ಟದು ಎಂದು ನಿರ್ಣಯಿಸಲಿಕ್ಕೆ ಬರದಂತಿರುವ ಯಾವದೊಂದು ಮನಃಪ್ರ
ತ್ತಿಯು ಪರಿಸ್ಥಿತಿಯ ಮೂಲಕ ಬೆಳವಣಿಗೆಹೊಂದಿ ಬಾಲಕರಲ್ಲಿ ನೆಲೆಗೊಂ
ಅವರ ಜಟವೆನ್ನಿಸಿಕೊಂಡಾಗ ಅದು ಒಳ್ಳೆಯ ಇಲ್ಲವೆ ಕೆಟ್ಟ ಜಟವೆಂದು ಹೆಸ
ಗೊಂಡು ಅವರ ಒಳಿತಿಗೆ ಇಲ್ಲವೆ ಕೆಡಕಿಗೆ ಕಾರಣವಾಗಬಹುದು.

ಉದಾಹರಣೆಗಾಗಿ ಒಂದು ಹಟಗೇಡಿಯಾದ ಮಗುವಿದೆ ಎಂದು ತಿಳಿಯೋಣ
ಅದು ತನ್ನ ಹಟದ ಮೂಲಕ ಚಿಕ್ಕಮಕ್ಕಳನ್ನು ಬೆದರಿಸುವದು; ಅಥವಾ ಕ
ಹಿಡಿದು, ಅತ್ತುಕರೆದು, ಕೋಪಿಸಿಕೊಂಡು ತಾನು ಬಯಸಿದ ಒಡವೆಗಳನ್ನು
ದೊರಕಿಸಿಕೊಳ್ಳುವದು. ಈ ತರದ ನಡೆವಳಿಯು ಕೆಲವು ದಿನಗಳ ವರೆಗೆ ನಡೆ
ಆ ಮಗುವಿನ ಮನಸ್ಸಿನ ಹಟದ (ಮನಸ್ಸಿಗೆ ತೋರಿದ್ದನ್ನು ಮಾಡಿಯೆ
ತೀರಬೇಕೆಂಬ) ಭಾವನೆಯು ವಿಕೃತರೂಪವಾಗಿ ಬೆಳೆದು ದುಷ್ಟ ಜಟವಾ
ಪರಿಣಮಿಸುವದು. ಆದೇ ಮಗುವಿನ ಮೇಲೆ ಹೇಳಿದ ಹಟದ ಭಾವನೆಯನ್ನ
ಯಾವದೊಂದು ಕೆಲಸದಲ್ಲಿ ಉಪಯೋಗಿಸಿಕೊಂಡು ಹಿಡಿದ ಕೆಲಸವನ್ನು ಎ
ತೊಂದರೆಬಂದರೂ ಹಿಂದೆಗೆಯದೆ ಹಟಹಿಡಿದು ಕೊನೆಗಾಣಿಸುವ ಸದ್ಗುಣವಾ
ಮಾರ್ಪಡುವಂತೆ ಯತ್ನಿಸುತ್ತಹೋಗಿ, ಮೇಲೆ ಹೇಳಿದಂತೆ ಚಿಕ್ಕಮಕ್ಕಳ ಮೆ
ಅಧಿಕಾರ ನಡೆಯಿಸುವದು ಅಥವಾ ಹಟಮಾರಿತನದಿಂದ ತನ್ನ ಮನಸ್ಸಿನ ಬಯ
ಯನ್ನು ಪೂರೈಸಿಕೊಳ್ಳುವದು ಇಂಥ ಅಯೋಗ್ಯದಿಶೆಯಲ್ಲಿ ಕೆಲಸಮಾಡ
ಸಂದರ್ಭವನ್ನು ಅದಕ್ಕೆ ತಂದುಕೊಡದೆ ಇದ್ದುಬಿಟ್ಟರೆ; ಅದೊಂದು ಸದ್ಗುಣ
ಆಗಿ ಪರಿಣಮಿಸುವದು. ಮಗುವಿನ ಶಿಕ್ಷಣಕಾರ್ಯವನ್ನು ಒಪ್ಪಿಕೊಂಡ
ಅದಕ್ಕೆ ಯೋಗ್ಯವಾದ ಪರಿಸ್ಥಿತಿಯನ್ನೂ ಒಳ್ಳೆಯ ಸನ್ನಿವೇಶಗಳನ್ನೂ ಒದ
ಕೊಟ್ಟು ಮಗುವಿನಲ್ಲಿ ಒಳ್ಳೆಯ ಮನಃಪ್ರವೃತ್ತಿಗಳೇ ಜಾಗ್ರತವಾಗಿ
ಪ್ರವೃತ್ತಿಗಳಿಗೆ ಸಂದರ್ಭಗಳೇ ದೊರೆಯುವದಂತೆ ಮಾಡುತ್ತಹೋದರೆ
ಪ್ರವೃತ್ತಿಗಳಿಗೆ ಅವಕಾಶವಿಲ್ಲದಂತಾಗಿ ಅವು ತಮ್ಮಷ್ಟಕ್ಕೆ ತಾವೇ
ಹೋಗುವವು.

ಬಹುಶಃ ಮಗುವು ಹುಟ್ಟಿದಾಗಿನಿಂದಲೆ ಸ್ವಂತ ಅನುಭವದಿಂದಲೂ ಸು
ಲಿನ ಪರಿಸ್ಥಿತಿಯಿಂದಲೂ ತನ್ನ ನಡತೆಯನ್ನು ಕಲಿಯುತ್ತ ಸಾಗುವದು. ಎಂ
ಮಗುವು ಹುಟ್ಟಿದಂದಿನಿಂದಲೆ ತನ್ನ ಪರಿಸ್ಥಿತಿಗೂ ಅನುಭವಕ್ಕೂ ಅನುಗುಣವಾ
ಒಳ್ಳೆಯ ಇಲ್ಲವೆ ಕೆಟ್ಟ ಜಟಗಳನ್ನು ಸಂಗ್ರಹಿಸುತ್ತಹೋಗುವದು. ಈ ಜಟ

ಧಾರವಾಡ ಜಿಲ್ಲೆಯ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ ಸೆಂಟರಿ ಪರೀಕ್ಷೆಗೆ ಕೂಡ್ರಬೇಕು.

ಬೆಳಗಾವಿ ಜಿಲೆ ಯ ಅಥಣಿ, ಗೋಕಾಕ ತಾಲೂಕುಗಳ ಉಮೇದವಾರರು ಗೋಕಾಕ ಸೆಂಟರಿನಲ್ಲಿಯೂ ಚಿಕ್ಕೋಡಿ ತಾಲೂಕಿನ ಉಮೇದವಾರರು ಚಿಕ್ಕೋಡಿ ಸೆಂಟರಿನಲ್ಲಿಯೂ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್ ಕ್ಲಾಸು **ಉಮೇದವಾರರು ಸಹ**) ಬೆಳಗಾವಿ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು.

ವಿಜಾಪುರ ಜಿಲ್ಲೆಯ ಬಾಗಲಕೋಟ, ಹುನಗುಂದ, ಬದಾಮಿ, ಮುದ್ದೇಬಿಹಾಳ ತಾಲೂಕುಗಳ ಹಾಗು ಜಮಖಂಡಿ, ರಾಮದುರ್ಗ, ಮುಧೋಳ ಸಂಸ್ಥಾನ ಎಲ್ಲ ಕನ್ನಡ ಉಮೇದವಾರರು ಬಾಗಲಕೋಟಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು. ವಿಜಾಪುರ ಜಿಲ್ಲೆಯ ಮಿಕ್ಕ ಕನ್ನಡ, ಮರಾಠಿ, ಉರ್ದು, ಅಗ್ರಿಕಲ್ಚರಲ್ ಕ್ಲಾಸಿನ ಎಲ್ಲ ಉಮೇದವಾರರು ವಿಜಾಪುರ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು.

ಈ ಪರೀಕ್ಷೆಯು ಮುಂಬಯಿ ಗವರ್ನಮೆಂಟ ಗ್ಯಾಝೆಟಿನ ವಿದ್ಯಾಖಾತೆಯ ನೋಟಿಫಿಕೇಶನ್ನಿನ ನಂ. $\frac{\text{ವಿವಿಲಲ್}}{೧೯-೯-೧೯೨೮}$ ಹಾಗೂ ೨೯-೬-೧೯೨೯ ಮತ್ತು ೧೫-೩-೧೯೩೦ ಹಾಗು ೩-೮-೧೯೩೧ ಮುಂಬಯಿ ಗ್ಯಾಝೆಟಿನ ಭಾಗ ೧ $\frac{೧೯೨೮}{೨೯-೯-೧೯೨೮}$, $\frac{೧೯೨೯}{೧-೮-೧೯೨೯}$, $\frac{೧೯೩೦}{೩-೪-೧೯೩೦}$, $\frac{೧೯೩೧}{೬-೮-೧೯೩೧}$ ಈ ಪುಟಗಳಲ್ಲಿ ಪ್ರಸಿದ್ಧಿಸಿದ ಮೇರೆಗೆ ನಡೆಯುವದು.

ಮೇಲೆ ಹೇಳಿದ ಪ್ರತಿಯೊಂದು ಸೆಂಟರಿನಲ್ಲಿ ಒಂದೊಂದು ಪರೀಕ್ಷಾ ಕಮೀಟಿ ಇರುವದು. ಹಾಗು ಆಯಾ ಕಮೀಟಿಯ ಪ್ರೆಸಿಡೆಂಟರು ಕೆಳಗೆ ಬರೆದ ಪ್ರಕಾರ ಇರುವರು.

೧) ಧಾರವಾಡ	**ಸೆಂಟರ**	ಹೆಡ್‌ಮಾಸ್ತರ ಗವರ್ನಮೆಂಟ ಹಾಯಸ್ಕೂಲ ಧಾರವಾಡ
೨) ಗದಗ	,,	ಸೀನಿಯರ ಅಸಿಸ್ಟಂಟ ಎಜ್ಯುಕೇಶನ್ ಇನ್‌ಸ್ಪೆಕ್ಟರ ಧಾರವಾಡ
೩) ಹುಬ್ಬಳ್ಳಿ	,,	ಹೆಡ್‌ಮಾಸ್ತರ ಆಂಗ್ಲೋ ಉರ್ದು ಹಾಯಸ್ಕೂಲು ಹುಬ್ಬಳ್ಳಿ
೪) ಬೆಳಗಾವ	,,	ಹೆಡ್‌ಮಾಸ್ತರ ಸರದಾರ ಹಾಯಸ್ಕೂಲು ಬೆಳಗಾವ

(೫) ಚಿಕ್ಕೋಡಿ	ಸೆಂಟರ	ಸೀನಿಯರ ಅಸಿ। ಡೆವೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಬೆಳಗಾ
(೬) ಗೋಕಾಕ	,,	ಡೆವೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಉರ್ದುಸ್ಕೂಲ್ಸ ಎಸ್. ಡಿ. ಧಾರವಾ
(೭) ವಿಜಾಪುರ	,,	ಹೆಡ್‌ಮಾಸ್ತರ ಗವರ್ಮೆಂಟ ಹಾಯಸ್ಕೂ ವಿಜಾಪು
(೮) ಬಾಗಲಕೋಟ	,,	ಸೀನೀಯರ ಅಸಿ। ಡೆ. ಎಜ್ಯುಕೇಶನಲ್ ಇನಸ್ಪೆಕ್ಟರ ವಿಜಾಪೂರ
(೯) ಕಾರವಾರ	,,	ಹೆಡ್‌ಮಾಸ್ತರ ಗವರ್ಮೆಂಟ ಹಾಯಸ್ಕೂ ಕಾರವಾ
(೧೦) ಕೊಲ್ಲಾಪೂರ	,,	ಇನಸ್ಪೆಕ್ಟರ ಆಫ್ ಪ್ರಾಯಮರಿ ಎಜ್ಯು ಕೇಶನ್ ಕೊಲ್ಲಾಪೂರ ಸ್ಟೇ

೪. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ತಾವು ಪರೀಕ್ಷೆ ಕೂಡ್ರುವ ಸೆಂಟರಿನ ಪರೀಕ್ಷಾಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾರೀಖ ೧-೩-೧೯೩೭ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂ ಪರೀಕ್ಷೆಯ ಪರವಾನಿಗೆಯ ಬಗ್ಗೆ ಗೊತ್ತಾದ ಫಾರೀನಮೂನೆಯ ಮೇಲೆ ಅರ್ ಯನ್ನು ಕಳಿಸತಕ್ಕದ್ದು. ೧-೩-೧೯೩೭ ರ ತರುವಾಯ ಬಂದ ಅರ್ಜಿಯನ ಹಿಡಿಯಲಿಕ್ಕಿಲ್ಲ. ಯಾವದೊಂದು ಬ್ರಿಟಿಶ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂ ಲಿಚ್ಚಿಸುವ ದೇಶೀಯ ಸಂಸ್ಥಾನಗಳ ಉಮೇದವಾರರು ಆಯಾ ಸಂಸ್ಥಾನ ವಿದ್ಯಾಖಾತೆಯ ಯೋಗ್ಯ ಅಧಿಕಾರಸ್ಥರ ಮುಖಾಂತರವಾಗಿ ತಮ್ಮ ಅರ್ಜಿಯನ ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸ ಹಾಗು (ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಒಂದಿದ್ದಲೆ ಸಾಲೆಯ ಹೆಸರು ಇರಲಿಕ್ಕೆಬೇಕು. ಅರ್ಜಿಯು ಸಂಗಡಲೆ ೩ ರೂಪಾ ಪರೀಕ್ಷೆಯ ಫೀಯನ್ನು ಸಹ ಕಳಿಸಲೇಬೇಕು. ಸಂಪೂರ್ಣ ಮಾಹಿತಿ ಇಲ್ಲದ ಅರ್ಜಿಯೂ ಫೀ ತುಂಬದಿದ್ದ ಅರ್ಜಿಯೂ ಅರ್ಜಿಯಿಲ್ಲದೆ ಕಳಿಸಿದ ಫೀ ಹಣ ಯಾವ ನೆವವನ್ನೂ ಕೇಳದೆ ತಿರಸ್ಕರಿಸಲ್ಪಡುವವು. ಅರ್ಜಿಯ ನಮೂನೆಗ ಪರೀಕ್ಷಾಕಮೀಟಿಯ ಪ್ರೆಸಿಡೆಂಟರ ಕಡೆಗೆ ದೊರೆಯುವವು ಬೇಕಾದವರು ತ ಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೫. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರ ವಯ ೧-೪-೧೯೩೭ ಕ್ಕೆ ೨೫ ವರ್ಷಕ್ಕೆ ಮಿಕ್ಕಿರಬಾರದು. ತಾವು ಯಾವ ಜಿಲ್ಲೆಯ

ಂಭದ ಕೆಲವು ತಿಂಗಳುಗಳ ವರೆಗೆ ಆಹಾರ, ನಿದ್ದೆ, ಮಲಮೂತ್ರ ವಿಸರ್ಜನೆ ುಂತಾದ ಶಾರೀರಿಕ ಕಾರ್ಯಗಳಿಗೆ ಮಾತ್ರ ಸಂಬಂಧಿಸಿರುವವು. ತಿರುತಿರುಗಿ ಪುಭವಿಸುವ, ಕಂಡು ಕೇಳುವ, ಸಂಗತಿಗಳನ್ನು ಗ್ರಹಿಸಿಕೊಳ್ಳುವದು ಮಗುವಿನ ಭಾವ ಅಥವಾ ಹುಟ್ಟುಗುಣವಾಗಿದೆ. ಈ ಬಗೆಯ ಸಂಗ್ರಹವೇ ಬರಬರುತ್ತ ಮಗುವಿನ ಚಟವಾಗಿ ಮಾರ್ಪಡುವದು. ಆದುದರಿಂದ ಮೇಲೆ ಹೇಳಿದ ಗುವಿನ ಆಹಾರ ನಿದ್ದೆ ಮುಂತಾದ ಶಾರೀರಿಕ ಕಾರ್ಯಗಳಲ್ಲಿ ಕೆಲವೊಂದು ಸುಮಿತಶನವನ್ನೂ ಕಾಲನಿಯಮವನ್ನೂ ಪ್ರಾರಂಭದಿಂದಲೇ ಅದರ ಪಾಲಕರು ಸ್ಥಾಪಿಸುವ್ಯಬಂದರೆ ಅದು ಆ ಮಗುವಿಗೆ ರೂಢಿಯಾಗಿ ಅದರ ಚಟವಾಗಿ ಪರಿಣಮಿಸಬಹುದು. ಮಗುವಿನ ಬಾಲ್ಯಾವಸ್ಥೆಯಲ್ಲಿ ಈ ಶಾರೀರಿಕ ಚಟಗಳನ್ನು ಸಿಯಿಸುವಾಗ ತಂದೆತಾಯಿಗಳು ಅಥವಾ ದಾಯಿಯರು ಬಹು ಎಚ್ಚರಿಕೆಯಿಂದ ದ್ದು ಅವು ವಿಶಿಷ್ಟ ವ್ಯಕ್ತಿವಿಷಯಕವೆಂದಾಗಲಿ ತಾವು ವಿಶಿಷ್ಟ ಮನೋವಿಕಾರ ಗೆ ಒಳಗಾಗಿರುವವೆಂದಾಗಲಿ ತೋರಿಸಿಕೊಳ್ಳಲಾಗದು. ಚಿಕ್ಕಮಗುವನ್ನು ತ್ತಿಕೊಂಡಾಗ ಸಿಟ್ಟಿಗೇಳುವದು ಒಳಿತಲ್ಲ. ಮತ್ತು ಅದನ್ನು ಆಡಿಸುತ್ತಿರುವಾಗ ಾವದೊಂದು ಕೆಲಸಕ್ಕೆ ಅಯೋಗ್ಯ ಮಹತ್ವಕೊಟ್ಟು ಆಡಿಗಡಿಗೆ ಅನವಶ್ಯಕವಾಗಿ ನೋವಿಕಾರಗಳಿಗೆ ಒಳಗಾಗಿ ನಾಚಿಕೆ ಭಯ ಮುಂತಾದ ಮನೋಭಾವನೆ ನ್ನು ವ್ಯಕ್ತಪಡಿಸುವದೂ ಹಿತಕರವಲ್ಲ.

ಮಗುವು ಬೆಳೆಯುತ್ತ ಹೋದಂತೆ ನೈತಿಕ, ಸಾಮಾಜಿಕ, ಬೌದ್ಧಿಕಚಟಗಳು ಳವಣಿಗೆ ಹೊಂದುವವು. ಈ ಚಟಗಳು ಬೆಳವಣಿಗೆ ಹೊಂದುವದಕ್ಕೆ ಮಗುವಿನ ಾನಸಿಕ ಸ್ಫೂರ್ತಿಯೂ ಚಟಗಳಿಗೆ ಸಂಬಂಧಿಸಿದ ಮನೋವಿಕಾರಗಳ ಪ್ರೇರ ಯೂ ಅವಶ್ಯಕವಾಗಿರುವವು. ಆಯಾ ಮನಃ ಪ್ರವೃತ್ತಿಗಳೇ ಬೆಳವಣಿಗೆ ಹೊಂದಿ ಟದ ರೂಪಕ್ಕೆ ಬರಬೇಕಾದದ್ದು ತೀರ ಅವಶ್ಯಕವಾಗಿದೆ; ಮಗುವಿನ ಮೂಲ ನಃ ಪ್ರವೃತ್ತಿಗೆ ವಿರುದ್ಧವಾಗಿ ಯಾವದೊಂದು ಸಂಗತಿಯ ಬಗ್ಗೆ ಕೇವಲ ಾತ್ಕಾರದಿಂದ ತಿರುತಿರುಗಿ ರೂಢಿ ಮಾಡಿಸುವದರಿಂದ ಅದು ಆ ಮಗುವಿನ ಟವೆನಿಸಿಕೊಳ್ಳಬಹುದಾದರೂ ಅದರಿಂದ ಆ ಮಗುವಿನ ಮನಃಶಕ್ತಿಯನ್ನು ಬಹ ಟ್ಟಿಗೆ ಕುಂದಿಸಿ ಅದರ ವ್ಯಕ್ತಿತ್ವವನ್ನು ಹತ್ತಿಕ್ಕಿದಂತಾಗುವದೆಂಬದನ್ನು ರೆಯಲಾಗದು.

ಪ್ರತಿ ಮಗುವಿಗೂ ಒಳ್ಳೆಯ ಚಟಗಳ ಆಸ್ತಿವಾರವನ್ನು ಹಾಕಿಕೊಟ್ಟು ನ್ನ ಮುಂದಿನ ಜೀವನಕ್ರಮವನ್ನು ಸುಯಂತ್ರಿತವಾಗಿ ಪ್ರಾರಂಭಿಸುವದಕ್ಕೆ ತಕ್ಕ ೋಗ್ಯತೆಯನ್ನು ತಂದುಕೊಡುವದೇ ಶಿಶುಶಾಲೆಗಳ ಧ್ಯೇಯವಾಗಿದೆ. ಶಿಶುಶಾಲೆ

ಗಳಲ್ಲಿ ದೊರಕಿಸಿದ ಚಟಗಳು ಆ ಮಗುವಿನ ಅಂತರ್ಮನದವರೆಗೂ ನಾಟಿ ಬೇ
ಬಿಟ್ಟು ಅದರ ಸ್ವಭಾವವಾಗಿಬಿಡುವವು. ಅವುಗಳ ವಿಷಯಕ್ಕೆ ಆ ಮಗು
ಏನೂ ವಿಚಾರಮಾಡಬೇಕಾಗುವದಿಲ್ಲ. ಆ ಮಗುವಿನಲ್ಲಿ ಶೋಧಕ ಬುದ್ಧಿ
ಜಾಗ್ರತವಾಗಿ ಹೆಚ್ಚಿನ ಉತ್ಸಾಹವು ಹೊರಹೊಮ್ಮುತ್ತಿರುವದು; ಅದು
ವ್ಯಕ್ತಿತ್ವವನ್ನು ಸರಿಯಾಗಿ ಬೆಳೆಯಿಸಿಕೊಂಡಿರುವರು.

(ಮುಂದೆಸಾಗುವದು

ಗಂಡುಮಕ್ಕಳ ವ್ಹ. ಘಾ. ಪರೀಕ್ಷೆ ೧೯೩೮

ಗಂಡುಮಕ್ಕಳ ವ್ಹ. ಘಾ. ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿ
ಸೆಂಟರುಗಳಲ್ಲಿ ಇನೆಯ ಏಪ್ರಿಲ ೧೯೩೮ ನೆಯ ದಿವಸ ಸೋಮವಾರ ಹಾಗು ಆ
ಮುಂದಿನ ದಿವಸಗಳಲ್ಲಿ ನಡೆಯುವದು.

ಡಿಸ್ಟ್ರಿಕ್ಟ		ಸೆಂಟರು	
೧	ಧಾರವಾಡ	೧	ಧಾರವಾಡ
		೨	ಗದಗ
		೩	ಹುಬ್ಬಳ್ಳಿ
೨	ಬೆಳಗಾವ	೪	ಬೆಳಗಾವ
		೫	ಚಿಕ್ಕೋಡಿ
		೬	ಗೋಕಾಕ
೩	ವಿಜಾಪುರ	೭	ವಿಜಾಪುರ
		೮	ಬಾಗಲಕೋಟ
೪	ಕಾರವಾರ	೯	ಕಾರವಾರ
೫	ಕೊಲ್ಲಾಪುರ ಸಂ.	೧೦	ಕೊಲ್ಲಾಪುರ

ಧಾರವಾಡ ಜಿಲ್ಲೆಯ ಗದಗ, ನವಲಗುಂದ, ರೋಣ ತಾಲೂಕುಗಳ ಮಕ
ಸಂಸ್ಥಾನಗಳಲ್ಲಿ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳ ಉಮೇದವಾರರು ಗದ
ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

ಧಾರವಾಡ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು (ಆಗ್ರಿಕಲ್ಚರ
ಬಾಯಸದ ಉಮೇದವಾರರು ಸಹ) ಧಾರವಾಡ ಸೆಂಟರಿನಲ್ಲಿಯೇ ಪರೀಕ್ಷೆ
ಕೂಡ್ರಬೇಕು.

ಮಕ್ಕಳ ಸದ್ಗೃಹಸ್ಥರೂ ಮನಮುಟ್ಟಿ ಸಹಾಯಮಾಡಿದ್ದರಿಂದ ಸಪ್ತಾಹಕ್ಕೆ ಒಳ್ಳೇ ಫಲವೇರಿತು. ಈ ಬಗೆಯ ಸಪ್ತಾಹಗಳು ಮೇಲಿಂದಮೇಲೆ ಜರುಗುವದರಿಂದ ಕ್ಷಣಕ್ಕೆ ತಕ್ಕ ಚಾಲನೆಯು ದೊರೆಯುವದು" ಸ್ತುತ್ಯವು.

೯. ಶಾಳಾ ಅಸನೋಟಿ ಜಿಲ್ಲಾ ಕಾರವಾರ ಈ ಶಾಲೆಯ ಹೆಡ್‌ಮಾಸ್ತರು ಬರೆದದ್ದು— "ಪ್ರತಿವರ್ಷದ ಸಾಂಪ್ರದಾಯದಂತೆ ಪುರುಷೋತ್ತಮ ಬಾಳಕೃಷ್ಣ ಸಾಳುಂಖೆ ಇವರು ತಮ್ಮ ಕೈ. ವಾ. ಶಂಕರನ ಸ್ಮರಣಾರ್ಥವಾಗಿ ೨೦-೧೨-೧೯೩೨ನೆಯ ದಿನ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಟಿ, ಪುಸ್ತಕ, ಟೊಪ್ಪಿಗೆ, ಅಂಗಿ, ಇ. ಗಳನ್ನು ಮೆ. ಅಡ್ಮಿನಿಸ್ಟ್ರೇಟರ ಆಫೀಸರರವರ ಮುಖದಿಂದ ಕೊಡಿಸಿದರು. ಇದು ಇವರ ತಂದೆಯವರ ಕಾಲದಿಂದಲೂ ನಡೆದು ಬಂದಿದೆ. ಅದನ್ನೇ ಇವರು ಮುಂದೆ ಸಾಗಿಸಿದ್ದು ಅವರಿಗೆ ಭೂಷಣಾಸ್ಪದವು"

೫. ಶಾಳಾ ಖಾನಾಪುರ ಜಿ. ಬೆಳಗಾವ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯ ಹೆಡ್‌ಮಾಸ್ತರರು ಬರೆದದ್ದು— "ನಮ್ಮಲ್ಲಿ ಶ್ರೀ. ಸರಸ್ವತೀದೇವಿಯ ಪೂಜಾರಂಭದ ಕಾಲಕ್ಕೆ ಈ ಊರ ಸದ್ಗೃಹಸ್ಥರು ಶಾಲಾ ವಿದ್ಯಾರ್ಥಿಗಳ ವ್ಯಾಯಾಮದ ಉಪಕರಣಕ್ಕಾಗಿ ೧೪ ರೂ. ವರ್ಗಣಿ ಕೊಟ್ಟರು" ಸ್ತುತ್ಯವು.

[redacted] ಸ್ಕಾಲರಶಿಪ್ ಪರೀಕ್ಷೆಯು

ಈ ಪರೀಕ್ಷೆಯು ತಾ ೪-೩-೧೯೩೩ ಕ್ಕೆ ಆರಂಭವಾಗುವದೆಂದು ಕಳೆದ ಭಾಗದ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸಿದ್ದೆವು. ಅದು ರಹಿತವಾಗಿ ತಾ ೨೨-೩-೧೯೩೩ ಕ್ಕೆ ಆರಂಭವಾಗುವದೆಂದು ತಿಳಿದಿದೆ. ವೇಳಾಪತ್ರಿಕೆಯು ಹಿಂದಿನಂತೆಯೇ ಇರುವದು.

ಪ್ರ ಕ ಟ ನೆ

ಕನ್ನಡ ಬುಕ್‌ಕಮೀಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಅ.ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂ.	ಮಂಜೂರ ನಂ. (ಇ. ಸಾ. ರ. ನಂ.)
೧	ಪ್ರಥಮ ಚಿಕಿತ್ಸೆ ೧ನೇ ಆ. ೧೯೩೭	ಪ್ರೊ. ಕೆ. ಜಿ. ಕುಂದಣಗಾರ ಎಮ್. ಎ. ರಾಜಾರಾಮ ಕಾಲೇಜ ಕೊಲ್ಲಾಪೂರ	ಮ .ಯಶವಂತ ನಾರಾಯಣ ಭಟ ಕೊಲ್ಲಾಪುರ	೦–೩–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು	47/P 8162 28–1–38
೨	ಕನ್ನಡ ಗುರುವ್ಯಾಕರಣ ತಿದ್ದಿ ಬೆಳೆಯಿಸಿದ ೨ನೆ ಆ. ೧೯೩೭	ಮ. ಸಿದ್ರಾಮಯ್ಯಾ ಸಂಗಯ್ಯಾ ಹಿರೇಮಠ ಶಿಸುವಿನ ಹಳ್ಳಿ P. ಹೆಬಸೂರ	ಗ್ರಂಥಕರ್ತ	೧–೫–೦	ಪ್ರಾ. ಶಾ. ಗಳ ಶಿ. ರ. ಸದರ L ಬುಕ್ಕು	8160 ಸದರ
೩	ಭಾರತೀಯ ಶಾಸನ ಪದ್ಧತಿ ಅಥವಾ ಈಗಿನ ರಾಜ್ಯವ್ಯವಸ್ಥೆ ೧೯೩೭	ವಕೀ. ಸಿ. ಎಸ್. ಕುಲಕರ್ಣಿ ಟೀಚರ ಕೆ. ಇ. ಬೋರ್ಡ್ಸ ಎ ವಿಹಿ. ಸ್ಕೂಲು ಮೂಳಗುಂದ	ಮ. ಕೆ. ಎಸ್. ಕುಲಕರ್ಣಿ ನಾಗಶೆಟ್ಟಿಕೊಪ್ಪ ಹುಬ್ಬಳ್ಳಿ	೦–೫–೬	ಪ್ರಾ. ಶಾ. ಗಳ ಶಿ. ರ. ಸದರ L ಬುಕ್ಕು	8164 ಸದರ

ಪುಟ ೧೫೫

ರೀಕ್ಷೆಗೆ ಕೂಡ್ರಲಿಚ್ಚಿಸುವರೋ ಆ ಜಿಲ್ಲೆಯಲ್ಲಿ ಅವರು ಅದಕ್ಕೂ ಹಿಂದೆ
ತಿಂಗಳು ವಾಸವಾಗಿರಬೇಕು. ಆ ಪ್ರಕಾರ ವಾಸವಾಗಿದ್ದ ಬಗ್ಗೆ ಯಾವ
ೂಂದು ರಿಜಿಸ್ಟರ್ಡ್ ಶಾಲೆಯ ಮಾಸ್ತರರ ಸರ್ಟಿಫಿಕೇಟ ಹಾಜರಪಡಿಸ
ಕು. ಎಂದೂ ಶಾಲೆಗೆ ಹೋಗದಿದ್ದ ಉಮೇದವಾರರು ಈ ಬಗ್ಗೆ ಸರಕಾರ
ಂದ ಮಾನ್ಯವಾದ ಶಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆದರ್ಜೆ
ುಲ್ಲದ ಸನ್ಮಾನ್ಯ ಗೃಹಸ್ಥನ ಸರ್ಟಿಫಿಕೇಟನ್ನು ಹಾಜರಮಾಡಬೇಕು.

೬. ಧಾರವಾಡ, ಕಾರವಾರ ಜಿಲ್ಲೆಯ ದೇಶಭಾಷೆಯು ಕನ್ನಡವೆಂದೂ
ಜಾಪುರ, ಬೆಳಗಾವ ಜಿಲ್ಲೆಗಳ ದೇಶಭಾಷೆಗಳು ಕನ್ನಡ ಹಾಗು ಮರಾಠಿ ಎಂದೂ
ೊಲ್ಹಾಪುರ ಸಂಸ್ಥಾನದ ದೇಶಭಾಷೆಯು ಮರಾಠಿ ಎಂದೂ ಎಣಿಸಲ್ಪಟ್ಟಿದೆ.
ಾರವಾಡ ಹಾಗು ಕಾರವಾರ ಜಿಲ್ಲೆಗಳಿಂದ ಮರಾಠೀ ಭಾಷೆಯಲ್ಲಿ ಪರೀಕ್ಷೆಗೆ
ೂಡುವ ಉಮೇದವಾರರು ಬೆಳಗಾವಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು.

೭. ಈ ಪರೀಕ್ಷೆಗೆ ನೇಮಿಸಿದ ಪುಸ್ತಕಗಳು ಮುಂಬಯಿ ಸರಕಾರದ
ನೆ ಸಪ್ಟಂಬರ ೧೯೩೬ನೆಯ ಇಸವಿಯ ಗ್ಯಾಝೆಟಿನ ೩ನೆಯ ಭಾಗದ ೫೩೦
ಯ ಪುಟದಲ್ಲಿ ಈ ಮೊದಲೇ ಪ್ರಸಿದ್ಧವಾಗಿವೆ.

ಈ ಪರೀಕ್ಷೆಗೆ ಬೇಕಾದ ಮಿಕ್ಕ ಎಲ್ಲ ವಿಷಯಗಳು ಅಂದರೆ ಪರೀಕ್ಷೆಯ
ಭ್ಯಾಸಕ್ರಮ ಮುಂತಾದವುಗಳು ಮೇಲೆ ಬರೆದ ಗ್ಯಾಝೆಟಿನ ಪುಟದ ೩ನೆಯ
ಾಲಮಿನಲ್ಲಿ ಪ್ರಕಟವಾಗಿವೆ.

ಶೇತಕೀ ವಿಷಯವನ್ನು ಆರಿಸಿಕೊಂಡ ಉಮೇದವಾರರ (ಅಗ್ರಿಕಲ್ಚರಲ್
ಾಯಸ್) ವ್ಹ. ಫಾ. ಪರೀಕ್ಷೆಯೂ ಸಹ ಇವೇ ತಾರೀಖುಗಳ ದಿವಸ
ಾರವಾಡ, ಬೆಳಗಾವ, ವಿಜಾಪುರ, ಕಾರವಾರ ಈ ಸೆಂಟರುಗಳಲ್ಲಿ ಮಾತ್ರ
ೆಯುವದು. ಈ ಪರೀಕ್ಷೆಯು ಎಜ್ಯುಕೇಶನಲ್ ಡಿಪಾರ್ಟಮೆಂಟಿನ ಸರಕಾರೀ
ಾವಿನ ನಂ. $\frac{೧೦೧೯}{೬-೨-೧೯೩೫}$ ಹಾಗು ೯-೬-೧೯೩೮ ರ ಮೇರೆಗೆ ಪ್ರಸಿದ್ಧವಾದ
ಪ್ರಕಾರ ನಡೆಯುವದು. ಈ ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು
ರೀಕ್ಷೆಯ ಪರವಾನಿಗೆಯ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರಲ್ ಬಾಯಿಸ್
ಭ್ಯಾಸದ ಮೂರು ವರ್ಷದ ಅಭ್ಯಾಸಕ್ರಮವನ್ನು ಮುಗಿಸಿರುವ ಬಗ್ಗೆ ಸರ್ಟಿ
ಕೇಟನ್ನು ಕಳಿಸಬೇಕು.

ಎಜ್ಯುಕೇಶನಲ್ ಇನಸ್ಪೆಕ್ಟರ
ವ. ಫಾ. ಇವರ ಆಫೀಸ
ಧಾರವಾಡ ೨೮-೧೨-೩೭

ಸೈಯ್ಯದ ನೂರುಲ್ಲಾ

ಎಜ್ಯುಕೇಶನಲ್ ಇನಸ್ಪೆಕ್ಟರ ದ. ಫಾ.

ಪತ್ರಗಳ ಸಾರಾಂಶ

೧. ಶಾಳಾ ಕದರಮಂಡಲಗಿ ತಾಲೂಕ ರಾಣೇಬೆನ್ನೂರ ಇಲ್ಲಿಯ ಉ
ಮಾ. ಶ್ರೀ. ವೆಂ. ದೇ. ಕುಲಕರ್ಣಿ ಇವರು ಬರೆದದ್ದು—"ಈ ಶಾಲೆಯಲ್ಲಿ ೧-೧೨-೩
ನೆಯ ಇಸ್ವಿ ದಿವಸ ವೇ. ಸ್ವಾವಿೂ ವೀರಪ್ಪಯ್ಯಾ ಹಿರೇಮಠ ಇವರ ಅಧ್ಯಕ್ಷತೆಯ
ಕೆಳಗೆ ವಾರ್ಷಿಕ ಪರೀಕ್ಷೆಯ ಇನಾಮಿನ ಸಮಾರಂಭವು ಜರುಗಿತು. ಆ
ವಿ. ಲಿಂಗಪ್ಪ ಸಾಳಿ ಇವರು ತಮ್ಮ ಸ್ವಂತ ಖರ್ಚಿನಿಂದ ೭-೮ ರೂ. ಬೆಲೆಬಾಳು
ಪಾಟಿ, ಪುಸ್ತಕ, ಟೊಪ್ಪಿಗೆ, ಕನ್ನಡಿ, ಹಣಿಗೆ ಇ. ಗಳನ್ನು ವಿದ್ಯಾರ್ಥಿಗಳಿ
ಪಾರಿತೋಷಿಕ ರೂಪದಿಂದ ಕೊಟ್ಟರು. ಈಗ ಇಲ್ಲಿಯ ಮುಖ್ಯ ಶಿಕ್ಷಕರಾ
ವಿ. ತುಪ್ಪದ ಹಾಗು ಅವರ ಅಸಿ। ರ ಪ್ರಯತ್ನದಿಂದ ಶಾಲಾ ಸುಧಾರಣೆಯ
ಚೆನ್ನಾಗಿದ್ದು ಒಟ್ಟು ವಿ. ಗಳ ೪೫ ವಿ. ಗಳು ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗ
ಹೊಂದಿದ್ದಾರೆ ಇತ್ಯಾದಿ, ಸ್ತುತ್ಯವು.

೨. ಹುಬ್ಬಳ್ಳಿ ಉರ್ದುಸ್ಕೂಲಿನ ಮಾಸ್ತರರು ವಿ. ಎಮ್. ಎಮ್
ಲಗದಖ ಇವರು ಬರೆದದ್ದು— "ತಾ. ೨೩-೧೨-೩೬ ನೆಯ ಇಸವಿಯ ದಿವ
ಉರ್ದುಶಾಲೆಯ ಹೆ. ಮಾ. ವಿ. ಕಿರೇಸೂರ ಇವರನ್ನು ಹುಬ್ಬಳ್ಳಿಯ ಪ್ರಾ. ಶ
ಗಳ ಮೇಲೆ ಸುಪರವಾಯಿಝರರನ್ನಾಗಿ ನೇಮಿಸಿದ್ದಕ್ಕಾಗಿ ಸ್ಕೂಲಬೋರ್ಡ
ಜೆಅರಮನ್ನ ಸಾ. ರವರ ಅಧ್ಯಕ್ಷತೆಯ ಕೆಳಗೆ ಸನ್ಮಾನ ಸಮಾರಂಭವನ್ನ
ನೆರವೇರಿಸಿದರು." ಸ್ತುತ್ಯವು.

೩. ಗುಡಗೇರಿ ತಾಲೂಕಿನ ಶಿಕ್ಷಣ ಸಪ್ತಾಹ— ವಿ. ಚಿ. ಶ್ರೀ
ಕುಲಕರ್ಣಿ ಇವರು ಬರೆದದ್ದು— "ತಾ. ೧೭, ೧೮ ದಿಶಂಬರ ೧೯೩೬ ನೆ
ಇಸವಿಯ ದಿವಸ ಮೆ॥ ದೇಶಪಾಂಡೆ ಸಾ॥ ರವರ ಅಧ್ಯಕ್ಷತೆಯ ಕೆಳಗೆ ಈ ಸಪ್ತ
ಹವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ಮೂದರಿ ಪಾಠಗಳು ಚೆನ್ನಾಗಿ ಜರು
ದವು. ಶ್ರೀ. ತ. ನಾ. ಅಮ್ಮಿನಭಾವಿಯವರೂ ಶ್ರೀ. ಚಿ. ಶ್ರೀ. ಕುಲಕರ್ಣಿ
ಯವರೂ ಶ್ರೀ. ಕಟ್ಟಿಮನಿ ಮಾಸ್ತರರೂ ಉತ್ತಮವಾಗಿ ಪರಿಣಾಮಕರವಾ
ವಂತೆ ಮೂದರಿ ಪಾಠಗಳನ್ನು ಕಲಿಸಿ ತೋರಿಸಿದರು. ಈ ಸಪ್ತಾಹ ಕಾರ್ಯಾ
ಢಾ. ಪಾಟೀಲರು, ಹೆ. ಮಾ. ಶ್ರೀ. ಎಸ್. ಕೆ. ಕುಲಕರ್ಣಿಯವ

ಶ್ರೀಯುತ ಚಿದಂಬರ ಶ್ರೀಪಾದರಾವ ಕುಲಕರ್ಣಿ
ಇವರು ಬರೆದ ಗ್ರಂಥಗಳು

೧. **ಗಣಿತಸಂಗ್ರಹ—** (ಸುಧಾರಿಸಿದ ೨ನೆಯ ಆವೃತ್ತಿ) ಈ ಪುಸ್ತಕದ ಉಪಯೋಗದಿಂದ ಪರೀಕ್ಷೆಯಲ್ಲಿ ನಿಶ್ಚಯವಾಗಿ ಪಾಸಾಗುವರೆಂದು ಪರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಏಳನೆಯ ವರ್ಗಕ್ಕೆ ಇಂಥ ಸ್ವತಂತ್ರವಾದ ಗ್ರಂಥ ಇರೊಂದಿಲ್ಲ. **ಬೆಲೆ ೧೦ ಆಣೆ.**

೨. **ಹೊಸ ಮಾದರಿಯ ಅಂಕಗಣಿತ ಸಂಗ್ರಹ ೧ನೇ ಭಾಗ—** **ಬೆಲೆ ೫ ಆಣೆ.**

೩. **ಭೂಮಿತಿ—** ತೀರ ಹೊಸಮಾದರಿಯದು. **ಬೆಲೆ ೭ ಆಣೆ.**

೪. **ಇತಿಹಾಸ ಪ್ರಶ್ನೋತ್ತರ ಮಾಲೆ—** ಮಹತ್ವದ ಆರಿಸಿದ ಪ್ರಶ್ನೋತ್ತರಗಳನ್ನು ಓದಿ ಪಾಸಾಗಿರಿ. **ಬೆಲೆ ೪ ಆಣೆ.**

೫. **ಭಾರತೀಯ ಶಾಸನಪದ್ಧತಿ** ಅಥವಾ **ಹಿಂದುಸ್ತಾನದ ಈಗಿನ** ರಾಜ್ಯವ್ಯವಸ್ಥೆ— ಹೊಸದು. ೧೯೩೫ರಲ್ಲಿ ಆದ ಸುಧಾರಣೆಗಳನ್ನು ಒಳಗೊಂಡಿದೆ. **ಬೆಲೆ ೨ ಆ. ೬ ಪೈ.**

೬. **ಏಳನೆಯ ಪುಸ್ತಕದ ಗದ್ಯಪಾಠಗಳ ಸ್ಪಷ್ಟೀಕರಣ—** ಎಲ್ಲ ಮಹತ್ವದ ವಾಕ್ಯಗಳನ್ನು ಸ್ಪಷ್ಟೀಕರಿಸಿ ತೋರಿಸಿದೆ. **ಬೆಲೆ ೧ ಆ. ೬ ಪೈ.**

೭. **ವಾಕ್ಯರಚನೆಯೂ, ಮಾದರಿಯ ನಿಬಂಧ ಬರೆಹವೂ—** ಇದರಲ್ಲಿ ಕತೆಬರೆಹ, ವಿಸ್ತರಿಸಿ ಬರೆಹ, ಸಾರಾಂಶ ಬರೆಹ, ಪತ್ರಬರೆಹ, ಅರ್ಜಿ, ನೋಟ್ಸು, ಸಂಭಾಷಣ, ಜೀವನವೃತ್ತಾಂತ, ನೋಡಿದ ಸಂಗತಿಗಳ ವರ್ಣನೆ, ಚಿತ್ರ ಬರೆಹ, ವಿಚಾರ ಪ್ರಭೋಧಕ ನಿಬಂಧ ಮುಂತಾದ ವಿಷಯಗಳೂ ಅವಶ್ಯವಾದ ಉದಾಹರಣೆಗಳೂ ಇರುತ್ತವೆ.

ಬೆಲೆ ೬ ಆಣೆ.

೮. **ಏಳನೆಯ ಪುಸ್ತಕದ ಪದ್ಯಪಾಠಗಳ ಸ್ಪಷ್ಟೀಕರಣ—**(ಅಚ್ಚಿನಲ್ಲಿದೆ) ಪದ್ಯಪಾಠಗಳಲ್ಲಿಯ ಆಡಿಸಿದ ವಾಕ್ಯಗಳು ಸ್ಪಷ್ಟೀಕರಿಸಲ್ಪಟ್ಟಿವೆ.

ಸಿಗುವ ಸ್ಥಳ—

ಕೆ. ಎಸ್. ಕುಲಕರ್ಣಿ

ಹುಬ್ಬಳ್ಳಿ.

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್)
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗ ಬಗ್ಗೆ ಪಠ್ಯಪುಸ್ತಕವಾ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟ
ತನ ಅಡಕವಾಗಿವೆ. ಬೇಕಾದವರು ಕೆಗಿನ ಪತ್ತಿಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ
ಶಿರ್ಸಿ, ಉ. ಕಾನಡಾ

ಶ್ರೀ|| ಕಟ್ಟಿಮನೆಕೃತ

ಕನ್ನಡ ಬಾಲಬೋಧೆ ಮತ್ತು ಕನ್ನಡ ಶಿಶುಬೋಧೆ

ಈ ಬಾಲಕ ಪಠ್ಯಪುಸ್ತಕಗಳು

ಸರಕಾರದಿಂದ ಮಂಜೂರಾಗಿವೆ. ತಕ್ಷಣ ಬೇಕಾದಲ್ಲಿ ಗ್ರಾಹಕರು ಕೆಳಗಿ
ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು. ರೋಖ ವ್ಯವಹಾರ. ಸಾಕಷ್ಟು ಕಮಿಶನ

ಕನ್ನಡ ಬಾಲಬೋಧೆ— ತಜ್ಞರು ಇದನ್ನು ಹಾಡಿ ಹೊಗಳಿದ್ದಾರೆ—
ಬೆಲೆ:— ೭ ಬಿ

ಕನ್ನಡಶಿಶುಬೋಧೆ (೨ನೇ. ಆ.)— ಗುಂಪಿನ ಪದ್ಧತಿಯಿಂದ ಬರೆ
ಅತ್ಯುತ್ತಮ ಪುಸ್ತಕ. **ಬೆಲೆ:**—೫ ಬಿಲ್ಲಿ ಹಾಗೂ ೧ ಆ

ಮ್ಯಾನೇಜರ,
ಹೋಂಟೆದಾರ್ಯ ಮುದ್ರಣಾಲಯ, ಭಾರವಾ

ಬ್ರುವರಿ ೧೯೩೫ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಸ್ಫುಟವಿಚಾರ	೧
೨.	ಅಂಕಗಣಿತ ಶಿಕ್ಷಣದ ಮುಖ್ಯ ತತ್ವಗಳು	೫
೩.	ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತು ಪಡಿಸುವ ರೀತಿ	೯
೪.	ಹಿಂದೀಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳೂ ಸಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ	೧೭
೫.	ಶಿಶುಶಾಲೆಗಳು	೨೩
೬.	೧೯೩೫ ನೆಯ ಇಸ್ವಿಯ ಗಂ. ಮಕ್ಕಳ ವ್ಹ. ಘಾ. ಪರೀಕ್ಷೆ	೨೬
೭.	ಪತ್ರಗಳ ಸಾರಾಂಶ	೩೦
೮.	ಪ್ರಕಟನೆ	೩೨

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training School, Dharwar at his Office.

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್), ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬ, ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗ ಬಗ್ಗೆ ಪಠ್ಯಪುಸ್ತಕವಾಗಿ ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ತನ ಅಡಕವಾಗಿವೆ. ಬೇಕಾದವರು ಕೆಗಿನ ಪತ್ತಿಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ
ಶಿರ್ಸಿ, ಉ. ಕಾನಡಾ

ಶ್ರೀ|| ಕಟ್ಟಿಮನೆಕೃತ

ಕನ್ನಡ ಬಾಲಬೋಧೆ ಮತ್ತು ಕನ್ನಡ ಶಿಶುಬೋಧೆ

ಈ ಬಾಲಕ ಪಠ್ಯಪುಸ್ತಕಗಳು

ಸರಕಾರದಿಂದ ಮಂಜೂರಾಗಿವೆ. ತಕ್ಷಣ ಬೇಕಾದಲ್ಲಿ ಗ್ರಾಹಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು. ರೋಖ ವ್ಯವಹಾರ. ಸಾಕಷ್ಟು ಕಮಿಶನ್.

ಕನ್ನಡ ಬಾಲಬೋಧೆ— ತಜ್ಞರು ಇದನ್ನು ಹಾಡಿ ಹೊಗಳಿದ್ದಾರೆ—
ಬೆಲೆ:— ೭ ಬಿಲ್ಲಿ.

ಕನ್ನಡಶಿಶುಬೋಧೆ (೨ನೇ. ಆ.)— ಗುಂಪಿನ ಪದ್ಧತಿಯಿಂದ ಬರೆದ ಅತ್ಯುತ್ತಮ ಪುಸ್ತಕ. **ಬೆಲೆ:—೫ ಬಿಲ್ಲಿ ಹಾಗೂ ೦ ಆಣೆ.**

ಮ್ಯಾನೇಜರ,
ತೋಂಟದಾರ್ಯ ಮುದ್ರಣಾಲಯ, ಧಾರವಾಡ.

ಫೆಬ್ರುವರಿ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾನೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಸ್ಫುಟವಿಚಾರ	೧
೨.	ಅಂಕಗಣಿತ ಶಿಕ್ಷಣದ ಮುಖ್ಯ ತತ್ವಗಳು	೫
೩.	ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತು ಪಡಿಸುವ ರೀತಿ	೯
೪.	ಹಿಂದೀಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳೂ ಸಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ	೧೭
೫.	ಶಿಶುಶಾಲೆಗಳು	೨೩
೬.	೧೯೩೭ ನೆಯ ಇಸ್ವಿಯ ಗಂ. ಮಕ್ಕಳ ವ್ಹ. ಫಾ. ಪರೀಕ್ಷೆ	೨೬
೭.	ಪತ್ರಗಳ ಸಾರಾಂಶ	೪೦
೮.	ಪ್ರಕಟನೆ	೪೨

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training School, Dharwar at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರಹ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ, ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಿಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ೩ನೇ ,,	೦– ೫–೦
,, ,, ೪ನೇ ,,	೦– ೮–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–೦
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦– ೬–೦
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦– ೭–೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ತಾನ ಭೂಗೋಲು (ಮಗದಾಲಕೃತ)	೦– ೮–೦
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧– ೦–೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೫–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೭–೦
ಸರಸ್ವತೀ ವಿಜಯ (ಬೂದೀಹಾಳಕೃತ)	೮– ೪–೦

ಪತ್ರ:—ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರೆಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬	ಫೇಬ್ರುವರಿ ೧೯೩೮	ವರ್ಷ ೯ ಸಂ. ೧೧.

ಸ್ಫುಟವಿಚಾರ

ಹಿಂದುಳಿದ ಬಾಲಕರು

ಪ್ರತಿಯೊಂದು ಸಾಲೆಯಲ್ಲಿ ಪ್ರತಿಯೊಂದು ವರ್ಗದಲ್ಲಿ ಹಿಂದುಳಿದ ಬಾಲಕರ ಗುಂಪೊಂದು ಶಿಕ್ಷಕನ ಕಾಲುತೊಡಕಾಗಿ ನಿಲ್ಲುವದು. ಈ ಸಮಸ್ಯವನ್ನು ಬಿಡಿಸಲು ನಮ್ಮ ನಾಡಿನಲ್ಲಿ ಸಾಕಷ್ಟು ಪ್ರಯತ್ನಗಳು ಇದುವರೆಗೆ ಸಮರ್ಪಕವಾಗಿ ಮಾಡಿದಿಲ್ಲ. ಇದೊಂದು ಶಿಕ್ಷಣ ಪ್ರಪಂಚದಲ್ಲಿನ ದೊಡ್ಡ ಕೊರತೆಯು. ಹಿಂದುಳಿದ ಬಾಲಕರಲ್ಲಿ ಕೆಲವರು ಕಳವು-ತುಡುಗು ಮೊದಲಾದ ಅಪರಾಧಗಳನ್ನು ಮಾಡುವ ಬಗ್ಗೆ ಇತ್ತೀಚೆಗೆ ಶೋಧವಾಗಿದೆ. ಈ ಕೊರತೆಯೇ ಅಂಥ ಅಪರಾಧ ಮಾಡುವ ಸ್ವಭಾವಕ್ಕೆ ಕಾರಣವೆಂದು ಹೇಳುವರು. ಆದಕಾರಣ ಇಂಥ ಬಾಲಕರ ಸಂಖ್ಯೆಯು ಬೆಳೆಯದಂತೆ ಮಾಡುವದು ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವಾಗಿರುವದು.

ಇವರಲ್ಲಿ ಕೆಲವರು ಬುದ್ಧಿಯಿಂದ ಊನರೂ ಹೀನರೂ ಇರಬಹುದು. ಕೆಲವರು ವಿಷಯಜ್ಞಾನದೃಷ್ಟಿಯಿಂದ ಕೊರತೆಯುಳ್ಳವರಿರಬಹುದು. ಬುದ್ಧಿ ಹೀನತೆಯು ಹುಟ್ಟಿನಿಂದ ಬಂದಿರುವದು. ವಿಷಯಜ್ಞಾನನ್ಯೂನತೆಯು ಪರಿಸ್ಥಿತಿಯ ಪರಿಣಾಮದಿಂದ ಉಂಟಾದದ್ದಾಗಿರುವದು. ಈ ಸಂಗತಿಯಲ್ಲಿ ಪ್ರಯತ್ನ ಮಾಡಿದರೆ ಈ ಸ್ಥೂಲತೆಯನ್ನು ನಾಶಮಾಡಲು ಸಾಧ್ಯವಾದ ಮಾತು. ಬುದ್ಧಿಯಿಂದ

ಊನರಾದ ಬಾಲಕರ ವಿಷಯವಾಗಿ ಪಾಶ್ಚಾತ್ಯದೇಶಗಳಲ್ಲಿ ಬೇರೆಬೇರೆ ಸಾಲಿಗಳನ್ನು ಹಾಕಿ ಅಲ್ಲಿ ಅವರು ಸುಧಾರಣೆ ಹೊಂದುವ ಹಾಗೆ ಮಾಡುತ್ತಿರುವರು. ಇನ್ನು ಈ ನ್ಯೂನತೆಯ ಕಾರಣಗಳನ್ನು ಕುರಿತು ವಿಚಾರಿಸುವಾ– ಇಂದ್ರಿಯ ಸನ್ನಿಕರ್ಷದಿಂದ ಸಂವೇದನವಾಗುವದು; ಈ ಸಂವೇದನವೇ ಅವರಲ್ಲಿ ಸಾಮಾನ್ಯವಾಗಿ ಬಾಲಕರಲ್ಲಿ ಆಗುವಷ್ಟು ಕ್ಷಿಪ್ರದಿಂದಲೂ ಸ್ಪಷ್ಟತೆಯಿಂದಲೂ ಆಗುತ್ತಿರುವದಿಲ್ಲ. ಶ್ರವಣೇಂದ್ರಿಯ– ದರ್ಶನೇಂದ್ರಿಯಗಳು ಆ ಬಾಲಕರಲ್ಲಿ ಅಷ್ಟು ಪಟುತರವಾಗಿರವದಿಲ್ಲ; ಆದ್ದರಿಂದ ಸಂವೇದನವು ಸರಿಯಾಗುವದಿಲ್ಲ. ಇದೇಕಾರಣ ಮೂಲ ವಿಷಯಜ್ಞಾನ ಮಾಡಿಕೊಳ್ಳುವಾಗ ಪೃಥಕ್ಕರಣ ಏಕೀಕರಣ ವ್ಯಾಪಾರಗಳು ಬಾಲಕರಲ್ಲಿ ಉಂಟಾಗುವಂತೆ ಇವರಲ್ಲಿ ಸಾಗುವದಿಲ್ಲ. ಅವರ ಅವಧಾನವಾದರೂ ಒಂದು ವಿಷಯವನ್ನು ಕುರಿತು ದೃಢವಾಗಿರದೆ ಅಸ್ಥಿರವಾಗಿರುವ ಕಾರಣ ಸ್ಮರಣೆಯಲ್ಲಿಯ ಪ್ರತ್ಯಾನಯನ ಕ್ರಿಯೆಯು ಕುಂಠಿತವಾಗುವದು. ಈ ಬಾಲಕರ ಭಾವನೆ– ಪ್ರೇರಣೆಗಳ ವಿಷಯವಾಗಿಯೂ ಇದೇ ರೀತಿಯಾಗಿ ಹೇಳುವರು. ಅವರ ಭಾವನಾ ವ್ಯಾಪಾರಗಳಲ್ಲಿ ಸ್ಪಷ್ಟತೆಯೂ ಸಮಾನತೆಯೂ ಇರುವದಿಲ್ಲ. ಆದಕಾರಣ ಅವರಲ್ಲಿ ನಿರ್ಣಯಬಲವು ಕುಂದುಳ್ಳದ್ದಾಗುವದು.

ಈ ಮಾನಸಿಕ ದೌರ್ಬಲ್ಯಗಳ ಪರಿಣಾಮದಿಂದ ಆ ಬಾಲಕರು ಜಡಬುದ್ಧಿಯವರಾಗುವರು; ವ್ಯವಹಾರದಲ್ಲಿ ಅಯಶಸ್ವಿಗಳಾಗುವರು. ಅವರಿಗಾದರೂ ಮನಸ್ಸಿನ ಶಾಂತತೆ ಸಮಾಧಾನಗಳು ಬೇಕೇಬೇಕು. ಆದಕಾರಣ ಅವರು ಇತರ ಬಾಲಕರನ್ನು ಬಿಟ್ಟುಕೊಟ್ಟು ಬೇರೆ ವ್ಯಾಪಾರಗಳಲ್ಲಿ ಈ ಸಮಾಧಾನವನ್ನು ಹುಡುಕಿಕೊಳ್ಳುವರು. ಶಿಕ್ಷಕರು ಈ ಬಾಲಕರು ಮಂದಬುದ್ಧಿಯವರು, ಜಡಮತಿಗಳೆಂದು ಮುದ್ರಿಕೆ ಹಾಕುವರು. ಆದನ್ನೇ ತಾಯ್ತಂದೆಗಳು ನುಡಿಯುವರು ಓರಗೆಯವರು ಅದೇ ದನಿಯನ್ನು (ಮುಂದೆ) ಎಳೆಯುವರು. ಅವರ ಸಾಲಿಗೆ ಮಂದಬುದ್ಧಿಯಲ್ಲದೆ ಈ ರೀತಿ ಹೀಯಾಳಿಸಿಕೊಳ್ಳುವ ಕಷ್ಟವೊಂದು ಬರುವದು.

ಇಂಥ ಕುಂದುಕೊರತೆಗಳುಂಟಾಗಲು ದಾರಿದ್ರ್ಯವೊಂದು ಕಾರಣವೆಂದು ಕೆಲವರು ತಿಳಿದಿರುವರು. ದಾರಿದ್ರ್ಯಮೂಲಕ ಶಾರೀರಿಕ ಪರಿಪೋಷಣವಾಗದೆ ದೌರ್ಬಲ್ಯ ಬರಬಹುದು; ಸಾಂಸ್ಕೃತಿಕ ಪ್ರೇರಣೆಗೆ ಹಾನಿಯಾಗಬಹುದು ಆದರೆ ದಾರಿದ್ರ್ಯವೇ ಸಕಲ ದೌರ್ಬಲ್ಯಗಳ ಮೂಲಕಾರಣವೆಂದು ಹೇಳುವದು ತೀರತಪ್ಪೆಂದು ಬರ್ಟನೆಂಬ ಮಾನಸಶಾಸ್ತ್ರಜ್ಞನು ಪ್ರತಿಪಾದಿಸಿರುವನು. ನಿತ್ಯ ಆಹಾರಪದಾರ್ಥ ಇವುಗಳ ಪೂರೈಕೆಯೂ ಸಾಕಷ್ಟು ಇಲ್ಲದಿದ್ದರೆ ಶಾರೀರಬಲವು ಕುಗ್ಗುವದು. ಎಷ್ಟೋ ಗೃಹಗಳ ವಾತಾವರಣದ ಪರಿಣಾಮದಿಂದ ದುಷ್ಟ

ಪ್ರೇರಣೆಗಳು ಪ್ರಚೋದನಗೊಳ್ಳುವದರಿಂದ ಬುದ್ಧಿಯೂ ಮನಸ್ಸೂ ಸಮತೂಕವಾಗಿ ಉಳಿಯಲಾರವು. ಒಟ್ಟಿಗೆ ದೃಷ್ಟಿದೋಷ, ಕರ್ಣಮಾಂದ್ಯ, ನಾಸಿಕಾಬಾಧೆ, ರೋಗಪೀಡಿತ ದಂತಪೀಡೆ ಮೊದಲಾದ ಶಾರೀರಿಕ ರೋಗಗಳ ಮೂಲಕ ಶಾರೀರಿಕ ಮಾನಸಿಕ ದೌರ್ಬಲ್ಯಗಳುಂಟಾಗುವವೆಂದು ವೈದ್ಯಶಾಸ್ತ್ರವು ಸಾರುತ್ತದೆ.

ಅನುವಂಶಿಕತೆ ಹಾಗು ಪರಿಸ್ಥಿತಿ ಇವುಗಳ ಪರಸ್ಪರ ಪರಿಣಾಮದಿಂದ ಬುದ್ಧಿಮಾಂದ್ಯವಾಗುವದು ; ವಿಷಯಜ್ಞಾನ ಮಾಡಿಕೊಳ್ಳಲು ಚಟುವಟಿಕೆಯಿರುವದಿಲ್ಲ. ಕಾರ್ಯಪ್ರವೃತ್ತಿಯಲ್ಲಿಯೂ ಜಾಡ್ಯವು ಬರುವದು. ವಾಚಾ-ವಿನೀನತೆಯೂ ಬುದ್ಧಿಮಾಂದ್ಯದ ಪ್ರಬಲವಾದ ಕಾರಣವು. ಸರಿಯಾಗಿ ಮಾತಾಡಲು ಬಾರದ ಮಕ್ಕಳ ಬುದ್ಧಿಯು ಮಂದವಾಗಿರುವದೆನ್ನುವ ರೂಢಿಯುಂಟು.

ಮೇಲೆ ವಿವರಿಸಿದ ದೌರ್ಬಲ್ಯಗಳ ಮೂಲಕ ವಿಷಯಜ್ಞಾನ ಗ್ರಹಣ-ಧಾರಣ- ಪ್ರತ್ಯಾನಯನ ವ್ಯಾಪಾರಗಳಲ್ಲಿ ಕೊರತೆಯಾಗುವದು. ಮಾನಸಿಕ ಸ್ಥಿತಿಯೂ ಈ ಕೊರತೆಗೆ ಕಾರಣವಾಗುವದುಂಟು. ಒಮ್ಮೊಮ್ಮೆ ಬಾಲಕರು ಬಹಳ್ಳೀ ದಿವಸಗಳ ವರೆಗೆ ಸಾಲೆಗೆ ಬರುವದಿಲ್ಲ. ಸಾಲೆಯ ವ್ಯವಸ್ಥೆಯಲ್ಲಿಯೇ ಅಪಾರ್ಜಾಟಗಳಾಗುವವು. ಶಿಕ್ಷಕರು ವರ್ಗವಾಗಿ ಹೋಗುವರು. ಶಿಕ್ಷಣ ಕ್ರಮ- ಪದ್ಧತಿಗಳಲ್ಲಿ ವ್ಯತ್ಯಾಸಗಳಾಗುವವು. ಎಷ್ಟೋ ಮನೆಗಳಲ್ಲಿ ಯೋಗ್ಯವಾದ ವಾತಾವರಣವಿರುವದಿಲ್ಲ. ತಾಯಿತಂದೆಗಳು ಶಿಕ್ಷಕರ ಕೂಡ ಸಹಕಾರ ಮಾಡುವದಿಲ್ಲ. ಇವೆಲ್ಲ ಕಾರಣಗಳು ಒಟ್ಟುಗೂಡಿ ಮಾನಸಿಕ- ಬೌದ್ಧಿಕ ದೌರ್ಬಲ್ಯಗಳನ್ನು ತಂದುಕೊಡುವವು.

ಮಂದಮತಿ ಜಡಮತಿಗಳೆಂದು ಎಲ್ಲರಿಂದಲೂ ಮುದ್ರೆಹಾಕಿಸಿಕೊಂಡ ಬಾಲಕರ ಸ್ವಭಾವವೇ ಒಂದು ರೀತಿಯಾಗಿ ಪರಿಣಮಿಸುವದುಂಟು. ತಮ್ಮ ಹಿರಿಯರು ಬಾಲಕರಷ್ಟು ದೈವಿಗಳು ತಾವು ಇರುವದಿಲ್ಲೆಂಬ ವಿಚಾರವು ಅವರನ್ನು ಯಾವಾಗಲೂ ಅಳುಕಿಸುತ್ತಿರುವದು. ಇದರಲ್ಲಿ ಅವರ ಅಪರಾಧವೇನೂ ಇಲ್ಲ ದಿನ್ನಂಪ್ರತಿ ತಾವು ಮಿಕ್ಕ ಬಾಲಕರನ್ನು ಯಾವುದರಲ್ಲಿಯೂ ಸರಿಗಟ್ಟಲಾರೆವೆಂಬ ಭಾವನೆಯು ಅವರಲ್ಲಿ ಹುಟ್ಟುವದು. ಆದಕಾರಣ ಉಳಿದ ಬಾಲಕರು ಕಾರ್ಯಪ್ರವೃತ್ತರಾಗುವಾಗ ಆ ಕಾರ್ಯವನ್ನು ಬಿಟ್ಟು ಅವರ ಮನಸ್ಸು ಭಿನ್ನ ವ್ಯಾಪಾರಕ್ಕೆ ಎಳೆದೊಯ್ಯುವದು. ಭಿನ್ನವ್ಯಾಪಾರದಲ್ಲಿಯೇ ಅವರ ಮನಸ್ಸು ಆಸಕ್ತಿಗೊಂಡು ಅವರು ಉದ್ದೇಶರಹಿತ ಶೀಲವುಳ್ಳವರಾಗುವರು. ಹೀಗಾಗಿ ಸಮಾಜಶೀಲತೆಗೆ ವಿರುದ್ಧ ನಡೆವಳಿಕೆಯು ಅವರಲ್ಲಿ ನೆಲೆಗೊಳ್ಳುವದು.

ಈ ರೀತಿ ರೋಗಗಳಿರುತ್ತವೆಂಬದನ್ನು ನಾವು ಒಪ್ಪಿಕೊಂಡರೆ ಚಿಕಿತ್ಸೆಯನ್ನು ರೋಗನಿವಾರಣೆಮಾಡುವದು ನಮ್ಮ ಕರ್ತವ್ಯವಾಯಿತು. ಬೇರೆ ಬೇರೆ ಬಾಲಕ ರೋಗಚಿಕಿತ್ಸೆಯನ್ನು ಬೇರೆ ಬೇರೆಯಾಗಿಯೇ ಮಾಡಬೇಕು. ಪ್ರತಿಯೊಬ್ಬ ಬಾಲಕನ ಬೇನೆಯ ಮೂಲ ಕಾರಣವನ್ನು ಹುಡುಕಬೇಕು. ಅಂದರೆ ಆತನ ಬುದ್ಧಿಪರೀಕ್ಷೆಯನ್ನು ವಿಶಿಷ್ಟಪದ್ಧತಿಯಿಂದಲೇ ಮಾಡಬೇಕು. **ಬುದ್ಧಿಮಾಪಕ ದಲ್ಲಿ** ಹೇಳಿದಂತೆ ಪ್ರಶ್ನಮಾಲಿಕೆಗಳನ್ನು ಮಾಡಿಕೊಂಡು ಅವರನ್ನು ಪರೀಕ್ಷಿಸಬೇಕು. ಬುದ್ಧಿಮಾಪನ ಪ್ರಶ್ನಮಾಲಿಕೆಯಲ್ಲಿ ವಾಚಾಪರೀಕ್ಷೆಯು ನಿಷೇಧವಿರುವದು; ಹಾಗೆ ಮಾಡದೆ ಚಿತ್ರಮಾಲಿಕೆಯ ಮುಖಾಂತರ ಅಂದರೆ ಕೆಲವೊಂದು ಚಿತ್ರಗಳ ಗುಂಪುಗಳನ್ನು ಮಾಡಿ ಅವುಗಳ ಸಹಾಯದಿಂದ ಅವರ ಬುದ್ಧಿಪರೀಕ್ಷೆ ಮಾಡಬೇಕು. ಅದೇಮೇರೆಗೆ ಸಾಮಾನ್ಯತಿಳಿವಳಿಕೆಯ ಪರೀಕ್ಷೆ ಮಾಡುವುದು. ವಾಚನ, ಗಣಿತ, ವಾಕ್ಯರಚನೆ, ವಾಕ್ಯಲೇಖನ ಮೊದಲಾದ ವಿಷಯಗಳ ಪರೀಕ್ಷೆಯನ್ನು ಈ ಬಾಲಕರ ವಿಷಯವಾಗಿ ಮಾಡಬೇಕು. ಅವರ ಭಾವನೆಗಳ ಪರೀಕ್ಷೆಯನ್ನು ಸೂಕ್ಷ್ಮರೀತಿಯಿಂದ ಮಾಡಬೇಕು. ಈ ರೀತಿಯ ಪರೀಕ್ಷೆಯು ಬಾಲಕರು ಹುಟ್ಟಿನಿಂದ ಕುಂದುಳ್ಳವರಿರುವರೋ ಇಲ್ಲವೋ ಎಂಬದನ್ನು ತಿಳಿಸಿಕೊಡುವದು. ಆ ಕೊರತೆಗಳನ್ನು ನಾಶಮಾಡಲು ಇಲ್ಲವೆ ಕಡಿಮೆಮಾಡಲು ಸಾಧ್ಯವೋ ಇಲ್ಲವೋ ಎಂಬದೂ ಗೊತ್ತಾಗುವದು.

ಇಂಥ ಕೊರತೆಗಳನ್ನು ನಿವಾರಿಸಲು ಅಭ್ಯಾಸಪತ್ರಿಕೆಯ ವಿಷಯಮಾಲಿಕೆಗಳಲ್ಲಿ ತಕ್ಕ ಮಾರ್ಪಾಟಗಳನ್ನು ಮಾಡಬೇಕೆನ್ನುವ ವಾಡಿಕೆಯಿರುವದು. ವಿಷಯಗಳು ಹೆಚ್ಚು ವ್ಯವಹಾರ್ಯವಿರಬೇಕೆನ್ನುವರು. ಈ ರೀತಿ ವ್ಯಕ್ತಿಗಳು ನಾಗರಿಕತೆಯನ್ನುಂಟುಮಾಡಲು ಅಷ್ಟು ಸಾಮರ್ಥ್ಯವುಳ್ಳವುಗಳಿರುವುದಿಲ್ಲೆಂಬದನ್ನು ಮರೆಯಕೂಡದು. ಬಾಲಕರು ಸಮಾಜದಲ್ಲಿ ಯಾವ ರೀತಿಯಾಗಿ ಇರುವರು; ಅವರ ಬಾಳ್ವೆಯು ಎಂಥದಿರುವದು ಎಂಬ ವಿಷಯಗಳೇ ಹೆಚ್ಚು ಮಹತ್ವದವಿರುವವು. ವಿಷಯಜ್ಞಾನ ಶಿಕ್ಷಣಕ್ಕಿಂತ ಅವರ ಬಾಳ್ವೆಯ ರೀತಿಯು ಹೆಚ್ಚು ಮಹತ್ವದ್ದು. ಆ ಬಾಲಕರಲ್ಲಿ ಯೋಗ್ಯವಾದ ಧ್ಯೇಯಗಳನ್ನೂ ಆಸಕ್ತಿಗಳನ್ನೂ ತಕ್ಕಂತೆ ಉತ್ಸಾಹವನ್ನೂ ಹುಟ್ಟಿಸುವದು ಹೆಚ್ಚು ಒಳ್ಳೆಯದು. ವಿಷಯ ಜ್ಞಾನ ಸಂಪಾದನ- ಸಂಗ್ರಹಗಳಿಗಿಂತ ಅವರ ಅನುಭವವೂ ಚಟುವಟಿಕೆಯೂ ಬೆಳೆಯುವಂತೆ ಅವರ ಅಭ್ಯಾಸಕ್ರಮವಿರಬೇಕು. ಹಿಂದುಳಿದ ಬಾಲಕರ ಶಾಲೆಯಲ್ಲಿ ಶಿಕ್ಷಕನ ವಿಚಾರಗಳು ಈ ರೀತಿ ಬಾಲಕರು ವಿಚಾರಪೂರ್ವಕ ಚಟುವಟಿಕೆಗಳಲ್ಲಿ ತೊಡಗುವಂತೆ ಇರಬೇಕು. ಅವರಲ್ಲಿ ಶೋಧಕಬುದ್ಧಿಯೂ ಬೆಳೆಯಬೇಕು.

ಬೇನೆ ಬಂದವರಿಗೆ ಬೇನೆಯು ಯಾವದು ಅದರ ಪರಿಣಾಮವೇನಾಗುವದು ಎಂಬ ಸಂಗತಿಗಳು ಅವರಿಗೆ ತಿಳಿಯದೆ ಇರುವದು ಹೇಗೆ ಉಪಯುಕ್ತವಾಗುವದೋ ಹಾಗೆಯೇ ಬಾಲಕರಿಗೆ ತಾವು ಮಂದಬುದ್ಧಿಯವರು ಎಂಬುದು ಅವರಿಗೆ ತಿಳಿಯದೆ ಇರುವದು ಒಳ್ಳೆಯದು. ಈ ಕಾರಣ ಮೂಲಕವೇ ಈ ಸಾಲೆಯು ಮಂದಬುದ್ಧಿ ಮಕ್ಕಳವರ ಸಂಸ್ಥೆಯು ಈ ವರ್ಗವು ಹಿಂದುಳಿದ ಬಾಲಕರ ವರ್ಗವು ಎಂಬ ಹೆಸರುಗಳನ್ನು ಹೊಂದಬಾರದು. ಆದಾಗ್ಯೂ ಈ ಬಾಲಕರನ್ನು ಒಟ್ಟುಗೂಡಿಸಿದರೆ ಅವರ ವಿಷಯವಾಗಿ ಶಿಕ್ಷಕರಿಗೆ ಹೆಚ್ಚು ಜಾಗರೂಕರಾಗಿರಲು ಅನುಕೂಲ್ಯವು ವಿಶೇಷವಾಗಿರುವದೆಂಬುದನ್ನು ಮರೆಯಬಾರದು. ಅವರಿಗಾಗಿಯೇ ಸುಲಭ ವಿಷಯಗಳನ್ನು ಆರಿಸುಕೊಂಡು ಕಾರ್ಯದಲ್ಲಿ ಗೆಲವು ತಂದುಕೊಟ್ಟು ಚಟುವಟಿಕೆಯನ್ನೂ ಉತ್ಸಾಹವನ್ನೂ ಉಂಟುಮಾಡಲು ಸಾಧ್ಯವಾಗುವದು. ಎಷ್ಟೋ ಸಾಲೆಗಳಲ್ಲಿ ಒಳ್ಳೆಯ ಉತ್ಸಾಹವುಳ್ಳ ನಿಷ್ಣಾತ ಶಿಕ್ಷಕನು ಆಗಾಗ್ಗೆ ಇಂಥ ವರ್ಗಗಳನ್ನು ಕಲಿಸಲು ಹೋಗುವದುಂಟು. ಆದರೆ ನಡುನಡುವೆ ಇಂಥವರು ಬಂದು ಅವರಲ್ಲಿ ಹೆಚ್ಚಿನ, ಪರುವು ಹುಟ್ಟಿಸಲು ಶಕ್ಯವಿದ್ದಾಗ್ಯೂ ಈ ಬಾಲಕರನ್ನು ಅವ್ಯಾಹತವಾಗಿ ಪರಿಶ್ರಮದಿಂದಲೂ ಸಹಾನುಭೂತಿಯಿಂದಲೂ ನೋಡುವ ಶಿಕ್ಷಕನೇ ಹೆಚ್ಚು ಉಪಕಾರಕನಾಗುವನು.

ಅಂಕಗಣಿತ ಶಿಕ್ಷಣದ ಮುಖ್ಯ ತತ್ವಗಳು

ಲೇಖಕ: — ಶ್ರೀ ತಟ್ಟಿ ಶಾಮರಾಯರು ಬಿ. ಎ. ಅ. ಮಾ. ಹೆ. ಮ. ಟ್ರೇ. ಕಾ. ಧಾರವಾಡ.

೧. ಅಂಕಗಣಿತದೊಳಗಿನ ಕಲ್ಪನೆಗಳನ್ನು ಪ್ರತ್ಯಕ್ಷವಸ್ತುಗಳ ಎಣಿಕೆ, ಅವುಗಳನ್ನು ಕೂಡಿಸುವದು, ಕಳೆಯುವದು, ಅವುಗಳಲ್ಲಿ ಗುಂಪುಗಳನ್ನು ಮಾಡುವದು, ಅವುಗಳನ್ನು ಹಂಚುವದು, ಅವುಗಳಲ್ಲಿ ಸರಿಯಾದ ಭಾಗಗಳನ್ನು ಮಾಡುವದು ಮೊದಲಾದ ನಿತ್ಯದ ಅನುಭವಗಳ ಮೂಲಕ ಮೂಡಿಕೊಡಬೇಕು.

೨. ಹುಡುಗರಿಗೆ ಮಾಡಲಿಕ್ಕೆ ಹೇಳಿದ ಉದಾಹರಣೆಗಳು ಸಾಲೆಯ ಹೊರಗಿನ ಅಳೆಯುವ, ತೂಗುವ, ಲೆಕ್ಕಮಾಡುವ ವ್ಯವಹಾರಗಳಲ್ಲಿ ಬರುವಂಥ ವಿರಬೇಕು.

೩. ಲೆಕ್ಕಗಳ ರೀತಿಯು ಬರಹವು ಕ್ರಮಬದ್ಧವಾಗಿಯೂ ಅಚ್ಚುಕಟ್ಟಾಗಿಯೂ ಇದ್ದು, ಮನಸ್ಸಿನಲ್ಲಿ ಮಾಡಲಿಕ್ಕೆ ಬಾರದ ಕೃತಿಗಳನ್ನು ಮಾತ್ರ ಕಾಗದದ ಮೇಲೆ ಹಚ್ಚಬೇಕು.

೪. ಲೆಕ್ಕದ ರೀತಿಯನ್ನು ಬರೆಯುವಾಗ ಮುಖ್ಯವಾದ ಮೆಟ್ಟುಗಳು ಒಡೆದು ಕಾಣುವಂತೆ ಇರಬೇಕು.

೫. ಯಾವದಾದರೊಂದು ರೀತಿಯನ್ನು ಇಲ್ಲವೆ ಸಾಮಾನ್ಯ ನಿಯಮವನ್ನು ಎಲ್ಲ ಸಂಖ್ಯೆಗಳಿಗೂ ಕಣ್ಣುಮುಚ್ಚಿಕೊಂಡು ಹಚ್ಚಬಾರದು. ಕೊಟ್ಟ ಸಂಖ್ಯೆಗಳ ಸುಲಭತೆ ಕಠಿಣತೆಯ ಮೇಲಿಂದ ಆ ರೀತಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿಕೊಳ್ಳಲಿಕ್ಕೆ ಹುಡುಗರಲ್ಲಿ ಬುದ್ಧಿಯು ಬರಬೇಕು.

೬. ಅಂಕಗಣಿತವು ಒಂದು ಕಲೆಯೂ ಹೌದು ಶಾಸ್ತ್ರವೂ ಹೌದು. ಇದು ವರೆಗೆ ನಾವು ಅದನ್ನು ಹೆಚ್ಚಾಗಿ ಒಂದು ಕಲೆಯಂತೆಯೇ ಕಲಿಸುತ್ತ ಬಂದೆವು; ಅಂದರೆ ಇಂಥಿಂಥ ಕೃತಿಯನ್ನು ಹೀಗೆ ಹೀಗೆ ಮಾಡಬೇಕು ಎಂದು ಮಾತ್ರ ಹೇಳಿ ಅದರಂತೆ ಆ ಕೃತಿಯು ರೂಢಿ ಮಾಡಿಸುತ್ತಿದ್ದೆವು. ಸರಿಯಾದ ಉತ್ತರ ಬರುವದೊಂದೇ ಈ ರೀತಿಗಳ ಪರೀಕ್ಷೆಯಲ್ಲ; ಆದರೆ ಈ ರೀತಿಗಳು ನಮ್ಮ ಬುದ್ಧಿಗೆ ಸಮಂಜಸವಾದವು ಇರುತ್ತವೆ ಎಂಬ ಮಾತೂ ಹುಡುಗರಿಗೆ ಭಾಸವಾಗಬೇಕು. ಆದ್ದರಿಂದ ಯಾಕೆ? ಹೇಗೆ? ಎಂಬ ಪ್ರಶ್ನೆಗಳನ್ನು ಹುಡುಗರಿಗೆ ಕೇಳಲಿಕ್ಕೆ ಮೇಲಿಂದಮೇಲೆ ಉತ್ತೇಜನ ಕೊಟ್ಟು ಅವರಿಗೆ ತಿಳುಕೊಳ್ಳುವ ಶಕ್ತಿಯಿದ್ದಷ್ಟು ಆ ರೀತಿಗಳ ಕಾರಣಗಳನ್ನು ತಿಳಿಸಬೇಕು.

೭. ಕಲಿತ ರೀತಿಗಳ ರೂಢಿಯಾಗಬೇಕೆಂದು ಸುಮ್ಮನೆ ದೊಡ್ಡ ದೊಡ್ಡ ಸಂಖ್ಯೆಗಳನ್ನು ಹೇಳುತ್ತ ಕೂಡ್ರಬಾರದು. ಅಥವಾ ಹುಡುಗರು ಬೇಸರಿಯುವಂತೆ ಬೆಳೆಯುವ ಲೆಕ್ಕಗಳನ್ನು ಮೇಲಿಂದ ಮೇಲೆ ಹೇಳಬಾರದು.

೮. ಹುಡುಗರಿಗೆ ಲೆಕ್ಕಗಳನ್ನು ತಾವೇ ರಚಿಸಲಿಕ್ಕೆ ಉತ್ತೇಜನ ಕೊಡಬೇಕು.

೯. ಬೇರೆ ಬೇರೆ ಹುಡುಗರು ತಮಗೆ ಹೆಚ್ಚುಕಡಿಮೆ ಕಠಿಣವೆನಿಸುವಂಥ ಉದಾಹರಣೆಗಳನ್ನು ಮಾಡುತ್ತಿರಬೇಕು. ಇಡಿ ವರ್ಗವು ಒಂದೇ ಲೆಕ್ಕ ಮಾಡುತ್ತಿರಬೇಕೆಂಬ ನಿರ್ಬಂಧವಿರಕೂಡದು.

೧೦. ಬೇರೀಜಿನ ಸಂಗತಿಗಳು, ಮಗ್ಗಿಗಳು, ಕೋಷ್ಟಕಗಳು, ಆರಂಭದ ನಾಲ್ಕು ಕೃತಿಗಳು, ಅರ್ಧ, ಗಿರ್ಧ ಮೊದಲಾದ ವ್ಯವಹಾರದೊಳಗಿನ ಅಪೂರ್ಣಾಂಕಗಳು, ಪ್ರಮಾಣದ ಕಲ್ಪನೆ ಬರುವ ಉದಾಹರಣೆಗಳು, ಅವಯವಗಳನ್ನು ತೆಗೆದು

ಲೆಕ್ಕವನ್ನು ಸುಲಭ ಮಾಡುವ ರೀತಿಗಳು—ಇದರಂತೆ ಭೂಮಿತಿ ಜಮಾಖರ್ಚಿನ ಮುಖ್ಯ ಅಂಶಗಳು– ಇಷ್ಟು ಮಾತ್ರ ವಿಶೇಷ ವ್ಯವಹಾರದಲ್ಲಿ ಮೇಲಿಂದ ಮೇಲೆ ಬೇಕಾಗುವದರಿಂದ ಇವುಗಳನ್ನು ಎಂದೂ ಮರೆಯದಂತೆ ಗಟ್ಟಿಮುಟ್ಟಾಗಿ ಕಲಿಸಬೇಕು.

೧೧. ಅಂಕಗಣಿತವನ್ನು ಶಾಲೆಯಲ್ಲಿ ಕಲಿಸುವ ಇತರ ವಿಷಯಗಳಿಗೆ— ಉದಾ:–ಭೂಗೋಲ, ಕೈಕೆಲಸ, ಡ್ರಾಯಿಂಗು, ಹೊಲಿಗೆ ಇವುಗಳಿಗೆ ಸಂಬಂಧಿಸಿ ಕಲಿಸಬೇಕು ; ಅಂದರೆ ಅಂಕಗಣಿತವನ್ನು ಕಲಿಸುವಾಗ ಭೂಗೋಲದ ಒಂದು ಉದಾಹರಣೆಯನ್ನು ಹೇಳಿದರೆ ತಪ್ಪಲ್ಲ. ಅಥವಾ ಭೂಗೋಲವನ್ನು ಕಲಿಸುವಾಗ ನಡುವೆ ಗಣಿತವನ್ನು ತರುವದು ಪದ್ಧತಿಗೆ ವಿರುದ್ಧವಾದದ್ದೆಂದು ತಿಳಿಯಬಾರದು.

೧೨. ಮುಖ್ಯ ರೀತಿಯಲ್ಲಿ ಸಣ್ಣ ಸಣ್ಣ ಸುಲಭವಾದ ಮೆಟ್ಟಿಲುಗಳನ್ನು ಮಾಡಿಕೊಂಡು ಅವು ಮನದಟ್ಟಾಗುವಂತೆ ಸಣ್ಣ ಸಣ್ಣ ಲೆಕ್ಕಗಳನ್ನು ಬಾಯಿಂದ ಮಾಡಿಸಬೇಕು. ಇದಕ್ಕಾಗಿ ಅಂಕಗಣಿತದ ಪ್ರತಿಯೊಂದು ಪಾಠದ ಮೊದಲಿನ ಎಂ ಹತ್ತು ಏಸಿಟುಗಳನ್ನು ಕೊಡಬೇಕು.

೧೩. ಅಂಕಗಣಿತದ ರೀತಿಗಳ ಯಥಾರ್ಥ ಸ್ವರೂಪವು ದೃಕ್ಪ್ರತ್ಯಯಕ್ಕೆ ಬರುವಂತೆ ಕಾಗದ ಕತ್ತರಿಸುವದು, ಮಡಿಚುವದು, ಚೌಕು ಮನೆಗಳ ಕಾಗದವನ್ನು ಉಪಯೋಗಿಸುವದು, ಆಕೃತಿಗಳನ್ನು ತೆಗೆಯುವದು, ರೇಖೆಗಳನ್ನು ತೆಗೆಯುವದು ಮೊದಲಾದ ದೃಶ್ಯಸಾಧನಗಳಿಂದ ಮಾಡಿದ ರೀತಿಗಳು ವಿದ್ಯಾರ್ಥಿಗಳ ಒಂದು ಪುಸ್ತಕದಲ್ಲಿ ಅಚ್ಚುಕಟ್ಟಾಗಿ ಮಾಡಿಸಿದಂಥವಿರಬೇಕು. ಇವು ಹುಡುಗರ ಕಣ್ಣಿಗೆ ಆಗಾಗ್ಗೆ ಬೀಳುತ್ತಿದ್ದರೆ ಅವುಗಳಲ್ಲಿ ಗರ್ಭಿತವಾದ ರೀತಿಯು ಅವರ ಮನದಟ್ಟಾಗುವದು,

೧೪. ಹುಡುಗರು ಮಾಡಿದ ಪ್ರತಿಯೊಂದು ಲೆಕ್ಕವನ್ನು ಶಿಕ್ಷಕನು ನೋಡಿ ಸರಿಯಾಗಿದ್ದರೆ ಗುರ್ತಮಾಡಬೇಕು; ತಪ್ಪಿದರೆ ಎಲ್ಲಿ ತಪ್ಪಿರುವದೆಂಬದನ್ನೂ ಯಾಕೆ ತಪ್ಪಿರುವದೆಂಬದನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿ ಗೊತ್ತು ಹಚ್ಚಬೇಕು. ಅದನ್ನು ವಿದ್ಯಾರ್ಥಿಯು ಅದಷ್ಟು ತಾನೇ ಕಂಡುಹಿಡಿಯಬೇಕು. ಸಾಕಷ್ಟು ಪ್ರಯತ್ನಮಾಡಿಯೂ ತಿಳಿಯದಿದ್ದರೆ ಶಿಕ್ಷಕನು ತೋರಿಸಿ ತಿದ್ದಿಕೊಳ್ಳಲಿಕ್ಕೆ ಹೇಳಬೇಕು.

೧೫. ಹುಡುಗರಿಗೆ ಹೇಳಿದ ಲೆಕ್ಕಕ್ಕೆ ಅವರಿಂದ– ನನಗೆ ಇದು ಒರುವದಿಲ್ಲರಿ– ಎಂದು ಎಂದೂ ಉತ್ತರ ಬರದಂತೆ ವ್ಯವಸ್ಥೆಯನ್ನಿಡಬೇಕು. ಅಂದರೆ ಯಾರಿಗೂ ಅವರ ಯೋಗ್ಯತೆ ವಿಚಾರಿದಂಥ ಲೆಕ್ಕವನ್ನು ಮಾಡಲಿಕ್ಕೆ ಹೇಳಲೇ

೩. ಲೆಕ್ಕಗಳ ರೀತಿಯ ಬರಹವು ಕ್ರಮಬದ್ಧವಾಗಿಯೂ ಅಚ್ಚುಕಟ್ಟಾಗಿಯೂ ಇದ್ದು, ಮನಸ್ಸಿನಲ್ಲಿ ಮಾಡಲಿಕ್ಕೆ ಬಾರದ ಕೃತಿಗಳನ್ನು ಮಾತ್ರ ಪಾಠದ ಮೇಲೆ ಹಚ್ಚಬೇಕು.

೪. ಲೆಕ್ಕದ ರೀತಿಯನ್ನು ಬರೆಯುವಾಗ ಮುಖ್ಯವಾದ ಮೆಟ್ಟುಗಳು ಒಡೆದು ಕಾಣುವಂತೆ ಇರಬೇಕು.

೫. ಯಾವದಾದರೊಂದು ರೀತಿಯನ್ನು ಇಲ್ಲವೆ ಸಾಮಾನ್ಯ ನಿಯಮವನ್ನು ಎಲ್ಲ ಸಂಖ್ಯೆಗಳಿಗೂ ಕಣ್ಣುಮುಚ್ಚಿಕೊಂಡು ಹಚ್ಚಬಾರದು. ಕೊಟ್ಟ ಸಂಖ್ಯೆಗಳ ಸುಲಭತೆ ಕಠಿಣತೆಯ ಮೇಲಿಂದ ಆ ರೀತಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿಕೊಳ್ಳಲಿಕ್ಕೆ ಹುಡುಗರಲ್ಲಿ ಬುದ್ಧಿಯು ಬರಬೇಕು.

೬. ಅಂಕಗಣಿತವು ಒಂದು ಕಲೆಯೂ ಹೌದು ಶಾಸ್ತ್ರವೂ ಹೌದು. ಇದುವರೆಗೆ ನಾವು ಅದನ್ನು ಹೆಚ್ಚಾಗಿ ಒಂದು ಕಲೆಯಂತೆಯೇ ಕಲಿಸುತ್ತ ಬಂದೆವು; ಅಂದರೆ ಇಂಥಿಂಥ ಕೃತಿಯನ್ನು ಹೀಗೆ ಹೀಗೆ ಮಾಡಬೇಕು ಎಂದು ಮಾತ್ರ ಹೇಳಿ ಅದರಂತೆ ಆ ಕೃತಿಯ ರೂಢಿ ಮಾಡಿಸುತ್ತಿದ್ದೆವು. ಸರಿಯಾದ ಉತ್ತರ ಬರುವದೊಂದೇ ಈ ರೀತಿಗಳ ಪರೀಕ್ಷೆಯಲ್ಲ; ಆದರೆ ಈ ರೀತಿಗಳು ನಮ್ಮ ಬುದ್ಧಿಗೆ ಸಮಂಜಸವಾದವು ಇರುತ್ತವೆ ಎಂಬ ಮಾತೂ ಹುಡುಗರಿಗೆ ಭಾಸವಾಗಬೇಕು. ಆದ್ದರಿಂದ ಯಾಕೆ? ಹೇಗೆ? ಎಂಬ ಪ್ರಶ್ನೆಗಳನ್ನು ಹುಡುಗರಿಗೆ ಕೇಳಲಿಕ್ಕೆ ಮೇಲಿಂದಮೇಲೆ ಉತ್ತೇಜನ ಕೊಟ್ಟು ಅವರಿಗೆ ತಿಳುಕೊಳ್ಳುವ ಶಕ್ತಿಯಿದ್ದಷ್ಟು ಆ ರೀತಿಗಳ ಕಾರಣಗಳನ್ನು ತಿಳಿಸಬೇಕು.

೭. ಕಲಿತ ರೀತಿಗಳ ರೂಢಿಯಾಗಬೇಕೆಂದು ಸುಮ್ಮನೆ ದೊಡ್ಡ ದೊಡ್ಡ ಸಂಖ್ಯೆಗಳನ್ನು ಹೇಳುತ್ತ ಕೂಡ್ರಬಾರದು. ಅಥವಾ ಹುಡುಗರು ಬೇಸರಿಯುವಂತೆ ಬೆಳೆಯುವ ಲೆಕ್ಕಗಳನ್ನು ಮೇಲಿಂದ ಮೇಲೆ ಹೇಳಬಾರದು.

೮. ಹುಡುಗರಿಗೆ ಲೆಕ್ಕಗಳನ್ನು ತಾವೇ ರಚಿಸಲಿಕ್ಕೆ ಉತ್ತೇಜನ ಕೊಡಬೇಕು.

೯. ಬೇರೆ ಬೇರೆ ಹುಡುಗರು ತಮಗೆ ಹೆಚ್ಚುಕಡಿಮೆ ಕಠಿಣವೆನಿಸುವಂಥ ಉದಾಹರಣೆಗಳನ್ನು ಮಾಡುತ್ತಿರಬೇಕು. ಇಡಿ ವರ್ಗವು ಒಂದೇ ಲೆಕ್ಕ ಮಾಡುತ್ತಿರಬೇಕೆಂಬ ನಿರ್ಬಂಧವಿರಕೂಡದು.

೧೦. ಬೇರೀಜಿನ ಸಂಗತಿಗಳು, ಮಗ್ಗಿಗಳು, ಕೋಷ್ಟಕಗಳು, ಆರಂಭದ ನಾಲ್ಕು ಕೃತಿಗಳು, ಅರ್ಧ, ಗಿರ್ಧ ಮೊದಲಾದ ವ್ಯವಹಾರದೊಳಗಿನ ಅಪೂರ್ಣಾಂಕಗಳು, ಪ್ರಮಾಣದ ಕಲ್ಪನೆ ಬರುವ ಉದಾಹರಣೆಗಳು, ಅವಯವಗಳನ್ನು ತೆಗೆದು

ಶಿಕ್ಷಣವನ್ನು ಸುಲಭ ಮಾಡುವ ರೀತಿಗಳು—ಇದರಂತೆ ಭೂಮಿತಿ ಜಮಾಖರ್ಚಿನ ಮುಖ್ಯ ಅಂಶಗಳು– ಇಷ್ಟು ಮಾತ್ರ ವಿಶೇಷ ವ್ಯವಹಾರದಲ್ಲಿ ಮೇಲಿಂದ ಮೇಲೆ ಬೇಕಾಗುವದರಿಂದ ಇವುಗಳನ್ನು ಎಂದೂ ಮರೆಯುದಂತೆ ಗಟ್ಟಿಮುಟ್ಟಾಗಿ ಕಲಿಸಬೇಕು.

೧೧. ಅಂಕಗಣಿತವನ್ನು ಶಾಲೆಯಲ್ಲಿ ಕಲಿಸುವ ಇತರ ವಿಷಯಗಳಿಗೆ— ಉದಾ:-ಭೂಗೋಲ, ಕೈಕೆಲಸ, ಡ್ರಾಯಿಂಗು, ಹೊಲಿಗೆ ಇವುಗಳಿಗೆ ಸಂಬಂಧಿಸಿ ಕಲಿಸಬೇಕು; ಅಂದರೆ ಅಂಕಗಣಿತವನ್ನು ಕಲಿಸುವಾಗ ಭೂಗೋಲದ ಒಂದು ಉದಾಹರಣೆಯನ್ನು ಹೇಳಿದರೆ ತಪ್ಪಲ್ಲ. ಅಥವಾ ಭೂಗೋಲವನ್ನು ಕಲಿಸುವಾಗ ಸಡುವ ಗಣಿತವನ್ನು ತರುವದು ಪದ್ಧತಿಗೆ ವಿರುದ್ಧವಾದದ್ದೆಂದು ತಿಳಿಯಬಾರದು.

೧೨. ಮುಖ್ಯ ರೀತಿಯಲ್ಲಿ ಸಣ್ಣ ಸಣ್ಣ ಸುಲಭವಾದ ಮೆಟ್ಟಿಗಳನ್ನು ಮಾಡಿಕೊಂಡು ಅವು ಮನದಟ್ಟಾಗುವಂತೆ ಸಣ್ಣ ಸಣ್ಣ ಲೆಕ್ಕಗಳನ್ನು ಬಾಯಿಂದ ಮಾಡಿಸಬೇಕು. ಇದಕ್ಕಾಗಿ ಅಂಕಗಣಿತದ ಪ್ರತಿಯೊಂದು ಪಾಠದ ಮೊದಲಿನ ಎಂ ಹತ್ತು ಏಸಿಟುಗಳನ್ನು ಕೊಡಬೇಕು.

೧೩. ಅಂಕಗಣಿತದ ರೀತಿಗಳ ಯಥಾರ್ಥ ಸ್ವರೂಪವು ದೃಕ್ಪ್ರತ್ಯಯಕ್ಕೆ ಬರುವಂತೆ ಕಾಗದ ಕತ್ತರಿಸುವದು, ಮಡಿಚುವದು, ಚೌಕು ಮನೆಗಳ ಕಾಗದವನ್ನು ಉಪಯೋಗಿಸುವದು, ಆಕೃತಿಗಳನ್ನು ತೆಗೆಯುವದು, ರೇಖೆಗಳನ್ನು ತೆಗೆಯುವದು ಮೊದಲಾದ ದೃಶ್ಯಸಾಧನಗಳಿಂದ ಮಾಡಿದ ರೀತಿಗಳು ವಿದ್ಯಾರ್ಥಿಗಳ ಒಂದು ಪುಸ್ತಕದಲ್ಲಿ ಅಚ್ಚುಕಟ್ಟಾಗಿ ಮಾಡಿಸಿದಂಥವಿರಬೇಕು. ಇವು ಹುಡುಗರ ಕಣ್ಣಿಗೆ ಆಗಾಗ್ಗೆ ಬೀಳುತ್ತಿದ್ದರೆ ಅವುಗಳಲ್ಲಿ ಗರ್ಭಿತವಾದ ರೀತಿಯು ಅವರ ಮನದಟ್ಟಾಗುವದು,

೧೪. ಹುಡುಗರು ಮಾಡಿದ ಪ್ರತಿಯೊಂದು ಲೆಕ್ಕವನ್ನು ಶಿಕ್ಷಕನು ನೋಡಿ ಸರಿಯಾಗಿದ್ದರೆ ಗುರ್ತಮಾಡಬೇಕು; ತಪ್ಪಿದರೆ ಎಲ್ಲಿ ತಪ್ಪಿರುವದೆಂಬದನ್ನೂ ಯಾಕೆ ತಪ್ಪಿರುವದೆಂಬದನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿ ಗೊತ್ತು ಹಚ್ಚಬೇಕು. ಅದನ್ನು ವಿದ್ಯಾರ್ಥಿಯು ಅದಷ್ಟು ತಾನೇ ಕಂಡುಹಿಡಿಯಬೇಕು. ಸಾಕಷ್ಟು ಪ್ರಯತ್ನಮಾಡಿಯೂ ತಿಳಿಯದಿದ್ದರೆ ಶಿಕ್ಷಕನು ತೋರಿಸಿ ತಿದ್ದಿಕೊಳ್ಳಲಿಕ್ಕೆ ಹೇಳಬೇಕು.

೧೫. ಹುಡುಗರಿಗೆ ಹೇಳಿದ ಲೆಕ್ಕಕ್ಕೆ ಅವರಿಂದ– ನನಗೆ ಇದು ಒರುವದಿಲ್ಲರಿ– ಎಂದು ಎಂದೂ ಉತ್ತರ ಬರದಂತೆ ವ್ಯವಸ್ಥೆಯನ್ನಿಡಬೇಕು. ಅಂದರೆ ಯಾರಿಗೂ ಅವರ ಯೋಗ್ಯತೆ ಏನಾರಿದಂಥ ಲೆಕ್ಕವನ್ನು ಮಾಡಲಿಕ್ಕೆ ಹೇಳಲೇ

ಬಾರದು. ಅವರಿಗೆ ಬರುವ ಲೆಕ್ಕವನ್ನು ಹೇಳಿದಮೇಲೆ ಅವರು ಅದನ್ನು ಬಿಡಿಸಲಿಕ್ಕೆ ಸ್ವಲ್ಪಾದರೂ ಪ್ರಯತ್ನಮಾಡದೆ ಶಿಕ್ಷಕನನ್ನು ಕೇಳಬಾರದು.

೧೬. ಶಿಕ್ಷಕರು ಹುಡುಗರಿಗೆ ರೀತಿಯ ಮಾದರಿಗಳನ್ನು ತೋರಿಸಿ ಅವರು ಅವುಗಳನ್ನು ಅನುಸರಿಸುವಂತೆ ಮಾಡಬೇಕು. ಅಂದರೆ ಪ್ರತಿಯೊಬ್ಬ ಹುಡುಗನು ತನಗೆ ಬೇಕು ಬೇಕಾದಂತೆ ಹೆಚ್ಚು ಕಡಿಮೆ ಅನವಶ್ಯಕವಾದ ಸಂಗತಿಗಳನ್ನು ಬರೆಯಕೂಡದು. ಆದರೆ ಮುಖ್ಯ ಮುಖ್ಯ ಮೆಟ್ಟುಗಳನ್ನು ತನಗೆ ಇಷ್ಟವಾಗಿ ತೋರುವ ಮೈಚಿತ್ರ್ಯವನ್ನು ತೋರಿಸಿ ಮಾಡಲಿಕ್ಕೆ ಆತಂಕವಿರಬಾರದು.

೧೭. ಪ್ರತಿಯೊಂದು ಲೆಕ್ಕದಲ್ಲಿ ಕೊಟ್ಟ ಮಾತುಗಳು, ಕೇಳಿದ ಮಾತುಗಳು ಇವು ಹುಡುಗರಿಗೆ ಸ್ಪಷ್ಟವಾಗಿ ತಿಳಿದಿರುವವೋ ಇಲ್ಲವೋ ಎಂಬದನ್ನು ನೋಡಬೇಕು.

೧೮. ಲೆಕ್ಕವನ್ನು ಮಾಡಲಿಕ್ಕೆ ಹತ್ತುವದರ ಮುಂಚೆ ಅದನ್ನು ಹೇಗೆ ಮಾಡಬೇಕೆಂಬದನ್ನು ಮೊದಲು ವಿದ್ಯಾರ್ಥಿಯು ಸಂಕ್ಷೇಪವಾಗಿ ಹೇಳಲಿಕ್ಕೆ ಕಲಿಯಬೇಕು; ಆದರೆ ಹೀಗೆ ಹೇಳುವಾಗ ಮುಖ್ಯ ಮುಖ್ಯ ಮೆಟ್ಟುಗಳನ್ನು ಮಾತ್ರ ಹೇಳುವಂತೆ ನಿರ್ಬಂಧಪಡಿಸಬೇಕು. ಮೊದಲು ಏನನ್ನು ತೆಗೆಯಬೇಕು; ಆ ಮೇಲೆ ಅದರ ಸಹಾಯದಿಂದ ಏನನ್ನು ತೆಗೆಯಬೇಕು– ಹೀಗೆ ಕಡೆಯಲ್ಲಿ ಲೆಕ್ಕದಲ್ಲಿ ಕೇಳಿದ ಮಾತನ್ನು ಹೇಗೆ ತೆಗೆಯಬಹುದು. ಎಂಬದನ್ನು ಅಚ್ಚುಕಟ್ಟಾಗಿ ಹೇಳಲಿಕ್ಕೆ ಹುಡುಗರಿಗೆ ಕಲಿಸಬೇಕು.

೧೯. ಬಂದ ಉತ್ತರವು ಸಮಂಜಸವಾಗಿ ಎಂದರೆ ಲೆಕ್ಕದಲ್ಲಿ ಕೇಳಿದ ಮಾತು ಒಂದು, ನಾವು ಉತ್ತರ ಇಡುವದೊಂದು; ಇಲ್ಲವೆ ಕೇಳಿದ ಮಾತಿಗೆ ಇದು ಉತ್ತರವಾದರೂ ಅದು ರೂಢಿಯನ್ನು ಬಿಟ್ಟು ನಗೆ ಬರುವಂತಿರಬಾರದು. ಸ್ಪಷ್ಟವಾ ಕೇಳಿದ ಮಾತಿಗೆ ಇದು ಅಶಕ್ಯವಾದ ಉತ್ತರವಿರಬಾರದು. ಬಂದ ಉತ್ತರವು ಸರಿಯಿರುವದೆಂಬದನ್ನು ನೋಡುವ ಸುಲಭವಾದ ವಾಡಿಕೆಯ ತಾಳೆಗಳನ್ನು ಕಲಿಸಬೇಕು.

೨೦. ಪರೀಕ್ಷೆಯಲ್ಲಿ, ಎಲ್ಲರಿಗೂ ಅವಶ್ಯವಾಗಿ ಬರಬೇಕಾದ ರೀತಿಗಳು, ಸಂಗತಿಗಳು– ಇವುಗಳನ್ನು ಮಾತ್ರ ಕೇಳಬೇಕಲ್ಲದೆ ಹುಡುಗರನ್ನು ತಪ್ಪಿಸಬೇಕೆಂಬ ಒಂದೇ ಇಚ್ಛೆಯಿಂದ ಪ್ರಶ್ನೆಗಳನ್ನು ರಚಿಸಬಾರದು. ಪರೀಕ್ಷೆಯಲ್ಲಿ ಹುಡುಗನ ತಿಳುವಳಿಕೆ, ವ್ಯವಸ್ಥೆಯ ಪ್ರೀತಿ, ಮುಖ್ಯ ಮೆಟ್ಟುಗಳ ಜ್ಞಾನ ಇವುಗಳಿಗೆ ಸಾಕಷ್ಟು ಮಾರ್ಕುಗಳನ್ನು ಕೊಡಬೇಕು. ಇವು ಇಲ್ಲದಿದ್ದವರಿಗೆ ಜವಿವೆ ಮಾರ್ಕುಗಳು ದೊರೆಯಬೇಕು.

ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತುಪಡಿಸುವ ರೀತಿ

ಲೇ:— ಶ್ರೀ ಬಾಳಕೃಷ್ಣ ನಾರಾಯಣ ಜೇರೆ ಬಿ. ಎಸ್. ಸಿ., ಬಿ. ಟಿ.
ಅಸಿ। ಮಾ। ಹೆ. ಮಕ್ಕಳ ಆಂಗ್ಲೋ ವ್ಹ. ಸ್ಕೂಲು ಧಾರವಾಡ.

ಇರುಳಿನಲ್ಲಿ ವೇಳೆಯನ್ನು ಹೇಗೆ ಗೊತ್ತುಪಡಿಸಬೇಕು ಎಂಬುದನ್ನು ವಿಚಾರಿಸುವ ಪೂರ್ವದಲ್ಲಿ ಹಗಲು ನಾವು ಗಡಿಯಾರವನ್ನು ಪಯೋಗಿಸದೆ ಹೇಗೆ ವೇಳೆಯನ್ನು ತಿಳಿದುಕೊಳ್ಳುವೆವೆಂಬುದರ ಬಗ್ಗೆ ವಿಚಾರಿಸಿದರೆ ನಮಗೆ ರಾತ್ರಿಯಲ್ಲಿ ವೇಳೆಯನ್ನು ಗೊತ್ತುಪಡಿಸುವ ಒಂದು ರೀತಿಯು ಗೊತ್ತಾಗುವದು.

ಸೂರ್ಯನು ಮುಂಜಾನೆ ಪೂರ್ವದಲ್ಲಿ ಉದಯಿಸಿ ಮಧ್ಯಾಹ್ನಕ್ಕೆ ನಮ್ಮ ತಲೆಯಮೇಲೆ ಬಂದು ಸಾಯಂಕಾಲಕ್ಕೆ ಪಶ್ಚಿಮದಿಕ್ಕಿನಲ್ಲಿ ಮುಳಗುವದು ಎಲ್ಲರಿಗೂ ವಿದಿತವಾದ ವಿಷಯವೇ ಸರಿ. ಅಂದರೆ ಕ್ಷಿತಿಜದ ಮೇಲೆ ಕಾಣಿಸಿ ನಮ್ಮ ಯಾಮ್ಯೋತ್ತರ (ದಕ್ಷಿಣೋತ್ತರ) ವೃತ್ತದ (Meridian circle) ಮೇಲೆ ಬರಲಿಕ್ಕೆ ಸುಮಾರು ಹೆಚ್ಚು ಕಡಿಮೆ ಆರು ತಾಸುಗಳು ಬೇಕಾಗುವವು. ಅಂದರೆ ಸೂರ್ಯೋದಯವಾಗಿ ಮಧ್ಯಾಹ್ನವಾಗಲಿಕ್ಕೆ ಸುಮಾರು ಆರು ತಾಸು ಬೇಕು. ಆಕಾಶದಲ್ಲಿ ಕ್ಷಿತಿಜದಿಂದ ನಮ್ಮ ಯಾಮ್ಯೋತ್ತರವೃತ್ತದವರೆಗೆ ಆರು ಕಾಲ್ಪನಿಕ ಭಾಗಗಳನ್ನು ಮಾಡಿ ಸೂರ್ಯನು ಯಾವ ಭಾಗದಲ್ಲಿರುವನೆಂಬುದನ್ನು ನೋಡಿ ಸೂರ್ಯೋದಯವಾಗಿ ಇಂತಿಷ್ಟು ವೇಳೆ ಆಯಿತು ಎಂದು ಹೇಳುವದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿದೆ. ಒಕ್ಕಲಿಗರು "ಈಗ ಮೂರು ಹೊತ್ತು ಏರಿದೆ" ಎಂದು ಅನ್ನುವವರ ಅರ್ಥವಾದರೂ ಹೀಗೆ. ಇಲ್ಲಿ ಮೂರು ಎಂದರೆ ಒಂದು ತಾಸು ಎಂದು ಅರ್ಥ. ಒಟ್ಟಿನಮೇಲೆ ಹೇಳಬೇಕಾದರೆ ಸೂರ್ಯನು ಕ್ಷಿತಿಜದಿಂದ ಎಷ್ಟುಮೇಲೆ ಇರುವನೆಂಬುದನ್ನು ನೋಡಿ ಸಾಧಾರಣ ವೇಳೆಯನ್ನು ಹೇಳಲಿಕ್ಕೆ ಬರುತ್ತದೆ.

ಇರುಳಿನಲ್ಲಿ ಸೂರ್ಯನಿರುವದಿಲ್ಲ. ಆದರೆ ಆಕಾಶದಲ್ಲಿ ಎಷ್ಟೋ ನಕ್ಷತ್ರಗಳು ಕಾಣುತ್ತವೆ. ಆದರೆ ಯಾವ ನಕ್ಷತ್ರವನ್ನು ನೋಡಿ ವೇಳೆಯನ್ನು ತಿಳಿದುಕೊಳ್ಳಬೇಕೆಂಬುದು, ಅಶ್ವಿನಿ, ಕಾರ್ತಿಕ ಮುಂತಾದ ಚಾಂದ್ರಮಾನ ತಿಂಗಳ ಹೆಸರುಗಳು ಆ ತಿಂಗಳುಗಳಿಗೆ ಹೇಗೆ ಬಂದವೆಂಬುದನ್ನು ವಿಚಾರಿಸಿದರೆ ತಿಳಿಯುವದು.

ಒಂದು ಚಾಂದ್ರಮಾನ ತಿಂಗಳಿಗೆ ಸುಮಾರು ೨೯½ (೨೯.೫೩೧) ದಿನಗಳಾಗುತ್ತವೆ. ಚಂದ್ರನು ಸುಮಾರು ೨೭½ ದಿನಗಳಲ್ಲಿ ನಕ್ಷತ್ರಪಥದಲ್ಲಿ ಒಂದು ಸುತ್ತು ಹಾಕುವನು. ಒಂದು ಹುಣ್ಣಿಮೆಯಾಗಿ ಇನ್ನೊಂದು ಹುಣ್ಣಿಮೆಯ ಒಂದು ತಿಂಗಳು ದಾಟುವಷ್ಟರಲ್ಲಿ ಚಂದ್ರನು ನಕ್ಷತ್ರಪಥದಲ್ಲಿ ಒಂದು ಸುತ್ತು ಮಾಡಿ ಇನ್ನೂ ಎರಡು ನಕ್ಷತ್ರಗಳನ್ನು ದಾಟುವನು. ಹೀಗಾಗಿ ಒಂದು ಹುಣ್ಣಿಮೆ ಚಂದ್ರನು ಅಶ್ವಿನಿಯೊಂದಿಗೆ ಇದ್ದರೆ ಅದರ ಮುಂದಿನ ಹುಣ್ಣಿಮೆಗೆ ಒಂದು ಸುತ್ತು ಮಾಡಿ, ಅಶ್ವಿನೀ ಮತ್ತು ಭರಣೀ ಇವೆರಡು ನಕ್ಷತ್ರಗಳನ್ನು ದಾಟಿ ಕೃತ್ತಿಕಾ ನಕ್ಷತ್ರದೊಂದಿಗೆ ಉದಯಿಸುವನು. ಈ ಕಾರಣದಿಂದ ಪ್ರತಿಯೊಂದು ಹುಣ್ಣಿಮೆ ಆ ಚಂದ್ರನ ಹತ್ತಿರಿರುವ ನಕ್ಷತ್ರದ ಹೆಸರು ಬಂತು. ಉದಾ:— ಆಶ್ವಿನೀ-ಆಶ್ವೀನ, ಕೃತ್ತಿಕಾ—ಕಾರ್ತೀಕ, ಮೃಗಶೀರ್ಷ—ಮಾರ್ಗಶೀರ್ಷ, ಪುಷ್ಯ-ಪೌಷ, ಮಘಾ—ಮಾಘ, ಉತ್ತರಾ (ಫಲ್ಗುಣೀ)—ಫಾಲ್ಗುಣ, ಚಿತ್ರಾ-ಚೈತ್ರ, ವಿಶಾಖಾ—ವೈಶಾಖ, ಜ್ಯೇಷ್ಠಾ—ಜ್ಯೇಷ್ಠ, ಉ. ಆಷಾಢಾ—ಆಷಾಢ, ಶ್ರವಣಾ - ಶ್ರಾವಣ, ಉ. ಭಾದ್ರಪದಾ—ಭಾದ್ರಪದ ಹೀಗೆ ಹುಣ್ಣಿಮೆಗಳಿಗೆ ಹೆಸರು ಬಂದವು. ಆ ಹುಣ್ಣಿಮೆಗಳ ಹೆಸರುಗಳು ತಿಂಗಳುಗಳಿಗೆ ಬಂದಿರುತ್ತವೆ

युग्मयुक्ता पौर्णमासी पौषी मासेतु यत्र सा ।
नाम्ना स पौषो माघाद्याश्चैवमेकादशापरे ॥ १ ॥

अमरकोशः

" साऽस्मिन् पौर्णमासीति " ಕೌಮುದೀ ಸೂತ್ರ (4-I-2I)

ಹುಣ್ಣಿಮೆಯ ದಿವಸ ಸೂರ್ಯಾಸ್ತವು ಮತ್ತು ಚಂದ್ರೋದಯವು ಏಕಕಾಲಕ್ಕೆ ಆಗುವವು. ಅಂದರೆ ಹುಣ್ಣಿಮೆಯ ದಿವಸ ಚಂದ್ರನನ್ನು ನೋಡಿ ನಾವು ವೇಳೆಯನ್ನು ತಿಳಿದುಕೊಳ್ಳಬಹುದು. ಆದರೆ ಪ್ರತಿಪದೆಯ ದಿವಸ ಅವನು ಸೂರ್ಯಾಸ್ತಕ್ಕೆ ಕಾಣುವದೇ ಇಲ್ಲ. ಅವನು ಮುಂಚಿನ ದಿನಕ್ಕಿಂತ ಬಹು ಮಿನಿಟುಗಳನಂತರ ಉದಯಿಸುವನು. ಆದ್ದರಿಂದ ಹುಣ್ಣಿಮೆಯ ದಿವಸ ಅವನ ಜತೆಯಲ್ಲಿರುವ ನಕ್ಷತ್ರದಿಂದ ನಾವು ವೇಳೆಯನ್ನು ಮುಂದೆ ಕೆಲವು ದಿವಸಗಳ ವರೆಗೆ ತಿಳಿದುಕೊಳ್ಳಬೇಕು. ನಕ್ಷತ್ರಗಳು ಸೂರ್ಯ ಚಂದ್ರ ಗ್ರಹಗಳಂತೆ ತಮ್ಮ ಸ್ಥಳಗಳನ್ನು ಬದಲಿಸುವದಿಲ್ಲ. ಹುಣ್ಣಿಮೆಯಿಂದ ಏಳು (೭) ದಿವಸ ಮೊದಲು ಮತ್ತು ನಂತರ ಏಳು ದಿವಸ ಆ ಹುಣ್ಣಿಮೆಯ ಹೆಸರಿರುವ ನಕ್ಷತ್ರವನ್ನು ನೋಡಿ ವೇಳೆಯನ್ನು ತಿಳಿದುಕೊಳ್ಳಬೇಕು. ಮತ್ತು ಅಮಾವಾಸ್ಯೆಕ್ಕಿಂತ ಏಳುದಿವಸ ಮೊದಲು ಮತ್ತು ಏಳುದಿವಸನಂತರ ಆ ತಿಂಗಳ ಹೆಸರಿನ ಮುಂದಿನ ನಕ್ಷತ್ರವನ್ನು ನೋಡಿ ವೇಳೆಯನ್ನು ಗೊತ್ತುಪಡಿಸಬೇಕು. ಉದಾ:— ಮಾಘ ಶುದ್ಧ ಅಷ್ಟಮಿ

ಯಿಂದ ಮಾಘ ಬಹುಳ ಅಷ್ಟಮಿಯವರೆಗೆ ಮಘಾ ನಕ್ಷತ್ರವನ್ನೂ ಮಾಘಬಹುಳ ಅಷ್ಟಮಿಯಿಂದ ಫಾಲ್ಗುಣಶುದ್ಧ ಅಷ್ಟಮಿಯವರೆಗೆ ಪೂರ್ವಾ (ಫಲ್ಗುಣೀ, ಹುಬ್ಬೀ) ನಕ್ಷತ್ರವನ್ನು ನೋಡಿ ತಿಳಕೊಳ್ಳಬೇಕು.

ಮೇಲೆ ಹೇಳಿದ ರೀತಿಯು ಅಷ್ಟೇನು ಸೂಕ್ಷ್ಮವಾದದ್ದಲ್ಲ. ನಕ್ಷತ್ರಗಳನ್ನು ನಿರೀಕ್ಷಿಸಿ ಗಣಿತ ಮಾಡಿ ಬಂದ ವೇಳೆಯು ಹೆಚ್ಚು ಸರಿಯಾದದ್ದಿರುತ್ತದೆ. ಗಣಿಸಿ ಮಾಡಬೇಕಾದರೆ ವೇಳೆಯ ಬಗ್ಗೆ ಜ್ಯೋತಿಃಶಾಸ್ತ್ರದ ಕೆಲವು ಪಾರಿಭಾಷಿಕ ಶಬ್ದಗಳ ಪರಿಚಯವು ಅವಶ್ಯವಾದದ್ದು. ಗಡಿಯಾರದ ಬಗ್ಗೆ ಕೆಲವು ತಪ್ಪು ಕಲ್ಪನೆಗಳಿರುವವು. ಸೂರ್ಯೋದಯವಾದಾಗ ಗಡಿಯಾರದಲ್ಲಿ ಯಾವಾಗಲೂ ೬ರು ಹೊಡೆದಿರುವದೆಂಬುದು, ಮತ್ತು ಮಧ್ಯಾಹ್ನ (ಸೂರ್ಯನು ಯಾಮ್ಯೋತ್ತರವೃತ್ತಕ್ಕೆ ಬಂದಾಗ್ಗೆ) ಸರಿಯಾಗಿ ಹನ್ನೆರಡು ಗಂಟೆಗೆ ಆಗುವದೆಂಬುದು. ಹೀಗಾಗದಿರುವದಕ್ಕೆ ಸೂರ್ಯನ ಅನಿಯಮಿತ ಗತಿಯೇ ಒಂದು ಮುಖ್ಯ ಕಾರಣವಾಗಿದೆ.

ಸೂರ್ಯನು ಒಮ್ಮೆ ಯಾಮ್ಯೋತ್ತರವೃತ್ತಕ್ಕೆ ಬಂದು ಮತ್ತೊಮ್ಮೆ ಬರಲಿಕ್ಕೆ ಹತ್ತುವ ವೇಳೆಗೆ ಸೌರದಿವಸ (ಸ್ಫುಟಸಾವನ ದಿವಸ Solar day) ವೆನ್ನುವರು. ಈ ಅವಧಿಯು ಪ್ರತಿದಿವಸ ಕೆಲವು ಕಾರಣಗಳ ಮೂಲಕ ಒಷ್ಟೇ ಇರುವದಿಲ್ಲ. ಆದ್ದರಿಂದ ವರ್ಷದಲ್ಲಿಯ ಎಲ್ಲ ಸೌರದಿವಸಗಳ ಸರಾಸರಿಗೆ (Average. Mean) ಮಧ್ಯಮ ಸೌರದಿವಸ (ಮಧ್ಯಮ ಸಾವನದಿವಸ Mean Solar day) ವೆನ್ನುವರು. ನಮ್ಮ ಜನರು ಈ ಅವಧಿಯಲ್ಲಿ ೬೦ ಭಾಗಗಳನ್ನು ಮಾಡಿ ಒಂದೊಂದಕ್ಕೆ ಘಟಿಕಾ (ಸಾವನ ಘಟಿಕಾ) ಎನ್ನುವರು. ಪಾಶ್ಚಿಮಾತ್ಯರು ೨೪ ಭಾಗಮಾಡಿ ಒಂದೊಂದಕ್ಕೆ ತಾಸು ಎನ್ನುವರು. ಹೀಗೆ ನಿಯಮಿತ ಗತಿಯಿಂದ ವಿಷುವದ್ವೃತ್ತದಮೇಲೆ ತಿರುಗುವ ಸೂರ್ಯನನ್ನು ಕಲ್ಪಿಸಿಕೊಂಡು ಅವನಿಗೆ ಮಧ್ಯಮ ಸೂರ್ಯ (Mean Sun) ವೆನ್ನುವರು. ಹೀಗೆ ಮಧ್ಯಮ ಸೂರ್ಯನು ನಿಯಮಿತಗತಿಯಿಂದ ತಿರುಗಿ, ಸೂರ್ಯನು ಎಷ್ಟು ಅವಧಿಯಲ್ಲಿ ಒಂದು ವರ್ಷದ ಸುತ್ತನ್ನು ಮುಗಿಸುವನೋ ಅಷ್ಟೇ ಅವಧಿಯಲ್ಲಿ ಮುಗಿಸುವನು. ಮಧ್ಯಮ ಸೂರ್ಯನು ಯಾಮ್ಯೋತ್ತರ ವೃತ್ತಕ್ಕೆ ಬಂದಾಗ್ಗೆ ೧೨ ಹೊಡೆಯುವದು. ಮತ್ತು ನಮ್ಮ ಗಡಿಯಾರಗಳು ತೋರಿಸುವ ವೇಳೆಯು ಇದೇ. ಪೃಥ್ವಿಯು ತನ್ನ ಮೈಸುತ್ತು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವದು. ಆಕಾಶ ಮತ್ತು ಅದರಲ್ಲಿ ಕಾಣುವ ಸೂರ್ಯ ಚಂದ್ರ ನಕ್ಷತ್ರ ಗ್ರಹಾದಿಗಳು ನಮ್ಮ ಸೂತ್ತಲೂ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದಂತೆ ಕಾಣುತ್ತವೆ. ಈ ಪೃಥ್ವಿಯ ದೈನಂದಿನಗತಿಯು ನಿಯಮಿತ

ವಾದದ್ದಿರುತ್ತದೆ (Uniform). ಅಂದಮೇಲೆ ಒಮ್ಮೆ ಒಂದು ನಕ್ಷತ್ರವು ಯಾವ್ಯೋತ್ತರ ವೃತ್ತಕ್ಕೆ ಬಂದು ಮತ್ತೊಮ್ಮೆ ಬರಲಿಕ್ಕೆ ಹತ್ತುವ ವೇಳೆಯು ಯಾವಾಗಲೂ ಅಷ್ಟೇ ಇರಲಿಕ್ಕೇ ಬೇಕು. ಈ ಅವಧಿಗೆ ನಾಕ್ಷತ್ರದಿವಸವೆನ್ನುವರು (Siderial day). ಇದು ಮಧ್ಯಮ ಸೌರದಿನಕ್ಕಿಂತ ಸಾಧಾರಣ ನಾಲ್ಕು ನಿಮಿಟು ಕಡಿಮೆ ಇರುತ್ತದೆ. (೨೩ ತಾ. ೫೬ ನಿ. ೪.೧ ಸೇ.)

ಉತ್ತರಧ್ರುವದಿಂದ ಆಕಾಶದಲ್ಲಿ ೯೦° ಅಂಶದಮೇಲೆ ತೆಗೆದ ವೃತ್ತಕ್ಕೆ ವಿಷುವೃತ್ತವೆನ್ನುವರು (celestial equator). ಸೂರ್ಯನು ವಿಷುವವೃತ್ತದಲ್ಲಿರದೆ ಕ್ರಾಂತಿವೃತ್ತದಲ್ಲಿರುವನು. ಈ ಎರಡೂ ವೃತ್ತಗಳು ಒಂದನ್ನೊಂದು ಎರಡು ಬಿಂದುಗಳಲ್ಲಿ ೨೩½° ಕೋನವಾಗುವಂತೆ ಛೇದಿಸುವವು. ಈ ಬಿಂದುಗಳಿಗೆ ಸಂಪಾತಬಿಂದುಗಳೆನ್ನುವರು (Equinoxes). ಸೂರ್ಯನು ವಸಂತ ಋತುವಿನಲ್ಲಿ (ಮಾರ್ಚ ೨೨ನೇ ತಾರೀಖಿಗೆ) ಬರುವ ಬಿಂದುವಿಗೆ ವಸಂತಸಂಪಾತವೆನ್ನುವರು. (Vernal equinox) ಅಥವಾ ಸಾಯನ ಮೇಷಾರಂಭವೆನ್ನುವರು (First point of aries). ಈ ಸಂಪಾತಬಿಂದುವಿನಿಂದ ವಿಷುವವೃತ್ತದ ಗುಂಟ ಪೂರ್ವಕ್ಕೆ ಭಾಗಗಳನ್ನು ಮಾಡುತ್ತ ಹೋಗುವರು. ಇವು ೩೬೦ ಇದ್ದು ಅವಕ್ಕೆ ಅಂಶವೆನ್ನುವರು. ಜ್ಯೋತಿಃಶಾಸ್ತ್ರಜ್ಞರು ಒಮ್ಮೊಮ್ಮೆ ಅಂಶದ ಬದಲಾಗಿ ತಾಸುಗಳನ್ನು ಸಯೋಗಿಸುವರು (೩೬೦° = ೨೪ ತಾಸು). ಒಂದು ನಕ್ಷತ್ರವು ಈ ಸಂಪಾತಬಿಂದುವಿನಿಂದ ೧೦° ಗಳ ಮೇಲೆ ಇದ್ದರೆ ಆ ನಕ್ಷತ್ರದ ವಿಷುವಾಂಶವು ೧೦° ಎನ್ನುವರು. ಇದನ್ನು ತಾಸಿನಲ್ಲಿ ಆಳೆದರೆ ಅದಕ್ಕೆ ಹೊರಾತ್ಮಕ (horory, ಹೋರಾ=ತಾಸು) ವಿಷುವಾಂಶವೆನ್ನುವರು. ಎಲ್ಲ ನಕ್ಷತ್ರಗಳು ವಿಷುವವೃತ್ತದ ಮೇಲೆಯೇ ಇಲ್ಲ. ಇವುಗಳ ವಿಷುವಾಂಶವನ್ನು ಹೇಗೆ ತಿಳಿದು ಕೊಳ್ಳಬೇಕು? ಉತ್ತರ ಧ್ರುವದಿಂದ ನಕ್ಷತ್ರದ ಮೇಲೆ ಹಾಯುವಂತೆ ಒಂದು ಅರ್ಧ ವರ್ತುಲವನ್ನು ತೆಗೆಯಬೇಕು. ಈ ಅರ್ಧ ವರ್ತುಲವು ವಿಷುವ ವೃತ್ತವನ್ನು ಛೇದಿಸುವದು. ಈ ಛೇದನ ಬಿಂದು ಮತ್ತು ವಸಂತ ಸಂಪಾತ ಇವೆರಡರ ಅಂತರವೇ ಆ ನಕ್ಷತ್ರದ ವಿಷುವಾಂಶವು. ವಿಷುವಾಂಶಗಳು ಪ್ರತಿವರ್ಷ ಕೆಲವು ಕಾರಣಗಳ ಮೂಲಕ ಬದಲಾಗುವವು. ಆದರೆ ಆ ಬದಲಾವಣೆಯು ಅಷ್ಟೇನು ಲಕ್ಷಿಸತಕ್ಕದ್ದಿಲ್ಲ.

ನಕ್ಷತ್ರಗಳ ವಿಷುವಾಂಶ ನಮಗೆ ಗೊತ್ತಿರಬೇಕು. ಕೆಲವು ಮುಖ್ಯ ನಕ್ಷತ್ರಗಳ ವಿಷುವಾಂಶವನ್ನು ಕೆಳಗೆ ಕೊಟ್ಟಿದೆ. ಈ ಅಂಕಿಗಳನ್ನು ಗ್ರೀನಿಚಿನೆಯ ಇಸ್ಟೀಯ ನಾವಿಕರ ಪಂಚಾಂಗದಿಂದ (Nautical Almanac.) ತಕ್ಕೊಂಡಿದೆ.

ಇರುಳಿನಲ್ಲಿ ನಕ್ಷತ್ರಗಳಿಂದ ವೇಳೆಯನ್ನು ಗೊತ್ತುಪಡಿಸುವ ರೀತಿ

ಸೂರ್ಯನ ವಿಷುವಾಂಶವು ಮಾರ್ಚ ೨೦ನೇ ತಾರೀಖಿಗೆ ೦° ವಿರುವದು. ಅಂದರೆ ಅವನು ವಸಂತ ಸಂಪಾತದಲ್ಲಿರುವನು. ಮಧ್ಯಮ ಸೂರ್ಯನಾದರೂ ಆ ತಾರೀಖಿಗೆ ಅಲ್ಲಿಯೇ ಇರುವನು. ಮಧ್ಯಮ ಸೂರ್ಯನ ವಿಷುವಾಂಶವು ಪ್ರತಿ ದಿನಕ್ಕೆ ಸುಮಾರು ೪ ನಿ (೩ ನಿ ೫೬ ಸೇ) ನಿನಿಟು ಹೆಚ್ಚುತ್ತ ಹೋಗುವದು ಇವನ ವಿಷುವಾಂಶವನ್ನು ಲೆಕ್ಕಮಾಡಿ ತೆಗೆಯಲಿಕ್ಕೆ ಬರುವದು. ಕೆಳಗೆ ಒಂದು ಕೋಷ್ಟಕ ಕೊಟ್ಟಿದೆ. ಮತ್ತು ವಿಷುವಾಂಶ ತಿಳಕೊಳ್ಳುವ ಕ್ರಮವನ್ನು ಸ್ವಲ್ಪದರಲ್ಲಿ ಹೇಳಿದೆ. ಅಂದರೆ ಬೇಕಾದ ದಿವಸದ ಮಧ್ಯಮ ಸೂರ್ಯನ ವಿಷುವಾಂಶವನ್ನು ತೆಗೆಯಲಿಕ್ಕೆ ಬರುತ್ತದೆ. ನಮ್ಮ ಹತ್ತರ ಇದ್ದ, (೧) ವಿಷುವಾಂಶಗಳ ಪಟ್ಟಿ ಮತ್ತು (೨) ಮಧ್ಯಮ ಸೂರ್ಯನ ವಿಷವಾಂಶದ ಪಟ್ಟಿ, ಇವೆರಡರ ಸಹಾಯದಿಂದ ವೇಳೆಯನ್ನು ಗೊತ್ತು ಪಡಿಸಲಿಕ್ಕೆ ಬರುತ್ತದೆ.

ಒಂದು ನಕ್ಷತ್ರವು ಯಾಮ್ಯೋತ್ತರ ವೃತ್ತಕ್ಕೆ ಬಂದಿದೆಂದು ಕಲ್ಪಿಸಿರಿ. ಮಧ್ಯಮ ಸೂರ್ಯನು ಈ ವೃತ್ತಕ್ಕೆ ಬಂದು ದಾಟಿ ಎಷ್ಟು ವೇಳೆಯಾಗಿರುವದೋ ಅಷ್ಟೇ ವೇಳೆಯನ್ನು ಗಡಿಯಾರವು ತೋರಿಸುವದು. ಆ ನಕ್ಷತ್ರದ ಮತ್ತು ಆ ದಿವಸದ ಮಧ್ಯಮ ಸೂರ್ಯನ ವಿಷುವಾಂಶಗಳ ಅಂತರವೇ ಮಧ್ಯಾಹ್ನದಿಂದ ಕಳೆದ ವೇಳೆಯು ಮತ್ತು ಇದು ಸ್ಥಾನಿಕ ವೇಳೆಯು (Local time) ಇದರಲ್ಲಿ ಆ ಊರಿನ ರೇಖಾಂಶ ಮತ್ತು ಲಂಡನ್ನಿನ ರೇಖಾಂಶ ಇವುಗಳ ಅಂತರಕ್ಕೆ ೧೫ ರಿಂದ ಭಾಗಿಸಿ ಬಂದ ವೇಳೆಯನ್ನು (ತಾಸು) ಕೂಡಿಸಬೇಕು. ಅಥವಾ ಕಳೆಯಬೇಕು. ಆ ಊರಿನ ರೇಖಾಂಶವು ಲಂಡನ್ನಿನ ಅಂಶಕ್ಕಿಂತ ಹೆಚ್ಚು ಇದ್ದರೆ ಕೂಡಿಸಬೇಕು. ಕಡಿಮೆ ಇದ್ದರೆ ಕಳೆಯಬೇಕು. ಇದೇ ಸ್ಟ್ಯಾಂಡರ್ಡ ವೇಳೆಯು. (standard time) ಹೀಗೆ ಬೇಕಾದ ವೇಳೆಯಲ್ಲಿ ಯಾಮ್ಯೋತ್ತರ ವೃತ್ತಕ್ಕೆ ಇರುವ ನಕ್ಷತ್ರದ ವಿಷುವಾಂಶ ಮತ್ತು ಆ ದಿವಸದ ಮಧ್ಯಮ ಸೂರ್ಯನ ವಿಷುವಾಂಶ ಇವೆರಡರ ಅಂತರ ತೆಗೆದರಾಯಿತು.

ಈ ಯಾಮ್ಯೋತ್ತರ ವೃತ್ತವನ್ನು ನಾವು ಹೇಗೆ ಕಟ್ಟಬೇಕು ದಿಕ್ಸಾಧನವನ್ನು ಹೇಗೆ ಮಾಡಬೇಕು. ಮತ್ತು ಈ ಕೆಲಸಕ್ಕೆ ನಮಗೆ ಯಾವ ಯಾವ ನಕ್ಷತ್ರಗಳ ಪರಿಚಯವಿರಬೇಕೆಂಬದನ್ನು ಮುಂದಿನ ಲೇಖದಲ್ಲಿ ಕೊಡಲಾಗುವದು.

ಮಧ್ಯಮ ರವಿಯ ಹೋರಾತ್ಮಕ ವಿಷುವಾಂಶ ೧೯೩೮

ತಿಂಗಳು	ತಾ॥	ವಿಷುವಾಂಶ	ತಿಂಗಳು	ತಾ॥	ವಿಷುವಾಂಶ
		ತಾ. ಮಿ. ಸೇ.			ತಾ. ಮಿ. ಸೇ.
ಜಾನೇವಾರಿ	೧	೧೪-೪೫-೪೫	ಜುಲೈ	೧೬	೭-೫೯-೫೭
,,	೧೭	೧೯-೪೪-೫೭	ಆಗಷ್ಟ	೫	೮-೫೪-೫೭
ಫೆಬ್ರುವರಿ	೬	೨೧- ೭-೫೭	,,	೨೫	೧೦-೧೭-೫೭
,,	೨೬	೨೨-೨೬-೫೭	ಸಪ್ಟಂಬರ	೧೪	೧೧-೩೬-೫೭
ಮಾರ್ಚ	೧೪	೨೩-೪೫-೫೭	,,	೨೧	೧೨- ೪-೫೬
,,	೨೨	೦- ೧-೪೫	ಅಕ್ಟೋಬರ	೪	೧೨-೫೫-೫೭
ಏಪ್ರಿಲ	೭	೧- ೪-೫೭	,,	೨೪	೧೪-೧೪-೫೭
,,	೨೭	೨-೨೩-೫೭	ನವ್ಹೆಂಬರ	೧೩	೧೫-೩೩-೫೭
ಮೇ	೧೭	೩-೪೨-೫೭	ಡಿಸೆಂಬರ	೩	೧೬-೫೨-೫೭
ಜೂನ	೬	೫- ೧-೫೭	,,	೨೩	೧೪-೧೧-೫೭
,,	೨೧	೬- ೧-೧೨	,,	೩೧	೧೪-೪೩-೩೩
,,	೨೬	೬-೨೦-೫೭	ಜಾನೇವಾರಿ ೧೯೩೯	೧	೧೪-೪೭-೩೦

ಫೋಲಿನ ಕೋಷ್ಟಕದಿಂದ ಯಾವದಾದರೊಂದು ತಾರೀಖಿನ ಮಧ್ಯಮ ರವಿಯ ವಿಷುವಾಂಶವನ್ನು ತೆಗೆಯುವ ರೀತಿ. ಇಲ್ಲಿ ತಾರೀಖಿನ ವಿಷುವಾಂಶವನ್ನು ಮಾತ್ರ ಕೊಟ್ಟಿದೆ.

ಆ ತಾರೀಖಿಗಿಂತ ಮೊದಲಿನ ತಾರೀಖಿನ ವಿಷುವಾಂಶವನ್ನು ನೋಡಬೇಕು. ಮತ್ತು ಆ ತಾರೀಖಿನನಂತರ ನಮ್ಮ ತಾರೀಖು ಎಷ್ಟು ದಿವಸಗಳನಂತರ ಇರುವದು ಎಂಬದನ್ನು ತೆಗೆದು, ಮೊದಲಿನ ತಾರೀಖಿನ ವಿಷುವಾಂಶದಲ್ಲಿ ಆ ದಿವಸಗಳ ಮೂರರಷ್ಟು ಸೇಕಂಡುಗಳನ್ನು ಕಡಿಮೆ ಮಾಡಬೇಕು ಮತ್ತು ಆ ದಿವಸಗಳ ನಾಲ್ಕರಷ್ಟು ವಿನಿಟುಗಳನ್ನು ಹೆಚ್ಚು ಮಾಡಬೇಕು. ಹೀಗೆ ಮಾಡಿದರೆ ನಮಗೆ ಬೇಕಾದ ತಾರೀಖಿನ ರವಿಯ ವಿಷುವಾಂಶವು ಗೊತ್ತಾಗುವದು. ಪ್ರತಿದಿವಸ

ತಾ. ವಿ. ಸೇ.

ಮಧ್ಯಮರವಿಯ ಗತಿಯು ೦- ೩- ೫೭ ಇರುವದು. ಅವನ ವಿಷುವಾಂಶವು

ತಾ. ವಿ. ಸೇ.

ಪ್ರತಿದಿನಕ್ಕೆ ೦- ೩- ೫೭ ಇಷ್ಟು ಹೆಚ್ಚುತ್ತ ಹೋಗುವದು.

ಉದಾ:— ಏಪ್ರಿಲ ೨೦ನೇ ತಾರೀಖಿನ ದಿವಸದ ವಿಷುವಾಂಶ ಎಷ್ಟು?

ಇದಕ್ಕಿಂತ ಮೊದಲಿನ ತಾರೀಖು ೭ ಎಂಬದು ಕೋಷ್ಟಕದಿಂದ ಕಂಡು ಬರುವದು.

ತಾ. ಮಿ. ಸೇ.

೭ನೇ ತಾರೀಖಿನ ವಿಷುವಾಂಶವು ೧– ೪– ೫೭ ಇಲ್ಲಿ ೧೩ ದಿವಸಗಳ ಅಂತರ ವಿರುವದು.

೧೩×೩=೩೯ ಸೇ. ಕಡಿಮೆ ಮಾಡಬೇಕು.

೧೩×೪=೫೨ ಮಿ. ಹೆಚ್ಚು ಮಾಡಬೇಕು.

ವಿಷವಾಂಶ

೭ನೇ ತಾರೀಖಿನ ೧ –೪–೫೭ ಕೆಳಗಿನ ಚಿನ್ಹೆಗಳನ್ನು ನೋಡಿರಿ.

೫೨–೩೯

(+) (–)

೨೦ನೇ ತಾರೀಖಿನ ವಿಷವಾಂಶ ೧–೫೬–೧೪

ಹೀಗೆ ಬೇಕಾದ ತಾರೀಖಿನ ವಿಷುವಾಂಶವನ್ನು ತೆಗೆಯಲಿಕ್ಕೆ ಬರುತ್ತದೆ.

೧೯೩೮ ಜಾನೇವಾರಿ ತಿಂಗಳಿನಲ್ಲಿ ರಾತ್ರಿಯಲ್ಲಿ ೧೨ ಗಂಟೆಯ ವರೆಗೆ ಯಾಮ್ಯೋತ್ತರಕ್ಕೆ ಬರುವ ಕೆಲವು ನಕ್ಷತ್ರಗಳ ವಿಷುವಾಂಶವು

	ನಕ್ಷತ್ರದ ಹೆಸರು ಇಂಗ್ಲಿಷ	ಸಂಸ್ಕೃತ ಹೆಸರು	ವಿಷುವಾಂಶ ತಾ ಮಿ. ಸೇ.
β	Arieties	ಅಶ್ವಿನೀ	೧–೫೧–೧೨
α	,,	,,	೨– ೩–೪೧
ξ^1	Ceti	ತಿಮಿಂಗಿಲ	೨– ೯–೪೨
ξ^2	,,	,,	೨–೨೪–೫೦
35	Aricetices	ಭರಣೀ	೨–೩೯–೪೩
41	,,	,,	೨–೪೬–೧೪
γ	Persicei	ಯಯಾತಿ	೩– ೦–೧೬
β	,, (Algol)	,,	೩– ೪– ೦೬
α	,,	,,	೩–೧೯–೫೩
S	,,	,,	೩–೩೪–೩೦
n	Tauri	ಕೃತ್ತಿಕಾ	೩–೪೩–೪೭
ζ	Perscei	ಯಯಾತಿ	೩–೫೦–೧೩
λ	Fauri	—	೩–೫೭–೧೪
γ	,,	ರೋಹಿಣೀ	೪–೧೬–೧೫
t_ϵ	,,	,,	೪–೨೫

α	,, (Aldebarn)	,,	೪–೩೨–೧೧
i	Auriga	—	೪–೫೨–೫೬
n	,,	—	೫– ೭– ೯
α	,, (capella)	ಬ್ರಹ್ಮಹೃದಯ	೫–೧೯– ೬
β	,,	ಅಗ್ನಿ	೫–೨೮–೨೨
ζ	,,	—	೫–೩೫–೫೬
β	Auriga	ಗಾಲವ	೫–೫೪– ೮
υ	Orion	—	೬– ೪– ೦
η	Germini	ಮನು	೬–೧೦–೬೮
μ	,,	ಪರಾಶರ	೬–೧೯–೧೩
γ	,,	—	೬–೩೪– ೭
ξ	,,	—	೬– ೧–೪೮
ζ	,,	—	೭– ೦–೫೬
51	,,	—	೭– ೯–೪೮
δ	,,	ಶುಕ	೭–೧೪– ೨೪
β	canis minoris	ಪುನರ್ವಸು	೭–೨೩–೪೭
α	Gemini (castor)	,,	೭–೩೦–೩೮
α	canis monoris (Procyon)	,,	೭–೩೬– ೨
β	Gemini (Pollux)	,,	೭–೪೧–೩೧
ψ	canecri	—	೮– ೨– ೦
β	,,		೮–೧೩– ೯
o	ursa Majoris		೮–೨೫– ೭
γ	canecri		೮–೩೯–೪೧
i	ursa Majoris		೮–೫೪– ೫೮
ξ	canecri		೯– ೫–೪೭
θ	ursa Majoris		೯–೨೮–೪೩
υ	,,		೯–೪೬–೩೫
π	Leonis	ಮಘಾ	೯–೫೬–೫೬
α	Regulars	,,	೧೦– ೫– ೪

ಈ ಕೋಷ್ಟಕದಲ್ಲಿ ಮತ್ತು ಮಧ್ಯಮರವಿಯ ವಿಷುವಾಂಶ ಕೋಷ್ಟಕದಲ್ಲಿ ನೀಡಿರುವ ಸಂಖ್ಯೆಗಳನ್ನು ಕೊಟ್ಟಿದೆ. ಲೆಕ್ಕ ಮಾಡುವಾಗ ಪೂರ್ಣ ಮಿನಿಟು (nearest minute) ಹಿಡಿದು ಮಾಡಬೇಕು.

ಹಿಂದೀ ಜನರ ಆಹಾರದಲ್ಲಿಯು ಪೋಷಕ ದ್ರವ್ಯಗಳೂ ಸಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ

ಲೇ— ಶ್ರೀ. ಕೆ. ಬಿ. ತೇರಗಾವಕರ ಬಿ. ಎಸ್. ಸಿ. ಬಿ. ಟಿ. ಅಸಿ| ಮಾ ಟ್ರೇ. ಕಾ. ಧಾರವಾಡ

(ಕಳಿದ ತಿಂಗಳಿನಿಂದ ಮುಂದುವರಿದುದು)

ಕ್ಷಾರಗಳು— ದೇಹದೊಳಗಿನ ಅನೇಕ ಇಂದ್ರಿಯಂಗಳ ಬೆಳವಣಿಗೆಗೂ ಅವು ತಮ್ಮ ನಿರ್ದಿಷ್ಟ ಕಾರ್ಯ ಮಾಡುವದಕ್ಕೂ ಕ್ಷಾರಗಳ ಆವಶ್ಯಕತೆ ಇರುತ್ತದೆ. ಬೆಳೆಯುವ ಸಣ್ಣ ಮಕ್ಕಳಿಗಂತೂ ಇವುಗಳ ಆವಶ್ಯಕತೆಯು ಪ್ರೌಢ ವಯಸ್ಕರಿಗಿಂತ ಹೆಚ್ಚಿಗಿರುತ್ತದೆ. ಎಲುವುಗಳೂ, ನಮ್ಮ ಹಲ್ಲುಗಳೂ ಬಹಳ ಪ್ರಮಾಣದಿಂದ ಕ್ಷಾರಯುಕ್ತವಾದವುಗಳು. ಇನ್ನು ಕ್ಷಾರಗಳು ದೇಹದ ಇನ್ನಿತರ ಭಾಗಗಳಲ್ಲಿಯೂ ಕಂಡುಬರುತ್ತವೆ. ಮುಖ್ಯವಾಗಿ ರಕ್ತದಲ್ಲಿ ಕ್ಷಾರಗಳ ಪ್ರಮಾಣವು ನಿರ್ದಿಷ್ಟವಾಗಿರಲಿಕ್ಕೆಬೇಕು. ಅವು ಸ್ವಲ್ಪಾದರೂ ಕಡಿಮೆಯಾದರೆ ರಕ್ತವು ಒಮ್ಮೆಲೆ ಆಮ್ಲಮಯವಾಗಿ ರೋಗಗಳು ಸಂಭವಿಸುವವು. ನಮ್ಮ ದೇಹದಲ್ಲಿಯ ಇನ್ನಿತರ ಇಂದ್ರಿಯಗಳಾದರೂ ತಮ್ಮ ತಮ್ಮ ಕಾರ್ಯವನ್ನು ಸಾಗಿಸಬೇಕಾದರೆ ಕ್ಷಾರಗಳ ಆವಶ್ಯಕತೆಯು ಇದ್ದೇ ಇರುತ್ತದೆ. ನಮ್ಮ ದೇಹದಲ್ಲಿ ಇವು ಬಹಿ ದೇಹದ ತ್ರಿಕ್ಷ ಪಾಲಿನಷ್ಟು ಇರುತ್ತವೆ. ಇವುಗಳ ಮಹತ್ವವನ್ನು ಅರಿತು 'ಟಶ್ಯೂರೆ ಮಾಡಿ' ಎಂಬ ಒಂದು ಪದ್ಧತಿಗನುಸರಿಸಿ ರೋಗಗಳಿಗೆ ಚಿಕಿತ್ಸೆ ಮಾಡಲು ಮತ್ತು ಯೋಗ್ಯ ಉಪಚಾರಕ್ಕೆಂದು 'ಫೆರಮ್ ಫಾಸ್' ಕಾಲಿಮೂರ್, ಸೈಪ್ರಮೂರ, ಮುಂತಾದ ಕ್ಷಾರಗಳನ್ನು ಕೊಟ್ಟು ರೋಗಿಗಳನ್ನು ನೆಟ್ಟಗೆ ಮಾಡುವ ರೂಢಿಯು ಕೆಲವರಲ್ಲಿ ಉಂಟು. ನಾವು ತಿನ್ನುವ ಉಪ್ಪು ಮತ್ತು ಸುಣ್ಣಗಳ ವರ್ಗಕ್ಕೆ ಸೇರಿದ ಕ್ಷಾರಗಳು, ಲೋಹದ ವರ್ಗಕ್ಕೆ ಸೇರಿದವುಗಳು, ಫಾಸ್ಫರಸ್ ಗಂಧಕ ಮತ್ತು ಕ್ಲೋರಿನ್ ವರ್ಗಕ್ಕೆ ಸೇರಿದ ಕ್ಷಾರಗಳೆಲ್ಲವು ಮುಖ್ಯವಾದವುಗಳು. ಇವೆಲ್ಲವುಗಳು ಯೋಗ್ಯ ಪ್ರಮಾಣದಲ್ಲಿರದಿದ್ದರೆ ನಮ್ಮ ದೇಹದಲ್ಲಿಯ ಅನೇಕ ರಸಗಳೂ ಮತ್ತು ಇನ್ನಿತರ ಪ್ರವಾಹಿಗಳೂ ಆಮ್ಲಮಯ ಗುಣವುಳ್ಳವು, ಸಬಲಕ್ಷಾರಮಯಗಳಾಗಲಿ ಆಗಿ ಅಪಾಯವನ್ನುಂಟು ಮಾಡುವವು. ನಾವು ಯಾವುದೇ ಒಂದು ತರದ ಆಹಾರವನ್ನಷ್ಟೇ ಸೇವಿಸಿದರೆ ನಮ್ಮ ದೇಹ

ದಲ್ಲಿಯ ರಸಗಳಲ್ಲಿ ಆಮ್ಲದ ಪ್ರಮಾಣವಾಗಲಿ, ಸಬಲಕ್ಷಾರದ ಪ್ರಮಾಣವಾಗಲಿ ಹೆಚ್ಚಾಗುತ್ತದೆ. ಉದಾಹರಣೆಗಾಗಿ ಬರೀ ಅಕ್ಕಿ, ಜೋಳ, ಗೋದಿ ಮುಂತಾದ ತೃಣಧಾನ್ಯಗಳನ್ನಷ್ಟೇ ಸೇವಿಸಿದರೆ ಆಮ್ಲದ ಪ್ರಮಾಣವು ಹೆಚ್ಚುತ್ತದೆ. ಆದ್ದರಿಂದಲೇ ಅದರ ತೀಕ್ಷ್ಣಗುಣತೆಯನ್ನು ಕಡಿಮೆ ಮಾಡಲಿಕ್ಕೆ ಹಸಿ ಪಲ್ಯವನ್ನು, ಗಡ್ಡೆ ಗೆಣಸುಗಳನ್ನು ಅವುಗಳ ಕೂಡ ಸೇವಿಸಬೇಕಾಗುತ್ತದೆ. ಆದರೆ ಹಾಲಿನಲ್ಲಿ ಮಾತ್ರ ಇವೆಲ್ಲ ಕ್ಷಾರಗಳು ಯೋಗ್ಯ ಪ್ರಮಾಣದಲ್ಲಿರುತ್ತವೆಂದು ಕಂಡುಬಂದಿರುವದು. ಆದ್ದರಿಂದ ಹಾಲನ್ನೂ, ಹಾಲಿನಿಂದ ತಯಾರಿಸಿದ ಮೊಸರು, ಬೆಣ್ಣೆ, ಗಿಣ್ಣ, ಮಜ್ಜಿಗೆ ಮುಂತಾದವುಗಳನ್ನೂ ನಾವು ಸೇವಿಸಲೇಬೇಕು.

ಇನ್ನು ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳನ್ನು ವಿವೇಚಿಸೋಣ:— ಇವು ಎಲುವುಗಳನ್ನೂ, ಹಲ್ಲುಗಳನ್ನೂ ಬಲಪಡಿಸುತ್ತವೆ. ಇವುಗಳ ಪ್ರಮಾಣವು ಕಡಿಮೆಯಾದರೆ ಚಿಕ್ಕಮಕ್ಕಳಾಗಲಿ, ಪ್ರೌಢರಾಗಲಿ ಬಲಹೀನರೂ, ನಿಸ್ತೇಜರೂ ಆಗುವರು. ಚಿಕ್ಕಮಕ್ಕಳಿಗೆ ಪ್ರೌಢರಿಗಿಂತ ಸುಮಾರು ಮೂರು ಪಟ್ಟು ಈ ಕ್ಷಾರಗಳು ಹೆಚ್ಚು ಬೇಕಾಗುತ್ತವೆ. ಇನ್ನು ಈ ಕ್ಷಾರಗಳು ಹಾಲಿನಲ್ಲಿರುತ್ತವೆಂದು ಮೇಲೆ ಹೇಳಿದೆ. ಇದಲ್ಲದೆ ಇಂಗು, ಲವಂಗ, ಅಜಿವಾನ, ಮೆಣಸು ಮುಂತಾದ ಮಸಾಲೆ ಸಾಮಾನುಗಳಲ್ಲಿ ಹೆಚ್ಚಿನ ಪ್ರಮಾಣದಿಂದ ಇರುತ್ತವೆ. (ಅಜಿವಾನ ೧·೪೨೨ ಲವಂಗ ·೬೫೯ ಇಂಗು ·೬೯೨) ಎಳ್ಳಿಣ್ಣೆಯಲ್ಲಿಯೂ ಹೇರಳವಾಗಿದ್ದುದು ಕಂಡು ಬರುತ್ತದೆ. ೧·೪೫೩. ಎಲ್ಲ ತರದ ಬೇಳೆ ಕಾಳುಗಳಲ್ಲಿಯೂ, ಹಸಿ ಪಲ್ಲೆಗಳಲ್ಲಿಯೂ ಇವು ತಕ್ಕಷ್ಟು ಇರುತ್ತವೆ. ನಾವು ಪ್ರತಿ ದಿನ ಸುಮಾರು ೧ ಗ್ರ್ಯಾವಿನಷ್ಟಾದರೂ ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳನ್ನು ಈ ಕ್ಷಾರಗಳಿದ್ದ ಆಹಾರದ ಮುಖಾಂತರ ಸೇವಿಸಬೇಕು.

ಎರಡನೆಯ ಮಹತ್ವದ ಕ್ಷಾರವೆಂದರೆ ನಾವು ದಿನಾಲು ತಿನ್ನುವ ಉಪ್ಪು. ಶಾಕಾಹಾರಿಗಳು ಉಪ್ಪನ್ನು ತುಸು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಬೇಕು. ಯಾಕಂದರೆ ಅವರು ಸೇವಿಸುವ ಆಹಾರದಲ್ಲಿ ಉಪ್ಪಿನ ಅಂಶವು ತೀರ ಕಡಿಮೆ. ಅದೇ ಮಾಂಸಾಹಾರಿಗಳಿಗೆ ಇದರ ಆವಶ್ಯಕತೆಯು ಅಷ್ಟೊಂದಿಲ್ಲ. ಯಾಕಂದರೆ ಮಾಂಸದಲ್ಲಿ ಉಪ್ಪು ತುಸು ಹೆಚ್ಚು ಪ್ರಮಾಣದಲ್ಲಿರುತ್ತದೆಂದು ಕಂಡು ಬಂದಿದೆ. ಉಪ್ಪು ರಕ್ತದ ಪ್ರಮಾಣವನ್ನು ಸರಿಯಾಗಿ ಇಡುತ್ತಿದ್ದರೂ ಅದನ್ನು ಹೆಚ್ಚಿಗೆ ಸೇವಿಸುವದರಿಂದ ಮೂತ್ರ ಪಿಂಡಗಳೂ, ರಕ್ತವಾಹಿನಿಗಳೂ ಅಪಾಯ ಹೊಂದುತ್ತವೆ. ಉಪ್ಪನ್ನು ಹೆಚ್ಚು ಸೇವಿಸುವದರಿಂದ ರಕ್ತದ ಒತ್ತಾಟವು ಹೆಚ್ಚುವದೆಂದು ಡಾಕ್ಟರರ ಮತ.

ಫಾಸ್ಫರಸವು ಎಲುವು ಮತ್ತು ಹಲ್ಲಿನ ಮಹತ್ವವಾದದ್ದೊಂದು ಘಟಕ ವಿರುವದರಿಂದ ಈ ದ್ರವ್ಯವಿದ್ದಂಥ ಆಹಾರವನ್ನು ಸೇವಿಸಬೇಕು. ಇದಲ್ಲದೆ ಈ ದ್ರವ್ಯವು ಪ್ರತಿಯೊಂದು ಜೀವಾಣುವಿನಲ್ಲಿರುತ್ತದೆ. ಅವುಗಳ ಬೆಳವಣಿಗೆಗೆ ಆವಶ್ಯವಾಗಿರುತ್ತದೆ. ನಾವು ದಿನಾಲು ಫಾಸ್ಫರಸ್ ದ್ರವ್ಯವನ್ನು ಸುಮಾರು ೧·೫ ಗ್ರ್ಯಾಮಿನಷ್ಟು ಆ ದ್ರವ್ಯ ಉಳ್ಳ ಆಹಾರಗಳ ಮುಖಾಂತರ ಸೇವಿಸಬೇಕು. ಫಾಸ್ಫರಸವು ಗೋದಿ, ಜೋಳ, ರಾಗಿ ಮೊಂತಾದ ತೃಣಧಾನ್ಯಗಳಲ್ಲಿ ಸುಮಾರು ·೩–·೪ ಪ್ರಮಾಣದಲ್ಲಿಯೂ ಬೇಳೆ ಕಾಳುಗಳಲ್ಲಿ ·೪–·೫ ಪ್ರಮಾಣದಲ್ಲಿಯೂ ಇರುತ್ತದೆ. ಸೋಯಾಬೀನದಂಥ ಅವರೆಯಲ್ಲಿ ಅದರ ಪ್ರಮಾಣವು ಇನ್ನೂ ಹೆಚ್ಚಿರುತ್ತದೆ. ೮·೬೯. ಕಾಯಿಪಲ್ಯಗಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದರೆ ಸಾಸಿವಿ ಕಾಳುಗಳಲ್ಲಿ ·೭೦೪ ಎಳ್ಳೆಣ್ಣೆಯಲ್ಲಿ ೦·೫೭೪. ಮತ್ತು ಕೆಲವು ಮಸಾಲೆಯ ಸಾಮಾನುಗಳಲ್ಲಿ ತುಸುಮಟ್ಟಿಗೆಯೂ ಇರುವದು, ಮಾಂಸಾಹಾರದಲ್ಲಿ ಈ ದ್ರವ್ಯವು ·೨–·೪. ಮೀನದಲ್ಲಿ ಇದರ ಪ್ರಮಾಣವು ·೪೧೩ ಪ್ರಮಾಣದಲ್ಲಿರುವದು. ಹಾಲು ಮತ್ತು ಅದರಿಂದ ಉಂಟಾದ ಪದಾರ್ಥಗಳಲ್ಲಿ ಇದು ತುಸು ಪ್ರಮಾಣದಿಂದ ಇದ್ದೇ ಇರುತ್ತದೆ. ಫಾಸ್ಫರಸ್ ಮತ್ತು ಸುಣ್ಣ ಇವುಗಳ ವರ್ಗಕ್ಕೆ ಸೇರಿದ ಕ್ಷಾರಗಳೆರಡೂ ಎಲುವು ಮತ್ತು ಹಲ್ಲುಗಳನ್ನು ಬಲಪಡಿಸುವಲ್ಲಿ ಬೇಕಾಗುವದರಿಂದ ಅವೆರಡೂ ನಮ್ಮ ದೇಹದಲ್ಲಿಯ ಇಂದ್ರಿಯಗಳಿಗೆ ಹೆಚ್ಚಿಗೆ ಸಿಗುವಂತೆ ನಮ್ಮ ಆಹಾರದಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕೆಂಬದು ನಾವು ನೆನಪಿನಲ್ಲಿಡತಕ್ಕ ಸಂಗತಿಯು.

ಅತಿ ಮಹತ್ವದ ಇನ್ನೊಂದು ಕ್ಷಾರವೆಂದರೆ ಲೋಹ. ಯಾಕೆಂದರೆ ಇದು ಮುಖ್ಯಾಂಶವಾಗಿ ರಕ್ತದಲ್ಲಿಯ ಹಿಮೋಗ್ಲೋಬಿನ್ ಎಂಬ ದ್ರವ್ಯದಲ್ಲಿರುತ್ತದೆ. ಇದರಿಂದಲೇ ಪ್ರಾಣವಾಯುವು ಫುಪ್ಪುಸದಿಂದ ದೇಹದ ಎಲ್ಲ ಭಾಗಗಳಿಗೆ ಒಯ್ಯಲ್ಪಡುತ್ತದೆ ಬೆಳೆಗೆಯ ಚಿಕ್ಕಮಕ್ಕಳಿಗೂ ಸ್ತ್ರೀಯರಿಗೂ ಇದರ ಮಹತ್ವವು ಹೆಚ್ಚು. ನಮ್ಮ ಸಮತೋಲಾದ ಆಹಾರದಲ್ಲಿ ನಮಗೆ ಸುಮಾರು ·೨೨–·೩೪ ಗ್ರ್ಯಾಮಿನಷ್ಟು ಲೋಹವನ್ನು ಲೋಹವುಳ್ಳ ಆಹಾರದ ಮುಖಾಂತರ ಸೇವಿಸಬೇಕು. ಲೋಹದ ಪ್ರಮಾಣವು ಕಡಿಮೆಯಾದರೆ ರಕ್ತದ ಪ್ರಮಾಣವು ಕಡಿಮೆ ಆಗುತ್ತದೆ. ಅದರಲ್ಲಿ ಸಾಕಷ್ಟು ಪ್ರಾಣವಾಯುವಿನ ಪೂರೈಕೆಯು ಆಗುವದಿಲ್ಲ. ಇದ್ದರಿಂದ ರಕ್ತಕ್ಷಯವೆಂಬ ರೋಗವು ಸಂಭವಿಸುವದು. ಆಗ ಶಕ್ತಿಯು ಕುಂದಿ ಮನುಷ್ಯನು ಬಲಹೀನನಾಗುವನು. ಈ ರೋಗವು ಗರ್ಭಿಣಿಯರಿಗೆ ಬರುವ ಸಂಭವವು ಹೆಚ್ಚು. ಆದ್ದರಿಂದ ಈ ರೋಗವನ್ನು ಪ್ರತಿಬಂಧಿಸಲಿಕ್ಕೆ ಲೋಹದ ಪ್ರಮಾಣವು ಹೆಚ್ಚಿರುವಂಥ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು. ಲೋಹ

ವುಳ್ಳ ಆಹಾರವನ್ನೇ ಹೆಚ್ಚಾಗಿ ಸೇವಿಸುತ್ತಿದ್ದರೂ ಅದರ ಕೂಡ ಬೇರೆ ಪ್ರಾಣಿ ಜೀವಸತ್ವಗಳುಳ್ಳ ಆಹಾರವನ್ನೂ ಸುಣ್ಣದ ವರ್ಗಕ್ಕೆ ಸೇರಿದ ಕ್ಷಾರಗಳುಳ್ಳ ಆಹಾರವನ್ನೂ ಸೇವಿಸದಿದ್ದರೆ ಆ ಲೋಹವು ದೇಹದಲ್ಲಿಯ ನಿರ್ಮಾಣ ಸಾಮಗ್ರಿಗಳಲ್ಲಿ ರೂಪಾಂತರ ಹೊಂದುವದಿಲ್ಲ. ಆದ್ದರಿಂದ ಮೂಲ ಉದ್ದೇಶವು ಸಫಲವಾದಂತಾಗುವದಿಲ್ಲ.

ಈ ಲೋಹದ ಕ್ಷಾರದ ವಿಷಯವಾಗಿ ಲಕ್ಷದಲ್ಲಿಡತಕ್ಕ ಇನ್ನೊಂದು ಸಂಗತಿ ಏನಂದರೆ ಎಲ್ಲ ತರದ ಆಹಾರ ಪದಾರ್ಥಗಳು ತಮ್ಮಲ್ಲಿಯ ಲೋಹವನ್ನು ಪೂರ್ಣವಾಗಿ ರೂಪಾಂತರಿಸುವದಿಲ್ಲ. ಇಷ್ಟೇ ಅಲ್ಲದೆ ಕೆಲವು ಆಹಾರ ಪದಾರ್ಥಗಳು ತೀವ್ರವಾಗಿ ಹೆಚ್ಚಿನ ಪ್ರಮಾಣದಲ್ಲಿ ರೂಪಾಂತರ ಹೊಂದುವವು. ಕೆಲವು ತಮ್ಮಲ್ಲಿಯ ಲೋಹದ ಪ್ರಮಾಣವು ಹೆಚ್ಚಿದ್ದಾಗ್ಯೂ ತಮ್ಮಲ್ಲಿಯ ಲೋಹವನ್ನು ಆ ಪ್ರಮಾಣದಲ್ಲಿ ರೂಪಾಂತರಿಸುವದಿಲ್ಲ. ಆದಕಾರಣ ಆಹಾರ ಪದಾರ್ಥವನ್ನು ಆರಿಸುವಾಗ ಲೋಹದ ಪ್ರಮಾಣದ ಕಡೆಗಷ್ಟೇ ಲಕ್ಷ ಪೂರೈಸದೆ ಆ ಆಹಾರವು ಯಾವ ಪ್ರಮಾಣದಲ್ಲಿ ತನ್ನಲ್ಲಿಯ ಲೋಹವನ್ನು ದೇಹದಲ್ಲಿಯ ಘಟಕಗಳಲ್ಲಿ ರೂಪಾಂತರಿಸುವದೆಂಬುದನ್ನು ವಿಶೇಷವಾಗಿ ನೋಡಬೇಕಾಗುವದು. ಉದಾಹರಣೆಗಾಗಿ ಗೋದಿಯು ತನ್ನಲ್ಲಿಯ ಲೋಹವನ್ನು ೪೭% ರಂತೆ ಮಾತ್ರ ರೂಪಾಂತರಿಸುತ್ತದೆ. ಸೋಯಾಬೀನ ಕಾಳುಗಳು ೮೦% ರೂಪಾಂತರಿಸುತ್ತವೆ. ಬದಾಮು ೮೮% ಲೆಟ್ಯೂಸ ೫೫% ಬಟಗಬ್ಲೆ ೭೨% ಬಾಳೆಹಣ್ಣು ೬೨% ಪ್ರಮಾಣದಲ್ಲಿ ರೂಪಾಂತರಿಸುತ್ತವೆ. ನಿವಾಗಿಯೂ ಲೋಹವು ಆಹಾರದಲ್ಲಿ ತೀರ ತುಸು ಪ್ರಮಾಣದಲ್ಲಿರುತ್ತದೆ. ಉದಾ: ತೃಣಧಾನ್ಯಗಳು ಹೆಚ್ಚಿಂದರೆ ಸೆಜ್ಜೆ ೦೧೪೪೪%, ಜೋಳ ೦೦೬೧೪%, ಸಾಂಬಾ ೦೦೭೧

ಬೇಳೆಕಾಳಿಗಳು ಸೋಯಾಬೀನ ೦೧೫೭%, ಉದ್ದು ೦೦೯೪% ಹೆಸರು ೦೦೪೪%

ಹಸರುಪಲ್ಯಗಳು– ರಾಜಗಿರಿ ೦೭೭೯%, ಕೋತಂಬ್ರಿ ೦ ೯೯೭%, ಪಾಲಬೇಸ ೦೭೫೩%

ಎಣ್ಣೆಕಾಳುಗಳು ಸಾಸಿವೆ ೦೧೭೯, ಎಳ್ಳು ೦೧೦೫

ಮಸಾಲೆ ಕಾಳುಗಳಲ್ಲಿ ತುಸು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು ಇಂಗು ೦೭೭೫, ಅರಿಷಣ ೦೧೪೬, ಮೆಣಸು ೦೧೪೪%. ಇನ್ನಿತರ ಆಹಾರ ಪದಾರ್ಥಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಬಹುದು.

ಜೀವಸತ್ವಗಳು

ನಾವು ಶಕ್ತಿಪೂರಕಗಳ ಮತ್ತು ನಿರ್ಮಾಣ ಸಾಮಗ್ರಿಗಳನ್ನು ತಯಾರಿಸುವಂಥ ಆಹಾರದ ಕಡೆಗೆ ಲಕ್ಷಕೊಟ್ಟು ನಮ್ಮ ದಿನದ ಆಹಾರವನ್ನು ತಯಾರಿ

ಹಂತಾಗ್ಯೂ ಒಂದು ಮಹತ್ವದ ಸಂಗತಿಯ ಕಡೆಗೆ ಲಕ್ಷ ಕೊಡದಿದ್ದರೆ ನಮ್ಮ ಪ್ರಯತ್ನವು ಸಫಲವಾದಂತಾಗುವದಿಲ್ಲ. ಅನೇಕವೇಳೆ ದೇಹಕ್ಕೆ ಬೇಕಾಗುವ ದ್ರವ್ಯಗಳನ್ನು ಪ್ರಮಾಣಕ್ಕನುಸರಿಸಿ ತೆಗೆದುಕೊಂಡಾಗ್ಯೂ ಬೆಳವಣಿಗೆಯು ಸಮಾಧಾನಕಾರಕವಾದದ್ದು ಕಂಡುಬಂದಿಲ್ಲ. ಉದಾಹರಣೆಗಾಗಿ ನಮಗೆ ಬೇಕಾಗುವ ಪ್ರೋಟೀನದ್ರವ್ಯ, ಸೆಣ, ಕಾಬೋರ್ಹಾಯಡ್ರೇಟ ಕ್ಯಾರ ಮುಂತಾದವುಗಳನ್ನು ಯೋಗ್ಯ ಪ್ರಮಾಣದಲ್ಲಿ ಬೆರಿಸಿ ತೆಗೆದುಕೊಂಡಾಗ್ಯೂ ಬೆಳವಣಿಗೆಯು ಕುಂಠಿತವಾದ ಕೆಲವು ವಿಶಿಷ್ಟ ರೋಗಗಳೂ ಕಂಡುಬಂದಿವೆ. ಹೀಗಾಗಲು ಕಾರಣ ಏನಂದರೆ ನಮ್ಮ ಆಹಾರದಲ್ಲಿ ಏನಾದರೊಂದು ಮಹತ್ವವಾದ ಪದಾರ್ಥದ ಕೊರತೆ ಇರಲಿಕ್ಕೆ ಸಾಕು. ಅದಕ್ಕೇ ನಾವು ಜೀವಸತ್ವವೆಂದು ಹೆಸರಿಟ್ಟಿದ್ದೇವೆ. * ಜೀವಸತ್ವಗಳನ್ನು ನಾವು ಕಣ್ಣಾರೆ ಕಾಣಲಾರೆವು. ತಕ್ಕಡಿಯಲ್ಲಿ ತೂಗಲಾರೆವು. ಅಥವಾ ಕ್ಯಾರ ಸೆಣ ಹೆಡಸಿನ ಪದಾರ್ಥಗಳಂತೆ ಪ್ರತ್ಯೇಕವಾಗಿ ಪೃಥಕ್ಕರಿಸಲಾರೆವು. ಆದರೆ ಈ ಜೀವಸತ್ವಗಳ ಪರಿಣಾಮದ ಮೇಲಿಂದ ಅವುಗಳ ಇರುವಿಕೆಯನ್ನೂ ಅವುಗಳ ಮಹತ್ವವನ್ನೂ ತಿಳಿಯುವೆವು. ಉದಾಹರಣೆಗಾಗಿ ಹಾಲಿನಲ್ಲಿ ಇರುವ ವಿಶಿಷ್ಟ ದ್ರವ್ಯಗಳನ್ನು ಎಂದರೆ ಪ್ರೋಟೀನ, ಸೆಣ, ಕೇಸಿನ, ಮುಂತಾದವುಗಳನ್ನು ಪ್ರತ್ಯೇಕವಾಗಿ ತಯಾರಿಸಿ ಸೇವಿಸುವದಕ್ಕೂ ತಾಜಾ ಹಾಗೇ ಆಗ ಹಿಂಡಿದ ಹಾಲನ್ನು ಸೇವಿಸುವದಕ್ಕೂ ಮಹದಂತರವಿರುವದೆಂಬುದು ಹುಟ್ಟನೆ ಹೊಳೆಯದಿರಲಿಕ್ಕಿಲ್ಲ. ಹಾಗಾದರೆ ತಾಜಾ ಹಾಲಿನಲ್ಲಿರುವ ಆ ವಿಶಿಷ್ಟ ಗುಣಕ್ಕೆ ಜೀವಸತ್ವವೇ ಕಾರಣವಲ್ಲವೇ.

ಒಟ್ಟಿನ ಮೇಲೆ ಹೇಳಬೇಕಾದರೆ ಈ ಜೀವಸತ್ವಗಳು ಬೆಳವಣಿಗೆಗೆ ಅತಿ ಆವಶ್ಯಕಗಳು. ಆಹಾರವನ್ನು ನಿರ್ದಿಷ್ಟಪಡಿಸುವಾಗ ಈ ಜೀವಸತ್ವಗಳ ಪ್ರಮಾಣವು ಯಾವ ಆಹಾರದಲ್ಲಿ ಹೆಚ್ಚಾಗಿ ಇರುವದೆಂಬುದನ್ನು ಮೊದಲು ಪರೀಕ್ಷಿಸಬೇಕು. ಜೀವಸತ್ವಗಳು ಬೇರೆಬೇರೆ ಪ್ರಕಾರದವಿರುವದರಿಂದ ಮತ್ತು ಬೇರೆಬೇರೆ ಪ್ರಮಾಣದಲ್ಲಿ ಅನೇಕ ತರದ ಆಹಾರ ಪದಾರ್ಥಗಳಲ್ಲಿರುವದರಿಂದ ಪ್ರತಿ ದಿನದ ಆಹಾರದ ಸಂಕ್ಷೇಪವನ್ನು ತಯಾರಿಸುವಾಗ ಈ ಸಂಗತಿಯ ಕಡೆಗೆ ವಿಶೇಷ ಲಕ್ಷ ಪೂರೈಸಬೇಕು. ಈ ಜೀವಸತ್ವಗಳ ವಿಶಿಷ್ಟ ಲಕ್ಷಣವೆಂದರೆ ಇವುಗಳು ತೀವ್ರ ನಾಶ ಹೊಂದುವವು. ಆಹಾರ ಪದಾರ್ಥವನ್ನು ಬಹಳ ದಿವಸಗಳವರೆಗೆ ಇಡಲಾಗಿ ಅಥವಾ ಬಹಳ ಮಟ್ಟಿಗೆ ಬೇಯಿಸುವದರಿಂದ ಇಲ್ಲವೆ ಎಣ್ಣೆ ತುಪ್ಪ ಮುಂತಾದವುಗಳಲ್ಲಿ ಕರಿಯುವದರಿಂದ ಈ ಜೀವಸತ್ವಗಳು ವಿನಾಶಹೊಂದುವವು. ಆದಷ್ಟು ಆಹಾರವನ್ನು ಸ್ವಾಭಾವಿಕವಾದ ರೀತಿಯಲ್ಲಿಯೇ ಸೇವಿಸಲು ಯತ್ನಿಸಬೇಕು. ಸುಮ್ಮನೆ ಹೆಚ್ಚು ಬೇಯಿಸುವದನ್ನಾಗಲಿ ಕರಿಯುವದನ್ನಾಗಲಿ ಮಾಡುತ್ತ

ಹೋಗಬಾರದು. ಆದಷ್ಟು ತಾಜಾ ಆಹಾರವನ್ನೇ ಸೇವಿಸುವ ರೂಢಿಯನ್ನು ಪ್ರಚಾರದಲ್ಲಿ ತರಬೇಕು.

ಇನ್ನು ಈ ಜೀವಸತ್ವಗಳ ಭಿನ್ನ ಪ್ರಕಾರಗಳನ್ನೂ ಅವುಗಳ ಸಿಗುವಿಕೆಯನ್ನೂ ಮತ್ತು ಅವುಗಳ ಅಭಾವದಿಂದ ದೇಹದ ಮೇಲೆ ಆಗುವ ದುಷ್ಪರಿಣಾಮಗಳನ್ನೂ ವಿವೇಚಿಸೋಣ.

ಜೀವಸತ್ವ (ಅ) ಈ ಜೀವಸತ್ವವು ಸೂರ್ಯಪ್ರಕಾಶದಲ್ಲಿ ಹಸರು ಎಲೆಗಳೊಳಗೆ ಮತ್ತು ಪಲ್ಲೆಯಲ್ಲಿ ತಯಾರಾಗುತ್ತದೆ. ಎಳೆ ಎಲೆಗಳಲ್ಲಿಯೂ ಬೆಳೆಯುವ ಕುಡಿಯಲ್ಲಿಯೂ ಇದು ವಿಶೇಷವಾಗಿ ತಯಾರಾಗುತ್ತದೆ.

ಕ್ಯಾಬೇಜ, ಹರಿವೆ, ರಾಜಗಿರಿ ಕೋತಂಬ್ರಿಕಾಳು ಮತ್ತು ಸೊಪ್ಪು, ನುಗ್ಗಿಯ ಸೊಪ್ಪು, ಹಕ್ಕರಿಕಿ, ಕಿರಕಸಾಲಿ ಮುಂತಾದ ಸೊಪ್ಪುಗಳಲ್ಲಿ ಈ ಜೀವಸತ್ವವು ಹೇರಳವಾಗಿ ಕಂಡುಬರುತ್ತದೆ. ಮೂಲಂಗಿ ಹೊರತಾಗಿ ಉಳಿದಗಡ್ಡೆ ಗೆಣಸುಗಳಲ್ಲಿಯಾಗಲಿ ತೃಣಧಾನ್ಯದಲ್ಲಿಯಾಗಲಿ ಅಥವಾ ಬೇಳೆಕಾಳುಗಳಲ್ಲಿಯಾಗಲಿ ಈ ಜೀವಸತ್ವವು ಹೆಚ್ಚಿನ ಪ್ರಮಾಣದಲ್ಲಿ ಕಾಣುವದಿಲ್ಲ. ಹಣ್ಣುಗಳಲ್ಲಿ ಮಾವಿನಹಣ್ಣು ಮತ್ತು ಪಪಯಿ ಹಣ್ಣುಗಳಲ್ಲಿ ಇದರ ಪ್ರಮಾಣವು ಸಮಾಧಾನಕರ. ಈ ಜೀವಸತ್ವವು ಪ್ರಾಣಿಜನ್ಯ ಪದಾರ್ಥದಲ್ಲಿ ಸ್ವಾಭಾವಿಕವಾಗಿ ತಯಾರಾಗದಿದ್ದರೂ ಈ ಪ್ರಾಣಿಗಳು ಈ ಜೀವಸತ್ವ ಕೂಡಿದ ಆಹಾರವನ್ನು ವಿಶೇಷವಾಗಿ ಸೇವಿಸುತ್ತಿರುವದರಿಂದ ಅವುಗಳ ಯಕೃತ್ತಿನಲ್ಲಿ ಹೋಗಿ ಕೂಡಿಬೀಳುತ್ತದೆ. ಆದ್ದರಿಂದ ಅನೇಕ ಪ್ರಾಣಿಗಳ ಯಕೃತ್ತಿನಲ್ಲಿ ಈ ಜೀವಸತ್ವದ ಪ್ರಮಾಣವು ಹೆಚ್ಚು. ಕಾಡ್ ಎಂಬ ಮೀನದ ಯಕೃತ್ತಿನಲ್ಲಿಯಾಗಲಿ ಅಥವಾ ಹ್ಯಾಲಿಬಟ್ ಎಂಬ ಇನ್ನೊಂದು ಪ್ರಕಾರದ ಮೀನದಲ್ಲಿಯಾಗಲೀ ಈ ಜೀವಸತ್ವವು ಮಿತಿಮೀರಿ ಇದ್ದುದು ಕಂಡುಬಂದಿದೆ. ಇದೇ ಕಾರಣದಿಂದಲೇ ಚಿಕ್ಕ ಮಕ್ಕಳಿಗೆ ಕಾಡ್‌ಲಿವ್ಹರ ಎಣ್ಣೆಯನ್ನಾಗಲಿ ಅಥವಾ ಹಾಲಿಬಟ್ ಲಿವ್ಹರ ಎಣ್ಣೆಯನ್ನಾಗಲಿ ಪ್ರತಿದಿವಸ ಕೊಡುತ್ತಾ ಹೋದರೆ ಬೆಳವಣಿಗೆಗೆ ಬಹಳ ಸಹಾಯವಾಗುತ್ತದೆಂದು ಕಂಡುಬಂದಿದೆ. ಕೋಳಿಯ ತತ್ಕ್ರಿಯಲ್ಲಿ ಕೂಡ ಈ ಸತ್ವವು ಕಂಡುಬರುತ್ತದೆ.

ಈ ಜೀವಸತ್ವವು ಮನುಷ್ಯನಲ್ಲಿಯ ರೋಗ ಪ್ರತೀಕಾರಕ ಶಕ್ತಿಯನ್ನು ಬಲಪಡಿಸುತ್ತದೆ. ಸಾಂಸರ್ಗಿಕ ರೋಗಗಳ ಬಾಧೆಯನ್ನು ಪ್ರತಿಬಂಧಿಸುತ್ತದೆ. ರಕ್ತದ ಪ್ರಮಾಣವನ್ನು ಕಾಯ್ದುತ್ತದೆ. ಇದರ ಅಭಾವದ ಮೂಲಕ ಕುತ್ಸಿತ ಬೆಳವಣಿಗೆ, ಆಗಾಗ್ಗೆ ನೆಗಡಿ, ಕೆಮ್ಮು, ದಮ್ಮು, ಕ್ಷಯ, ಅತಿಸಾರ, ಆಮಾಂಶ, ಉದರರೋಗ ಮುಂತಾದ ರೋಗಗಳು ಸಂಭವಿಸುವವು. ನಮ್ಮ ದೇಹದಲ್ಲಿಯ ಶ್ಲೇಷ್ಮ

ತ್ಪಜೆಯಲ್ಲಿ ರೋಗಕಾರಕ ಜಂತುಗಳು ಬಲು ತೀವ್ರ ಬೆಳೆಯುವವು. ಆದ್ದರಿಂದ ನಾವೆಲ್ಲರೂ ಈ ಜೀವಸತ್ವ (ಅ) ದ ಸಿಗುವಿಕೆಯ ಬಗ್ಗೆ ಅದನ್ನು ಯೋಗ್ಯ ಪ್ರಮಾಣ ದಲ್ಲಿ ಸೇವಿಸುವ ಬಗ್ಗೆ ಹೆಚ್ಚು ದಕ್ಷತೆಯನ್ನು ವಹಿಸಬೇಕು. ಹೆಚ್ಚಾಗಿ ಬೇಯಿಸು ವದರಿಂದ ಈ ಜೀವಸತ್ವವು ನಾಶಹೊಂದುವದರಿಂದ ಅದಷ್ಟು ಸ್ವಾಭಾವಿಕ ರೀತಿ ಯಲ್ಲಿಯೇ ಸೇವಿಸಬೇಕು.

(ಮುಂದೆಸಾಗುವದು)

ಶಿಶುಶಾಲೆಗಳು

(ಅಗಷ್ಟ ೧೯೩೭ ನೆಯ ತಿಂಗಳಿನಿಂದ ಮುಂದೆವರಿದುದು)

ಚಟಗಳು (Habits)

ಪರಿಸ್ಥಿತಿಯ ಬದಲಾವಣೆಯಿಂದ ಬಾಲಕರ ಹಲ ಕೆಲವು ಪುನಃ ಪ್ರವೃತ್ತಿ ಗಳನ್ನು ಸುಧಾರಿಸಬಹುದು. ಪರರ ಹೆಚ್ಚಳವನ್ನು ನೋಡಿ ಮನಸ್ಸಿಗೆ ನೋವಾ ಗುವ ಪ್ರವೃತ್ತಿಯನ್ನು (ಮತ್ಸರ) ಹೊಟ್ಟೆಕಿಚ್ಚೆಂದು ಹೇಳಬಹುದಷ್ಟೇ. ಈ ಬಗೆಯ ಮನಃಪ್ರವೃತ್ತಿಯುಳ್ಳ ಮಗುವಿಗೆ ಆ ಭಾವನೆಯು ಬೆಳವಣಿಗೆಹೊಂದು ವಂಥ ಪರಿಸ್ಥಿತಿಯನ್ನು ತಂದುಕೊಡಲಾಗದು. ಎಂದರೆ ಆ ಮಗುವಿಗಿಂತ ಹೆಚ್ಚಿನ ತರಗತಿಯ ಬಾಲಕರ ಸಹವಾಸವನ್ನು ಅದಷ್ಟು ಒದಗಿಸಲಾಗದು; ಒರಗೆಯ ಬಾಲಕರು ಅಡಿಗಡಿಗೆ ತನ್ನನ್ನು ಹಿಂದಕ್ಕೊತ್ತಿ ತನಗಿಂತ ಹೆಚ್ಚು ಉತ್ಕರ್ಷವನ್ನು ಪಡೆದು ಮುಂದೆಸಾಗುತ್ತಿರುವ ಪರಿಸ್ಥಿತಿಯನ್ನು ಪುನಃ ಪುನಃ ನೋಡುವದರಿಂದ ಆ ಮಗುವಿನ ಮನಸ್ಸಿನಲ್ಲಿ ಮೂಡುತ್ತಿರುವ ಹೊಟ್ಟೆ ಕಿಚ್ಚಿನ ಪ್ರವೃತ್ತಿಯು ಬೆಳವಣಿಗೆಹೊಂದಲು ಅನುಕೂಲವಾಗುವದು. ಚಿಕ್ಕ ಮಕ್ಕಳ ಅನಪೇಕ್ಷಣೀಯವಾದ ಹಲಕೆಲವು ಮನಃ ಪ್ರವೃತ್ತಿಗಳನ್ನು ಉದ್ದೀಪನ ಗೊಳಿಸುವಂಥ ಸಂದರ್ಭಗಳನ್ನು ಪ್ರಯತ್ನಪೂರ್ವಕವಾಗಿ ತಪ್ಪಿಸುತ್ತಹೋಗು ವದರಿಂದ ಅಂಥ ಪ್ರವೃತ್ತಿಗಳು ಕಾಲಾಂತರದಲ್ಲಿ ಅದೃಶ್ಯವಾಗಿಬಿಡುವದೂ ಉಂಟು. ಒಂದು ವೇಳೆ ಹಾಗೆ ಅವು ಸಂಪೂರ್ಣ ನಾಶವಾಗದೆ ಇದ್ದರೂ ಅವುಗಳ ಪ್ರಾಬಲ್ಯವಂತೂ ಬಹುಮಟ್ಟಿಗೆ ಕುಂದಿಹೋಗಬಹುದು. ಬಾಲಕರ ಕೆಲವೊಂದು ಮನಃಪ್ರವೃತ್ತಿಯು, ಪುನಃ ಪುನಃ ಆವರ್ತನೆಯಾಗುವದರಿಂದ, ಅವರಲ್ಲಿ ಬಲವಾಗಿ ನೆಲೆಗೊಳ್ಳುವದು. ಆಗ ಅದಕ್ಕೆ ಚಟವೆಂಬ ಹೆಸರುಬರುವದು. ಮತ್ತು ಬಾಲಕರಲ್ಲಿ ಅತಿ ಪ್ರಬಲವಾಗಿ ಕಂಡುಬರುತ್ತಿರುವ ಹಾಗು ಸ್ಥಿರವಾಗಿ

ನೆಲೆಗೊಂಡಿರುವ ಎಲ್ಲ ಚಟಗಳು ಅವರ ಒಂದಿಲ್ಲೊಂದು ಮೂಲ ಪುನಃಪ್ರವೃತ್ತಿಯನ್ನು ಅವಲಂಬಿಸಿಕೊಂಡೇ ಇರುವವು. ಆರಂಭದಲ್ಲಿ ಒಳ್ಳೆಯದು ಇಲ್ಲವೆ ಕೆಟ್ಟದು ಎಂದು ನಿರ್ಣಯಿಸಲಿಕ್ಕೆ ಬರದಂತಿರುವ ಯಾವದೊಂದು ಮನಃಪ್ರವೃತ್ತಿಯು ಪರಿಸ್ಥಿತಿಯ ಮೂಲಕ ಬೆಳವಣಿಗೆಹೊಂದಿ ಬಾಲಕರಲ್ಲಿ ನೆಲೆಗೊಂಡ ಅವರ ಚಟವೆನ್ನಿಸಿಕೊಂಡಾಗ ಅದು ಒಳ್ಳೆಯ ಇಲ್ಲವೆ ಕೆಟ್ಟ ಚಟವೆಂದು ಹೆಸರಗೊಂಡು ಅವರ ಒಳಿತಿಗೆ ಇಲ್ಲವೆ ಕೆಡಕಿಗೆ ಕಾರಣವಾಗಬಹುದು.

ಉದಾಹರಣೆಗಾಗಿ ಒಂದು ಹಟಗೇಡಿಯಾದ ಮಗುವಿದೆ ಎಂದು ತಿಳಿಯೋಣ. ಅದು ತನ್ನ ಹಟದ ಮೂಲಕ ಚಿಕ್ಕಮಕ್ಕಳನ್ನು ಬೆದರಿಸುವದು; ಅಥವಾ ಪೆಟ್ಟು ಹಿಡಿದು, ಅತ್ತುಕರೆದು, ಕೋಪಿಸಿಕೊಂಡು ತಾನು ಬಯಸಿದ ಒಡವೆಗಳನ್ನು ದೊರಕಿಸಿಕೊಳ್ಳುವದು. ಈ ತರದ ನಡೆವಳಿಯು ಕೆಲವು ದಿನಗಳ ವರೆಗೆ ನಡೆದ ಆ ಮಗುವಿನ ಮನಸ್ಸಿನ ಹಟದ (ಮನಸ್ಸಿಗೆ ತೋರಿದ್ದನ್ನು ಸಾಧಿಸಿ ತೀರಬೇಕೆಂಬ) ಭಾವನೆಯು ವಿಕೃತರೂಪವಾಗಿ ಬೆಳೆದು ದುಷ್ಟ ಚಟವಾಗಿ ಪರಿಣಮಿಸುವದು. ಅದೇ ಮಗುವಿನ ಮೇಲೆ ಹೇಳಿದ ಹಟದ ಭಾವನೆಯನ್ನು ಯಾವದೊಂದು ಕೆಲಸದಲ್ಲಿ ಉಪಯೋಗಿಸಿಕೊಂಡು ಹಿಡಿದ ಕೆಲಸವನ್ನು ಎಷ್ಟು ತೊಂದರೆಬಂದರೂ ಹಿಂದೆಗೆಯದೆ ಹಟಹಿಡಿದು ಕೊನೆಗಾಣಿಸುವ ಸದ್ಗುಣವಾಗಿ ಮಾರ್ಪಡುವಂತೆ ಯತ್ನಿಸುತ್ತಹೋಗಿ, ಮೇಲೆ ಹೇಳಿದಂತೆ ಚಿಕ್ಕಮಕ್ಕಳ ಮೇಲೆ ಅಧಿಕಾರ ನಡೆಯಿಸುವದು ಅಥವಾ ಹಟಮಾರಿತನದಿಂದ ತನ್ನ ಮನಸ್ಸಿನ ಬಯಕೆಯನ್ನು ಪೂರೈಸಿಕೊಳ್ಳುವದು ಇಂಥ ಅಯೋಗ್ಯದಿಕೆಯಲ್ಲಿ ಕೆಲಸಮಾಡುವ ಸಂದರ್ಭವನ್ನು ಅದಕ್ಕೆ ತಂದುಕೊಡದೆ ಇದ್ದುಬಿಟ್ಟರೆ; ಅದೊಂದು ಸದ್ಗುಣವೇ ಆಗಿ ಪರಿಣಮಿಸುವದು. ಮಗುವಿನ ಶಿಕ್ಷಣಕಾರ್ಯವನ್ನು ಒಪ್ಪಿಕೊಂಡವನು ಅದಕ್ಕೆ ಯೋಗ್ಯವಾದ ಪರಿಸ್ಥಿತಿಯನ್ನೂ ಒಳ್ಳೆಯ ಸನ್ನಿವೇಶಗಳನ್ನೂ ಒದಗಿಸಿಕೊಟ್ಟು ಮಗುವಿನಲ್ಲಿ ಒಳ್ಳೆಯ ಮನಃಪ್ರವೃತ್ತಿಗಳೇ ಜಾಗ್ರತವಾಗಿ ಕೆಟ್ಟ ಪ್ರವೃತ್ತಿಗಳಿಗೆ ಸಂದರ್ಭಗಳೇ ದೊರೆಯದಂತೆ ಮಾಡುತ್ತಹೋದರೆ ದುಷ್ಟ ಪ್ರವೃತ್ತಿಗಳಿಗೆ ಅವಕಾಶವಿಲ್ಲದಂತಾಗಿ ಅವು ತಮ್ಮಷ್ಟಕ್ಕೆ ತಾವೇ ಅಡಗಿಹೋಗುವವು.

ಬಹುಶಃ ಮಗುವು ಹುಟ್ಟಿದಾಗಿನಿಂದಲೆ ಸ್ವಂತ ಅನುಭವದಿಂದಲೂ ಸುತ್ತಲಿನ ಪರಿಸ್ಥಿತಿಯಿಂದಲೂ ತನ್ನ ನಡತೆಯನ್ನು ಕಲಿಯುತ್ತ ಸಾಗುವದು. ಎಂದು ಮಗುವು ಹುಟ್ಟಿದಂದಿನಿಂದಲೆ ತನ್ನ ಪರಿಸ್ಥಿತಿಗೂ ಅನುಭವಕ್ಕೂ ಅನುಗುಣವಾದ ಒಳ್ಳೆಯ ಇಲ್ಲವೆ ಕೆಟ್ಟ ಚಟಗಳನ್ನು ಸಂಗ್ರಹಿಸುತ್ತಹೋಗುವದು. ಈ ಚಟಗಳ

ಆರಂಭದ ಕೆಲವು ತಿಂಗಳುಗಳ ವರೆಗೆ ಆಹಾರ, ನಿದ್ದೆ, ಮಲಮೂತ್ರ ವಿಸರ್ಜನೆ ಮುಂತಾದ ಶಾರೀರಿಕ ಕಾರ್ಯಗಳಿಗೆ ಮಾತ್ರ ಸಂಬಂಧಿಸಿರುವವು. ತಿರುತಿರುಗಿ ಅನುಭವಿಸುವ, ಕಂಡು ಕೇಳುವ, ಸಂಗತಿಗಳನ್ನು ಗ್ರಹಿಸಿಕೊಳ್ಳುವದು ಮಗುವಿನ ಸ್ವಭಾವ ಅಥವಾ ಹುಟ್ಟುಗುಣವಾಗಿದೆ. ಈ ಬಗೆಯ ಸಂಗ್ರಹವೇ ಬರಬರುತ್ತ ಆ ಮಗುವಿನ ಚಟವಾಗಿ ಮಾರ್ಪಡುವದು. ಆದುದರಿಂದ ಮೇಲೆ ಹೇಳಿದ ಮಗುವಿನ ಆಹಾರ ನಿದ್ದೆ ಮುಂತಾದ ಶಾರೀರಿಕ ಕಾರ್ಯಗಳಲ್ಲಿ ಕೆಲವೊಂದು ನಿಯಮಿತತನವನ್ನೂ ಕಾಲನಿಯಮವನ್ನೂ ಪ್ರಾರಂಭದಿಂದಲೇ ಅದರ ಪಾಲಕರು ತೋರಿಸುತ್ತಬಂದರೆ ಅದು ಆ ಮಗುವಿಗೆ ರೂಢಿಯಾಗಿ ಅದರ ಚಟವಾಗಿ ಮಾರ್ಪಡಬಹುದು. ಮಗುವಿನ ಬಾಲ್ಯಾವಸ್ಥೆಯಲ್ಲಿ ಈ ಶಾರೀರಿಕ ಚಟಗಳನ್ನು ಬೆಳೆಯಿಸುವಾಗ ತಂದೆತಾಯಿಗಳು ಅಥವಾ ದಾಯಿಯರು ಬಹು ಎಚ್ಚರಿಕೆಯಿಂದ ಇದ್ದು ಅವು ವಿಶಿಷ್ಟ ವ್ಯಕ್ತಿವಿಷಯಕವೆಂದಾಗಲಿ ತಾವು ವಿಶಿಷ್ಟ ಮನೋವಿಕಾರಗಳಿಗೆ ಒಳಗಾಗಿರುವನೆಂದಾಗಲಿ ತೋರಿಸಿಕೊಳ್ಳಲಾಗದು. ಚಿಕ್ಕಮಗುವನ್ನು ಎತ್ತಿಕೊಂಡಾಗ ಸಿಟ್ಟಿಗೇಳುವದು ಒಳಿತಲ್ಲ. ಮತ್ತು ಅದನ್ನು ಆಡಿಸುತ್ತಿರುವಾಗ ಯಾವದೊಂದು ಕೆಲಸಕ್ಕೆ ಅಯೋಗ್ಯ ಮಹತ್ವಕೊಟ್ಟು ಅಡಿಗಡಿಗೆ ಅನವಶ್ಯಕವಾಗಿ ಮನೋವಿಕಾರಗಳಿಗೆ ಒಳಗಾಗಿ ನಾಚಿಕೆ ಭಯ ಮುಂತಾದ ಮನೋಭಾವನೆಗಳನ್ನು ವ್ಯಕ್ತಪಡಿಸುವದೂ ಹಿತಕರವಲ್ಲ.

ಮಗುವು ಬೆಳೆಯುತ್ತ ಹೋದಂತೆ ನೈತಿಕ, ಸಾಮಾಜಿಕ, ಬೌದ್ಧಿಕಚಟಗಳು ಬೆಳೆವಣಿಗೆ ಹೊಂದುವವು. ಈ ಚಟಗಳು ಬೆಳೆವಣಿಗೆ ಹೊಂದುವದಕ್ಕೆ ಮಗುವಿನ ಮಾನಸಿಕ ಸ್ಫೂರ್ತಿಯೂ ಚಟಗಳಿಗೆ ಸಂಬಂಧಿಸಿದ ಮನೋವಿಕಾರಗಳ ಪ್ರೇರಣೆಯೂ ಆವಶ್ಯಕವಾಗಿರುವವು. ಆಯಾ ಮನಃ ಪ್ರವೃತ್ತಿಗಳೇ ಬೆಳೆವಣಿಗೆ ಹೊಂದಿ ಚಟದ ರೂಪಕ್ಕೆ ಬರಬೇಕಾದದ್ದು ತೀರ ಆವಶ್ಯಕವಾಗಿದೆ; ಮಗುವಿನ ಮೂಲ ಮನಃ ಪ್ರವೃತ್ತಿಗೆ ವಿರುದ್ಧವಾಗಿ ಯಾವದೊಂದು ಸಂಗತಿಯ ಬಗ್ಗೆ ಕೇವಲ ಬಲಾತ್ಕಾರದಿಂದ ತಿರುತಿರುಗಿ ರೂಢಿ ಮಾಡಿಸುವದರಿಂದ ಅದು ಆ ಮಗುವಿನ ಚಟವೆನಿಸಿಕೊಳ್ಳಬಹುದಾದರೂ ಅದರಿಂದ ಆ ಮಗುವಿನ ಮನಃಶಕ್ತಿಯನ್ನು ಬಹ ಮಟ್ಟಿಗೆ ಕುಂದಿಸಿ ಅದರ ವ್ಯಕ್ತಿತ್ವವನ್ನು ಹತ್ತಿಕ್ಕಿದಂತಾಗುವದೆಂಬದನ್ನು ಮರೆಯಲಾಗದು.

ಪ್ರತಿ ಮಗುವಿಗೂ ಒಳ್ಳೆಯ ಚಟಗಳ ಅಸ್ತಿವಾರವನ್ನು ಹಾಕಿಕೊಟ್ಟು ತನ್ನ ಮುಂದಿನ ಜೀವನಕ್ರಮವನ್ನು ಸುಯಂತ್ರಿತವಾಗಿ ಪ್ರಾರಂಭಿಸುವದಕ್ಕೆ ತಕ್ಕ ಯೋಗ್ಯತೆಯನ್ನು ತಂದುಕೊಡುವದೇ ಶಿಶುಶಾಲೆಗಳ ಧ್ಯೇಯವಾಗಿದೆ. ಶಿಶುಶಾಲೆ

ಗಳಲ್ಲಿ ದೊರಕಿಸಿದ ಚಟಗಳು ಆ ಮಗುವಿನ ಅಂತರ್ಮನದವರೆಗೂ ನಾಟಿ ಬೇರು ಬಿಟ್ಟು ಅದರ ಸ್ವಭಾವವಾಗಿಬಿಡುವವು. ಅವುಗಳ ವಿಷಯಕ್ಕೆ ಆ ಮಗುವು ಏನೂ ವಿಚಾರಮಾಡಬೇಕಾಗುವದಿಲ್ಲ. ಆ ಮಗುವಿನಲ್ಲಿ ಶೋಧಕ ಬುದ್ಧಿಯು ಜಾಗ್ರತವಾಗಿ ಹೆಚ್ಚಿನ ಉತ್ಸಾಹವು ಹೊರಹೊಮ್ಮುತ್ತಿರುವದು; ಆಗ ತನ್ನ ವ್ಯಕ್ತಿತ್ವವನ್ನು ಸರಿಯಾಗಿ ಬೆಳೆಯಿಸಿಕೊಂಡಿರುವರು.

(ಮುಂದೆಸಾಗುವದು)

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆ ೧೯೩೮

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಜನೆಯ ಏಪ್ರಿಲ ೧೯೩೮ ನೆಯ ದಿವಸ ಸೋಮವಾರ ಹಾಗು ಅದರ ಮುಂದಿನ ದಿವಸಗಳಲ್ಲಿ ನಡೆಯುವದು.

ಡಿಸ್ಟ್ರಿಕ್ಟ		ಸೆಂಟರು
೧ ಧಾರವಾಡ	೧	ಧಾರವಾಡ
	೨	ಗದಗ
	೩	ಹುಬ್ಬಳ್ಳಿ
೨ ಬೆಳಗಾವ	೪	ಬೆಳಗಾವ
	೫	ಚಿಕ್ಕೋಡಿ
	೬	ಗೋಕಾಕ
೩ ವಿಜಾಪುರ	೭	ವಿಜಾಪುರ
	೮	ಬಾಗಲಕೋಟ
೪ ಕಾರವಾರ	೯	ಕಾರವಾರ
೫ ಕೊಲ್ಲಾಪುರ ಸಂ.	೧೦	ಕೊಲ್ಲಾಪುರ

ಧಾರವಾಡ ಜಿಲ್ಲೆಯ ಗದಗ, ನವಲಗುಂದ, ರೋಣ ತಾಲೂಕುಗಳ ಮತ್ತು ಸಂಸ್ಥಾನಗಳಲ್ಲಿ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳ ಉಮೇದವಾರರು ಗದಗ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

ಧಾರವಾಡ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್ ಬಾಯಸದ ಉಮೇದವಾರರು ಸಹ) ಧಾರವಾಡ ಸೆಂಟರಿನಲ್ಲಿಯೇ ಪರೀಕ್ಷೆಗೆ ಕೂಡ್ರಬೇಕು.

ಧಾರವಾಡ ಜಿಲ್ಲೆಯ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ ಸೆಂಟರಿ
ಲ್ಲಿ ಪರೀಕ್ಷೆಗೆ ಕೂಡ್ರಬೇಕು.

ಬೆಳಗಾವಿ ಜಿಲ್ಲೆಯ ಅಥಣಿ, ಗೋಕಾಕ ತಾಲೂಕುಗಳ ಉಮೇದವಾರರು
ಗೋಕಾಕ ಸೆಂಟರಿನಲ್ಲಿಯೂ ಚಿಕ್ಕೋಡಿ ತಾಲೂಕಿನ ಉಮೇದವಾರರು ಚಿಕ್ಕೋಡಿ
ಸೆಂಟರಿನಲ್ಲಿಯೂ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್
ತಯಾರ್ **ಉಮೇದವಾರರು ಸಹ**) ಬೆಳಗಾವಿ ಸೆಂಟರಿನಲ್ಲಿಯೂ ಪರೀಕ್ಷೆಗೆ
ಕೂಡ್ರಬೇಕು.

ವಿಜಾಪುರ ಜಿಲ್ಲೆಯ ಬಾಗಲಕೋಟ, ಹುನಗುಂದ, ಬದಾಮಿ, ಮುದ್ದೇಬಿ
ಹಾಳ ತಾಲೂಕುಗಳ ಹಾಗು ಜಮಖಂಡಿ, ರಾಮದುರ್ಗ, ಮುಧೋಳ ಸಂಸ್ಥಾನ
ದ ಎಲ್ಲ ಕನ್ನಡ ಉಮೇದವಾರರು ಬಾಗಲಕೋಟಿ ಸೆಂಟರಿನಲ್ಲಿ ಪರೀಕ್ಷೆಗೆ
ಕೂಡ್ರಬೇಕು. ವಿಜಾಪುರ ಜಿಲ್ಲೆಯ ಮಿಕ್ಕ ಕನ್ನಡ, ಮರಾಠಿ, ಉರ್ದು,
ಅಗ್ರಿಕಲ್ಚರಲ್ ತಾಯಸದ ಎಲ್ಲ ಉಮೇದವಾರರು ವಿಜಾಪುರ ಸೆಂಟರಿನಲ್ಲಿ
ಪರೀಕ್ಷೆಗೆ ಕೂಡ್ರಬೇಕು.

ಈ ಪರೀಕ್ಷೆಯು ಮುಂಬಯಿ ಗವರ್ಮೆಂಟ ಗ್ಯಾಝೆಟಿನ ವಿದ್ಯಾಖಾತೆಯ
ನೋಟಿಫಿಕೇಶನ್ನಿನ ನಂ. $\frac{\text{೨೨೪೮}}{\text{೧೯೨೯-೨೯೩೪}}$ ಹಾಗೂ ೨೯-೬-೧೯೨೯ ಮತ್ತು
೩೦-೩-೧೯೩೦ ಹಾಗು ೩೦-೪-೧೯೩೧ ಮುಂಬಯಿ ಗ್ಯಾಝೆಟಿನ ಭಾಗ ೧
$\frac{\text{೧೯೨೮}}{\text{೧೯೨೯}}$, $\frac{\text{೧೯೬೩}}{\text{೧೯೩೪}}$, $\frac{\text{೨೨೪೮}}{\text{೩೦-೪-೩೦}}$, $\frac{\text{೧೩೮೪}}{\text{೩೦-೪-೧೯೩೧}}$ ಈ ಪುಟಗಳಲ್ಲಿ
ಸಿದ್ಧಿಸಿದ ಮೇರೆಗೆ ನಡೆಯುವದು.

ಮೇಲೆ ಹೇಳಿದ ಪ್ರತಿಯೊಂದು ಸೆಂಟರಿನಲ್ಲಿ ಒಂದೊಂದು ಪರೀಕ್ಷಾ ಕಮೀಟಿ
ಇರುವದು. ಹಾಗು ಆಯಾ ಕಮೀಟಿಯ ಪ್ರೆಸಿಡೆಂಟರು ಕೆಳಗೆ ಬರೆದ ಪ್ರಕಾರ
ಇರುವರು.

(೧) ಧಾರವಾಡ	**ಸೆಂಟರ**	ಹೆಡ್‌ಮಾಸ್ತರ ಗವರ್ಮೆಂಟ ಹಾಯಸ್ಕೂಲ ಧಾರವಾಡ
(೨) ಗದಗ	,,	ಸೀನಿಯರ ಅಸಿಸ್ಟಂಟ ಎಜ್ಯುಕೇಶನ್ ಇನ್‌ಸ್ಪೆಕ್ಟರ ಧಾರವಾಡ
(೩) ಹುಬ್ಬಳ್ಳಿ	,,	ಹೆಡ್‌ಮಾಸ್ತರ ಆಂಗ್ಲೋ ಉರ್ದು ಹಾಯಸ್ಕೂಲು ಹುಬ್ಬಳ್ಳಿ
(೪) ಬೆಳಗಾವ	,,	ಹೆಡ್‌ಮಾಸ್ತರ ಸರದಾರ ಹಾಯಸ್ಕೂಲು ಬೆಳಗಾವ

(ಜ) ಚಿಕ್ಕೋಡಿ	ಸೆಂಟರ	ಸೀನಿಯರ ಅಸಿ। ಡೆವೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಬೆಳಗಾ
(ಟ) ಗೋಕಾಕ	,,	ಡೆವೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಉರ್ದುಸ್ಕೂಲ್ಸ ಎಸ್. ಡಿ. ಧಾರವಾ
(ಟ) ವಿಜಾಪುರ	,,	ಹೆಡ್‌ಮಾಸ್ತರ ಗವರ್ಮೆಂಟ ಹಾಯಸ್ಕೂ ವಿಜಾಪು
(ಲ) ಬಾಗಲಕೋಟೆ	,,	ಸೀನೀಯರ ಅಸಿ। ಡೆ. ಎಜ್ಯುಕೇಶನಲ್ ಇನಸ್ಪೆಕ್ಟರ ವಿಜಾಪೂರ
(೯) ಕಾರವಾರ	,,	ಹೆಡ್‌ಮಾಸ್ತರ ಗವರ್ಮೆಂಟ ಹಾಯಸ್ಕೂ ಕಾರವಾ
(೧೦) ಕೊಲ್ಲಾಪೂರ	,,	ಇನಸ್ಪೆಕ್ಟರ ಆಫ್ ಪ್ರಾಯಮರಿ ಎಜ್ಯು ಕೇಶನ್ ಕೊಲ್ಲಾಪೂರ ಸ್ಟೇ

೪. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ತಾವು ಪರೀಕ್ಷೆ ಕೂಡ್ರುವ ಸೆಂಟರಿನ ಪರೀಕ್ಷಾಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾರೀಖಿ ೧-೩-೧೯೩೭ರ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂ ಪರೀಕ್ಷೆಯ ಪರವಾನಿಗೆಯ ಬಗ್ಗೆ ಗೊತ್ತಾದ ಫಾಪೀನಮೂನೆಯ ಮೇಲೆ ಅಜ ಯನ್ನು ಕಳಿಸತಕ್ಕದ್ದು. ೧-೩-೧೯೩೭ರ ತರುವಾಯ ಬಂದ ಅರ್ಜಿಯನ ಹಿಡಿಯಲಿಕ್ಕಿಲ್ಲ. ಯಾವದೊಂದು ಬ್ರಿಟಿಶ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂ ಲಿಚ್ಚಿಸುವ ದೇಶೀಯ ಸಂಸ್ಥಾನಗಳ ಉಮೇದವಾರರು ಆಯಾ ಸಂಸ್ಥಾನ ವಿದ್ಯಾಖಾತೆಯ ಯೋಗ್ಯ ಅಧಿಕಾರಸ್ಥರ ಮುಖಾಂತರವಾಗಿ ತಮ್ಮ ಅರ್ಜಿಯನ್ನು ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಹಾಗು (ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ) ಸಾಲೆಯ ಹೆಸರು ಇರಲಿಕ್ಕೆಬೇಕು. ಅರ್ಜಿಯ ಸಂಗಡಲೆ ೩ ರೂಪಾಯಿ ಪರೀಕ್ಷೆಯ ಫೀಯನ್ನು ಸಹ ಕಳಿಸಲೇಬೇಕು. ಸಂಪೂರ್ಣ ಮಾಹಿತಿ ಇಲ್ಲದ್ದ ಅರ್ಜಿಯೂ ಫೀ ತುಂಬದಿದ್ದ ಅರ್ಜಿಯೂ ಅರ್ಜಿಯಿಲ್ಲದೆ ಕಳಿಸಿದ ಫೀ ಹಣವೂ ಯಾವ ಸೇವನ್ನೂ ಕೇಳದೆ ತಿರಸ್ಕರಿಸಲ್ಪಡುವವು. ಅರ್ಜಿಯ ಸಮೂನೆಗಳು ಪರೀಕ್ಷಾಕಮೀಟಿಯ ಪ್ರೆಸಿಜೆಂಟರ ಕಡೆಗೆ ದೊರೆಯುವವು ಬೇಕಾದವರು ತರಿಸಿ ಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೫. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರ ವಯಸ್ಸು ೧೯೩೭ನೇ ಇಸ್ವಿಯ ಜನವರಿ ೧ಕ್ಕೆ ೧೫ ವರ್ಷಕ್ಕೆ ಮಿಕ್ಕಿರಬಾರದು. ತಾವು ಯಾವ ಜಿಲ್ಲೆಯಲ್ಲಿ

ಪರೀಕ್ಷೆಗೆ ಕೂಡ್ರಲಿಚ್ಚಿಸುವರೋ ಆ ಜಿಲ್ಲೆಯಲ್ಲಿ ಅವರು ಅದಕ್ಕೂ ಹಿಂದೆ ೬ ತಿಂಗಳು ವಾಸವಾಗಿರಬೇಕು. ಆ ಪ್ರಕಾರ ವಾಸವಾಗಿದ್ದ ಬಗ್ಗೆ ಯಾವ ಸ್ಥಳದಲ್ಲಿ ರಿಕಗ್‌ನಾಯಿಝಡ ಶಾಲೆಯ ಮಾಸ್ತರರ ಸರ್ಟಿಫಿಕೇಟ ಹಾಜರಪಡಿಸಬೇಕು. ಎಂದೂ ಶಾಲೆಗೆ ಹೋಗದಿದ್ದ ಉಮೇದವಾರರು ಈ ಬಗ್ಗೆ ಸರಕಾರದಿಂದ ಮಾನ್ಯವಾದ ಶಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆದರ್ಜೆಯಿಲ್ಲದ ಸನ್ಮಾನ್ಯ ಗೃಹಸ್ಥನ ಸರ್ಟಿಫಿಕೇಟನ್ನು ಹಾಜರಮಾಡಬೇಕು.

೬. ಧಾರವಾಡ, ಕಾರವಾರ ಜಿಲ್ಲೆಯ ದೇಶಭಾಷೆಯು ಕನ್ನಡವೆಂದೂ ವಿಜಾಪುರ, ಬೆಳಗಾವ ಜಿಲ್ಲೆಗಳ ದೇಶಭಾಷೆಗಳು ಕನ್ನಡ ಹಾಗು ಮರಾಠಿ ಎಂದೂ ಕೊಲ್ಹಾಪುರ ಸಂಸ್ಥಾನದ ದೇಶಭಾಷೆಯು ಮರಾಠಿ ಎಂದೂ ಎಣಿಸಲ್ಪಟ್ಟಿದೆ. ಧಾರವಾಡ ಹಾಗು ಕಾರವಾರ ಜಿಲ್ಲೆಗಳಿಂದ ಮರಾಠೀ ಭಾಷೆಯಲ್ಲಿ ಪರೀಕ್ಷೆಗೆ ಕೂಡ್ರುವ ಉಮೇದವಾರರು ಬೆಳಗಾವಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು.

೭. ಈ ಪರೀಕ್ಷೆಗೆ ನೇವಿಸಿದ ಪುಸ್ತಕಗಳು ಮುಂಬಯಿ ಸರಕಾರದ ೧೯೩೬ನೆ ನವಂಬರ ೧೯ನೆ ತಾರೀಖಿನೆಯ ಇಸವಿಯ ಗ್ಯಾಝೆಟಿನ ೨ನೆಯ ಭಾಗದ ೫೩೩ನೆಯ ಪುಟದಲ್ಲಿ ಈ ಮೊದಲೇ ಪ್ರಸಿದ್ಧವಾಗಿವೆ.

ಈ ಪರೀಕ್ಷೆಗೆ ಬೇಕಾದ ಮಿಕ್ಕ ಎಲ್ಲ ವಿಷಯಗಳು ಅಂದರೆ ಪರೀಕ್ಷೆಯ ಅಭ್ಯಾಸಕ್ರಮ ಮುಂತಾದವುಗಳು ಮೇಲೆ ಬರೆದ ಗ್ಯಾಝೆಟಿನ ಪುಟದ ೨ನೆಯ ಕ್ಯಾಲಾದಲ್ಲಿ ಪ್ರಕಟವಾಗಿವೆ.

ಶೇತಕೀ ವಿಷಯವನ್ನು ಆರಿಸಿಕೊಂಡ ಉಮೇದವಾರರ (ಅಗ್ರಿಕಲ್ಚರಲ್ ಬಾಯಿಸ್) ವ್ಹ. ಫಾ. ಪರೀಕ್ಷೆಯೂ ಸಹ ಇವೇ ತಾರೀಖುಗಳ ದಿವಸ ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಈ ಸೆಂಟರುಗಳಲ್ಲಿ ಮಾತ್ರ ಜರಗಿಯುವದು. ಈ ಪರೀಕ್ಷೆಯು ಎಜ್ಯುಕೇಶನಲ್ ಡಿಪಾರ್ಟಮೆಂಟಿನ ಸರಕಾರೀ ಠರಾವಿನ ನಂ. $\frac{೧೦೧೯}{೬-೭-೧೯೩೫}$ ಹಾಗು ೯-೬-೧೯೩೫ ರ ಮೇರೆಗೆ ಪ್ರಸಿದ್ಧವಾದ ಪ್ರಕಾರ ನಡೆಯುವದು. ಈ ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ಪರೀಕ್ಷೆಯ ಪರವಾನಿಗಿಯ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರಲ್ ಬಾಯಿಸ್ ಅಭ್ಯಾಸದ ಮೂರು ವರ್ಷದ ಅಭ್ಯಾಸಕ್ರಮವನ್ನು ಮುಗಿಸಿರುವ ಬಗ್ಗೆ ಸರ್ಟಿಫಿಕೇಟನ್ನು ಕಳಿಸಬೇಕು.

ಎಜ್ಯುಕೇಶನಲ್ ಇನಸ್ಪೆಕ್ಟರ
ದ. ಭಾ. ಇವರ ಆಫೀಸ
ಧಾರವಾಡ ೨೮-೧೨-೩೬

ಸೈಯ್ಯದ ನೂರುಲ್ಲಾ
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಪತ್ರಗಳ ಸಾರಾಂಶ

೧. ಶಾಳಾ ಕದರಮಂಡಲಗಿ ತಾಲೂಕ ರಾಣೇಬೆನ್ನೂರ ಇಲ್ಲಿಯ ಆ ಮಾ. ಶ್ರೀ. ವೆಂ. ದೇ. ಕುಲಕರ್ಣಿ ಇವರು ಬರೆದದ್ದು—"ಈ ಶಾಲೆಯಲ್ಲಿ ೧–೧೨–೩೬ ನೆಯ ಇಸವಿಯ ದಿವಸ ವೇ. ಸ್ವಾಮಿ ವೀರಪ್ಪಯ್ಯಾ ಹಿರೇಮಠ ಇವರ ಅಧ್ಯಕ್ಷತೆಯ ಕೆಳಗೆ ವಾರ್ಷಿಕ ಪರೀಕ್ಷೆಯ ಇನಾಮಿನ ಸಮಾರಂಭವು ಜರುಗಿತು. ಆ ವಿ. ಲಿಂಗಪ್ಪ ಸಾಳಿ ಇವರು ತಮ್ಮ ಸ್ವಂತ ಖರ್ಚಿನಿಂದ ೭–೮ ರೂ. ಬೆಲೆಬಾಳುವ ಪಾಟಿ, ಪುಸ್ತಕ, ಟೊಪ್ಪಿಗೆ, ಕನ್ನಡಿ, ಹಣಿಗೆ ಇ. ಗಳನ್ನು ವಿದ್ಯಾರ್ಥಿಗಳಿಗೆ ಪಾರಿತೋಷಿಕ ರೂಪದಿಂದ ಕೊಟ್ಟರು. ಈಗ ಇಲ್ಲಿಯ ಮುಖ್ಯ ಶಿಕ್ಷಕರಾದ ವಿ. ತುಪ್ಪದ ಹಾಗು ಅವರ ಅಸಿ। ರ ಪ್ರಯತ್ನದಿಂದ ಶಾಲಾ ಸುಧಾರಣೆಯು ಚೆನ್ನಾಗಿದ್ದು ಒಟ್ಟು ವಿ. ಗಳ ಪೈಕಿ ವಿ. ಗಳು ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ ಇತ್ಯಾದಿ, ಸ್ತುತ್ಯವು.

೨. ಹುಬ್ಬಳ್ಳಿ ಉರ್ದುಸ್ಕೂಲಿನ ಮಾಸ್ತರರು ವಿ. ಎಮ್. ಎಮ್. ಲಗದಖ ಇವರು ಬರೆದದ್ದು— "ತಾ. ೨೩–೧೨–೩೬ ನೆಯ ಇಸವಿಯ ದಿವಸ ಉರ್ದುಶಾಲೆಯ ಹೆ. ಮಾ. ವಿ. ಕಿರೇಸೂರ ಇವರನ್ನು ಹುಬ್ಬಳ್ಳಿಯ ಪ್ರಾ. ಶಾ. ಗಳ ಮೇಲೆ ಸುಪರವಾಯಿಝರನ್ನಾಗಿ ನೇಮಿಸಿದ್ದಕ್ಕಾಗಿ ಸ್ಕೂಲಬೋರ್ಡ ಜೆಅತಮನ್ನ ಸಾ. ರವರ ಅಧ್ಯಕ್ಷತೆಯ ಕೆಳಗೆ ಸನ್ಮಾನ ಸಮಾರಂಭವನ್ನು ನೆರವೇರಿಸಿದರು." ಸ್ತುತ್ಯವು.

೩. ಗುಡಗೇರಿ ತಾಲೂಕಿನ ಶಿಕ್ಷಣ ಸಪ್ತಾಹ— ವಿ. ಚಿ. ಶ್ರೀ. ಕುಲಕರ್ಣಿ ಇವರು ಬರೆದದ್ದು— "ತಾ. ೧೭, ೧೮ ದಿಶಂಬರ ೧೯೩೬ ನೆಯ ಇಸವಿಯ ದಿವಸ ಮೆ॥ ದೇಶಪಾಂಡೆ ಸಾ॥ ರವರ ಅಧ್ಯಕ್ಷತೆಯ ಕೆಳಗೆ ಈ ಸಪ್ತಾಹವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ಮಾದರಿ ಪಾಠಗಳು ಚೆನ್ನಾಗಿ ಒದಗಿದವು. ಶ್ರೀ. ತ. ನಾ. ಅಮ್ಮಿನಭಾವಿಯವರೂ ಶ್ರೀ. ಚಿ. ಶ್ರೀ. ಕುಲಕರ್ಣಿಯವರೂ ಶ್ರೀ. ಕಟ್ಟಿಮನಿ ಮಾಸ್ತರರೂ ಉತ್ತಮವಾಗಿ ಪರಿಣಾಮಕರವಾಗುವಂತೆ ಮಾದರಿ ಪಾಠಗಳನ್ನು ಕಲಿಸಿ ತೋರಿಸಿದರು. ಈ ಸಪ್ತಾಹ ಕಾರ್ಯಕ್ಕೆ ಪ್ರಾ. ಪಾಟೀಲರು, ಹೆ. ಮಾ. ಶ್ರೀ. ಎಸ್. ಕೆ. ಕುಲಕರ್ಣಿಯವರೂ

ಳಕ್ಕ ಸದ್ಗೃಹಸ್ಥರೂ ಮನಮುಟ್ಟಿ ಸಹಾಯಮಾಡಿದ್ದರಿಂದ ಸಪ್ತಾಹಕ್ಕೆ ಒಳ್ಳೇ ಫಲವೇರಿತು. ಈ ಬಗೆಯ ಸಪ್ತಾಹಗಳು ಮೇಲಿಂದಮೇಲೆ ಬರುಗುವದರಿಂದ ಕ್ಷಣಕ್ಕೆ ತಕ್ಕ ಚಾಲನೆಯು ದೊರೆಯುವದು" ಸ್ತುತ್ಯವು.

೫. ಶಾಳಾ ಅಸನೋಟಿ ಜಿಲ್ಲಾ ಕಾರವಾರ ಈ ಶಾಲೆಯ ಹೆಡ್‌ಮಾಸ್ತರು ಬರೆದದ್ದು— "ಪ್ರತಿವರ್ಷದ ಸಾಂಪ್ರದಾಯದಂತೆ ಪುರುಷೋತ್ತಮ ಶಂಕ್ರಪ್ಪ ಸಾಳುಂಖೆ ಇವರು ತಮ್ಮ ಕೈ. ವಾ. ಶಂಕರನ ಸ್ಮರಣಾರ್ಥವಾಗಿ ೨೬-೧೦-೧೯೩೩ನೆಯ ದಿನ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಟಿ, ಪುಸ್ತಕ, ಟೊಪ್ಪಿಗೆ, ಅಂಗಿ, ಇ. ಗಳನ್ನು ಮೆ. ಅಡ್ಮಿನಿಸ್ಟ್ರೇಟರ ಆಫೀಸರರವರ ಹಸ್ತದಿಂದ ಕೊಡಿಸಿದರು. ಇದು ಇವರ ತಂದೆಯವರ ಕಾಲದಿಂದಲೂ ನಡೆದು ಬಂದಿದೆ. ಅದನ್ನೇ ಇವರು ಮುಂದೆ ಸಾಗಿಸಿದ್ದು ಅವರಿಗೆ ಭೂಷಣಾಸ್ಪದವು"

೬. ಶಾಳಾ ಖಾನಾಪುರ ಜಿ. ಬೆಳಗಾವ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯ ಹೆಡ್‌ಮಾಸ್ತರರು ಬರೆದದ್ದು— "ನಮ್ಮಲ್ಲಿ ಶ್ರೀ. ಸರಸ್ವತೀದೇವಿಯ ಪೂಜಾರಂಭದ ಕಾಲಕ್ಕೆ ಈ ಊರ ಸದ್ಗೃಹಸ್ಥರು ಶಾಲಾ ವಿದ್ಯಾರ್ಥಿಗಳ ವ್ಯಾಯಾಮದ ಉಪಕರಣಕ್ಕಾಗಿ ೧೮ ರೂ. ವರ್ಗಣೆ ಕೊಟ್ಟರು" ಸ್ತುತ್ಯವು.

ಮಿಡಲ್‌ಸ್ಕೂಲು ಸ್ಕಾಲರಶಿಪ್ ಪರೀಕ್ಷೆಯು

ಈ ಪರೀಕ್ಷೆಯು ತಾ ೪-೨-೧೯೩೪ ಕ್ಕೆ ಆರಂಭವಾಗುವದೆಂದು ಕಳೆದ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸಿದ್ದೆವು. ಅದು ರದ್ದಾಗಿ ತಾ. ೫-೨-೧೯೩೪ ಕ್ಕೆ ಆರಂಭವಾಗುವದೆಂದು ತಿಳಿದಿದೆ. ವೇಳಾಪತ್ರಿಕೆಯು ಮೊದಲಿನಂತೆಯೇ ಇರುವದು.

ಪ್ರ ಕ ಟ ನೆ

ಕನ್ನಡ ಬುಕ್‌ಕಮೀಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಅ.ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂ.	ಮಂಜೂರ ನಂ. (ಇ. ನಾ. ರ. ನಂ.)
೧	ಪ್ರಥಮ ಚಿಕಿತ್ಸೆ ೧ನೇ ಆ. ೧೯೩೭	ಪ್ರೊ. ಕೆ. ಜಿ. ಕುಂದಣಗಾರ ಎಮ್. ಎ. ರಾಜಾರಾಮ ಕಾಲೇಜ ಕೊಲ್ಲಾಪೂರ	ಮು .ಯಶವಂತ ನಾರಾಯಣ ಭಟ ಕೊಲ್ಲಾಪುರ	೦–೩–೦	ಪ್ರಾ. ಶಾ. ಗಳವಿ. ಗಳ L ಬುಕ್ಕು	47/P 8162 28–1–38
೨	ಕನ್ನಡ ಗುರುವ್ಯಾಕರಣ ತಿದ್ದಿಬೆಳೆಯಿಸಿದ ೨ನೆ ಆ. ೧೯೩೭	ಮು. ಸಿದ್ಧಾಮಯ್ಯಾ ಸಂಗಯ್ಯಾ ಹಿರೇಮಠ ಶಿಸುವಿನ ಹಳ್ಳಿ P. ಹೆಬಸೂರ	ಗ್ರಂಥಕರ್ತ	೧–೪–೦	ವ್ಯಾ. ಶಾ. ಗಳ ಶಿ. ರ. L ಬುಕ್ಕು	ಸದರ 8160 ಸದರ
೩	ಭಾರತೀಯ ಶಾಸನ ಪದ್ಧತಿ ಅಥವಾ ಈಗಿನ ರಾಜ್ಯವ್ಯವಸ್ಥೆ ೧೯೩೭	ಮು. ಸಿ. ಎಸ್. ಕುಲಕರ್ಣಿ ಟೀಚರ ಕೆ. ಇ. ಬೋರ್ಡ್ಸ ಎ ವ್ಹಿ. ಸ್ಕೂಲು ಮಾಳಮಡ್ಡಿ	ಮು. ಕೆ. ಎಸ್. ಕುಲಕರ್ಣಿ ನಾಗಶೆಟ್ಟಿಕೊಪ್ಪ ಹುಬ್ಬಳ್ಳಿ	೦–೨–೬	ಪ್ರಾ. ಶಾ. ಗಳ ಶಿ. ರ. L ಬುಕ್ಕು	ಸದರ 8164 ಸದರ

ಪುಟ ೬ ಕಾಣೆಯಾಗಿದೆ

ಶ್ರೀಯುತ ಚಿದಂಬರ ಶ್ರೀಪಾದರಾವ ಕುಲಕರ್ಣಿ
ಇವರು ಬರೆದ ಗ್ರಂಥಗಳು

೧. **ಗಣಿತಸಂಗ್ರಹ**— (ಸುಧಾರಿಸಿದ ೨ನೆಯ ಆವೃತ್ತಿ) ಈ ಪುಸ್ತಕದ ಉಪಯೋಗದಿಂದ ಪರೀಕ್ಷೆಯಲ್ಲಿ ನಿಶ್ಚಯವಾಗಿ ಪಾಸಾಗುವರೆಂದು ಪರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಏಳನೆಯ ವರ್ಗಕ್ಕೆ ಇಂಥ ಸ್ವತಂತ್ರವಾದ ಗ್ರಂಥ ಇನ್ನೊಂದಿಲ್ಲ. **ಬೆಲೆ ೧೦ ಆಣೆ.**

೨. **ಹೊಸ ಮಾದರಿಯ ಅಂಕಗಣಿತ ಸಂಗ್ರಹ** ೧ನೇ ಭಾಗ— **ಬೆಲೆ ೫ ಆಣೆ.**

೩. **ಭೂಮಿತಿ**— ತೀರ ಹೊಸಮಾದರಿಯದು. **ಬೆಲೆ ೭ ಆಣೆ.**

೪. **ಇತಿಹಾಸ ಪ್ರಶ್ನೋತ್ತರ ಮಾಲೆ**— ಮಹತ್ವದ ಆರಿಸಿದ ಪ್ರಶ್ನೋತ್ತರಗಳನ್ನು ಓದಿ ಪಾಸಾಗಿರಿ. **ಬೆಲೆ ೪ ಆಣೆ.**

೫. **ಭಾರತೀಯ ಶಾಸನಪದ್ಧತಿ** ಅಥವಾ **ಹಿಂದುಸ್ತಾನದ ಈಗಿನ ರಾಜ್ಯವ್ಯವಸ್ಥೆ**— ಹೊಸದು. ೧೯೩೫ರಲ್ಲಿ ಆದ ಸುಧಾರಣೆಗಳನ್ನು ಒಳಗೊಂಡಿದೆ. **ಬೆಲೆ ೨ ಆ. ೬ ಪೈ.**

೬. **ಏಳನೆಯ ಪುಸ್ತಕದ ಗದ್ಯಪಾಠಗಳ ಸ್ಪಷ್ಟೀಕರಣ**— ಎಲ್ಲ ಮಹತ್ವದ ವಾಕ್ಯಗಳನ್ನು ಸ್ಪಷ್ಟೀಕರಿಸಿ ತೋರಿಸಿದೆ. **ಬೆಲೆ ೧ ಆ. ೬ ಪೈ.**

೭. **ವಾಕ್ಯರಚನೆಯೂ, ಮಾದರಿಯ ನಿಬಂಧ ಬರೆಹವೂ**— ಇದರಲ್ಲಿ ಕತೆಬರೆಹ, ವಿಸ್ತರಿಸಿ ಬರೆಹ, ಸಾರಾಂಶ ಬರೆಹ, ಪತ್ರಬರೆಹ, ಅರ್ಜಿ, ನೋಟ್ಸು, ಸಂಭಾಷಣ, ಜೀವನವೃತ್ತಾಂತ, ನೋಡಿದ ಸಂಗತಿಗಳ ವರ್ಣನೆ, ಚರಿತ್ರ ಬರೆಹ, ವಿಚಾರ ಪ್ರಭೋಧಕ ನಿಬಂಧ ಮುಂತಾದ ವಿಷಯಗಳೂ ಸರಳವಾದ ಉದಾಹರಣೆಗಳೂ ಇರುತ್ತವೆ.

ಬೆಲೆ ೬ ಆಣೆ.

೮. **ಏಳನೆಯ ಪುಸ್ತಕದ ಪದ್ಯಪಾಠಗಳ ಸ್ಪಷ್ಟೀಕರಣ**—(ಅಚ್ಚಿನಲ್ಲಿದೆ) ಎಲ್ಲ ಪದ್ಯಪಾಠಗಳಲ್ಲಿಯೆ ಆಡಿಸಿದ ವಾಕ್ಯಗಳು ಸ್ಪಷ್ಟೀಕರಿಸಲ್ಪಟ್ಟಿವೆ.

ಸಿಗುವ ಸ್ಥಳ—

ಕೆ. ಎಸ್. ಕುಲಕರ್ಣಿ

ಹುಬ್ಬಳ್ಳಿ.

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್, ವ್ಹಿ. ಕಾಮತ, ಬಿ. ಎ. (ಆನರ್ಸ್) ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರ ಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗ ಬಗ್ಗೆ ಪಠ್ಯಪುಸ್ತಕವಾಗಿ ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ತನ ಅಡಕವಾಗಿವೆ. ಬೇಕಾದವರು ಕೆಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ಬಾವ ಕಾಮತ
ಶಿರ್ಶಿ, ಉ. ಕಾನಡಾ

ಶ್ರೀ|| ಕಟ್ಟಿಮನೆಕೃತ

ಕನ್ನಡ ಬಾಲಬೋಧೆ ಮತ್ತು ಕನ್ನಡ ಶಿಶುಬೋಧೆ

ಈ ಬಾಲಕ ಪಠ್ಯಪುಸ್ತಕಗಳು

ಸರಕಾರದಿಂದ ಮಂಜೂರಾಗಿವೆ. ತಕ್ಷಣ ಬೇಕಾದಲ್ಲಿ ಗ್ರಾಹಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು. ರೋಖ ವ್ಯವಹಾರ. ಸಾಕಷ್ಟು ಕಮಿಶನ್.

ಕನ್ನಡ ಬಾಲಬೋಧೆ— ತಜ್ಞರು ಇದನ್ನು ಹಾಡಿ ಹೊಗಳಿದ್ದಾರೆ
ಬೆಲೆ:— ೩ ಬಿಲ್ಲಿ

ಕನ್ನಡಶಿಶುಬೋಧೆ (೨ನೇ. ಆ.)— ಗುಂಪಿನ ಪದ್ಧತಿಯಿಂದ ಬರೆದ ಅತ್ಯುತ್ತಮ ಪುಸ್ತಕ. **ಬೆಲೆ:**—೫ ಬಿಲ್ಲಿ ಹಾಗೂ ೧ ಆಣೆ

ಮ್ಯಾನೇಜರ,
ಹೋಂಟದಾರ್ಯ ಮುದ್ರಣಾಲಯ, ಧಾರವಾಡ

ಬಾಬ್ತ್ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ
Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ಸಂ	ವಿಷಯ	ಪುಟ.
೧.	ಗ್ರಾಮಶಿಕ್ಷಣ ಶಾಲಾಂಗಣ	೧
೨.	ಅಪೂರ್ಣಾಂಕಗಳು	೭
೩.	ಜಿಜ್ಞಾಸೆ, ಕೃತ್ರಿಮಪ್ರೇಮ, ಕ್ರೀಡೆ, ಸ್ವಾಮಿತ್ವ	೧೬
೪.	ಮಕರಸಂಕ್ರಮಣ	೨೧
೫.	ಕನ್ನಡ ಬುಕ್ ಕಮಿಟಿ ಧಾರವಾಡ ಇವರು ೧೯೩೬ನೆಯ ಇಸವಿ ಫೆಬ್ರುವರಿ ತಿಂಗಳಿನಲ್ಲಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು	೨೬
೬.	೧೯೩೬ನೆಯ ಇಸವಿ ಎಪ್ರಿಲ ತಿಂಗಳಿನಲ್ಲಾಗುವ ಕನ್ನಡ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ ..	೨೯
೭.	೧೯೩೬ನೆಯ ಇಸವಿ ಎಪ್ರಿಲ ತಿಂಗಳಿನಲ್ಲಾಗುವ ಅಲ್ಟರನೇಟಿವ ಅಗ್ರಿಕಲ್ಚರಲ್ ಬಾಯಸ್ ಪರೀಕ್ಷೆಯ ವೇಳಾಪತ್ರಿಕೆ ..	೩೦
೮.	೧೯೩೬ನೆಯ ಇಸವಿಯ ಎಪ್ರಿಲ ತಿಂಗಳಿನಲ್ಲಾಗುವ ಉರ್ದು ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ ..	೩೧

Printed by K. B. Bhise at the Karnatak Printing Works, Dharwar and Published by D. V. Kale, B. A., Head Master Training, School, Dharwar at his Office.

ಓದಿರಿ ! ತ್ವರೆಮಾಡಿರಿ

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

(೧) ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ ಎಡ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

(೨) ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಜರ ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

(೩) ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರು ಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ. ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳ ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮೀಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರೈಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂ ೫ ೭೬ | ಮಾರ್ಚ ೧೯೩೮ | ವರ್ಷ ೯ ಸಂ. ೧೨.

ಗ್ರಾಮ-ಶಿಕ್ಷಣ-ಶಾಲಾಂಗಣ

ಒಕ್ಕಲುತನದ ಶಾಲೆಯ ಅಂಗಣ.

ಪ್ರಪಂಚದಲ್ಲಿನ ಅತಿ ವಿಸ್ತೀರ್ಣವಾದ ಪ್ರದೇಶಗಳಲ್ಲಿ ಪ್ರಚಂಡವಾದ [illegible]ಮ್ಮದು. ಜನವಸತಿಯು ಬಹಳ ದಟ್ಟಾದದ್ದು. ಸಂಸ್ಕೃತಿಯು ಬಹು

ಪ್ರಾತನದ್ದು. ಭೂಮಿಯು ಫಲವತ್ತಾದದ್ದು. ಇಂದಿಗೂ ನಾವೆಲ್ಲರೂ ಬಹುಸಂಖ್ಯಾತರು ಗ್ರಾಮಗಳಲ್ಲಿಯೇ ಹೆಚ್ಚಾಗಿ ಇರುವವರು. ನಮ್ಮ ಹಿರಿಯ ಹೊಣೆಯು ಬೇಸಾಯ. ಹೀಗಿದ್ದು ಎಷ್ಟೋ ತಲೆಮಾರುಗಳಿಂದ ನಮ್ಮ ಶಿಕ್ಷಣದಲ್ಲಿ ಸೈದ್ಧಾಂತಿಕ ಶಿಕ್ಷಣವೆ ಮಾತ್ರ ಪ್ರಾಶಸ್ತ್ಯವನ್ನು ಪಡೆದಿರುವದು. ಪರಂಪರಾಗತವಾಗಿ ಬಂದ ಕೃಷಿಕರ್ಮಕ್ಕೆ ನಮ್ಮಷ್ಟು ದುರ್ಲಕ್ಷ್ಯಮಾಡಿದವರು ಪ್ರಪಂಚದಲ್ಲಿ ಬೇರೊಬ್ಬರಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಆದರೂ ಸರಕಾರದವರು ಆಗಾಗ ಶಿಕ್ಷಣದಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡುತ್ತಿದ್ದು ಇಸವಿಸನ್ ೧೯೧೨ ರಿಂದ ಒಕ್ಕಲತನದ ಒಲವಿನ ಶಾಲೆಗಳನ್ನು ಜನರು ಬೇಡಿದ ಸ್ಥಳಗಳಲ್ಲಿ ಅಲ್ಪ ಪ್ರಮಾಣದಿಂದಾದರೂ ಸ್ಥಾಪಿಸುತ್ತಿರುವರು.

ಇಂಥ ಶಾಲೆಗಳು ಹೆಚ್ಚಾಗಬೇಕೆಂದು ಕೃಷಿಕರ್ಮಸಮಿತಿಯವರು (Agriculture Royal Commission) ಪ್ರತಿಪಾದಿಸಿರುವರು. ಆಬರ್ನ್-ವೃಷ್ಟಿ ಸಾಹೇಬರು ಇಂಥ ಶಾಲೆಗಳು ಈಗಿನಂತೆ ಇಲ್ಲಿಗೊಂದು ಅಲ್ಲಿಗೊಂದಿದ್ದರೆ ಎಲ್ಲೆಲ್ಲಿಯೂ ಇರಬೇಕೆಂದು ಹೇಳಿರುವರು. ಹೀಗಿದ್ದರೂ ಇದ್ದ ಶಾಲೆಗಳ ವಿಷಯವಾಗಿ ಜನರಲ್ಲಿ ಸಾಕಷ್ಟು ಆದರವಿದ್ದಂತೆ ತೋರುವದಿಲ್ಲ. ಈ ಶಾಲೆಗಳೆಂದರೆ ಕೃಷಿಕರ್ಮವನ್ನು ಕಲಿಸುವ ಉಚ್ಚ ವಿದ್ಯಾನಿಲಯಗಳಲ್ಲ. ಅವು ಕೇವಲ ಒಕ್ಕಲುತನದ ಹೋರೆಗಳನ್ನೇ ಸಾಗಿಸುವ ಶಾಲೆಗಳೂ ಅಲ್ಲ. ಬೇಸಾಯವನ್ನು ಮುಖ್ಯವಸ್ತುವಾಗಿಟ್ಟುಕೊಂಡು ಇತರ ವಿಷಯಗಳನ್ನು ಉಪೇಕ್ಷಿಸದೆ ತಕ್ಕ ಬೌದ್ಧಿಕ ಬೆಳವಣಿಗೆಯನ್ನು ಧ್ಯೇಯವಾಗಿಟ್ಟುಕೊಂಡ ವಿದ್ಯಾಮಂದಿರಗಳಿವು. ಈ ಶಾಲೆಗಳು ವೇಳಾಪತ್ರಿಕೆಯನ್ನು ನೋಡಲು ಒಕ್ಕಲುತನಕ್ಕೆ ತುಸ ವೇಳೆಯನ್ನೇ ಕೊಟ್ಟು ಇತರ ಶಾಲೆಗಳಂತೆ ಜ್ಞಾನಾಭಿವೃದ್ಧಿಯ ವಿಷಯಗಳಿಗಾಗಿ ಹೆಚ್ಚು ವೇಳೆಯನ್ನು ಕೊಟ್ಟಿರುವರೆಂಬದು ತೋರುವದು. ಈ ಶಾಲೆಯಲ್ಲಿ ವಿದ್ಯೆ ಹೊಂದಿದ ಬಾಲಕರು ತಮ್ಮ ತಮ್ಮ ಹೊಲಗಳಲ್ಲಿ ಆಸ್ಥೆಯಿಂದ ಕಾರ್ಯಮಾಡಲು ದಕ್ಷರಾಗಬೇಕೆಂಬೇ ಉದ್ದೇಶವಿರುವದು. ಅಲ್ಲದೆ ಒಕ್ಕಲತನಕ್ಕೆ ಸಂಬಂಧಪಟ್ಟ ನೂಲೋಣ, ನೇಯ್ಗೋಣ ಹಗ್ಗಗಳನ್ನು ಹೊಸೆಯೋಣ ಮುಂತಾದ ಉದ್ಯೋಗಗಳ ಸಾಕಷ್ಟು ಜ್ಞಾನವು ಈ ಶಾಲೆಯ ಬಾಲಕರಿಗೆ ಆಗುವಂತೆ ಅಭ್ಯಾಸಪತ್ರಿಕೆಯಲ್ಲಿ ಅವಕಾಶ ಕೊಟ್ಟಿದೆ. ತಕ್ಕಮಟ್ಟಿಗೆ ಬಡಗಿತನ ಕಮ್ಮಾರಿಕೆಗಳ ಪರಿಚಯವು ಅಲ್ಲಿನ ಬಾಲಕರಿಗೆ ಆಗುವದು.

ಕಳೆದ ಜನೇವರಿ ತಿಂಗಳಿನಲ್ಲಿ ಬೆಳಗಾಂವಿಯಲ್ಲಿ ನೆರವೇರಿದ ಒಕ್ಕಲುತನದ ಪ್ರದರ್ಶನದಲ್ಲಿ ಇಂಥ ಗ್ರಾಮ-ಶಿಕ್ಷಣ-ಶಾಲೆಯ ಒಂದು ಅಂಗಣವಿತ್ತು. ಹಳ್ಳಿಗಳಲ್ಲಿ ಅಲ್ಲಲ್ಲಿ ಕಂಡುಬರುವ ಇಂಥ ಶಾಲೆಗಳಲ್ಲಿ ನಡೆಯುತ್ತಿರುವ ಕಾರ್ಯಗಳ

ಸಿಜಯವು ಜನರಿಗೆ ಪರಿಣಾಮಕರವಾಗಿ ಆಗಬೇಕೆಂಬುದೇ ಗೌರವ ಕಾರ್ಯ ದರ್ಶಿಗಳ ಉದ್ದೇಶವಿತ್ತು. ಪ್ರೇಕ್ಷಕರಾಗಿ ಅಲ್ಲಿಗೆ ಬರುವವರಲ್ಲಿ ಒಕ್ಕಲಿಗರೇ ಬಹುಜನರಾದದರಿಂದ ಅವರಿಗಾಗಿಯೇ ಈ ಅಂಗಣದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಒಕ್ಕಲುತನದ ಶಾಲೆಯ ಬಾಲಕರು ಬೆಳೆಸಿದ ಬೆಳೆಗಳು.

ಸಿಗಾಂವಿಯ ಸಮೀಪದಲ್ಲಿಯೇ ಇರುವ ಕಣಬರಗಿಯ ಗ್ರಾಮಶಾಲೆಯ ಮಕ್ಕಳು ಪ್ರದರ್ಶನಕ್ಕಿಂತ ಮೊದಲು ಆರು ತಿಂಗಳುಗಳ ವರೆಗೆ ಅಲ್ಲಿಗೆ ಪ್ರತಿ ಶನಿವಾರ ಹಾಗು ರವಿವಾರ ಬಂದು ಅಲ್ಲಿ ತರತರದ ಬೆಳೆಗಳನ್ನು ಸಾಗುಮಾಡಿದ್ದರು. ಪ್ರತಿ ದಿನ ನೀರಿನ ಕೊರತೆಯಾಗಬಾರದೆಂದೂ ಕಸಕಡ್ಡಿಗಳು ಸೇರಬಾರದೆಂದೂ ಒಬ್ಬ ಕೂಲಿಯವನನ್ನೂ ಇಟ್ಟಿದ್ದರು. ಆದರೆ ಬೇಸಾಯದ ಯಾವ

ಕಾರ್ಯವನ್ನೂ ಅಂದರೆ ಉಳುವದು ಬಿತ್ತುವದು ಮುಂತಾದ ಯಾವ ಕೆಲಸವನ್ನೂ ಕೂಲಿಯವನು ಮಾಡಿದ್ದಿಲ್ಲ; ಶಾಲೆಯಮಕ್ಕಳೇ ಶಿಕ್ಷಕನ ನೇತೃತ್ವದಲ್ಲಿ ಮಾಡುತ್ತಿದ್ದರು. ಅವರು ಬೆಳೆದ ಪೈರುಗಳು ನುರಿತ ಒಕ್ಕಲಿಗನನ್ನು ಕೂಡ ಸೋಜಿಗಗೊಳಿಸುವಂಥವಿದ್ದವು. ಶಿಕ್ಷಕರು ತುಸ ಶ್ರಮತೆಗೆದುಕೊಂಡು ಬಾಲಕರಿಗೆ ಮಾರ್ಗದರ್ಶಕರಾದರೆ ಎಷ್ಟು ಲಾಭಕರವಿರುವದೆಂಬದನ್ನು ತೋರಿಸಲು ಈ ಅಂಗಣವು ಒಳ್ಳೆಯ ದೃಷ್ಟಾಂತವಾಗಿತ್ತು. ಹಿರಿಯ ಒಕ್ಕಲಿಗರೂ ಒಕ್ಕಲು ತನದ ಖಾತೆಯ ಅಧಿಕಾರಿಗಳೂ ಈ ಅಂಗಣದ ಪ್ರಶಂಸೆ ಮಾಡಿದ್ದನ್ನು ನೋಡಿದರೆ ಇಂಥ ಶಾಲೆಗಳ ಸಂಖ್ಯೆಯು ಬೇಗನೇ ಬೆಳೆಯಬೇಕೆಂದು ಎಲ್ಲರೂ ಒಪ್ಪಬೇಕಾಗುವದು.

ಒಕ್ಕಲುತನದ ಶಾಲೆಯ ವಸ್ತು ಸಂಗ್ರಹಾಲಯ.

ದೇವೀಹೊಸೂರಿನಲ್ಲಿನ ಒಕ್ಕಲುತನದ ಶಾಲೆಯು ಆದರ್ಶಪ್ರಾಯವಿದ್ದುದು ಸರ್ವಶ್ರುತವು. ಅಲ್ಲಿನ ಶಿಕ್ಷಕರು ತಮ್ಮ ಶಾಲೆಯಲ್ಲಿ ಬಾಲಕರು ಕೈಗಾರಿಕೆಯೆಂದು ಕೈಕೊಂಡಿರುವ ನೂಲುವ ನೆಯ್ಯುವ ಸುಧಾರಿಸಿದ ಸಾಧನಗಳನ್ನು ಪ್ರಾಯೋಗಿಕವಾಗಿ ಬಂದ ಜನರಿಗೆ ತೋರಿಸುತ್ತಿದ್ದರಲ್ಲದೆ ಜನರು ಮಾಡುವ

ಎಲ್ಲ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಡುತ್ತಿದ್ದರು; ಹಾಗು ಅವರ ಆಕ್ಷೇಪಣೆಗಳಿಗೆ ಸಮಾಧಾನಹೇಳುತ್ತಿದ್ದರು. ಇಂಥ ಶಾಲೆಗೊಂದು ವಸ್ತುಸಂಗ್ರಹಾಲಯವಿರುವದು ವಾಸ್ತವವೇ ಸರಿ. ಈ ಪ್ರದರ್ಶನದಲ್ಲಿ ಅಂಥದೊಂದು ವಿಶಾಲ ಕೋಣೆಯಿದ್ದು ಕರ್ನಾಟಕದೊಳಗಿನ ಒಕ್ಕಲುತನದ ಸಾಲೆಗಳಿಂದ ಬಂದ ಎಲ್ಲ ವಸ್ತುಗಳನ್ನು ಸುವ್ಯವಸ್ಥೆಯಿಂದಿಟ್ಟಿದ್ದರು. ಬೇಸಾಯವೇ ಮುಖ್ಯವಾದ ನಮ್ಮ ನಾಡಿಗೆ ಇಂಥ ಒಕ್ಕಲುತನದ ಒಲವಿನ ಸಾಲೆಗಳಿಂದ ಪ್ರಯೋಜನವು ಎಷ್ಟಿರುವ ಪಿಂಬವನ್ನು ಈ ಕೋಣೆಯು ವ್ಯಕ್ತಗೊಳಿಸುತ್ತಿತ್ತು.

ಒಕ್ಕಲುತನದ ಸಾಲೆಯಲ್ಲಿ ನಡೆಯುವ ಬೇರೆ ಬೇರೆ ಉದ್ಯೋಗಗಳು
ಮಾದರಿಯ ಹಳ್ಳಿಯ ದೃಶ್ಯವು

ನಮ್ಮಲ್ಲಿ ಎಷ್ಟೋ ಹಳ್ಳಿಗಳು ಬೇನೆಗಳ ಬೀಡಾಗಿರುವವು. ನಮ್ಮ ಅಜ್ಞಾನ-ಅನಾವಸ್ಥೆಗಳೇ ಅದಕ್ಕೆ ಕಾರಣ. ಗ್ರಾಮೋದ್ಧಾರ ಕಾರ್ಯದಲ್ಲಿ ಹಳ್ಳಿಗಳಲ್ಲಿ ಮೂಢಮೂಲವಾಗಿರುವ ಅನಾರೋಗ್ಯವನ್ನು ಕಿತ್ತುಹಾಕುವದೊಂದು ಮುಖ್ಯವಾಗಿದೆ. ಮಾದರಿಯ ಹಳ್ಳಿಯು ಯಾವತರದ್ದು ಇರಬೇಕೆಂಬಹಾಗೆ ಈ ಅಂಗಣದ ಮಧ್ಯದಲ್ಲಿ ಕಟ್ಟಿಗೆಯಿಂದ ಮಾಡಿದ ಒಂದು ಮಾದರಿಯು ಎಲ್ಲರ ಲಕ್ಷ್ಯವನ್ನು ಆಕರ್ಷಿಸುತ್ತಿತ್ತು. ಮನೆಗಳು ಸಾಲುಸಾಲಾಗಿದ್ದು ಬೀದಿಗಳು

ವಿಶಾಲವಾಗಿರಬೇಕು. ಮಧ್ಯದಲ್ಲಿ ಶಾಲಾಗೃಹವಿರಬೇಕು. ದೊಡ್ಡ ಹಳ್ಳಿ
ಯಿದ್ದರೆ ಅಂಗಡಿಗಳ ಸಾಲು ನಟ್ಟನಡುವೆ ಇರಬೇಕು. ಮನೆ-ಮನೆಗಳಲ್ಲಿ
ಸ್ವಚ್ಛತೆ ಇರಬೇಕು. ಜನರು ವಾಸಿಸುವ ಮನೆ ಬೇರೆ. ದನಗಳ ಮನೆ ಬೇರೆ
ಆಗಲೇಬೇಕು.

ನಮ್ಮ ನಾಡು ಸುಧಾರಣೆಯಲ್ಲಿ ಮುಂದಡಿ ಇಡಬೇಕೆಂದರೆ ಹಳ್ಳಿಗಳಲ್ಲಿ
ಮೇಲೆ ಹೇಳಿದ ಮೇರೆಗೆ ತಿದ್ದುಪಾಟುಗಳುಂಟಾಗಬೇಕು. ಜನರು ಆರೋಗ್ಯ
ಪರಿಚಯವುಳ್ಳವರಾಗಬೇಕು; ಅದಕ್ಕೂ ಮೊದಲು ಸಾರ್ವತ್ರಿಕವಾಗಿ ಸುಶಿಕ್ಷಿ
ರಾಗಬೇಕು; ಬುನಾದಿಯಿಂದ ನಡೆದುಬಂದ ಉದ್ಯೋಗಗಳನ್ನು ಬಿಟ್ಟುಬಿಡ
ಅವುಗಳಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡಿಕೊಂಡು ಸುಖಜೀವಿಗಳಾಗಿ ಬಾ
ಬೇಕು. ಒಟ್ಟಿಗೆ ಗ್ರಾಮ--ಶಾಲಾ- ಶಿಕ್ಷಣದಿಂದ ಲಾಭಪಡೆದು ತಕ್ಕ ನಾಗರಿ
ರಾಗಿ ಸಹಾನುಭೂತಿ-ಸಹಕಾರಗಳಿಂದ ಸುಖ--ಸಂತೋಷಗಳನ್ನು ಹೊಂದಬೇಕು.

ಈ ಲೇಖನಕ್ಕೆ ಬೇಕಾದ ದೃಶ್ಯಗಳನ್ನು ನಮ್ಮ ಭಾಗದ ಎಜ್ಯುಕೇಶನಲ್
ಇನಸ್ಪೆಕ್ಟರರಾದ ಮೆಹರ್ಬಾನ್ **ಸೈಯ್ಯದ ನೂರುಲ್ಲಾ** ಎಮ್. ಎ. ಬಿ
ಬಾರ-ಅಟ-ಲಾ. ಸಾಹೇಬರು ದಯವಿಟ್ಟು ನಮಗೆ ಕೊಟ್ಟದ್ದಕ್ಕಾಗಿ ಅವರಿ
ನಾವು ತುಂಬಾ ಋಣಿಯಾಗಿರುವೆವು.

ಅಪೂರ್ಣಾಂಕಗಳು

ಲೇ— ಶ್ರೀ. ತಟ್ಟಿ ಶಾಮಶಾಯರು ಬಿ.ಎ.ಬಿ.ಟಿ. ಅಸಿ. ಮಾ. ಹೆ. ಮಕ್ಕಳ ಟ್ರೇ. ಕಾ. ಧಾ.

ಅಪೂರ್ಣಾಂಕಗಳ ವಿಷಯವು ವಿದ್ಯಾರ್ಥಿಗಳು ಹಿಂದೆ ಕಲಿತ ಭಾಗಾಕಾರ, ಕೋಷ್ಟಕಗಳು, ವಿವಿಧ ಪರಿಮಾಣಗಳ ರೂಪಾಂತರ– ಇವುಗಳಿಗೆ ಸಂಬಂಧಿಸಿರು ತ್ತದೆ. ಆದ್ದರಿಂದ ಅಪೂರ್ಣಾಂಕಗಳ ಜ್ಞಾನಕ್ಕೆ ಸಹಾಯವಾಗುವಂತೆ ಈ ವಿಷಯಗಳನ್ನು ಆವರ್ತನಮಾಡಿಸತಕ್ಕದ್ದು.

ಭಾಗಾಕಾರ

೩) $\frac{೩೪ \text{ ರೂ.}}{೮ \text{ ರೂ.}}$ ಎಡದ ಲೆಕ್ಕವನ್ನು ಭಾಜಕ ಚಿಹ್ನದಿಂದ ಬರೆದು ತೋರಿಸಿರಿ.

(ಅ) ೩೪ರೂ. ÷೩=೮ರೂ.

ಇದನ್ನು ಇನ್ನೂ ಎರಡು ಬೇರೆಬೇರೆ ರೀತಿಯಲ್ಲಿ ಬರೆಯುವರು.

(ಬ) $\frac{೩೪}{೩}$ರೂ. = ೮ರೂ.

(ಕ) ೩೪ ರೂಪಾಯಿಯ $\frac{೧}{೩}$=೮ರೂ.

(ಬ) ದಲ್ಲಿ ಬರೆದದ್ದನ್ನು ಹೀಗೆ ಓದಬೇಕು ;

೩೪ ರೂಪಾಯಿಯ (ಒಂದು) ಮೂರನೆಯ ಭಾಗವು ೮ ರೂಪಾಯಿ (ಆಗುವದು)

(ಕ) ದಲ್ಲಿ ಬರೆದದ್ದನ್ನು ಹೀಗೆ ಓದಬೇಕು :

೩೪ ರೂಪಾಯಿಯ ಒಂದು ಮೂರನೆಯ ಅಂಶವು ೮ ರೂಪಾಯಿ. ಅಂಶವೆಂದರೆ ಭಾಗ. ಈ ಮೂರೂ ರೀತಿಯಲ್ಲಿ ಬರೆದ ಮಾತಿನ ಅರ್ಥವು ಒಂದೇ :

೩೪ ರೂಪಾಯಿಯಲ್ಲಿ ೩ ಸರಿಯಾದ ಭಾಗಗಳನ್ನು ಮಾಡಿ ಅಂಥ ಒಂದು ಭಾಗವನ್ನು ತಕ್ಕೊಂಡರೆ ೮ ರೂಪಾಯಿ ಬರುವದು.

ಕೋಷ್ಟಕಗಳು

೧೨ ಇಂಚು=೧ ಫೂಟು. ೧ ಫೂಟು ೧ ಇಂಚಿನ ೧೨ ಪಟ್ಟು ಇರುವದು.

೧ ಇಂಚು=$\frac{೧}{೧೨}$ ಫೂಟು. ಆದ್ದರಿಂದ ೧ ಇಂಚು ೧ ಫೂಟಿನ ೧೨ನೆಯ ಭಾಗವು.

೩ ಫೂಟು = ೧ ಯಾರ್ಡು

∴ ೧ ಫೂಟು = $\frac{೧}{೩}$ ಯಾರ್ಡು

ಇದರಂತೆಯೇ

೪ ಪಾವುಸೇರು = ೧ ಸೇರು ; ∴ ೧ ಪಾವುಸೇರು = $\frac{೧}{೪}$ ಸೇರು.

೭ ಅಚ್ಚೇರು = ೧ ಸೇರು ; ∴ ೧ ಅಚ್ಚೇರು = $\frac{೧}{೭}$ ಸೇರು.

ಕೋಷ್ಟಕಗಳನ್ನು ಕಲಿಸುವಾಗ $\frac{೧}{೨}$, $\frac{೧}{೩}$, $\frac{೧}{೪}$, $\frac{೧}{೫}$, $\frac{೧}{೬}$ ಇಂಥ (ಒಂದೊಂದು ಅಂಶವುಳ್ಳ) ಅಪೂರ್ಣಾಂಕಗಳ ಅರ್ಥವನ್ನು ಅನಾಯಾಸವಾಗಿ ತಿಳಿಸಿಕೊಡಬಹುದು.

ವಿವಿಧ ಪರಿಮಾಣಗಳ ರೂಪಾಂತರ

ಕೋಷ್ಟಕಗಳನ್ನು ಮೇಲೆ ಹೇಳಿದಂತೆ ಕಲಿಸಿದ್ದರೆ ಈಗ ಇಂಥ ಲೆಕ್ಕವನ್ನು ಹೇಳಬಹುದು : ೪ ಯಾರ್ಡು, ೧ ಫೂಟು ಇದಕ್ಕೆ ಯಾರ್ಡಿನ ರೂಪ ಕೊಡಿರಿ.

೧ ಫೂಟು = $\frac{೧}{೩}$ ಯಾರ್ಡು.

∴ ೪ ಯಾರ್ಡು, ೧ ಫೂಟು = ೪ ಯಾರ್ಡು + $\frac{೧}{೩}$ ಯಾರ್ಡು.

ಬಲಗಡೆಯ ಸಂಖ್ಯೆಯನ್ನು ೪ $\frac{೧}{೩}$ ಯಾರ್ಡು ಹೀಗೆ ಬರೆಯುವರೆಂದು ಹೇಳಿಕೊಡಬಹುದು.

೬೦ ಆಣೆಗಳಿಗೆ ರೂಪಾಯಿಯ ರೂಪ ಕೊಡಿರಿ ಅಂದರೆ, ಏಕೆಯ ರೂಪಾಂತರದ ರೀತಿಯ ಪ್ರಕಾರ ೬೦ ಆ ÷ ೧೬ ಆ = ೩೦ : ೩೦ ರೂಪಾಯಿ. ಹೀಗೆ ಮಾಡಬಹುದು; ಆದರೆ ೭ ಆಣೆಗೆ ರೂಪಾಯಿಯ ರೂಪ ಕೊಡಿರಿ. ಎಂಬ ಲೆಕ್ಕವನ್ನು ನಮಗೆ ಇನ್ನೂ ಮಾಡಲಿಕ್ಕೆ ಒರುವದಿಲ್ಲ. **ಇನ್ನು ಮೇಲೆ ಅಂಥ ಲೆಕ್ಕಗಳನ್ನು ಹೇಗೆ ಮಾಡಬೇಕೆಂಬುವದನ್ನು ಕಲಿಯೋಣ** ಎಂದು ಅಪೂರ್ಣಾಂಕಗಳ ಮೊದಲನೆಯ ಪಾಠಕ್ಕೆ ಉಪೋದ್ಘಾತವನ್ನು ರಚಿಸಿಕೊಳ್ಳಬಹುದು.

ಅಪೂರ್ಣಾಂಕಗಳ ಕೃತಿಗಳು ವಿದ್ಯಾರ್ಥಿಯು ಹಿಂದೆ ಕಲಿತ ಸಾದಾ ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರದ ಲೆಕ್ಕಗಳಿಗೆ ಹೊಂದಿರುತ್ತವೆ. ಈ ಮಾತು ಸ್ಪಷ್ಟವಾಗುವದಕ್ಕೆ ಅವುಗಳನ್ನು ಸಾದಾ ಕೃತಿಗಳಿಗೆ ಹೋಲಿಸಿ ತೋರಿಸಬೇಕು.

೩ + ೨ = ೫.

ಈ ಪ್ರಕಾರವನ್ನು ಬಿಡಿವಸ್ತುಗಳಿಗೆ ಹಚ್ಚಿದರೆ ೩ ಬಿಡಿವಸ್ತುಗಳು+೨ ಬಿಡಿವಸ್ತುಗಳು=೫ ಬಿಡಿವಸ್ತುಗಳು.

ದಹಂಗಳಿಗೆ ಹಚ್ಚಿದರೆ, ೩ ದಹಂ +೨ ದಹಂ =೫ ದಹಂ

ಇದನ್ನೇ ಲೆಕ್ಕವನ್ನು ಹೀಗೂ ಬರೆಯಬಹುದು :

೩ × ೧೦ + ೨ × ೧೦ = ೫ × ೧೦.

ಇಲ್ಲಿ ನಾವು ಕೂಡಿಸತಕ್ಕದ್ದು ೩ರಲ್ಲಿ ೨ವಾತ್ರ; ೧೦ ಎಂಬ ಸಂಖ್ಯೆಯನ್ನು 'ದಹಂ' ಎಂದು ಅಕ್ಷರದಿಂದ ಬರೆದುಕೊಂಡರೆ ಈ ಮಾತು ಸ್ಪಷ್ಟವಾಗಿ ತಿಳಿಯುವದು.

ಬಿಡಿವಸ್ತುಗಳಿಂದ ಮಾಡಿದ ಕೃತಿಗಳನ್ನೇ ದಶಕ, ಶತಕಗಳಿದ್ದಾಗ ಮಾಡಬಹುದು. ಇನ್ನು ಅವೇ ಕೃತಿಗಳನ್ನು ಅರ್ಧ, ಗಿರ್ಧ ಮೊದಲಾದ ಭಾಗಗಳನ್ನು ತೆಗೆದುಕೊಂಡರೂ ಮಾಡಬಹುದು.

೩ ಅರ್ಧ + ೨ ಅರ್ಧ = ೫ ಅರ್ಧ

೩ ಗಿರ್ಧ + ೨ ಗಿರ್ಧ = ೫ ಗಿರ್ಧ

ಈ ಎರಡೂ ಲೆಕ್ಕಗಳು ತೀರ ಸುಲಭವಾಗಿ ಕಾಣುವವು.

ಇವೇ ಲೆಕ್ಕಗಳನ್ನು

$$೩ \times \frac{೧}{೨} + ೨ \times \frac{೧}{೨} = ೫ \times \frac{೧}{೨}$$

$$೩ \times \frac{೧}{೪} + ೨ \times \frac{೧}{೪} = ೫ \times \frac{೧}{೪}$$

ಹೀಗೆ ಬರೆದರೆ ಹುಡುಗರಿಗೆ ಗಡಬಡಾಗಿ ತೋರುವವ್ರ. ಆದ್ದರಿಂದ **ಅಪೂರ್ಣಾಂಕಗಳ ಅರ್ಥವು ಹುಡುಗರಿಗೆ ಚನ್ನಾಗಿ ತಿಳಿಯುವತನಕ ಎಲ್ಲ ಭಾಗಗಳ ಹೆಸರುಗಳನ್ನು ಅಕ್ಷರಗಳಿಂದ ಬರೆಯಿಸುವ ರೂಢಿಯನ್ನು ಇಡಬೇಕು.**

೨. ಅಪೂರ್ಣಾಂಕಗಳ ಗುಣಾಕಾರ (ಪೂರ್ಣಾಂಕದಿಂದ)

೧ನೆಯ **ಮೆಟ್ಟು.** ಬಿಡಿವಸ್ತುಗಳ ಗುಣಾಕಾರ.

೩ ಬಿಡಿವಸ್ತುಗಳು × ೫ = ೧೫ ಬಿಡಿವಸ್ತುಗಳು.

೨ನೆಯ **ಮೆಟ್ಟು.** ದಶಕ, ಶತಕ ಮೊದಲಾದವುಗಳ ಗುಣಾಕಾರ.

೩ ದಶಕಗಳು × ೫ = ೧೫ ದಶಕಗಳು.

೩ನೆಯ **ಮೆಟ್ಟು.** ಭಾಗಗಳ ಗುಣಾಕಾರ.

ಬೇಕಾದ ಸಾಲೆಯಲ್ಲಿ ಬಾಲಕರ ವರ್ಗದಲ್ಲಿಯಾಗಲಿ, ಗಣಿತ ಇಯತ್ತೆಯಲ್ಲಿ ಗಲಿ ಹೋಗಿ 'ಎಂಟು ಆರಲೆ ಎಷ್ಟು?' ಎಂದು ಕೇಳಿದರೆ 'ಳಅ' ಎಂದು ತಟ್ಟನೆ ಹೇಳುವರು. ಆದೇ 'ಎಂಟೂ ಆರೂ ಎಷ್ಟು?' ಎಂದು ಕೇಳಿದರೆ ಹುಡುಗರು ಷ್ಟು ತೀವ್ರವಾಗಿ ಉತ್ತರವನ್ನು ಹೇಳುವದಿಲ್ಲ. ಇದು ರೂಢಿಯಲ್ಲಿದ್ದ ಕಲಿಸುವ ಪದ್ಧತಿಯು ಕೆಲಕೆಲವು ಬಾಬತ್ತಿನಲ್ಲಿ ಎಷ್ಟು ಅಪದ್ಧವಾದದ್ದು ಎಂಬದನ್ನು ಹಿಡಿದು ಕೊಡುತ್ತದೆ. ಯಾಕೆಂದರೆ ಕಠಿಣವಿದ್ದ ಲ×ಟ=ಳಅ ಎಂಬ ಮಾತನ್ನು ಮೊದಲು ಗಟ್ಟಿಮಾಡಿಸಿ ಲ+ಟ=೧ಳ ಎಂಬ ಸುಲಭವಿದ್ದ ಈ ಮಾತನ್ನು ಆ ಮೇಲೆ ಕಲಿಯಲಿಕ್ಕೆ ಬಿಡುವರು. ಹುಡುಗರ ಉತ್ತರದಲ್ಲಿ ಹೀಗೇಕೆ ವಿಶೇಷವಿರಬೇಕೆಂದು ಕ್ಷ್ನವನ್ನು ಕೇಳಿದರೆ 'ಹುಂ, ಅದರಲ್ಲೇನಿದೆ, ಎಂಟು ಆರಲೆ ಎಂಬದನ್ನು ಹುಡುಗರು ಾಯಿಪಾಠ ಮಾಡಿರುವರು, ಆದರೆ ಎಂಟೂ ಆರೂ ಎಂಬದನ್ನು ಪಾಠ ಮಾಡಿರುವದಿಲ್ಲ.' ಎಂದು ತಾತ್ಸಾರದಿಂದ ಹೇಳುವರು. ಎಂಟೂ ಆರೂ ಹದಿನಾಲ್ಕು ಎಂಬ ಕಲ್ಪನೆಯು ತಿಳುಕೊಳ್ಳಲಿಕ್ಕೆ ಹೆಚ್ಚು ಕಠಿಣವಾದದ್ದೋ ಎಂಟು ಆರಲೆ

* ಗಂಟುಗಳ ಚಿತ್ರವನ್ನು ತೋರಿಸಲಿಕ್ಕೆ ಆಗದ್ದರಿಂದ ಹೀಗೆ ಬರೆದಿರುವದು. ಬೇಕಾದರೆ ಈ ತರವ ಸಾಂಕೇತಿಕ ಗುರುತುಗಳನ್ನು ಉಪಯೋಗಿಸುವ ಒಂದು ಪೆಟ್ಟನ್ನೂ ಮಾಡಿಕೊಳ್ಳಬಹುದು.

ನಾಲ್ವತ್ತೈಂಟು ಎಂಬ ಕಲ್ಪನೆಯು ಹೆಚ್ಚು ಕಠಿಣವಾದದ್ದೋ ಶಿಕ್ಷಕರು ವಿಚಾರ ಮಾಡಲಿ. ನಿಶ್ಚಯವಾಗಿ ಎರಡನೆಯ ಕಲ್ಪನೆಯು ಹೆಚ್ಚು ಕಠಿಣವಾದದ್ದು. ಆದರೂ ಸಾಮಾನ್ಯವಾಗಿ ಶಿಕ್ಷಕರು ಅನುಸರಿಸುವ ಕ್ರಮವು ಈ ತತ್ವಕ್ಕೆ ವಿರುದ್ಧವಾದದ್ದು. ಬೇರೀಜಿನ ಸಂಗತಿಗಳ ಪಾಠಕ್ಕೆ ಯಾಕೆ ಶಿಕ್ಷಕರು ಅಷ್ಟೊಂದು ಗಮನಕೊಡುವದಿಲ್ಲ? ಅವು ಪಾಠ ಬರುವದು ಮುಂದಿನ ಅಂಕಗಣಿತದ ಅಭ್ಯಾಸಕ್ಕೆ ಅಷ್ಟೊಂದು ಆಗತ್ಯವಾದದ್ದಲ್ಲವೇನು? ಅಥವಾ ಪಾಠಮಾಡದಿದ್ದರೂ ಬೆರಳುಗಳನ್ನು ಎಣಿಸಿಯಾಗಲಿ ಇನ್ನು ಹೇಗಾದರೂ ಆಗಲಿ ಹೇಳಲಿಕ್ಕೆ ಬರುವದೆಂದು ಅದರ ಕಡೆಗೆ ಅಲಕ್ಷ್ಯ ಮಾಡಬಹುದೇನು? ಈ ಬೆರಳುಗಳ ಮೇಲೆ ಎಣಿಸಿಕೊಳ್ಳುವ ಚಾಳಿಯು ಮೇಲಿನ ಇಯತ್ತೈಗಳಲ್ಲಿಯೂ ಬೆನ್ನುಹತ್ತುವದೆಂಬದನ್ನು ನೆನಪಿಡಿಸೋಣವೇನು? ಈ ಚಾಳಿಯು ಅನಿಷ್ಟವಾದದ್ದೆಂದು ನೀವು ಒಪ್ಪುವದಿಲ್ಲವೇನು? ಆದ್ದರಿಂದ ಹುಡುಗರು ಈ ಕೆಳಗಿನ ೪೫ ಸಂಗತಿಗಳನ್ನು ಮಗ್ಗಿಗಳನ್ನು ಪಾಠಮಾಡುವದಕ್ಕಿಂತ ಮುಂಚೆ ಪಾಠ ಮಾಡತಕ್ಕದ್ದು:—

೧ರ ಸರ	೨ರ ಸರ	೩ರ ಸರ	೪ರ ಸರ	೫ರ ಸರ
೧+೧=೨	೨+೧=೩ ೨+೨=೪	೩+೧=೪ ೩+೨=೫ ೩+೩=೬	೪+೧=೫ ೪+೨=೬ ೪+೩=೭ ೪+೪=೮	೫+೧=೬ ೫+೨=೭ ೫+೩=೮ ೫+೪=೯ ೫+೫=೧೦

೬ರ ಸರ	೭ರ ಸರ	೮ರ ಸರ	೯ರ ಸರ
೬+೧=೭ ೬+೨=೮ ೬+೩=೯ ೬+೪=೧೦ ೬+೫=೧೧ ೬+೬=೧೨	೭+೧=೮ ೭+೨=೯ ೭+೩=೧೦ ೭+೪=೧೧ ೭+೫=೧೨ ೭+೬=೧೩ ೭+೭=೧೪	೮+೧=೯ ೮+೨=೧೦ ೮+೩=೧೧ ೮+೪=೧೨ ೮+೫=೧೩ ೮+೬=೧೪ ೮+೭=೧೫ ೮+೮=೧೬	೯+೧=೧೦ ೯+೨=೧೧ ೯+೩=೧೨ ೯+೪=೧೩ ೯+೫=೧೪ ೯+೬=೧೫ ೯+೭=೧೬ ೯+೮=೧೭ ೯+೯=೧೮

ಗುಣಾಕಾರದ ಸಂಗತಿಗಳಿಗೆ ಹೇಗೆ ಮಗ್ಗಿಗಳೆಂಬ ಹೆಸರಿರುವದೋ ಅದರಂತೆ ಈ ಬೇರೀಜಿನ ಸಂಗತಿಗಳಿಗೆ 'ಸರ'ಗಳೆಂಬ ಏನಾದರೊಂದು ಹೊಸ ಹೆಸರನ

ಳಿಸುವದು ಅವಶ್ಯವಿರುವದು. ಈ 'ಸರ'ಗಳನ್ನು ಗಟ್ಟಿಮಾಡಿಸುವ ವಿಷಯ ಲ್ಲಿ ಕೆಳಗಿನ ಸೂಚನೆಯು ಒಳ್ಳೆಯದಾಗಿರುವದು: ಬಂದರಲ್ಲಿ ಇಲ್ಲವೆ ಯಾವದಾದ ೂಂದು ಸಂಖ್ಯೆಯಲ್ಲಿ ಆ ಸಂಖ್ಯೆಯಷ್ಟಷ್ಟೇ ಕೂಡಿಸುತ್ತ ಎಣಿಸುವ ಅಭ್ಯಾಸ ಸ್ಸನ್ನು ಹುಡುಗರಿಂದ ಮಾಡಿಸಬೇಕು. ಇದರಿಂದ ಮೇಲಿನ 'ಸರ'ಗಳಲ್ಲಿ ಬಂದ ಎಲ್ಲ ಸಂಗತಿಗಳ ಆವರ್ತನವಾಗುವದಲ್ಲದೆ ಮಗ್ಗಿಗಳನ್ನು ಕಲಿಯಲಿಕ್ಕೂ ಒಳ್ಳೆಯ ಸಿದ್ಧತೆಯಾಗುವದು.

[ಮುಂದೆ ಸಾಗುವದು.]

ಮಕರಸಂಕ್ರಮಣ

ಲೇಖಕ— ಲ. ವಿ. ಘಾಟಕ, ಮು. ಸೊರಟೂರ

(ಕಳೆದ ತಿಂಗಳಿನಿಂದ ಮುಂದೆಸಾಗಿದ್ದು)

ವಿವಾಹಿತರಾದ ಹೆಣ್ಣುಮಕ್ಕಳು ಐಯ್ದು ವರ್ಷಗಳ ವರೆಗೆ ಈ ಹಬ್ಬದ ದಿವಸ ತಮ್ಮ ಜಾತಿಯ ಜನರ ಮನೆಮನೆಗೆ ಹೋಗಿ, ಎಣ್ಣೆ, ಹತ್ತಿ, ಉಪ್ಪು, ಜೀರಿಗೆ, ತುಪ್ಪ, ಕೋತಂಬರಿಬೀಜ, ಕೊಬ್ಬರಿ, ಅರಿಷಿಣ, ಕುಂಕುಮ, ಅಡಿಕೆಯ ಚಟ್ಟ ಮೊದಲಾದ ಜೀನಸುಗಳನ್ನು ಮಣೆಯ ಮೇಲೆ ಕ್ರಮದಿಂದ ಮಂಡಿಸಿ ಬರುವ ಪದ್ಧತಿಯು ದಾಕ್ಷಿಣಾತ್ಯ ಬ್ರಾಹ್ಮಣರಲ್ಲಿದೆ. ಇದಕ್ಕೆ ಅವರು 'ಬೀರಿಸುವದು' ಎಂದು ಅನ್ನುತ್ತಾರೆ. ಸಂಕ್ರಮಣದ ಪೂರ್ವದಿವಸಕ್ಕೆ 'ಭೋಗಿ' ಎಂಬ ಹೆಸರಿದೆ. ಈ ದಿವಸ ಸೌಭಾಗ್ಯವತಿಯರಾದ ಸ್ತ್ರೀಯರು ಅಕ್ಕಿ, ಹೆಸರಬೇಳೆ, ಸೆಜ್ಜೆಯಹಿಟ್ಟು, ಕೊಬ್ಬರಿಯ ಎಣ್ಣೆ, ಅರಿಸಿಣ, ಕುಂಕುಮ, ಬದನೇಕಾಯಿ–ಗಜ್ಜರಿ– ಉರಳೀಗಡ್ಡಿ ಮೊದಲಾದ ಪಲ್ಯೆ ಈ ಎಲ್ಲ ಜೀನಸು ಗಳನ್ನು ಮುತ್ತೈದೆಯರಿಗೆ ದಾನಕೊಡುವ ಪದ್ಧತಿಯಿದೆ. ಇದಕ್ಕೆ ಭೋಗಿ ಕೊಡುವದು, ಎಂದು ಅನ್ನುತ್ತಾರೆ. ಈ ದಿವಸ ಎಲ್ಲರೂ ಮನೆಯಲ್ಲಿ ಕಿಚಡಿ, ಸೆಜ್ಜೆಯರೊಟ್ಟಿ, ಬೆಣ್ಣೆ ಮೊದಲಾದ ಪದಾರ್ಥಗಳನ್ನು ದೇವರಿಗೆ ಅರ್ಪಣ ಮಾಡಿ ಸೇವಿಸುವರು. ಸಂಕ್ರಮಣದ ಮರುದಿವಸ ಸಂಕ್ರಾಂತಿದೇವಿಯು ಕಿಂಕರ,ನೆಂಬ ದೈತ್ಯನ ವಧಮಾಡಿರುವಳೆಂದು ಪುರಾಣದಲ್ಲಿ ಹೇಳಿದೆ. ಅದರಿಂದ ಆ ದಿವಸಕ್ಕೆ 'ಕಂಕ್ರಾಂತ' ಅಥವಾ 'ಕರೀದಿನ' ಎಂದು ಹೆಸರಿದೆ. ಆ ದಿವಸ ಸ್ತ್ರೀಯರು ಚಿಕ್ಕಮಕ್ಕಳ ತಲೆಯ ಮೇಲೆ ಚೂರಮುರಿ, ಬೆಂಡು, ಬತ್ತಾಸ,

ಗಜ್ಜರಿಯ ಹೋಳು ಈ ಎಲ್ಲ ಪದಾರ್ಥಗಳನ್ನು ಕೂಡಿಸಿ, ಸುರುವುವ ಪದ್ಧತಿಯಿದೆ. ಇದಕ್ಕೆ 'ಕರಿ ಎರೆಯುವದು' ಅನ್ನುತ್ತಾರೆ. ಒಟ್ಟಿಗೆ ಸ್ಥಲಪರಿಣಿಯ ಈ ಹಬ್ಬದ ರೂಢಿಯಲ್ಲಿ ಭಿನ್ನತೆಯಿದ್ದರೂ ಪ್ರೇಮವೃದ್ಧಿಯೇ ಇದರ ವಿಶಿಷ್ಟ ಲಕ್ಷಣವಾಗಿದೆ.

ಮಕರಸಂಕ್ರಮಣ ಹಬ್ಬದ ದಿವಸ ಎಳ್ಳು-ಬೆಲ್ಲವನ್ನು ಅಥವಾ ಸಜ್ಜರೆಯ ಪಾಕವನ್ನು ಲೇಪಿಸಿದ 'ಕುಸುರೆಳ್ಳು'ಗಳನ್ನು ಪರಸ್ಪರರಿಗೆ ಕೊಡುವ ಪದ್ಧತಿಯು ಕರ್ನಾಟಕ-ಮಹಾರಾಷ್ಟ್ರ ಪ್ರಾಂತಗಳಲ್ಲಿ ನೆಲೆಗೊಂಡಿದೆ. ಈ ದಿವಸ ಎಷ್ಟೊ ಕಡೆಗೆ ಪುರುಷರ ಸಮ್ಮೇಲನಗಳೂ, ಸ್ತ್ರೀಯರ ಅರಿಸಿಣ-ಕುಂಕುಮದ ಸಮಾರಂಭಗಳೂ ಜರುಗುತ್ತಿರುವವ್ರ. ಬಂಗಾಲ ಪ್ರಾಂತದಲ್ಲಿ ಈ ಹಬ್ಬದ ದಿವಸ ತಿಲದಾನಕೊಡುವ ಪರಿಪಾಠವಿದೆ. ಬೆಲ್ಲದ ಇಲ್ಲವೆ ಖಜೂರದ ಕಾಕವನ್ನು ಎಳ್ಳು ಬೆರಿಸಿ, ಹಂಚುವ ಪದ್ಧತಿಯು ಆ ಪ್ರಾಂತದಲ್ಲಿದೆ. ಅಲ್ಲಿ ಆ ಖಾದ್ಯಕ್ಕೆ 'ತಿಳೂಲ' ಎಂದು ಅನ್ನುತ್ತಾರೆ. ಇದಲ್ಲದೆ ಅಕ್ಕಿಯ ಹಿಟ್ಟಿನಲ್ಲಿ ಸಕ್ಕರೆ, ತುಪ್ಪ ಗಳನ್ನು ಕೂಡಿಸಿ, 'ಪಿಷ್ಟಕ' ಎಂಬ ಖಾದ್ಯವನ್ನು ತಯಾರಿಸಿ, ಅದನ್ನು ಆಜ್ಯೋಷ ರೊಡನೆ ಸೇವನ ಮಾಡಿ, ಉಳಿದದ್ದನ್ನೆಲ್ಲ ಬಡಬಗ್ಗರಿಗೆ ಕೊಡುವ ರೂಢಿಯೊಂದ ಆ ಪ್ರಾಂತದಲ್ಲಿದೆ. ಈ ಎರಡು ರೂಢಿಗಳ ಫೋಲಿಂದ ಅಲ್ಲಿ ಸಂಕ್ರಮಣ ಹಬ್ಬಕ್ಕೆ 'ತಿಳುಲ ಸಂಕ್ರಾಂತಿ' 'ಪಿಷ್ಟಕ ಸಂಕ್ರಾಂತಿ' ಎಂಬ ಹೆಸರು ಪ್ರಾಪ್ತವಾಗಿದೆ. ತಮ್ಮ ಯೋಗ್ಯತೆಯಂತೆ ರೇಶಿಮೆಯ ಇಲ್ಲವೆ ಬೇರೆ ಯಾವದೊಂದು ವಸ್ತ್ರದಲ್ಲಿ 'ಪಿಷ್ಟಕ'ವನ್ನು ಕಟ್ಟಿ, ಅದನ್ನು ದೂರ ದೇಶದಲ್ಲಿರುವ ತಮ್ಮ ಇಷ್ಟಮಿತ್ರರಿಗೆ ಕಳಿಸುವ ಪದ್ಧತಿಯು ಬಂಗಾಲಿ ಜನರಲ್ಲಿದೆ. ಸಂಕ್ರಮಣದ ದಿವಸ ಪವಿತ್ರ ನದೀ-ತೀರ್ಥಗಳಲ್ಲಿ ಸ್ನಾನಮಾಡುವದರಿಂದ ಮರಣೋತ್ತರ ಸದ್ಗತಿಯು ಪ್ರಾಪ್ತವಾಗುವದೆಂದು ಧರ್ಮಶಾಸ್ತ್ರದಲ್ಲಿ ಹೇಳಿರುವ ಮೂಲಕ ಆ ಹಬ್ಬದ ದಿವಸ ಗಂಗೆಯ ಹಾಗು ಇತರ ನದಿಗಳ ದಂಡೆಯಲ್ಲಿರುವ ಕ್ಷೇತ್ರಗಳಲ್ಲಿ ಸ್ನಾನದ ಧೆಸೆಯಿಂದ ಲಕ್ಷಾವಧಿ ಜನರು ಕೂಡುವರು.

ದಕ್ಷಿಣ ಹಿಂದುಸ್ತಾನದಲ್ಲಿಯ ದ್ರವಿಡ ಪ್ರದೇಶದಲ್ಲಿ ಈ ಸಂಕ್ರಮಣ ಹಬ್ಬದಲ್ಲಿಯೇ 'ಪೊಂಗಲ' ಎಂಬ ಹೆಸರಿನದೊಂದು ಮಹೋತ್ಸವವು ಮೂರು ದಿವಸ ದೊಡ್ಡ ಪ್ರಮಾಣದಿಂದ ನಡೆಯುವದು. ಅದರ ಮೊದಲನೆಯ ದಿವಸವು 'ಭೋಗಿ ಪೊಂಗಲ' ಅಥವಾ 'ಇಂದ್ರ ಪೊಂಗಲ' ಎಂಬುದಿದ್ದು, ಅದು ವರ್ಷಋತುವಿನ ದೈವತವಾದ ಇಂದ್ರನ ಪ್ರೀತ್ಯರ್ಥವಾಗಿದೆ. ಎರಡನೆಯ ದಿವಸವು ಸೂರ್ಯನ ಪ್ರೀತ್ಯರ್ಥವಾಗಿದ್ದು, ಅದಕ್ಕೆ 'ಸೂರ್ಯ ಪೊಂಗಲ' ಎಂದು ಅನ್ನುತ್ತಾರೆ

ದಿನದ ಸೌಭಾಗ್ಯವತಿಯರಾದ ಸ್ತ್ರೀಯರು ಸ್ನಾನ ಮಾಡಿ, ಒದ್ದೆಯ ವಸ್ತ್ರ ದಲ್ಲೇ ಅಂಗಳದಲ್ಲಿ ಹಾಲು-ಅಕ್ಕಿಗಳನ್ನು ಹಾಕಿದ ಪಾತ್ರೆಯನ್ನು ಅಗ್ನಿಯ ಮೇಲೆ ಇಡುವರು. ಮುಂದೆ ಅದಕ್ಕೆ ಏಸರು ಬಂದ ಮೇಲೆ 'ಪೊಂಗಲ ಓ ಪೊಂಗಲ' ಎಂದು ಗರ್ಜನೆ ಮಾಡುವರು. ಆ ಮೇಲೆ ಆ ಪಾಯಸವನ್ನು ಗಣಪತಿಗೆ ಅರ್ಪಿಸಿ, ಕೆಲ ಭಾಗವನ್ನು ಆಕಳಿಗೆ ಕೊಟ್ಟು, ಉಳಿದದ್ದನ್ನು ಮನೆಯ ಎಲ್ಲರೂ ಸೇವನಮಾಡುವರು. ಈ ಪೊಂಗಲ ಹಬ್ಬದ ಮೂರನೆಯ ದಿವಸಕ್ಕೆ 'ಪುಟ್ಟು ಪೊಂಗಲ' ಎಂಬ ಹೆಸರಿದೆ. ಈ ದಿವಸ ಆಕಳು, ಎತ್ತು, ಕುದುರೆ ಮೊದಲಾದ ಪಶುಗಳ ಪೂಜೆ ಮಾಡಿ, ಅವನ್ನು ಶೃಂಗರಿಸಿ, ಊದುತ್ತ ಬಾರಿಸುತ್ತ ಊರೊಳಗೆ ಮೆರಿಸುವರು. ಮಧುರೆ, ತಿನ್ನೆವೆಲ್ಲಿ ಮೊದಲಾದ ಪಟ್ಟಣಗಳಲ್ಲಿ ಈ 'ಪೊಂಗಲ' ಹಬ್ಬವು ಒಳ್ಳೇ ವಿಜೃಂಭಣೆಯಿಂದ ಜರುಗುವದು. 'ಪೊಂಗಲ' ಈ ಶಬ್ದವು ತೆಲಗುಭಾಷೆಯಲ್ಲಿಯು 'ಪೊಂಘಡಿ' ಹಾಗು ತಮಿಳು ಭಾಷೆಯಲ್ಲಿಯ 'ಪೊಂಗೂ' ಎಂಬ ಶಬ್ದದ್ವಯಗಳಿಂದ ಉಗಮವಾಗಿದ್ದು, ಅದರ ಅರ್ಥವು 'ಕುದಿಸುವದು' ಎಂಬುದಿದೆ. ಅದರಿಂದ 'ಪೊಂಗಲ' ಹಬ್ಬವು ಒಂದು ಪ್ರಕಾರದ 'ಪಾಕೋತ್ಸವ'ವೇ ಆಗಿದೆ.

ಮಹಾರಾಷ್ಟ್ರ ಪ್ರಾಂತದಲ್ಲಿ ಈ ಹಬ್ಬದ ದಿವಸ "ತೀಳ ಗೂಳ ಘ್ಯಾ ಗೋಡ ಬೋಲಾ" (ಎಳ್ಳು ಬೆಲ್ಲವನ್ನು ತಕ್ಕೊಂಡು ಸವಿ ಮಾತು ಆಡಿರಿ.) ಎಂದು ಸ್ನೇಹಿತ ಪರಸ್ಪರರಿಗೆ ಎಳ್ಳು-ಬೆಲ್ಲವನ್ನು ಕೊಡುವ ಪದ್ಧತಿಯಿದೆ. ದ್ರವಿಡ ದೇಶದಲ್ಲಿ "ಪಾಯಸವು ಬೆಂದಿತೋ" ಎಂದು ಕೇಳುವ ರೂಢಿಯಿದೆ. ಇದರಂತೆ ಮಹಿಷಸಂಜವಿಯ ದಿವಸ ಜರುಗುವ 'ಪಜೂಸನ' ಎಂಬ ಜೈನ ಪರ್ಷಾರಂಭೋತ್ಸವದ ದಿವಸ ಆ ಮತದ ಅನುಯಾಯಿಗಳು ಪರಸ್ಪರರಿಗೆ ಭೆಟ್ಟಿಯಾಗಿ ಕೃತಾಪರಾಧದ ಬಗ್ಗೆ ಕ್ಷಮೆಬೇಡುವ ಪದ್ಧತಿಯಿದೆ. ಇವೆಲ್ಲ ಪ್ರೇಮವೃದ್ಧಿಯ ಪದ್ಧತಿಗಳಾಗಿದ್ದು, ಇವುಗಳಿಂದ ಎಷ್ಟೋ ಸಮಯಗಳಲ್ಲಿ ಶತ್ರುಗಳು ಕೂಡ ಮಿತ್ರರಾಗುವ ಸಂಭವವಿರುವದು.

'' तिलस्नायी तिलोद्वर्ती तिलहोमी तिलोदकी ।
तिलभुक्तिलदाता च षट् तिलाः पापनाशनाः ॥ ''

ಅರ್ಥ— ತಿಲೋದಕದ ಸ್ನಾನ ಮಾಡುವದು, ತಿಲಗಳನ್ನು ಅರೆದು ಮೈಗೆ ಹಚ್ಚಿ ಕೊಳ್ಳುವದು, ತಿಲಹೋಮ ಮಾಡುವದು, ಪಿತೃಗಳಿಗೆ ತಿಲೋದಕವನ್ನು ಕೊಡುವದು, ತಿಲಗಳನ್ನು ಸೇವಿಸುವದು, ತಿಲದಾನ ಕೊಡುವದು ಈ ಆರು ಕಾರ್ಯಗಳು ಅತ್ಯಂತ ಪುಣ್ಯದಾಯಕವಾಗಿವೆ.

ಮಕರಸಂಕ್ರಮಣದ ದಿವಸ ತಿಲದ ಮಹತ್ವ ವಿಶೇಷವಿರುವದೆಂಬುದು ಮೇಲಿನ ಶಾಸ್ತ್ರವಚನದಿಂದ ಚನ್ನಾಗಿ ಅವಗತವಾಗುವದು. ಬಂಗಾಲ ಪ್ರಾಂತದಲ್ಲಿ ಮಾತ್ರ ಈ ಶಾಸ್ತ್ರವಚನವನ್ನು 'ವರಾಹ ದ್ವಾದಶಿಗೆ' ಅಂದರೆ ಮಾಘಶುದ್ಧ ದ್ವಾದಶಿಗೆ ಆಚರಿಸುವ ಪದ್ಧತಿಯಿದೆ. ತಿಲಧಾನ್ಯವು ಯಮಧರ್ಮರಾಯನ ತಪಶ್ಚರ್ಯೆಯಿಂದ ಪ್ರಾಪ್ತವಾದಂತೆ ಪೌರಾಣಿಕ ಆಖ್ಯಾಯಿಕೆಯಿದೆ. ಅದರಿಂದಲೇ ಯಮಪ್ರೀತ್ಯರ್ಥವಾದ ಸಕಲ ಕಾರ್ಯಗಳಲ್ಲಿಯೂ ತಿಲಧಾನ್ಯಕ್ಕೆ ಶ್ರೇಷ್ಠತೆಯಿದೆ. ತಮ್ಮ ಸಂತತಿಯ ಕಲ್ಯಾಣವಾಗಿ, ಅದರ ವೃದ್ಧಿಯಾಗಬೇಕೆಂಬುವದೇ ಪಿತೃ ಕಾರ್ಯದ ಮುಖ್ಯ ಉದ್ದೇಶವಾಗಿದೆ. ಸಕಲ ಧಾನ್ಯಗಳಲ್ಲಿಯೂ ತಿಲದ ಪೈರೇ ಹೆಚ್ಚು ಪ್ರಮಾಣದಿಂದ ಬರುವದು. ಅಂತೆಯೇ ಸಂತಾನಾಭಿವೃದ್ಧಿಯನ್ನು ಸೂಚಿಸುವ ಈ ಧಾನ್ಯವನ್ನೇ ತತ್ಸಂಬಂಧದ ಧರ್ಮವಿಧಿಯಲ್ಲಿ ಉಪಯೋಗಿಸುವ ಪದ್ಧತಿಯು ಬಹು ಪ್ರಾಚೀನಕಾಲದಿಂದ ನಡೆದುಬಂದಂತೆ ಕಾಣುತ್ತದೆ. ಪ್ರಾಚೀನ ಗ್ರೀಕ ಜನರು ಲಗ್ನಕಾರ್ಯದ ಸಮಯದಲ್ಲಿ ವಧೂವರರ ಸಂತಾನಾಭಿವೃದ್ಧ್ಯರ್ಥವಾಗಿ ಶುಭೇಚ್ಛಾದರ್ಶಕವಾದ ತಿಲದ ಪಕ್ವಾನ್ನವನ್ನು ತಮ್ಮ ಆಪ್ತೇಷ್ಟರಲ್ಲಿ ಹಂಚುತ್ತಿದ್ದರಂತೆ. ಉತ್ತರಾಯಣದ ಆರಂಭಕಾಲದಲ್ಲಿ ಹಿಂದುಗಳು ಹೇಗೆ ಎಳ್ಳು ಬೆಲ್ಲ, ತಿಳು ಆ, ಪಿಷ್ಟಕ ಎಂಬ ಖಾದ್ಯಗಳನ್ನು ಹಂಚುವರೋ ಅದೇಮೇರೆಗೆ ಇದೇ ಸಮಯದಲ್ಲೊದಗುವ 'ಕ್ರಿಸ್‌ಮಸ, ಎಂಬ ಕ್ರಿಸ್ತೀಹಬ್ಬದಲ್ಲಿ ಕ್ರಿಸ್ತೀ ಜನರು ದೀಪದಾಕ್ಷಿಯ ಪಕ್ವಾನ್ನವನ್ನು ಪರಸ್ಪರರಕಡೆಗೆ ಕಳುಹಿಸುತ್ತಿರುತ್ತಾರೆ. ಪ್ರಾಚೀನ ರೋಮನ ಜನರಲ್ಲಿ ಮಕರಸಂಕ್ರಮಣದ ದಿನಸ ಅಂಜೀರ, ಬಾದೂರ, ಜೇನುತುಪ್ಪ ಈ ಮೂರು ಪದಾರ್ಥಗಳನ್ನು ಶುಭೇಚ್ಛಾದರ್ಶಕವಾದ ಪುತ್ರಿಯರಿಂದ ತಮ್ಮ ಆಪ್ತೇಷ್ಟರ ಕಡೆಗೆ ಕಳುಹಿಸುವ ಪದ್ಧತಿಯಿತ್ತು. ಸದ್ಯದ ಕ್ರಿಸ್ತೀ ಜನರಲ್ಲಿಯೂ 'ನಾತಾಳಿ' ಹಬ್ಬದಲ್ಲಿ 'ಕ್ರಿಸ್‌ಮಸಕಾರ್ಡ' ಕಳುಹಿಸುವ ರೂಢಿಯಿದ್ದು, ಅದು ಪ್ರಾಚೀನ ರೋಮಾಯರ ಅನುಕರಣದಿಂದಲೇ ಬಂದಂತೆ ಕಾಣುತ್ತದೆ. ಒಟ್ಟಿಗೆ ಉತ್ತರಾಯಣದ ಆರಂಭಕಾಲವನ್ನು ಅತ್ಯಂತ ಪವಿತ್ರವೂ ಶ್ರೇಷ್ಠವೂ ಎಂದು ತಿಳಿದು, ಅದರ ಪ್ರೀತ್ಯರ್ಥವಾಗಿ ಉತ್ಸವ ಮಾಡುವ ಪದ್ಧತಿಯು ಸಕಲ ಜನಾಂಗದಲ್ಲಿಯೂ ಕಂಡುಬರುವದು. ಹಿಂದುಗಳು ಮಾತ್ರ ತಮ್ಮ ವೈಶಿಷ್ಟ್ಯದಂತೆ ಈ ಹಬ್ಬಕ್ಕೆ ಹೆಚ್ಚು ಧಾರ್ಮಿಕ ಸ್ವರೂಪವನ್ನು ಕೊಟ್ಟಿರುವರು.

ಹಿಂದೂ ಜನಾಂಗದಲ್ಲಿ 'ಮಕರಸಂಕ್ರಮಣೋತ್ಸವ'ವನ್ನು ಪ್ರಚಾರದಲ್ಲಿ ತಂದ ಉದ್ದೇಶವು ಬಹು ಉದಾತ್ತವಿದೆ. ನಮ್ಮೊಳಗೆ ಪರಸ್ಪರರಲ್ಲಿ ಪ್ರೇಮವೃದ್ಧಿಯಾಗಿ, ನಾವು ಸದಾ ಪ್ರಗತಿಯ ಮಾರ್ಗದಲ್ಲಿಯೇ ಇದ್ದು, ಮಾನವಜನ್ಮದ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕೆಂಬುವದೇ ಈ ಉತ್ಸವದ ಮುಖ್ಯ ಹೇತ

ಗಿದೆ. ಈ ಹಬ್ಬದಲ್ಲಾಚರಿಸುವ ವಿಧಿಗಳು ಶುದ್ಧಸ್ವರೂಪದವಿದ್ದು, ಕೇವಲ ್ರೇಮವರ್ಧಕವೇ ಆಗಿವೆ. ಈ ಪರ್ವದ ದಿವಸ ಜರುಗತಕ್ಕ ಸಮ್ಮೇಲನ, ಅರಿಸಿಣ-ಂಕುಮದ ಸಮಾರಂಭ, ಎಳ್ಳು-ಬೆಲ್ಲವನ್ನು ಕೊಟ್ಟು ಪರಸ್ಪರರ ಭೆಟ್ಟಿಯನ್ನು ಗೆದುಕೊಳ್ಳುವ ಸಂಪ್ರದಾಯ ಇವೆಲ್ಲವುಗಳು ನಮ್ಮ ಧರ್ಮ-ಸಂಸ್ಕೃತಿಗಳಿಗೆ ಯೋಗ್ಯವೇ ಆಗಿವೆ. ಆಹ್ಲಾದಕಾರಕವಾದ ವಸಂತಾಗಮನದ ಶುಭ ಸಂದೇಶ ನ್ನು ತರುವ ಸಂಕ್ರಮಣೋತ್ಸವವು ನಮ್ಮಲ್ಲಿ ಪ್ರೇಮ-ಸದಭಿಲಾಷೆಗಳನ್ನೇ ುತ್ಪನ್ನಮಾಡುವದು. ಉತ್ತರಾಯಣವು ಪ್ರಾರಂಭವಾದಂದಿನಿಂದ ಸೃಷ್ಟಿಗೆ ್ರಮ-ಕ್ರಮವಾಗಿ ರಮಣೀಯ ಸ್ವರೂಪವು ಪ್ರಾಪ್ತವಾಗುತ್ತ ನಡೆದು, ಆ ರ್ಮಲ ಸ್ವರೂಪದ ಅಂತರ್ಭಾಗದಲ್ಲಿ ಪರಮ ಕೃಪಾಳುವಾದ ಜಗನ್ನಾಯಕನ ುಜ್ವಲ ಪ್ರತಿಬಿಂಬವು ನಮಗೆ ದೃಗ್ಗೋಚರವಾಗಿ, ತಚ್ಚರಣದಲ್ಲಿ ನಮ್ಮ ಮನಸ್ಸು ೀನವಾಗುವದು. ಹಗಲಿನ ಅವಧಿಯು ಬೆಳೆಯುತ್ತ ನಡೆಯುವ ಮೂಲಕ ಸತ್ಕಾರ್ಯದಲ್ಲಿ ದುಡಿಯಲಿಕ್ಕೆ ಹೆಚ್ಚು ವೇಳೆ ದೊರೆಯುವದು. ಇಂಥ ಈ ಮಂಗಲಕರವಾದ ಮಹೋತ್ಸವದಲ್ಲಿ ನಾವೆಲ್ಲರೂ ಒಬ್ಬ ಭಾರತ-ಭೂ-ಮಾತೆಯ ಮಕ್ಕಳೆಂದು ತಿಳಿದು, ಬಂಧುಭಾವನೆಯಿಂದ ನಮ್ಮಲ್ಲಿಯ ಜಾತಿ ಮತ-ಉಚ್ಚ ನೀಚತ್ವಗಳ ದ್ವೈತಭಾವವನ್ನು ಮರೆತು, ಒಕ್ಕಟ್ಟಿನಿಂದ ಪರಸ್ಪರರಿಗೆ ಸಹಾಯ ಮಾಡುವ ಕಲೆಯನ್ನು ಅಭ್ಯಾಸಿಸಿ, ಶಿರೋಲೇಖದಲ್ಲಿ ಕೊಟ್ಟ 'ಕರೋಪನಿಷತ್ತಿ'ನ ಪ್ರೇಮದ ಉಪದೇಶವನ್ನು ಪ್ರತ್ಯಕ್ಷ ಆಚರಣೆಯಲ್ಲಿ ತಂದಡ್ಡಾದರೆ 'ಮಕರ ಸಂಕ್ರಮಣ, ಹಬ್ಬದ ನಿಜವಾದ ಉದ್ದೇಶವು ಸಾಧ್ಯವಾದಂತಾಗುವದು.

"सर्वेऽत्र सुखिनः सन्तु । सर्वे सन्तु निरामयाः ॥
सर्वे भद्राणि पश्यन्तु । मा कश्चिद्दुःखमाप्नुयात् "

ಅರ್ಥ— ಈ ಜಗತ್ತಿನಲ್ಲಿ ಸಕಲಜನರಿಗೂ ಸೌಖ್ಯವು ಪ್ರಾಪ್ತವಾಗಲಿ ! ಸಕಲ ಜನರೂ ಆರೋಗ್ಯವನ್ನು ಪಭೋಗಿಸಲಿ ! ಸಕಲರೂ ಕಲ್ಯಾಣಪ್ರದ ಪ್ರಸಂಗ ಗಳನ್ನೇ ನೋಡಲಿ ! ಯಾರ ಮೇಲೆಯೂ ದುಃಖದ ಪ್ರಸಂಗಗಳು ಬಾರದಿರಲಿ !

ನಿಬಂಧವೂ ಅದರ ನೂತನ ಸ್ವರೂಪವೂ

ಲೇಖಕರು— ಎಂ. ಸಾತೇನಹಳ್ಳಿ

ಚಿತ್ರಗಾರನು ಚಿತ್ರಕಲೆಯ ಮೂಲಕ ಭಾವವನ್ನು ವ್ಯಕ್ತಗೊಳಿಸಿ ಪ್ರೇಕ್ಷಕರನ್ನು ಮೋಹಗೊಳಿಸುವಂತೆ ನಿಬಂಧಕಾರನು ಬರೆಹದ ಮೂಲಕ ವಾಚಕರನ್ನು ಮೋಹಗೊಳಿಸುವನು; ಎಂದರೆ ಭಾವಯುಕ್ತರನ್ನಾಗಿ ಮಾಡಿಬಿಡುವನು. ಪ್ರಾ. ಶಾ. ಗಳಲ್ಲಿ ವಿದ್ಯಾರ್ಥಿಗಳು ತಾವು ಓದಿದ, ನೋಡಿದ, ಕೇಳಿದ ಸಂಗತಿಗಳನ್ನು ಅಂದರೆ ಪೂರ್ಣ ಪರಿಚಿತವಿರುವ ಸಂಗತಿಗಳನ್ನು ಯಥಾಕ್ರಮವಾಗಿ ಸುಲಭ, ಸುಶ್ರಾವ್ಯ ಭಾಷೆಯಿಂದ ಹೇಳಲಿಕ್ಕೂ ಬರೆಯಲಿಕ್ಕೂ ಬರುವಂತೆ ಮಾಡುವದೇ ನಿಬಂಧ ಶಿಕ್ಷಣದ ಉದ್ದೇಶವಾಗಿರುತ್ತದೆ. ಈಗ ನಿಬಂಧ ವಿಷಯದಲ್ಲಿ ಬಾಯಿಂದ ಹೇಳುವದು, ಬರೆಯುವದು ಎಂದು ೨ ಭಾಗಗಳನ್ನು ಏಂಗಡಿಸಿದಂತಾಯಿತು. ನಿಜವಾಗಿ ವಿಚಾರಿಸಿ ನೋಡಿದರೆ ಆತ್ಮಗತ ಭಾವವನ್ನು ವ್ಯಕ್ತಪಡಿಸುವದೇ ನಿಬಂಧದ ಮುಖ್ಯೋದ್ದೇಶವು. ನಿಬಂಧವು ಕಲೆಯಾಗಿರುವದರಿಂದ ಎಲ್ಲರಿಗೂ ಒಮ್ಮೆಲಿ ತಮ್ಮ ಮನೋಗತವನ್ನು ಭಾವಯುಕ್ತವಾಗಿ ಹೊರಹೊಮ್ಮಿಸಲು ಪದು ಬಿಗಿಯಾದ ಮಾತಾಗಿರುವದರಿಂದ ಪ್ರಾ. ಶಾ. ಗಳಲ್ಲಿ ತಮ್ಮ ಮನೋಗತವನ್ನು ಸರಿಯಾಗಿ ವ್ಯಕ್ತಗೊಳಿಸಲಿಕ್ಕೆ ಕಲಿಸಬೇಕಾಗಿರುತ್ತದೆ. ತಮ್ಮ ಭಾವನೆಯನ್ನು ಪರಿಪೂರ್ಣವಾಗಿ ವ್ಯಕ್ತಗೊಳಿಸುವದು ತೀರ ಕೊನೆಯ ಮೆಟ್ಟು ಎಂದು ಹೇಳಬಹುದು.

ನಿಬಂಧ ವಿಷಯವನ್ನು ಬಾಲಕರ ವರ್ಗದಿಂದಲೇ ಆರಂಭಿಸತಕ್ಕದ್ದಿರುತ್ತದೆ. ಚಿಕ್ಕಮಕ್ಕಳು ಸಹ ತಾವು ನೋಡಿದ ಕೇಳಿದ ಸಂಗತಿಗಳನ್ನು ಮಾತಿನಿಂದ ಹೊರಗೆಡಹಲಿಕ್ಕೆ ಸ್ವಾಭಾವಿಕವಾಗಿ ಇಚ್ಛಿಸುತ್ತಿರುತ್ತಾರೆ. ಈ ಪ್ರವೃತ್ತಿಗೆ ಅನುವು ಕೊಟ್ಟು ಆದನ್ನು ಬೆಳೆಯಿಸಬೇಕಾಗಿರುತ್ತದೆ. ಬಾಲಕರಿಗೆ ಪೂರ್ಣ ಪರಿಚಿತವಾಗಿರುವ ಪ್ರತಿನಿತ್ಯದ ವಿಷಯಗಳಿಂದಲೇ ಎಂದರೆ ಅವರ ತೋಟ, ಮನೆ, ಅಂಗಡಿ, ಶಾಲೆ, ಪುಸ್ತಕ ಇತ್ಯಾದಿಗಳಿಂದ ಈ ವಿಷಯವನ್ನು ಆರಂಭಿಸಬೇಕು. ಆ ವಿಷಯವನ್ನು ಕುರಿತು ಶಿಕ್ಷಕರು ಬಾಲಕರೊಡನೆ ಮಾತಾಡಬೇಕು; ಅವರಲ್ಲಿ ಸಂಭಾಷಣೆ ನಡೆಯುವಂತೆ ಮಾಡಬೇಕು.

ಹಾವಭಾವಪೂರ್ವಕವಾದ ಸಂಭಾಷಣೆಗಳಿಂದ ಮನೋಭಾವನೆಯನ್ನು ವ್ಯಕ್ತಗೊಳಿಸಲಿಕ್ಕೆ ಬರುತ್ತಿರುತ್ತದೆ. ನಿಬಂಧವು ತೊದಲು ಮಾತಿನಿಂದ ಹೊರಬಲು

ಂಭವಾಗುತ್ತದೆ. ಹಾಗೆ ಹುಡುಗರಿಗೆ ತಮಗೆ ಗೊತ್ತಿದ್ದದ್ದನ್ನು ಹೇಳಲಿಕ್ಕೆ ದಿಕ್ಕೆಂದು ಅನಿಸಿದರೆ ಶಿಕ್ಷಕನ ಅರ್ಧ ಕೆಲಸವಾದಂತಾಯಿತು. ಹೀಗೆ ಹೇಳ ಮುಖ್ಯವಾಗಿ ವಿದ್ಯಾರ್ಥಿಯಲ್ಲಿ ಪ್ರೇಮವು ಉತ್ಪನ್ನವಾಗಬೇಕು. ಪ್ರೇಮ ದೇ ಮನೋಗತವು ಹೊರಬೀಳಲಿಕ್ಕೆ ಆಸ್ಪದವುಂಟಾಗುತ್ತದೆ. ಹಾಗೆ ಜಕ ನಿಬಂಧವನ್ನು ಆರಂಭಿಸಿ ಅರ್ಥವತ್ತಾದ ಕೆಲವು ಶಬ್ದಗಳ ಪರಿಚಯ ಗಲೆಂದು ಅಂಥ ಶಬ್ದಗಳನ್ನು ಉಪಯೋಗಿಸಿ ಮಾತನಾಡಲು ಉತ್ತೇಜನ ತಬೇಕು. ಬಾಲಕರ ವರ್ಗದಲ್ಲಿ ನಿಬಂಧವೆಂದರೆ ಅವರ ಪರಿಚಿತ ವಿಷಯಗಳ ಲೆ ನಾಲ್ಕಾರು ಮಾತುಗಳನ್ನು ಆಡುವದು. ಹಾಗೆ ಅವರು ಆಡುವಂತಾದರೆ ರ ನಿಬಂಧ ವಿಷಯವು ಸಾಕಷ್ಟು ಆಯಿತೆಂದು ಹೇಳಬಹುದು. ಬಾಲಕರ ರುವರು ನಿಬಂಧಗಳನ್ನು ಬರೆಯಬಾರದು. ಎಂದರೆ ಬರೆಹದ ನಿಬಂಧವು ರಿಗೆ ಬೇಡ.

ಭಾವವನ್ನು ವ್ಯಕ್ತಗೊಳಿಸುವದು ನಿಬಂಧದ ಮುಖ್ಯ ಗುರಿಯಾಗಿದ್ದರೂ ಭಾಷೆ, ತಕ್ಕಷ್ಟು ವಿಷಯಜ್ಞಾನ ಇವು ಅದಕ್ಕೆ ಅಂಟಿಕೊಂಡ ವಿಷಯಗಳು ದರೆ ಸಹಾಯಕ ವಿಷಯಗಳಾಗಿವೆ. ಕಥೆ ಹೇಳುವದು, ಹೇಳಿಸುವದು ಇವು ಯಜ್ಞಾನಕ್ಕಾಗಿ; ಚೆಂದಾದ ಭಾಷೆಯಿಂದ ಬರೆದ ಅವತರಣಗಳನ್ನು ಅವರ ಂದೆ ಓದುವದು, ಯಾವದೊಂದು ಸಂಗತಿಯನ್ನು ಬಗೆಬಗೆಯಿಂದ ಬೇರೆ ಬೇರೆ ಕ್ಯಗಳಿಂದ ತಾನೇ ಹೇಳುವದು ಅವರ ಭಾಷಾಜ್ಞಾನಕ್ಕಾಗಿ. ಹೀಗೆ ಓದುವದು, ಳಿಸುವದು, ಮಾತನಾಡುವದು, ಬರೆಯುವದು ಇವೆಲ್ಲ ನಿಬಂಧ ಶಿಕ್ಷಣದ ಹಾಯಕ ಅಂಗಗಳಾಗಿರುತ್ತವೆ. ಮೊದಲು ಪ್ರತ್ಯಕ್ಷವಾಗಿ, ಬರಬರುತ್ತ ಕಲ್ಪನಾ ಕ್ತಿಯನ್ನು ವೃದ್ಧಿಗೊಳಿಸುವಂತೆ ಸಕ್ಕರೆಕರಣಿ, ಮಾವಿನಹಣ್ಣು ಇಂಥ ಸಂಭಾ ಣಗಳನ್ನು ರೂಢಿ ಮಾಡಿಸಬೇಕು. ಬಳಿಕ ಚಿತ್ರವಾಚನ, ಇತಿಹಾಸ, ಭೂಗೋ ದ ಪಾಠಗಳು ಇತ್ಯಾದಿ ವಿಷಯಗಳಲ್ಲಿ ಸರಿಯಾಗಿ ಮಾತನಾಡಿಸಲಿಕ್ಕೆ ಉತ್ತೇ ನ ಕೊಡಬೇಕು. ಳನೆಯ ಇಯತ್ತೆಯು ಪ್ರಾ. ಶಾ. ಗಳಲ್ಲಿ ಒಳ್ಳೇ ಮಧ್ಯಸ್ಥ ನಾದದಿರುತ್ತದೆ. ಆದುದರಿಂದ ಆಗ ಮಾತನಾಡುವದೂ ಬರೆಯುವದೂ ಇವೆರ ನ್ನೂ ಕೂಡಿಯೇ ಸಾಗಿಸಬೇಕು, ಯಾಕಂದರೆ ಈ ಇಯತ್ತೆಯಿಂದಲೇ ಸಾರ್ವ ತ್ರಿಕ ಪ್ರಾಥಮಿಕ ಶಿಕ್ಷಣವು ಮುಗಿದುಹೋಗುವದು. ನಮ್ಮ ದೇಶದ ಬಹುಜನ ವಿದ್ಯಾರ್ಥಿಗಳು ಇಲ್ಲಿಗೇ ಶಾಲೆಯನ್ನು ಬಿಡುವರು. ಇದಲ್ಲದೆ ಈ ಇಯತ್ತೆ ಯಿಂದಲೇ ಮುಂದೆ ಇಂಗ್ಲಿಷ ಶಾಲೆಗೆ ಮಕ್ಕಳು ಹೋಗತಕ್ಕವರಿರುವರು. ಆ ದೃಷ್ಟಿಯಿಂದ ಅರ್ಥಪೋಷವನ್ನು ಆಗಗೊಡದಿರುವದು ಅಗ್ಗಿ ಮಹತ್ವದ್ದಾಗಿರುತ್ತದೆ. ಹೆಚ್ಚು ಕಷ್ಟು ಓದಿ, ಕೇಳಿ ಇತ್ಯಾದಿಗಳನ್ನು ಹೆಚ್ಚಾಗಿ ವ್ಯವಹರಿಸತೊಡಗಿದಂತೆ ವಾಕ್ಯ

ದೋಷವು ಆಗದಂತೆ ಮಾಡಬಹುದು. ಇದಲ್ಲದೆ ಶಬ್ದಗಳ ಶುದ್ಧರೂಪ, ವಿರಾಮ ಚಿಹ್ನಗಳ ಉಪಯೋಗ, ವುನರುಕ್ತಿಯಾಗದಂತೆ ಸ್ವಲ್ಪದರಲ್ಲಿಯೇ ತನಗೆ ಗೊತ್ತಿದ್ದದ್ದನ್ನು ಹೇಳೋಣ ಮೊದಲಾದವುಗಳ ಕಡೆಗೂ ಆಗ ಗಮನಕೊಡಬೇಕು. ಯಾವಾಗಲೂ ಹುಡುಗರಿಗೆ ತಾವು ಕಲಿಯುವ ವಿಷಯವು ತೀರ ಕಠಿಣವಾದದ್ದು ಅಥವಾ ಅಸಂಭವವಾದದ್ದು ಎಂಬ ಭಾವನೆಯು ಉತ್ಪನ್ನವಾಗದಂತೆ ಬರೆಸುವುದನ್ನೆಲ್ಲ ತೆಗೆದು ಹಾಕಬಾರದು. ಇದ್ದದ್ದಕ್ಕೆ ಉತ್ತೇಜನ ಕೊಟ್ಟು ಅವರು ತಾವಾಗಿಯೆ ಸುಧಾರಿಸಿಕೊಳ್ಳುವಂತೆ ಉದ್ದೇಶವನ್ನಿಟ್ಟುಕೊಳ್ಳಬೇಕು.

ಇತ್ತಿತ್ತಲಾಗಿ ಎಲ್ಲ ವಿಷಯಗಳಲ್ಲಿ ನೂತನಸುಧಾರಣೆ ಯಾಗುತ್ತ ಇರುವಂತೆ ನಿಬಂಧಶಿಕ್ಷಣದಲ್ಲಿಯೂ ಆಗಿರುತ್ತದೆ. ಪರೀಕ್ಷೆಯ ಪ್ರಶ್ನೆಗಳಿಂದಲೇ ಈ ಮಾತು ವ್ಯಕ್ತವಾಗುತ್ತದೆ. ವ್ಹ. ಫಾ. ಪರೀಕ್ಷೆಯ ಪೇಪರುಗಳಲ್ಲಿ ಮೊದಮೊದಲು ದೊಡ್ಡದೊಡ್ಡ ವಿಷಯಗಳನ್ನು ಕುರಿತು ಬರೆಯಲಿಕ್ಕೆ ಪ್ರಶ್ನೆಗಳನ್ನು ಕೊಡುತ್ತಿದ್ದರು. ಇತ್ತಿತ್ತಲಾಗಿ ಬೇರೆಬೇರೆ ಹೊಸ ವಿಚಾರದ ಪ್ರಶ್ನೆಗಳು ಬರಲಾರಂಭಿಸಿವೆ. ಅವಕ್ಕನುಸರಿಸಿಯೇ ನಮ್ಮ ಶಿಕ್ಷಣ ಕ್ರಮದಲ್ಲಿಯೂ ಸುಧಾರಣೆ ಮಾಡಿಕೊಳ್ಳಬೇಕು.

ಪ್ರೌಢವಾದ ನಿಬಂಧಗಳು ಹೊಸ ರೀತಿಯಿಂದ ಹ್ಯಾಗೆ ಇರಬೇಕೆಂದು ದೊಡ್ಡವರ ವಿಚಾರದಿಂದ ತಿಳಿದು ಕೆಳಗೆ ಬರೆದಿದೆ. ಅದರಂತೆಯೇ ನಿಬಂಧಗಳು ಪ್ರಾಥಮಿಕ ಶಾಲೆಗಳಲ್ಲಿಯೂ ಇರಬೇಕೆಂದು ತಿಳಿಯಬಾರದು. ಕೆಳಗೆ ಬರೆದ ವಿಷಯವು ನಿಬಂಧದ ಕೊನೆಯ ಪೆಟ್ಟಾಗಿರುವದು. ಹೆದ್ದಾರಿಯಂತೆ ಇರುವದು ಅದೇ ನಮ್ಮ ಗುರಿಯಾಗಿದ್ದರೆ ತೀರಿತು.

ಯಾವ ಯಾವ ಇಯತ್ತೆಗಳಿಗೆ ಎಂಥ ನಿಬಂಧಗಳನ್ನು ಕಲಿಸಬಹುದೆಂಬ ವಿಷಯವಾಗಿ ಆಕ್ಟೋಬರ ಸಂಚಿಕೆಯಲ್ಲಿ ಹೇಳಿದೆ.

ನಿಬಂಧ ಬರಹದ ಹೊಸ ವಿಚಾರ

ಬಂಧ್ ಧಾತುವಿನ ಅರ್ಥವು ಕಟ್ಟು ಎಂಬದಾಗಿ ಇರುವದು. ನಿ ಉಪಸರ್ಗ ಪೂರ್ವಕವಾದ ನಿಬಂಧವೆಂಬ ಶಬ್ದದ ಅರ್ಥವು ರಚನೆ ಎಂದಾಗುವದು. ನಿಬಂಧವೆಂಬ ಶಬ್ದವು ಯಾವದೊಂದು ಸಂಗತಿಯನ್ನು ವರ್ಣಿಸಿ ಮುಗಿಸುವದೆಂದು ತಿಳಿಕೊಡದು. ನಿಬಂಧವು ರಚನಾ ಚಮತ್ಕಾರವನ್ನು ಹೇಳುತ್ತದೆ. ನಿಬಂಧ ಇತಿಹಾಸ ಭೂಗೋಲಗಳಂತೆ ಕೇವಲ ಜ್ಞಾನಸಂಗ್ರಹ ಮಾಡಿಕೊಡತಕ್ಕದ್ದಲ್ಲ

ವ್ಯಾಕರಣ ಛಂದಸ್ಸುಗಳಂತೆ ಭಾಷೆಯನ್ನು ಕಲಿಸತಕ್ಕುದಲ್ಲ. ನಿಬಂಧವು ಓದುಗ ಅಭಿರುಚಿಯನ್ನೂ ಆನಂದವನ್ನೂ ಉಂಟುಮಾಡತಕ್ಕುಂಥಾದ್ದಿರುತ್ತದೆ.

ಯಾವದೊಂದು ವಿಷಯವನ್ನು ಬೇಕಾದವರು ಬೇಕಾದ ತೆರದಿಂದ ಬರೆಯಬಹುದು. ಹ್ಯಾಗೆಯೇ ಹೇಳಲಿ, ಅದರಲ್ಲಿ ಹೇಳುವವನ ಸ್ವತಃ ವಿಚಾರವು ಪ್ರಕಟವಾಗುತ್ತಿರಬೇಕು. ಅವನ ಹೃದ್ಗತವು ಕೋಲ್ಮಿಂಚಿನಂತೆ ಅದರಲ್ಲಿ ಒಳಗಿಂದ ಬೆಳಗುತ್ತಿರಬೇಕು. ಒಬ್ಬನ ಹೊಯ್ಲು ಒಂದೊಂದು ತೆರನಾಗಿರುತ್ತದೆ. ಎಂದು ಸಲ ವಾಚಕರು ಅದನ್ನರಿತರೆ ಅವನು ಯಾವದೇ ಒಂದು ಸಂಗತಿಯನ್ನು ಬರಿತು ಹೇಳಿದರೂ ಓದುಗರಿಗೆ ಅದು ಇಂಥವನದೇ ಎಂದು ಗೊತ್ತಾಗುವದು. ಇದಪೇಲೆ ಇದೊಂದು ರಚನಾ ಚಮತ್ಕಾರವೆಂದು ಹೇಳಬಹುದು. ಈ ಚಮತ್ಕಾರದ ಹೆಚ್ಚಳವು ನಿಬಂಧಕಾರನು ಓದುಗರಲ್ಲಿ ಉಂಟುಮಾಡುವ ವಿನೋದದ ಪ್ರಮಾಣವನ್ನವಲಂಬಿಸಿರುತ್ತದೆ. ನಿಬಂಧಕಾರನು ಅನೇಕ ವಿಷಯಗಳನ್ನು ಬರಿತು ಬರೆದಿದ್ದರೂ ಓದುಗರ ಮನಸ್ಸು ಬರಹಗಾರನ ಚಿತ್ರವನ್ನೇ ನೋಡುತ್ತಿರುತ್ತದೆ. ಅದರಲ್ಲಿಯೂ ಅವನ ಸದ್ಯಃಕಾಲದ ಮನಸ್ಸಿನ ಪ್ರತಿಬಿಂಬವಾಗಿರುತ್ತದೆ. ನಿಬಂಧಕಾರನು ತನ್ನ ವಾಕ್ಪ್ರವಾಹದಲ್ಲಿ ನೈಜವಾದ ಸ್ಥಿತಿಗತಿಗಳ ಪ್ರವಾಹದ ತೆರೆಗಳಲ್ಲಿ ಪ್ರೀತಿಯಿಂದ ಎಳೆದುಕೊಂಡು ಹೋದಂತೆ ವಾಚಕರಿಗೆ ಭಾಸವಾಗಬೇಕು. ಹಾಗೆ ಬರೆಯಲಿಕ್ಕೆ ನಿರ್ದಿಷ್ಟವಾದ ಹಾಗು ಒಳ್ಳೆಯ ಪ್ರೌಢವಾದ ವಿಷಯಗಳಿರಬೇಕೆಂದಲ್ಲ. ತಾನು ಹೇಳುವದರಲ್ಲಿ ಓದುಗರ ಮನಸ್ಸಿನ ಸಂಬುಗೆಯನ್ನು ಪ್ರೀತಿಪುರಸ್ಸರವಾಗಿ ಸೆಳೆದುಕೊಳ್ಳುವದೇ ನಿಬಂಧಕಾರನ ಉದ್ದೇಶವಾಗಿರುತ್ತದೆ. ಇಂಥವನು ತನ್ನ ನಿಬಂಧದ ಮುಖಾಂತರವಾಗಿ ವಾಚಕರ ಕೂಡ ಸಲಭಾಷೆಯಲ್ಲಿ ಸ್ವಾಭಾವಿಕವಾಗಿ ಮಮತೆಯಿಂದ ಮಾತಾಡುತ್ತಿರುತ್ತಾನೆಂದು ಹೇಳಬಹುದು. ಇದು ಒಂದು ಶೈಲಿಯು. ಈ ಶೈಲಿಯುಳ್ಳವನು ಬೇಕಾದಂಥ ಯಾವ ವಿಷಯದಲ್ಲಿಯೂ ಓದುಗರ ಮನಸ್ಸನ್ನು ತರತರದ ರಸಗಳಿಂದ ಆಕರ್ಷಿಸಬಲ್ಲನು. ರವೀಂದ್ರನಾಥ ಟಾಗೋರವರು ಕಸ ಉಡುಗುವವನ ಬಗ್ಗೆ ಬರೆದು ನಮ್ಮ ಅಮೂಲ್ಯವಾಣಿಯಲ್ಲಿ ಓದುಗರ ಮನಸ್ಸನ್ನು ಸೆಳೆದುಕೊಂಡಿದ್ದಾರೆ.

ನಿಬಂಧಕಾರನು ಶಿಕ್ಷಕನ ಕೆಲಸವನ್ನು ಮಾಡುತ್ತಿರುವದಿಲ್ಲ. ಸ್ವವಿಚಾರಗಳನ್ನಷ್ಟೇ ವಾಚಕರ ಮುಂದೆ ಇಡುತ್ತಾನೆ. ಆ ವಿಚಾರಗಳು ಅವನ ಸ್ವತಃ ಮನಸ್ಸಿನವಾಗಿರುವವು.

ಗಹನವಾದ ವಿಚಾರವುಳ್ಳ ಧರ್ಮ, ತತ್ವ ಇತ್ಯಾದಿಗಳನ್ನು ಒಳಕೊಂಡಂಥ ಸಂಗತಿಗಳೇ ನಿಬಂಧಕಾರನ ವಿಷಯಗಳೆಂದು ತಿಳಿಯಕೂಡದು. ನಿಜವಾದ

ನಿಬಂಧಕಾರನಿಗೆ ವಿಷಯವೇ ಇರುವದಿಲ್ಲ. ಅವನ ಸ್ವವಿಚಾರಗಳೇ ಆತನ ವಿಷಯ ಗಳಾಗಿರುತ್ತವೆ. ಉತ್ತಮ ಭಾಷೆಯಿಂದ ವಾಚಕರ ಕೂಡ ಮಾತನಾಡುವದೇ ಅವನ ಕರ್ತವ್ಯವಾಗಿರುವದು. ಅಂಥ ಪ್ರಸಂಗದಲ್ಲಿ ನಿಬಂಧಕಾರನು ಸಗೂ ತಾನು ಬರೆದ ವಿಷಯಕ್ಕೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತಾ ಹೋದು ಹೇಳಬಹುದು. ಒಟ್ಟಿಗೆ ಯಾವದೇ ಸಂಗತಿಯ ಸಂಬಂಧದಿಂದಾಗಲಿ ಸ್ವ ಚಾರ ಗಳನ್ನು ಪ್ರಕಟಿಸುವದೇ ಅವನ ವಿಷಯವಾಗಿರುವದು. ಯಾವದೊಂದು ಪೃಶ್ಯ, ಒಬ್ಬನ ಚರಿತ್ರೆಯ ದೆಶೆಯಿಂದ ತನ್ನ ವಿಚಾರ ಪ್ರಕಟನೆ, ಆತ್ಮಚರಿತ್ರೆ ಇನ್ನೇ ಮುಂತಾದವು ನಿಬಂಧಕಾರನ ವಿಷಯಗಳಾಗಬಹುದು.

ಇಂಥ ವಿಷಯಗಳಲ್ಲಿ ಬೇಕಾದಂಥ ಸ್ವವಿಚಾರರಸತರಂಗಗಳನ್ನು ಓದುಗರ ಮನಃಪ್ರವಾಹದಲ್ಲಿ ಉಂಟುಮಾಡಬಹುದು. ಒಮ್ಮೆ ಅವನು ಓದುಗರ ಕೂಡ ನಗುತ್ತಿರಬಹುದು; ಒಮ್ಮೆ ಕಣ್ಣೀರುಸುರಿಸುವಂತೆ ಅಳಿಸಬಹುದು; ಇಲ್ಲವೆ ಒಮ್ಮೆ ಹೀಯಾಳಿಸುತ್ತಿರಬಹುದು; ಒಮ್ಮೆ ಎದೆಯುಬ್ಬುವಂತೆ ಧೈರ್ಯಕೊಡುತ್ತಿರಬಹುದು. ಅಥವಾ ಒಮ್ಮೆ ಹೊಸ ಕಲ್ಪನೆಗಳಿಂದ ಹರ್ಷಗೊಳಿಸುತ್ತಿರಬಹುದು. ಒಮ್ಮೆ ಇವೆಲ್ಲವೂ ಇದ್ದು ಯಾವದೊಂದು ರಸಕ್ಕೆ ಬೆರಗುಗೊಳಿಸಿ ಚಕಿತರನ್ನಾಗಿ ಮಾಡಬಹುದು. ಯಾವದೊಂದು ರಸಕ್ಕೆ ಪ್ರಾಧಾನ್ಯ ಕೊಟ್ಟು ಅದಕ್ಕೆ ಉಳಿದ ರಸಗಳು ಪುಷ್ಟಿಕೊಡುವಂತೆ ಮಾಡುತ್ತಿರಬಹುದು.

ನಿಬಂಧಕಾರನು ಯಾವದೊಂದನ್ನು ಸಿದ್ಧಮಾಡಲಿಕ್ಕೆ ಹೋಗಬಾರದು. ಬರಿ ತನ್ನ ವಿಚಾರಗಳನ್ನಷ್ಟೇ ಪ್ರಕಾಶಗೊಳಿಸುತ್ತಿರುತ್ತಾನೆ. ಆತನ ಬರಹವು ಆನಂದದಾಯಕವಾದೀತೇ ಹೊರತು ಯಾವದೊಂದು ಜ್ಞಾನದ ಉಪದೇಶ ಮಾತ್ರ ವಾರದು. ಆವನ ವಿಚಾರವು ಜಗತ್ತಿನ ಜೀವನಕ್ಕೆ ಹೊಸ ಕಳೆಯನ್ನು ಉಂಟು ಮಾಡುವದಾಗಿರುತ್ತದೆ ಆತನು ತನ್ನ ವಿಚಾರವನ್ನು ಇಲ್ಲದ ಕಲ್ಪನೆಯಿಂದ ತುಂಬದೆ ಸಹಜವಾಗಿ ಸುಲಭವಾಗಿ ತನ್ನ ಹೃದ್ಗತದೊಂದಿಗೆ ಚರ್ಚೆಮಾಡುತ್ತ ಓದುಗರ ಮೇಲೆ ಆತ್ಮಗತ ಪ್ರಭಾವವನ್ನು ಪ್ರಕಾಶಗೊಳಿಸುವನು. ಒಟ್ಟಿಗೆ ವಾಚಕರ ಮನಸ್ಸಿನ ನಂಬುಗೆಯನ್ನು ಸಂಪಾದಿಸಿ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುವದೇ ಆವನ ಉದ್ದೇಶವಾಗಿರುವದರಿಂದ ಆತನ ಬರಹವು ಪ್ರಸೋ ಹರವಾಗಿರುತ್ತದೆ.

ಇನ್ನು ಸ್ವ ವಿಷಯವೆಂದರೆ ಒನೆಯ ಇ. ಯ ವಿದ್ಯಾರ್ಥಿಗಳ ಬರಹ ಸುಧಾರಣೆಯ ವಿಷಯವಾಗಿ ಪರೀಕ್ಷಕರ ಸೂಚನೆಗನುಸರಿಸಿ ಯತ್ನಿಸೋಣ.

೧೯೩೭

(ಅ) ಓಣಿಯಲ್ಲಿ ಅಡ್ಡಾಡುವ ಭಿಕ್ಷುಕನ ಬಗ್ಗೆ ನಿಮ್ಮ ವಿಚಾರಗಳು.
(ಬ) ಒಂದು ಸೀಸಪೆನ್ಸಿಲಿನ ಆತ್ಮವೃತ್ತಾಂತ.
ಇವುಗಳಲ್ಲಿ (ಬ) ವಿಷಯದ ಬರೆದುತೋರಿಸೋಣ—

"ಈಗ ನಿಮಗೆ ಕಾಣುವ ನನ್ನ ರೂಪವು ಸ್ವಾಭಾವಿಕವಾದದ್ದಲ್ಲ, ಕೃತ್ರಿಮವಾದದ್ದು. ತೋರಿಕೆಗೆ ಅಂದವಾಗಿ ತೋರಿದರೂ ಒಳಗೆ ನನಗೆ ಸುಖವಿಲ್ಲ. ಪರೋಪಕಾರಾಯ ಇದಂ ಶರೀರಂ ಎಂಬ ನುಡಿಯು ನನಗೆ ಪೂರಾ ಸಂಬಂಧಿಸಿದೆ. ಹೊದಲಿನ ರೂಪವು ಮಾರ್ಪಡುವಾಗಲೂ ಬಹಳ ಹಿಂಸೆ ಪಟ್ಟಿದ್ದೇನೆ. ಈಗಲೂ ಸಹ ನಿಮ್ಮಂಥವರಿಗಾಗಿಯೇ ಸವೆಯುತ್ತಿದ್ದೇನೆ. ನನ್ನ ಬಹಿರಂಗವು ಕಠಿಣವಾಗಿ ತೋರಿದರೂ ಅಂತರಂಗವು ಬಹು ಮೃದುವಾಗಿದೆ. ನಾನು ನಿಮ್ಮ ಸೇವೆಗೈವೆನೆಂದು ಹೀಯಾಳಿಸಬೇಡಿರಿ, ನಾನು ಸಾಮಾನ್ಯನಲ್ಲ ! ವಜ್ರ ಅಂಗಾರ ಇವುಗಳ ಕುಲದಲ್ಲಿ ನನ್ನ (ಗ್ರಾಫಾಯಿಟ್) ಕುಲವೂ ಒಂದೇ– ನಾವೆಲ್ಲರೂ ಒಂದೇ ಕಣಿಯಲ್ಲಿ ಜನಿಸಿದವರು. ನಮ್ಮ ಹಿರಿಯಣ್ಣನು ನಮ್ಮ ಪ್ರಿಯ ಬಾದಶಹರಾದ ಟಿನೆ ಬಾರ್ಜ ಚಕ್ರವರ್ತಿಗಳವರ ಕಿರೀಟದಲ್ಲಿದ್ದು ಶಿರೋಭೂಷಣವಾಗಿದ್ದಾನೆ. ಈ ಎಲ್ಲ ಸಂಗತಿಗಳಿಂದ ನಾನು ಒಣ ಹೆಮ್ಮೆ ಕೊಚ್ಚುತ್ತಿದ್ದೇನೆಂದು ತಿಳಿಯಬೇಡಿರಿ. ನನ್ನನ್ನು ಸಹಾನುಭೂತಿಯಿಂದಲೂ ಪ್ರೇಮದಿಂದಲೂ ನಡಿಸಿಕೊಳ್ಳಬೇಕೆಂದು ನಿಮಗೆ ವಿನಂತಿಸುವದೇ ನನ್ನ ಉದ್ದೇಶವಾಗಿದೆ. ಇಷ್ಟು ಹೇಳಿ ನನ್ನ ವಿಷಯವನ್ನು ಮುಂದೆ ಸಾಗಿಸುತ್ತೇನೆ.

ನನ್ನ ಐತಿಹ್ಯವು ಬಹು ಪುರಾತನದ್ದು. ಅದನ್ನು ಕುರಿತು ಶಾಸ್ತ್ರಜ್ಞರು ಏನೇನೋ ಹೇಳುತ್ತಿದ್ದಾರಂತೆ ! ಅದೇನೇ ಇರಲಿ, ನಾನು ಭೂಗರ್ಭದ ಕಣಿಗಳಲ್ಲಿ ಮಲಗಿ ನಿದ್ರಿಸುತ್ತಿದ್ದದ್ದು ಮಾತ್ರ ನನಗೆ ನೆನಪಿದೆ. ನಾನು ಹೀಗೆಯೇ ಕುಂಭಕರ್ಣನಂತೆ ಸುಖವಾಗಿ ನಿದ್ರಿಸುತ್ತಿರುವೆನೆಂದು ನಾನು ತಿಳಿದಿದ್ದೆನು. ಶಾಸ್ತ್ರಶೋಧಕರುಯಾರು ಯಾರೋ ಬಂದು ನನ್ನ ಮೇಲ್ಭಾಗದಲ್ಲಿ ಮೆಲ್ಲಗೆಮಾತಾಡಿದರು. ಅದು ಮರ್ಮಭೇದಕವಾಗಿದ್ದುದರಿಂದ ಸ್ಪಷ್ಟವಾಗಿ ಕೇಳಿದಂತೆ ಈಗಲೂ ನೆನಪಿದೆ. ಜಗತ್ತಿನಲ್ಲಿ ಕೆಡಕು ಸುದ್ದಿಗಳು ನಿಜವಾಗಿಯೇ ಜರುಗುವದು ರೂಢಿಸು ಮಾತಾಗಿದೆ. ಅದಕ್ಕನುಸರಿಸಿ, ಕೆಲ ದಿನಗಳ ಮೇಲೆ ಖನಕರು ನನ್ನ ಎದೆಯಮೇಲೆ ತೋಡುವಂತೆ ನನಗೆ ಅನಿಸಿತು. ಎಂದೂ ಕೇಳದ ಸಪ್ಪಳವೂ ಅನುಭವಕ್ಕೆ ಬಾರದ ಪೆಟ್ಟುಗಳ ಆಘಾತವೂ ಬಲು ಭಯಾನಕವಾದವು. ಅವು ಯಾಂತ್ರಿಕ ಶಕ್ತಿಯ ಬಡಿತಗಳೆಂದು ಹಿಂದಿನಿಂದ ತಿಳಿಯಿತು. ಅದೇನೋ

ವಿದ್ಯುಚ್ಛಕ್ತಿಯಂತೆ ! ನೂತನ ಸೃಷ್ಟಿಯ ವ್ಯಾಪಾರವು ನನಗೆ ತಿಳಿಯದಾಯ್ತು ! ಕಣ್ಮುಚ್ಚಿ ಕಣ್ಣು ತೆರೆಯುವದರೊಳಗಾಗಿ ಪುಡಿಪುಡಿ ಆಗಿ ತೊಟ್ಟಿಲೊಳಗಿಂದ ನಾನು ಮೇಲೆ ಬಂದು ಬಿದ್ದೆನು.

ಇಷ್ಟಕ್ಕೇ ನನ್ನ ಬವಣೆಯು ತೀರಲಿಲ್ಲ. ಯಾಂತ್ರಿಕಶಕ್ತಿಯಿಂದ ನನ್ನ ಕರಗುವಿಕೆಯು ಕೆಲಸವು ಆರಂಭವಾಗಿ ಯಮಲೋಕವೇ ಇಲ್ಲಿಗೆ ಬಂತೋ ನಾನೇ ಅಲ್ಲಿಗೆ ಹೋದೆನೋ ತಿಳಿಯದಷ್ಟು ಮತಿಭ್ರಾಂತನಾಗಿ ಅರುಳುಗೆಟ್ಟೆನು. ಎಚ್ಚತ್ತು ನೋಡುವದರೊಳಗಾಗಿ ಕಡ್ಡಿಯ ರೂಪವಾಗಿದ್ದೆನು. ಆ ನೂತನ ಅವಯವಗಳಲ್ಲಿ ಕೆಲವು ಸಹ ತಮ್ಮ ಕಾರ್ಷ್ಣ್ಯವನ್ನು ಬಿಟ್ಟು ತರತರದ ಬಣ್ಣಗಳಿಂದ ಕಂಗೊಳಿಸುತ್ತಿದ್ದವು.

ಇಷ್ಟಾದರೂ ತೀರಲಿಲ್ಲ. ಹಾಳತವಾದ ಕಟ್ಟಿಗೆಯ ಡೋಣಿಗಳ ತುರಂಗ ವಾಸವು ನನಗೋಸುಗ ಸಿದ್ಧವಾಗಿತ್ತು. ಅದು ನನ್ನ ಸಂರಕ್ಷಣವೋ ಬಂಧನವೋ ತಿಳಿಯಲಾರದೆ ಹೋದೆನು. ಆನಂದದ ಸಂಗತಿಯಿಷ್ಟೇ, ಈ ನೂತನ ಸ್ವರೂಪವು ಒಳ್ಳೆಯ ಮನಮೋಹಕವಾಗಿದ್ದಿತು. ಅದನ್ನೆಷ್ಟು ಬಣ್ಣಿಸಿದರೂ ತೀರದು.

ಆಗ ನನ್ನನ್ನು ಡಝನ, ಗ್ರೋಸ ಇತ್ಯಾದಿಗಳಿಂದ ಗಣಿಸಿ ಅಂದವಾಗಿ ಕಟ್ಟಿ ಪೂರ್ವದಿಕ್ಕಿಗೆ ಸಾಗುವ ಹಡಗಕ್ಕೆ ಹೇರಿದರು. ಆಗ ನನ್ನನ್ನು ಎಲ್ಲಿಗೆ ಪ್ರವಾಸ ಗೈಸುವರೆಂದು ಅಂಜಿಕೆ ಬಂದಿತು. ಆ ಚಿಂತೆಯಲ್ಲಿಯೇ ದಣಿವಿನಿಂದ ನಿದ್ದೆಗೈದೆನು. ನಾವೆಲ್ಲ ಕಣ್ದೆರೆದ ಕೂಡಲೆ ವಿಂಗಡಿಸಿ ವಿಂಗಡಿಸಿ ಅಂಗಡಿಗಳ ಕನ್ನಡಿಯ ಪೆಟ್ಟಿಗೆಗಳಲ್ಲಿ ಚಂದವಾಗಿರಿಸಿ ನಮ್ಮನ್ನು ನೇತಾಡಿಸುವಂತೆ ತೋರಿತು. ಆಗ ನನ್ನ ಕ್ರಯವಿಕ್ರಯವು ಸುರುವಾಗಿ ನಿಮ್ಮೆಲ್ಲರ ಬಳಿಗೆ ಬಂದಿದ್ದೇನೆ.

ಬಳಿಕ ನನ್ನ ಉಪಯೋಗವನ್ನೆಷ್ಟಿಂತ ವರ್ಣಿಸಲಿ, ಲಕ್ಷಾವಧಿ ರೂಪಾಯಿಗಳ ಲೆಕ್ಕದ ಟಿಪ್ಪಣಿಗಳು ನನ್ನಿಂದ ಸಿದ್ಧವಾದವು. ರವೀಂದ್ರನಾಥರಂಥ ಕವಿಗಳ ಉದ್ಗಾರ ಬರಹದ ಟಿಪ್ಪಣಿಗಳ ಲೇಖಕನು ನಾನೇ. ಮುತ್ಸದ್ದಿಗಳ ಗುಪ್ತ ಮಂತ್ರಾಲೋಚನೆಯ ಮೊದಲನೆಯ ಬರಹಗಾರನು ನಾನೇ. ಎಲ್ಲೆಲ್ಲಿಯೂ ನನ್ನ ಬರಹವೇ ಮೊದಲನೆಯದು. ಇಷ್ಟೆಲ್ಲ ಉಪಯುಕ್ತತೆಯನ್ನು ನೆನೆದು ನನ್ನ ಗಾಸಿಯನ್ನು ಮರೆತಿದ್ದೇನೆ.

ಇನ್ನಾದರೂ ನನ್ನ ತಿಕ್ಕುವಿಕೆಯೇ ನನಗೆ ಸಾಕಾಗಿದೆ. ಹೆಚ್ಚು ತಿಕ್ಕಿ ತಿಕ್ಕಿ ವ್ಯಥೆಪಡಿಸಬೇಡಿರಿ. ಶೇಸಪೆನಿಸಿಲು ಎಂದು ನನ್ನ ಹೆಸರು, ಪೆನಸಿಲಿಗೆ ಪೆನಶನ್ನೇ ಇಲ್ಲ ! ಆಗಲಿ, ಸಾರ್ವಜನಿಕ ಉಪಯುಕ್ತತೆಯೇ ಸುಖಮಯವೆಂದು ನೆನಸಿ ಸುಮ್ಮನಾಗುವೆನು.

ಪಾಠಗಳ ಟಿಪ್ಪಣಿ

ಏಕಮಾನಪದ್ಧತಿಯಬಗ್ಗೆ ಸಾಮಾನ್ಯವಿಚಾರಗಳು

ಲೇಖಕ— ವಿ. ಸಾತೇನಹಳ್ಳಿ

ಏಕಮಾನಪದ್ಧತಿಯು ೫ನೆಯ ಇಯತ್ತೆಯಲ್ಲಿಯೇ ಆರಂಭವಾಗುತ್ತ ಹಿಂದು ತಿಳಿಯಕೂಡದು. ಬಾಲಕರ ವರ್ಗದಲ್ಲಿ ಅಂಕಿಗಳನ್ನು ವಿದ್ಧ ಸಂಖ್ಯೆಗಳ ರೂಪದಲ್ಲಿ ಕಲಿಸಿದ ಬಳಿಕ ಅವುಗಳ ಬೇರೀಜು ಸಣ್ಣಸಣ್ಣ ವಜಾಬಾಕಿಗಳನ್ನು ಕ್ರಮಕ್ರಮವಾಗಿ ೧ನೆಯ ಇ. ೨ನೆಯ ಇ. ಗಳಲ್ಲಿ ಸಣ್ಣ ಸಣ್ಣ ಗುಣಾಕಾರ ಭಾಗಾಕಾರಗಳನ್ನು ಸಹ ರೂಢಿ ಮಾಡಿಸುವೆವು. ಬಾಲಕರ ವರ್ಗದಲ್ಲಿ ಮೊದಲು ವಿಶಿಷ್ಟ ಕರದ ವಿದ್ಧ ಸಂಖ್ಯೆಗಳ ಬೇರೀಜು, ವಜಾಬಾಕಿಗಳನ್ನು ಮಾಡಿಸುವೆವು. ಕ್ಯಾಗಂದರೆ:—

ಹೂವು ಹೂವು ಹೂವು

೨ + ೨ + ೨ = ೬ ಹೂಗಳಾದವು. ಕೂಡಿಸುವಾಗ ಕಳೆಯುವಾಗ ವಿದ್ಧ ಸಂಖ್ಯೆಗಳು ಸಜಾತೀಯವೇ ಇರಬೇಕಾಗುತ್ತದೆಂಬ ಸಂಗತಿಯನ್ನು ಸಹ ಅವರು ಆಗ್ಗೆ ಅರಿಯುವರು. ಬಳಿಕ ೨ ಹೂವುಗಳನ್ನು ೩ ಸಾರೆ ಇಟ್ಟು ಕೂಡಿಸಿದರೆ ೬ ಹೂಗಳಾಗುವವೆಂಬದನ್ನು ತಿಳಿಯುವರು. ಆಮೇಲೆ ಆವರ್ತನಕ್ಕಾಗಿ ೧ ಸಿವುಡು ಪಲ್ಲೆಗೆ ೨ ಪೈ ಇಂಥ ೩ ಸಿವುಡುಗಳಿಗೆಷ್ಟು ಪೈಗಳು ಎಂಬದನ್ನು ಪ್ರತ್ಯಕ್ಷ ಮಾಡಿನೋಡಿ ಮನಗಾಣುವರು. ವ್ಯವಹಾರದಲ್ಲಿಯ ಇದೇಬಗೆಯ ಲೆಕ್ಕಗಳನ್ನು ಅನೇಕ ಬಗೆಯಿಂದ ರೂಢಿಮಾಡಿಸಿ ತೋರಿಸಬೇಕು. ೧ ದುಡ್ಡಿಗೆ ೩ ಸೂಜಿ, ೨ ದುಡ್ಡಿಗೆಷ್ಟು? ೧ ಮೋಟಾರಿನ ಒಂದು ಬದಿಗೆ ಮೂವರು ಕೂಡುವರು ಇಂಥ ೩ ಸೀಟುಗಳ ಮೇಲೆ ಎಷ್ಟು ಜನರು ಕೂಡುವರು? ಇಂಥ ಲೆಕ್ಕಗಳನ್ನು ಮೋಟರಿನ ಚಿತ್ರದ ಸಹಾಯದಿಂದಾಗಲಿ, ಸುಲಭ ಕ್ರಯಕ್ಕೆ ದೊರೆಯುವ ತಗಡಿನ ಮೋಟಾರದಿಂದಾಗಲಿ ತಿಳಿಸಬಹುದು. ೫, ೬ ವರ್ಷಗಳ ಬಾಲಕರಿಗೆ ಅನೇಕ ಸಾರೆ ಪ್ರತ್ಯಕ್ಷ ವಸ್ತುಗಳಿಂದ ಲೆಕ್ಕಗಳನ್ನು ರೂಢಿಮಾಡಿಸಿದ ಬಳಿಕ ಮೇಲೆ ಮಾದರಿಗಾಗಿ ತೋರಿಸಿದ ಮೋಟರಿನ ಲೆಕ್ಕವನ್ನು ಕಲ್ಪನೆಗಾಗಿ ತಕ್ಕೊಳ್ಳಲಿಕ್ಕೆ ಅಡ್ಡಿಯಿಲ್ಲ. ಕೆಲಕೆಲವು ಸಂಗತಿಗಳನ್ನು ಅವರು ಮನೆಯಲ್ಲಿ ನೋಡಿರುವರು. ಅವನ್ನೇ ರೂಢಿಗಾಗಿ ಶಾಲೆಯಲ್ಲಿ ತೆಗೆದುಕೊಂಡರೆ ಪಾಠವು ಮನೋರಂಜಕವಾದದ್ದೂ ವಿದ್ಯಾರ್ಥಿಗಳ ಸ್ಮರಣ ಕಲ್ಪನಾಶಕ್ತಿಗಳ ವೃದ್ಧಿದಾಯ

ಕವೂ ಆಗುವದು. ಉದಾಹರಣಾರ್ಥವಾಗಿ ಒಂದೊಂದು ಎಲೆಗೆ ಎರಡು ಬಕ್ಕರಿಗಳಂತೆ ೩ ಎಲೆಗಳಿಗೆ ಒಡಿಸಿದರೆ ಎಷ್ಟು ಬಕ್ಕರಿಗಳು ಹತ್ತುವವು? ಇದೇ ಲೆಕ್ಕವನ್ನು ತಿರುವಿ ೩ ಎಲೆಗೆ ೬ ಬಕ್ಕರಿಗಳನ್ನು ಸರಿಯಾಗಿ ಒಡಿಸಿದರೆ ಒಂದೊಂದು ಎಲೆಗೆ ಎಷ್ಟು ಎಷ್ಟು ಬರುವವು. ಇ.

ಇದೇ ಲೆಕ್ಕವನ್ನೇ ಪೃಥಕ್ಕರಣರೀತಿಯಿಂದ ೬ ಬಕ್ಕರಿಗಳಲ್ಲಿ ಒಬ್ಬನು ೨ ತಿಂದನು. ಎಷ್ಟು ಉಳಿದವು? (೬–೨=೪) ಮತ್ತೆ ಇನ್ನೊಬ್ಬನು ೨ ತಿಂದನು. ಎಷ್ಟು ಉಳಿದವು? (೪–೨=೨) ಪುನಃ ಇನ್ನೊಬ್ಬನು ಮತ್ತೆ ೨ ತಿಂದು ಎದ್ದನು. (೨–೨=೦) ಏನೂ ಉಳಿಯಲಿಲ್ಲ. ಇವೇ ಬಕ್ಕರಿಗಳನ್ನು ಒಬ್ಬನೇ ದಿನಾ ೨ ರಂತೆ ತಿಂದರೆ ಎಷ್ಟು ದಿನ ಸಾಲುವವು? ೬ ರಲ್ಲಿ ೨ ಈ ಸಂಖ್ಯೆಯು ೩ ಸಾರೆ ವಜಾ ಹೋಗುವದು, ಅಥವಾ ೬ ರಲ್ಲಿ ಎರಡೆರಡರಂತೆ ಗುಂಪು ಕಟ್ಟಿದರೆ ೩ ಗುಂಪಿಗಳಾಗುವವು. ಅಥವಾ ೬ರಲ್ಲಿ ಮೂರು ಮೂರರಂತೆ ಗುಂಪುಕಟ್ಟಿದರೆ ೨ ಗುಂಪಿಗಳಾಗುವವು. ಬೇಕಾದವರು ಹುಣಸಿ ಬೀಜಗಳಿಂದ ಮಾಡಿನೋಡಿರಿ, ಗಜಗಗಳಿಂದ ಮಾಡಿ ಮನಗಾಣಲಿ, ಹರಳು ಮಣಿಗಳಿಂದ ಹೀಗೆ ಬೇರೆ ಬೇರೆ ರೀತಿಯಿಂದ ಮಾಡಿನೋಡಿದರೆ ಅವರು ಬೇಸರಪಡಲಾರರು. ಬಳಿಕ ರೂಪಗಾಗಿ ೬ ರೂ. ಗಳನ್ನು ಮೂವರಲ್ಲಿ ಹಂಚಿದರೆ ಒಬ್ಬೊಬ್ಬನಿಗೆಷ್ಟು? ಒಂದೊಂದು ಕೋಣೆಯಲ್ಲಿ ಕಾಲೇಜದಲ್ಲಿ ಇಬ್ಬಿಬ್ಬರಂತೆ ವಿದ್ಯಾರ್ಥಿಗಳಿದ್ದಾರೆ. ಮೂರು ಕೋಣೆಗಳಲ್ಲಿ ಎಷ್ಟು ಜನರಾಗುವರು? ಇತ್ಯಾದಿ. ಅವರಿಗೆ ಒಂದ ಕೃತಿಗಳಿಂದಲೇ ಹಂದರೆ ಸಣ್ಣ ಸಣ್ಣ ಭಾಗಾಕಾರ ಗುಣಾಕಾರಗಳಿಂದಲೇ ಈ ಮಾದರಿಯ ಅನೇಕ ಲೆಕ್ಕಗಳನ್ನು ಗಣಿತದ ಪಾಠಗಳಲ್ಲಿ ರೂಢಿಮಾಡಿಸಬೇಕು. ಹೀಗೆ ಕಲಿತ ಬಳಿಕ ಅವರು ಸುಮ್ಮನೆ ಕೂಡುವದಿಲ್ಲ. ಸಂತೆಯಲ್ಲಿ ಅಥವಾ ಅಂಗಡಿಯಲ್ಲಿ ಈ ತರದ ಉದಾಹರಣಗಳನ್ನು ವ್ಯವಹಾರದಲ್ಲಿ ತಂದೆತಾಯಿಗಳ ಕೂಡ ಹೋದಾಗ ಪ್ರತ್ಯಕ್ಷ ಬಿಡಿಸುವ ಪ್ರಯೋಗಕ್ಕಾಗಿ ಇಚ್ಛಿಸುವರು. ಮೇಲೆ ಹೇಳಿದ ಏಕಪ್ರಮಾಣದ ಸಣ್ಣ ಸಣ್ಣ ಲೆಕ್ಕಗಳನ್ನು ಕೇವಲ ಬಾಲಕರ ವರ್ಗದಲ್ಲಿಯೇ ಮಾಡತಕ್ಕದ್ದೆಂದು ತಿಳಿಯಕೂಡದು. ಗಿನೆಯ ಇ. ೨ನೆಯ ಇ. ಗಳಲ್ಲಿ ರೂಢಿಮಾಡಿಸಿದರೆ ೩ನೆಯ ಇ. ಗೆ ಬರುವದರೊಳಗೆ ಇಂಥ ಪದ್ಧತಿಗಳ ತತ್ವಗಳು ಗೊತ್ತಾಗಿ ಹೋಗುವವು. ತ್ರೈರಾಶಿಕದಲ್ಲಿಯ ಪಟ್ಟುಗಳ ತತ್ವಗಳು ಸಹ ಅಪ್ರತ್ಯಕ್ಷವಾಗಿ ಗೊತ್ತಾಗುವವು. ಹ್ಯಾಗಂದರೆ ಒಬ್ಬನಿಗೆ ೨ ರಂತೆ ಬಕ್ಕರಿಗಳನ್ನು ಬಡಿಸಿದರೆ ಇಬ್ಬರಿಗೆ ೪; ಮೂವರಿಗೆ ೬; ನಾಲ್ವರಿಗೆ ೮ ಇತ್ಯಾದಿ, ಜನರು ಇಮ್ಮಡಿ, ಮುಮ್ಮಡಿ, ನಾಲ್ಮಡಿ ಪ್ರಮಾಣದಂತೆ ಬಕ್ಕರಿಗಳು ಇಮ್ಮಡಿ, ಮುಮ್ಮಡಿ, ನಾಲ್ಮಡಿ ಬೇಕಾಗುವವೆಂದು ಕರೆ ಹಲಗೆಯ ಮೇಲೆ ಒಂದರಕೆಳಗೊಂದು ಬರೆದ ಬರೆಹದಿಂದ ಅಪ್ರತ್ಯಕ್ಷವಾಗಿ ಅವರಿಗೆ ಬೋಧಿಸು

ವಂತೆ ಬಾಲಕವರ್ಗ, ೧೨ನೆಯ ಇ. ೬ನೆಯ ಇ. ಹಾಗೆಯೇ ಕ್ರಮಕ್ರಮವಾಗಿ ಸಣ್ಣ ದೊಡ್ಡ ಉದಾಹರಣಗಳಿಂದ ಲೆಕ್ಕ– ಬಾಯಿಲೆಕ್ಕಗಳಲ್ಲಿ ರೂಢಿಮಾಡಿಸಿದರೆ ಏಕಪೂಾನಪದ್ಧತಿಯೆಂದು ಕಣ್ಣಿಗೆ ದೊಡ್ಡದಾಗಿ ಕಾಣಿಸುವ ಪದ್ದತಿಯ ಕಠಿಣತ್ವವು ಪೂರ್ಣವಾಗಿ ಹೋಗುವದು. ಇದೇಕಾಲಕ್ಕೆ ಇವನ್ನು ಬರೆಯುವ ರೂಢಿಯನ್ನು ಕರಿ ಹಲಿಗೆಯಮೇಲಿನ ಬರೆಹದಿಂದ ತಿಳಿದುಕೊಳ್ಳುವರು.

ಚಿಹ್ನಗಳಿಗೆ ಅರ್ಥವಿರುವದು, ಅಂದರೆ ಚಿಹ್ನಗಳು ಉದ್ದವಾಗಿ ಬರೆಯುವದರ ಬದಲು ಸ್ವಲ್ಪದರಲ್ಲಿಯೇ ಅಷ್ಟೇ ಅರ್ಥವನ್ನು ನಿಚ್ಚಳವಾಗಿ ಕೊಡುವವು. ಚಿಹ್ನಗಳ ಬರೆಹವೇ ಮುಂದೆ ದೊಡ್ಡ ದೊಡ್ಡ ಲೆಕ್ಕಗಳಲ್ಲಿ ಸಾರಣಿಗಳಾಗುವವು. ಚಿಹ್ನಗಳು ಮಂತ್ರಗಳ ಬೀಜಾಕ್ಷರಗಳಂತೆ ಇರುವವು. ಹಾಗು ವ್ಯಾಕರಣಗಳ ಸೂತ್ರದಂತೆ ಇರುವವು. ಇಷ್ಟು ಮಹತ್ವವಿದ್ದರೂ ನಮ್ಮ ಪ್ರಾ. ಶಾ. ಗಳ ಕೊನೆಯ ಇಯತ್ತೆಯಲ್ಲಿ ನೋಡಿದರೆ ಪ್ರತ್ಯಕ್ಷವಾಗಿ ಅವುಗಳ ಉಪಯೋಗವು ನಟ್ಟಗೆ ಆಗತಕ್ಕಷ್ಟು ಆಗಿಲ್ಲವೆಂದು ಅವರು ಬರೆದ ಗಣಿತದ ಟಿಪ್ಪಣಿಗಳಲ್ಲಿ ಒಡೆದು ತೋರುವದು. ಗಣಿತದ ಟಿಪ್ಪಣಿಗಳಲ್ಲಿಯೇ ಏಕೆ? ನಿಬಂಧಬರಹದಲ್ಲಿ ಏರಾಮು ಚಿಹ್ನಗಳ ಉಪಯೋಗವು ಕೂಡ ಇರುವದಿಲ್ಲ. ಚಿಹ್ನಗಳ ಉಪಯೋಗವು ಸರಿಯಾಗಿ ಆಗದ್ದರಿಂದ ಅರ್ಧಮುರ್ಧ ವಿಚಾರಗಳುಂಟಾಗಿ ವಿಚಾರಗಳು ಬೆಳೆಯದೆ ಹೋಗುವವು. ಏಕಮಾನಪದ್ಧತಿಯ ಲೆಕ್ಕಗಳನ್ನು ಅಥವಾ ಮುಂದೆ ತ್ರೈರಾಶಿಕದ ಉದಾಹರಣಗಳನ್ನು ಕೊನೆಯ ಇಯತ್ತೆಯಲ್ಲಿ ಹ್ಯಾಗೆ ಓದುವರೆಂಬದನ್ನಷ್ಟು ವಿಚಾರಿಸೋಣ—

ನಾಲ್ವರು ಒಂದುದಿನ ಕೂಡಿ ದೊಡ್ಡ ಗಿರಣಿಯಲ್ಲಿ ೬ ರೂ. ಗಳನ್ನು ಗಳಿಸುವರು, ಅಂಥ ೧೨ ಜನರು ಎಷ್ಟು ರೂ. ಗಳನ್ನು ಗಳಿಸುವರು? ಈ ಉದಾಹರಣವನ್ನು ಅವರು ಹೀಗೆ ಬರಕೊಳ್ಳುವರು.

ಜ. ಜ. ರೂ.
೬ ೧೨ ೧೨ ಬಳಿಕ ೬ ಜನರು ೧೨ ರೂ. ಗಳಿಸುವರು ೧೨ ಜನರು ಎಷ್ಟು ಗಳಿಸುವರು? ಎಂಬದಾಗಿ ಓದುವರು. ಬಳಿಕ ರೀತಿಯಂತೆ ಉದಾಹರಣ ಬರಿಸುವರು. ಇದು ಕೇವಲ ಯಾಂತ್ರಿಕರೀತಿಯ ಪರಿಣಾಮವು.

ಜನರು ಜನರು ರೂ
೬ : ೧೨ :: ೧೨ : ಇಚ್ಛಿತ ರೂ. ಗಳು

೬ ಜನರ ಎಷ್ಟುಪಟ್ಟು ೧೨ ಜನರು ಇರುವರೋ ೧೨ ರೂ. ಗಳ ಅಷ್ಟೇ ಪಟ್ಟು ಇಚ್ಛಿತ ರೂಪಾಯಿಗಳಿರುವವು. ಮೇಲೆ ವಿವರಿಸಿದಂತೆ ಕಲಿಸಿದರೆ ಕೆಳಗಿನ ಇಯತ್ತೆಗಳಲ್ಲಿಯೇ ಈ ಕಲ್ಪನೆಯು ದೃಢಪಡಲಿಕ್ಕೆಬೇಕು. ಉದಾಹರಣಗಳನ್ನು

ಬಿಡಿಸಿ ಉತ್ತರ ತೆಗೆಯುವದರ ಕಡೆಗೆ ಅವರ ಲಕ್ಷವು ಹೋಗದೆ ಪಟ್ಟುಗಳಿಂದ ಉತ್ತರ ಹೇಳುವದರ ಕಡೆಗೆ ಅವರ ಲಕ್ಷವು ಉಳಿಯಬೇಕು. ಏಕಮಾನ ಪದ್ಧತಿಯ ಸಣ್ಣಸಣ್ಣ ಉದಾಹರಣಗಳಿಂದಲೇ ಪ್ರಮಾಣ ಗಣಿತದ ಮಹತ್ವದ ತತ್ವಗಳು ಗೊತ್ತಾಗುವವೆಂದು ಹಿಂದೆ ಹೇಳಿದೆ. ಅನೇಕ ವಸ್ತುಗಳಿಂದ ಒಂದು ವಸ್ತುವಿನ ಬೆಲೆ ತೆಗೆಯುವಾಗ ಭಾಗಮಾಡಬೇಕಾಗುವದು. ಪುನಃ ಅಂಥ ಒಂದು ವಸ್ತುವಿನಿಂದ ಅನೇಕ ವಸ್ತುಗಳ ಬೆಲೆ ತೆಗೆಯುವಾಗ ಪಟ್ಟು ಮಾಡಬೇಕಾಗುವದು ಅಂದರೆ ಗುಣಿಸಬೇಕಾಗುವದು. ಹೀಗೆ ರೀತಿಯ ಕಾರ್ಯ ಕಾರಣ ಸಂಬಂಧವು ಗೊತ್ತಾಗಿ ಆ ಸಂಬಂಧದ ವಿಚಾರವನ್ನು ಸ್ವಲ್ಪದರಲ್ಲಿಯೇ ಸ್ಪಷ್ಟವಾಗಿ ಹೇಳಲು ಅನುಕೂಲವಾಗುವದು. ಏಕಮಾನಪದ್ಧತಿಯ ರೀತಿಯನ್ನು ಕಲಿಸುತ್ತ ಕೂಡುವದರಿಂದ ವಿದ್ಯಾರ್ಥಿಗಳ ವೇಳೆಯು ಸುಮ್ಮನೆ ಹೋಗುವದೆಂದು ಕೆಲವರು ಶಿಕ್ಷಕರ ಆಕ್ಷೇಪವು ಇರುವದು ; ಆದರೆ ಪ್ರಮಾಣ ಗಣಿತದ ಸಹಾಯದಿಂದ ತ್ರೈರಾಶಿಕದ ಲೆಕ್ಕಗಳನ್ನು ಕಲಿಸುವ ಮೊದಲು ಏಕಮಾನಪದ್ಧತಿಯನ್ನು ಕಲಿಸಿದರೆ ಗುಣೋತ್ತರ, ಪ್ರಮಾಣ ಮುಂತಾದವುಗಳನ್ನು ಸುಲಭವಾಗಿ ಕಲಿಸಲು ಅನುಕೂಲವಾಗುವದು. ಅಲ್ಲದೆ ಆ ಸಂಗತಿಗಳು ತಮ್ಮಿಂದ ತಾವೇ ತಿಳಿದುಹೋಗಿರುವದರಿಂದ ಪಾಠಕ್ಕೆ ಸೌಲಭ್ಯವುಂಟಾಗುವದು, ಮತ್ತು ಅರ್ಥ ಪೂರ್ವಕ ಕಲಿಸಿದಂತೆ ಆಗುವದು. ಎಂದು ಕೆಲವರ ಮತವಿದೆ.

ಈ ಸಣ್ಣ ಪ್ರಮಾಣದ ಲೆಕ್ಕಗಳನ್ನೇ ತಿಳಿಯಿಸಿ ದೊಡ್ಡ ಪ್ರಮಾಣದಿಂದ ಗಿನೆಯ ತಿನೆಯ ಇಯತ್ತೆಗಳಲ್ಲಿ ಹೇಳಲಿಕ್ಕೆ ಅನುಕೂಲವಾಗುವದು. ಉದಾಹರಣಾರ್ಥವಾಗಿ ೩೭ ಕುದುರೆಗಳಿಗೆ ೭೪ ಸೇರು ಕಡಲೆಯು ಬೇಕು ಆದರೆ ೭೪ ಕುದುರೆಗಳಿಗೆ ಎಷ್ಟು ಸೇರು ಕಡಲೆಯು ಬೇಕಾಗುವದು ? ಮೇಲೆ ವಿವರಿಸಿದಂತೆ ಅನೇಕ ಲೆಕ್ಕಗಳನ್ನು ಮಾಡಿಸಿದರೆ ಪಟ್ಟುಗಳ ಕಲ್ಪನೆಯು ತಾನೇ ಉಂಟಾಗುವದು. ೩೭ ಕುದುರೆಗಳ ಎಷ್ಟುಪಟ್ಟು ೭೪ ಕುದುರೆಗಳಿರುವವೋ ಅಷ್ಟೇಪಟ್ಟು ೭೪ ಸೇರು ಕಡಲೆಗಳಿಗೆ ಇರುವದು. ಹೀಗೆ ವಿಚಾರಮಾಡಿದಲ್ಲಿ ಉತ್ತರದ ಕಲ್ಪನೆಯುಂಟಾಗುವದು, ಒಂದೊಂದು ವೇಳೆ ವಿದ್ಯಾರ್ಥಿಗಳು ಗುಣಾಕಾರದಲ್ಲಿ ತಪ್ಪಿ ಇಲ್ಲವೆ ವ್ಯಸ್ತಪ್ರಮಾಣದ ಲೆಕ್ಕಗಳಲ್ಲಿ ತಪ್ಪಿ ಕಲ್ಪನೆಯಿಲ್ಲದ ಉತ್ತರಗಳನ್ನು ತೆಗೆಯುತ್ತಾರೆ. ಪಟ್ಟುಗಳ ವಿಚಾರಗಳು ವಿದ್ಯಾರ್ಥಿಗಳಲ್ಲಿ ಉಂಟಾದರೆ ಉತ್ತರ ತಪ್ಪಿದ್ದು ಕೂಡಲೆ ಗೊತ್ತಾಗುವದು. ತ್ರೈರಾಶಿಕವನ್ನು ಒರೆದುಕೊಳ್ಳುವದು ಮುಂದಿನ ಇಯತ್ತೆಯಲ್ಲಿದ್ದುದರಿಂದ ಅದನ್ನು ಬರೆಯುವ ವಿಷಯದಲ್ಲಿ ಓದುವ ವಿಷಯದಲ್ಲಿ ಹೆಚ್ಚಿಗೆ ಈಗ ವಿಚಾರ ಮಾಡಿಲ್ಲ. ಓದುವದು ಮತ್ತು ಬರೆಯುವದು ಎರಡೂ ಒಂದೇ ರೀತಿಯಾಗಿರಬೇಕೆಂಬದೊಂದು ವಿಚಾರವು ಸರಿಯಾದದ್ದಾಗಿ ಕಾಣುತ್ತದೆ.

ಸದ್ಯಕ್ಕೆ ಏಕಮಾನಪದ್ಧತಿಯ ಬರಹದ ವಿಷಯಕ್ಕೆ ವಿಚಾರಿಸೋಣ— ೫೭ ಕುದುರೆಗಳು ೭೪ ಸೇರು ಕಡಲೆ ತಿನ್ನುತ್ತವೆ. ಇಷ್ಟು ದೊಡ್ಡ ಅಂಕಿಗಳಿಂದ ಎಷ್ಟು ತಿನ್ನುವವೆಂಬ ವಿಚಾರವು ಉಂಟಾಗುವದಿಲ್ಲ. ಆದುದರಿಂದ ೧ ಕುದುರೆಯು ಎಷ್ಟು ಸೇರು ಕಡಲೆ ತಿನ್ನುವದು? ೭೪ಸೇರು ಕಡಲೆಯು ರಾಶಿಯಲ್ಲಿ ೫೭ಸರಿಯಾದ ಭಾಗಗಳನ್ನು ಮಾಡಬೇಕಾಗುವದು; ಅಂದರೆ ೭೪ಕ್ಕೆ ೫೭ರಿಂದ ಭಾಗಿಸಬೇಕು.

ಕು ಸೇರು
೫೭ = ೭೪

ಕು
∴ ೧ = ೨ ಸೇರು (೭೪ ÷ ೫೭ = ೨) ಪುನಃ ೭೪ ಕುದುರೆಗಳು ಎಷ್ಟು ತಿನ್ನುವವು. ಒಂದು ಕುದುರೆಯು ೨ ಸೇರು ತಿನ್ನುವದು. ಆಂದ ಮೇಲೆ ೭೪ ಕುದುರೆಗಳ ೨ ಪಟ್ಟು ಇಚ್ಛಿತ ಸೇರು ಕಡಲೆ ಗಳಿರುವವು. ಆದುದರಿಂದ ಗುಣಿಸಬೇಕಾಗುವದು.

ಕು
೧ = ೨ ಸೇರು

ಕು
∴ ೭೪ = ೧೪೮ ಸೇರು (೭೪×೨=೧೪೮)

ಏಕಮಾನಪದ್ಧತಿಯ ಲೆಕ್ಕಗಳಲ್ಲಿ ಮೊದಲು ಒಂದಕ್ಕೆ ತೆಗೆದುಕೊಳ್ಳುವದು, ಆಮೇಲೆ ಹೇಳಿದಷ್ಟು ವಸ್ತುಗಳಿಗ ಬೆಲೆ ತೆಗೆದುಕೊಳ್ಳುವದು ಎಂಬದಾಗಿ ಅನೇಕ ಉದಾಹರಣಗಳಿಂದ ದೃಢಮಾಡಬೇಕು. ೧ಕ್ಕೆ ತೆಗೆದುಕೊಳ್ಳುವಾಗ ಭಾಗಾಕಾರ ಮಾಡಬೇಕಾಗುವದು. (ಯಾಕೆ?) ಬಳಿಕ ಇಂಥ ಅನೇಕ ವಸ್ತುಗಳಿಗೆ ಬೆಲೆ ತೆಗೆಯುವಾಗ ಗುಣಾಕಾರ ಮಾಡಬೇಕಾಗುವದು. (ಯಾಕೆ?) ಹೀಗೆ ಭಾಗ, ಪಟ್ಟು, ಭಾಗಾಕಾರ, ಗುಣಾಕಾರ ಹೀಗೆ ವಿಚಾರಕ್ಕೂ ಕೃತಿಗಳಿಗೂ ಸಂಬಂಧ ವುಂಟಾಗುವಂತೆ ಕಲಿಸಿದರೆ ಯಾಂತ್ರಿಕರೀತಿಯು ಅಪಾಯಕಾರಕ ಪದ್ಧತಿಯೂ ತಪ್ಪುವದು. ರೀತಿಯು ಕಾರ್ಯಕಾರಣ ಸಂಬಂಧಗಳು ಗೊತ್ತಾಗುವವು. ವ್ಯವಹಾರದಲ್ಲಿಯು ಲೆಕ್ಕಗಳ ಅಜಮಾಸ ಉತ್ತರದ ಕಲ್ಪನೆ ಮೊದಲು ಮಾಡಿ ಬಳಿಕ ಉತ್ತರ ಹೇಳಲಿಕ್ಕೆ ಬರುವದು. ಹೀಗಾಗುವದರಿಂದ ತಪ್ಪು ಉತ್ತರ ಹೇಳುವ ಕೆಟ್ಟ ರೂಢಿಯು ತಪ್ಪಿಹೋಗುವದು. ಆದುದರಿಂದ ಏಕಮಾನ ಪದ್ಧತಿಯ ಉಪಯುಕ್ತತೆಯು ತಾನೇ ಸ್ಪಷ್ಟವಾಗುವಂತೆ ಆದೆ.

ಏಕಮಾನಪದ್ಧತಿ ಕಲಿಸುವ ಟಿಪ್ಪಣಿಯನ್ನು ದಿಗ್ದರ್ಶನಾರ್ಥವಾಗಿ ತೆಗೆದು ತೋರಿಸಿದೆ. ಹೀಗೆಯೇ ತೆಗೆಯಬೇಕೆಂದಲ್ಲ. ತಮತಮಗೆ ಅನುಕೂಲವೆನಿಸಿದಂತೆ ತೆಗೆದುಕೊಳ್ಳಬಹುದು. ಕಲಿಸಿ ತೋರಿಸಿ ಈ ಟಿಪ್ಪಣಿ ತೆಗೆದದೆ.

ಟಿಪ್ಪಣಿ

ಏಕಮಾನಪದ್ಧತಿ

೩ನೆಯ ಇಯತ್ತೆ

ವೇಳೆ— ೪೦ ನಿ.

ಉದ್ದೇಶ— ಏಕಮಾನಪದ್ಧತಿಯ ಕಲ್ಪನೆ ತಂದುಕೊಡುವರು.

೧. ೫೬ ಹಣ್ಣುಗಳನ್ನು ೮ ಹುಡುಗರು ಸರಿಯಾಗಿ ಹಂಚಿಕೊಂಡು ತಿಂದರು. ಒಬ್ಬೊಬ್ಬ ಹುಡುಗನ ಪಾಲಿಗೆ ಎಷ್ಟೆಷ್ಟು ಬಂದವು ?

೨. ಧಾರವಾಡದಿಂದ ಹುಬ್ಬಳ್ಳಿ ೧೨ ಮೈಲು ಅದೆ. ೨ ಆಣೆ ಉಗೆಬಂಡಿ ಹಾಸಲು ಅದೆ. ೧ ಮೈಲಿನ ಚಾರ್ಜು ಎಷ್ಟಾಯಿತು ?

೩. ಒಬ್ಬ ಭಿಕ್ಷುಕನಿಗೆ ಗಿರ್ದ ಬಕ್ಕರಿಯಂತೆ ೧೦೦ ಜನ ಭಿಕ್ಷುಕರಿಗೆ ಕೊಟ್ಟರೆ ಎಷ್ಟು ಬಕ್ಕರಿಗಳು ಬೇಕಾಗುವವು ?

೪. ಒಂದು ಖುರ್ಚಿಗೆ ೪ ರೂ. ಆದರೆ ೮ ಖುರ್ಚಿಗಳ ಬೆಲೆ ಎಷ್ಟು ?

೫. ಒಂದು ಮೋಟರಿನಲ್ಲಿ ೧೨ ಜನರು ಕುಳಿತರೆ ೮ ಮೋಟರುಗಳಲ್ಲಿ ಎಷ್ಟು ಜನರು ಕೂಡುವರು ?

ಹಾಗಾದರೆ—

೩೭ ಜನರರಿಗೆ ೭೪ ಹಣ್ಣುಗಳನ್ನು ಸರಿಯಾಗಿ ಹಂಚಿಕೊಟ್ಟಂತೆ ೫೬ ಜನರಿಗೆ ಕೊಟ್ಟರೆ ಎಷ್ಟು ಹಣ್ಣುಗಳು ಬೇಕಾಗುವವು ? ಇದನ್ನು ಮಾಡಲಿಕ್ಕೆ ಬಂದೀತೇ ? ಇಂಥ ಲೆಕ್ಕಗಳನ್ನು ಸುಲಭವಾಗಿ ಮಾಡುವ ರೀತಿಯನ್ನು ಈವಿನ ಕಲಿಸೋಣ.

(೧) ಒಂದರ ಬೆಲೆ ೪ ಹಣ್ಣುಗಳಿಗೆ ಅರ್ಧ ರೂಪಾಯಿ ಆದರೆ ೧೮ ಹಣ್ಣುಗಳಿಗೆಷ್ಟು ತೆಗೆದುಕೊಳ್ಳುವದು?

ಈ ಲೆಕ್ಕದಲ್ಲಿ ಧಾರಣಿ ಹ್ಯಾಗೆ ಹೇಳಿರುವನು?

ಎಷ್ಟರ ಧಾರಣಿ ತೆಗೆಯಲಿಕ್ಕೆ ಹೇಳಿರುವನು?

ಧಾರಣಿ ಎಷ್ಟಕ್ಕೆ ಇದ್ದರೆ ಅನುಕೂಲವಾಗುತ್ತದೆ?

ಲೆಕ್ಕ ತೆಗೆಯಲಿಕ್ಕೆ ಹಗುರಾಗಬೇಕಾದರೆ ಎಷ್ಟಕ್ಕೆ ತೆಗೆದುಕೊಳ್ಳಬೇಕು? ಒಂದು ಹಣ್ಣಿನ ಬೆಲೆ ತೆಗೆ.

ಹ. ಆಣೆ
೪ = ೮
∴ ೧ = ೨

(೨) ಅಂಥ ಅನೇಕ ೧೮ ಹಣ್ಣುಗಳ ಬೆಲೆ ತೆಗೆಯೋಣ. ವಸ್ತುಗಳ ಬೆಲೆ ತೆಗೆಯುವದು.

ಎಷ್ಟು ಹಣ್ಣುಗಳ ಬೆಲೆ ತೆಗೆಯಲಿಕ್ಕೆ ಹೇಳಿದೆ?

ಹ.
೧ = ೨ ಆಣೆ
∴ ೧೮ = ೩೬ ,,
= ೨ ರೂ. ೪ ಆ.

೩ ರೂಢಿ

ಧಾರವಾಡದಿಂದ ಹುಬ್ಬಳ್ಳಿ ೧೨ ಮೈಲು ಅದೆ. ಉಗೆಬಂಡಿ ಹಾಸಲು ೨ ಆಣೆ ಆದೆ. ಧಾರವಾಡದಿಂದ ಹಾವೇರಿ ೬೦ ಮೈಲು ಇದ್ದರೆ ಅಲ್ಲಿಗೆ ಹಾಸಲು ಎಷ್ಟು ಇರಬೇಕು?

I ಮೊದಲು ಮೇಲೆ ಹೇಳಿದಂತೆ ೧೨ ಮೈ. = ೨ ಆಣೆ
ಎಷ್ಟಕ್ಕೆ ತೆಗೆದುಕೊಳ್ಳಬೇಕು? ∴ ೧ ಮೈ. = ೨ ಪೈ.
II ಆ ಮೇಲೆ ಎಷ್ಟಕ್ಕೆ ತೆಗೆಯಬೇಕ ು ∴ ೬೦ = ೧೨೦ ಪೈ.
= ೧೦ ಆಣೆ

ವೋಟರು ೧೫ ತಾಸಿನಲ್ಲಿ ೪೫೦ ಮೈಲು ಓಡಿತು. ಮರುದಿನ ಮತ್ತೆ ೩ ತಾಸು ಹೋಗಲು ಊರು ಬಂತು. ಆ ಎರಡು ಊರುಗಳ ಅಂತರವೆಷ್ಟು?

I ಮೊದಲು ಎಷ್ಟಕ್ಕೆ ತೆಗೆಯಬೇಕು? ೧೫ ತಾ. = ೪೫೦ ಮೈ.
II ಆ ಮೇಲೆ ಎಷ್ಟಕ್ಕೆ ತೆಗೆಯಬೇಕು? ∴ ೧ ತಾ. = ೩೦ ಮೈ.
೩ ತಾ + ೧೫ ತಾ = ೧೮ತಾ.
೧ ತಾ: = ೩೦ ಮೈಲು.
∴ ೧೮ = ೫೪೦ ಮೈಲು.

ಟೀಪು:— ಈ ತರದ ಲೆಕ್ಕಗಳನ್ನು ಮಾಡುವಾಗ ಮೊದಲು ಎಷ್ಟರ ಬೆಲೆ ತೆಗೆದುಕೊಳ್ಳಬೇಕು. ಗಟ್ಟಿಯಾಗಿ ನೆನಪು ಉಳಿಯಿತೇ? (೨ ಸಾರೆ ಕೇಳಿಕೊಳ್ಳಬೇಕು)

ಉಪಸಂಹಾರ

೧. ಮೊದಲು ಮೇಲೆ ಬರೆದ ಲೆಕ್ಕ ಮಾಡಿ ತೋರಿಸಿರಿ.

೨. ಭೀಮನು ಧಡೆ ಬೆಣ್ಣೆ ತೂಗಿಸಿಕೊಂಡು ೨ ರೂ. ೪ ಆಣೆ ಕೊಟ್ಟನು. ಅದನ್ನು ನೋಡಿ ಮತ್ತೊಬ್ಬನು ೩ ಸೇರು ತೆಗೆದುಕೊಂಡನು. ಎಷ್ಟು ಕೊಡಬೇಕಾಗುವದು?

ಪ್ರಕಟನ

ಕರ್ನಾಟಕ ಬುಕ್ ಕಮಿಟೀಯವರು ೧೯೩೮ ಮಾರ್ಚ ತಿಂಗಳಿನಲ್ಲಿ ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು

ಕೆಳಗೆ ಬರೆದಂತೆ ಅದೆ

ಶಿ=ಶಿಕ್ಷಕರು ವಿ=ವಿದ್ಯಾರ್ಥಿಗಳು; T=ಟಿಕ್ಸ್ಟ; L=ಲಾಯಬ್ರರಿ; ಪ್ರಾ. ಶಾ=ಪ್ರಾಥಮಿಕ ಶಾಲೆಗಳು; ಮಾ. ಶಾ=ಮಾಧ್ಯಮಿಕ ಶಾಲೆಗಳು

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂ. ಮಾಡಿದೆ.	ಮಂಜೂರೀ ನಂಬರು ಇ. ಸಾ. ರ ನಂಬರು. ಡಾಯರೆಕ್ಟರ ಸಾ. ರ ನಂ.	
೧	ಚಿತ್ರಮಯ ಬಾಲ ಟೋಧೆ ೧ನೆ ಆ. ೧೯೩೬	ವಿ. ವಾಯ್. ಡಬ್ಲ್ಯೂ. ಜಾಹಗಿರದಾರ ಹೆ. ಮಾ. ಉರ್ದು ಶಾಳಾ ನಂ.–೨ ಗದಗ	ವಿದ್ಯಾವಿಲಾಸ ಬುಕ್‌ಡಿಪೋ ಗದಗ	೦–೧–೬	ಪ್ರಾ. ಶಾ. ಗಳ T ಬುಕ್ಕಾಗಿ	47 P 9534 17–3–38 S.86-C-770-C 25–2–38	ಪ್ರಾ. ಶಾ.
೨	ಇಂಗ್ಲಂಡಿನ ಸಂಕ್ಷಿಪ್ತ ಇತಿಹಾಸ ಪ್ರಥಮ ಭಾಗ ೧೯೩೬	ಏ. ಕೆ. ವಿ. ದರಾಯ್ ಸ್ವಾಮಿ ೨೫ ದತ್ತನಿವಾಸ ೬ನೆ ಕ್ರಾಸರೋಡ ಮಲ್ಲೇಶ್ವರಂ ಬೆಂಗಳೂರ	ಭಾರತ ಪಬ್ಲಿಸಿಂಗ್ ಹೌಸ ನಂ. ೪೨೨೩ ಅವೆನ್ಯೂರೋಡ ಬೆಂಗಳೂರ ಶಿಟಿ	೦–೦–೦	ಮಾಧ್ಯಮಿಕ ಶಾಲೆಗಳ T ಬುಕ್ಕಾಗಿ ಮಾ. ಶಾ. ಗಳ ಹಾಗು ವಿ. ಗಳ ಮತ್ತು ಶಿ. ರ L ಬುಕ್ಕಾಗಿ	ಸದರ 9543 18–3–38 ಸದರ 765–C– 25–2–38	

ಕನ್ನಡ "ವರ್ಧಪ್ರಾಯೋಜ" ಪರೀಕ್ಷೆ ೧೯೩೯

೧. ಪರೀಕ್ಷೆಯ ವಿಷಯಗಳು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧ್ಯಸಾಹೇಬರು ರಚಿಸಿರುವ ಪ್ರಾಕ್ಟಿಕ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆ ಟಿಪ್ಪಣಿ, ಸ್ವತಂತ್ರನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

ಉಮೇದವಾರರು ಪರೀಕ್ಷೆಗಿರುವ ಒಟ್ಟು ಗುಣಗಳಲ್ಲಿ ೧೦೦ ಕ್ಕೆ ೬೫ಕ್ಕಿ ಕಡಿಮೆಯಿಲ್ಲದಷ್ಟು ಗುಣಗಳನ್ನು ಪಡೆದಿರಬೇಕು. ಮತ್ತು ಯಾವದೊಂ ವಿಷಯವನ್ನು ತೀರ ಅಸಮಾಧಾನಕರವಾಗಿ ಬರೆದು ಪಾಸಾಗಿರಕೂಡದು.

೨. ಪರೀಕ್ಷೆಯ ಇನಾಮು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆಕೊಟ್ಟು ಆ ನಿಯಮಗಳಿಗನುಸಾರವಾಗಿ ಪಾಸಾಗಿ ಮೊದಲನೆಯ ನಂಬರು ಪಡೆದ ದಕ್ಷಿಣಭಾಗದೊಳಗಿನ ಉತ್ತಮ ಉಮೇದವಾರರಿಗೆ ೮೦ ರೂ. ಇನಾಮು ದೊರೆಯುವದು.

೩. ಅರ್ಜಿಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡಲಪೇಕ್ಷಿಸುವವರು ೧೯೩೯ನೆಯ ಇಸವಿಯ ಜುಲಾಯಿ ತಿಂಗಳ ೬ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

೪. ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೯ನೆಯ ಇಸವಿಯ ಜುಲಾಯಿ ತಿಂಗಳ ೧೨ನೆಯ ತಾರೀಖು ಬುಧವಾ ಮತ್ತು ಮುಂದಿನ ಎರಡು ದಿವಸಗಳಲ್ಲಿ ೧೨ ಗಂಟೆಯಿಂದ ಧಾರವಾಡ ಟ್ರೇನಿಂ ಸ್ಕೂಲಿನಲ್ಲಿ ಈ ಪರೀಕ್ಷೆಯು ನಡೆಯುವದು.

೫. ಪ್ರಶ್ನಕಾಗದಗಳು ಕೆಳಗೆ ಬರೆದಂತೆ:—

೧ನೆಯದು	ವಿಷಯ	ಪ್ರಾಕ್ಟಿಕ್ಯಮಾಲೆ	ಮು.	ಅವಧಿ ೩ ಗಂಟೆ	ಗುಣಗ
೨ನೆಯದು	,,	ಹಳಗನ್ನಡ ನಿಬಂಧ ಮತ್ತು ಪದ್ಯರಚನೆ	,,	,, ,,	೧೦೦
೩ನೆಯದು	,,	ಹೊಸಗನ್ನಡ ನಿಬಂಧ	,,	,, ,,	೧೦೦

ಶಿಕ್ಷಣ ಸಮ್ಮೇಲನ ರಾಮದುರ್ಗ ಸಂಸ್ಥಾನ

ರಾಮದುರ್ಗ ಸಂಸ್ಥಾನದ ಕನ್ನಡ, ಮರಾಠಿ ಇಂಗ್ಲಿಷಶಾಲೆಗಳ ಶಿಕ್ಷಣ ಉಧ್ಧಾರಣೆಯ ನಿಮಿತ್ತವಾಗಿ ಸಂಸ್ಥಾನದ ಶಿಕ್ಷಣಾಧಿಕಾರಿಗಳು ಒಂದು ಸಮ್ಮೇಲನ ನ್ನು ತಾ. ೧೫-೪-೧೯೩೫ ರಿಂದ ೧೮-೪-೧೯೩೫ ರ ವರೆಗೆ ನೆರೆಯಿಸಿದರು. ಬಿ. ಜಿ. ಸಿ. ರಡ್ಡಿ ಎಂ. ಎ. ಬಿಟಿ. ಬೆಳಗಾಂವ ಮಿಶನ್ ಹಾಯಸ್ಕೂಲ ಹೆಡ್ ಮಾಸ್ತರರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು.

೧. ಮೆ. ಜಿ. ಡಿ. ಕಿಣೀಕರ ಬಿ. ಎ., ಬಿಟಿ. ಎ./ಇ.ಸಾ. ರಾಮದುರ್ಗ ಸಂ.
೨. ಶ್ರೀ. ಎಸ್ ಟಿ. ಜೋಶಿ ಬಿ. ಎ., ಬಿ. ಟಿ., ಡಿ. ಎ. ಇ., ರಾಮದುರ್ಗ
೩. ಶ್ರೀ. ಹೂಲಿ ಅಸಿ. ಮಾ. ಇಂಗ್ಲಿಷ ಶಾಲಾ ರಾಮದುರ್ಗ.
೪. ಶ್ರೀ. ಪುರಾಣಿಕ ಎ. ಇ. ಆಫೀಸ ಕ್ಲಾರ್ಕ ರಾಮದುರ್ಗ.

ಈ ಮಹನೀಯರು ಮಿಗಿಲಾದ ಶ್ರಮಸಾಹಸಗಳಿಂದ ಪ್ರಾ. ಶಿ. ರಿಗೆ ರವಾಗುವಂತೆ ಅನೇಕ ಉಪಕರಣಗಳನ್ನು ತರಿಸಿ, ಮಾಡಿಸಿ ಸಂಗ್ರಹಿಸಿದ್ದರು. ಕ್ಷಕರ ಪ್ರತಿನಿತ್ಯದ ಕೆಲಸಕ್ಕೆ ಉಪಯೋಗಬೀಳಬೇಕೆಂದು ಚಲೋ ಶಿಕ್ಷಕರ ಡೆಯಿಂದ ಮಾಡರಿ ಪಾಠಗಳನ್ನು ಕೊಡಿಸಿದರು. ಮರಾಠಿ ಪಾಠಗಳ ಮಾದರಿ ಾಗಿ ಪುಣೆಯಿಂದ ಶಿಕ್ಷಕರು ಬಂದಿದ್ದರು. ಧಾರವಾಡದ ಫ್ರ್ಯಾಕ್ಟಿಸಿಂಗ್ ಸ್ಕೂಲಿ ಂದ ಬಂದ ಮಿ. ಆರ್. ಎಸ್. ಕುಂಬಾರ, ಮಿ. ಜಿ. ಗೋ. ಕುಲಕರ್ಣಿಯವರು ಾದರಿ ಪಾಠಗಳನ್ನು ಕೊಟ್ಟರು. ಶ್ರೀ. ಅಮ್ಮಣ್ಣಿ ಬಿ. ಎ., ಬಿ. ಟಿ. ಅಸಿ. ಮಾ. ಶನ ಹೈಸ್ಕೂಲ, ಧಾರವಾಡ. ಶ್ರೀ. ಪ್ರ. ಗೋ. ಕುಲಕರ್ಣಿ ಬೆಳಗಾವ. ್ರೀ. ಎಚ್. ಎಲ್. ಕುಲಕರ್ಣಿ ಚಿಕ್ಕೋಡಿ ಇವರು ಸಮ್ಮೇಲನದಲ್ಲಿ ಚೆನ್ನಾಗಿ ಾಠಗಳನ್ನು ಕೊಟ್ಟರು. ಸಮ್ಮೇಲನಕ್ಕೆ ಬೇಕಾಗುವ ಎಲ್ಲತರದ ಸಂಗತಿಗಳು ಕ್ಷ ಸಮಯಕ್ಕೆ ಕೂಡಿದ್ದರಿಂದ ಸಮ್ಮೇಲನಕ್ಕೆ ಒಳ್ಳೇ ಕಳೆಯೇರಿತು. ಇಂಥ ಮ್ಮೇಲನಗಳು ಕಾಲಕಾಲಕ್ಕೆ ನೆರೆದರೆ ಆಗಾಗ ಆಗುತ್ತಲಿರುವ ಶೈಕ್ಷಣಿಕ ಉಧ್ಧಾರಣೆಗಳು ಎಲ್ಲ ಶಿಕ್ಷಕರಿಗೂ ಗೊತ್ತಾಗುವವು. ಸಂಸ್ಥಾನದ ಅಧಿಕಾರಿಗಳು ಮನಹಿಸಿ ಈ ಸ್ತುತ್ಯ ಕಾರ್ಯವನ್ನು ಕೈಕೊಂಡು ಯಥಾಯೋಗ್ಯವಾಗಿ ಾಗಸಾಗುವಂತೆ ಯತ್ನಿಸಿದ್ದು ಅವರಿಗೆ ತುಂಬಾ ಶ್ರೇಯಸ್ಕರವಾಗಿದೆ.

ಓರ್ವಪ್ರೇಕ್ಷಕ.

Reg. No. B. 3691

ಓದಿರಿ ! ತ್ವರೆಮಾಡಿರಿ!

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

(೧) ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ. ಎಡ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

(೨) ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಸರ ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

(೩) ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರು ಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮೀಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಮೇ-ಜೂನ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ
Kannada Prathamika Shikshana

ಸಂಪಾದಕರು:
ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ಸಂ.	ವಿಷಯ.	ಪುಟ.
	ಮೇ ೧೯೩೮	
೧	ಮೆ. ಸೈಯ್ಯದ ನೂರುಲ್ಲಾ ಸಾ ರು	೧
೨.	ಗುಣಾಕಾರ-ಭಾಗಾಕಾರ	೫
೩.	ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು	೧೦
೪	ವರ್ಧಾ ಪ್ಲಾಯಿಝು ಪರೀಕ್ಷೆ	೩೧
	ಜೂನ ೧೯೩೮	
೧.	ನಮ್ಮ ಹೊಸ ಎಜ್ಯುಕೇಶನಲ್ ಇ. ಸಾ. ರು ರಾ. ಬ. ಭೂಪತರಾಯರು	೧
೨.	ವರ್ಧಾ ಶಿಕ್ಷಣದ ಯೋಜನೆ	೬
೩.	ರಾವಸಾಹೇಬ ಮಗದಲ ವೆಂಕಟರಾಯರು	೧೧
೪.	೧೯೩೭ನೆ ಇಸವಿಯ ಹೆ. ಮತ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು	೧೩
೫	೧೯೩೭ನೆ ಇಸ್ವಿಯಲ್ಲಾದ ಟ್ರೇನಿಂಗ ಸ್ಕೂಲಿನ ವಾರ್ಷಿಕ ಪರೀಕ್ಷೆಯ ಪರಿಣಾಮವು	೨೪
೬.	ಹೆ. ಮತ್ಕಳ ವ್ಹ. ಫಾ ಪರೀಕ್ಷೆಯಲ್ಲಿ ಜಾರ್ವಾಯಿನ್ ಪ್ಲಾಯಿಝು ಪಡೆದ ಉಮೇದವಾರರ ಹೆಸರು ..	೨೯
೭.	ಪತ್ರಗಳ ಸಾರಾಂಶ	೩೦
೮	ಪ್ರಕಟನೆ	೩೧

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training, School, Dharwar at his Office.

ಜಾಹೀರಾತು

ರಾಮಾಶ್ರಯ ಬುಕ್‌ಡಿಪೊ, ಧಾರವಾಡ

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೆಟ, ಧಾರವಾಡ.

೨. **ಸ್ಟೇಶನರಿಮತ್ತು ಇತರ ಸಾಮಾನುಗಳ ಶಾಖೆ, ಮಾರ್ಕೆಟ** ಕೋ

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಶಾ
ಕಾಲೇಜುಗಳಿಗೆ ಉಪಯುಕ್ತವಾದ ಟೆಕ್ಸ್ಟಬುಕ್ಕುಗಳೂ ಅವುಗಳ ಟಿಪ್ಪಣಿಗಳ
ಗಾಯಿಡ್, ಡಿಕ್ಷನರಿ, ಮ್ಯಾಪ್ಸ, (ನಕಾಶಗಳು) ಡಾಯರಿ, ಪಂಚಾಂ
ಕಾದಂಬರಿಗಳೂ ಚಿಲ್ಲರೆ ಹಾಗೂ ಠೋಕ ದರದಿಂದ ಯೋಗ್ಯಬೆಲೆಗೆ ದೊರೆಯುತ್ತ

ಧಾರವಾಡದಲ್ಲಿ ಪ್ರಸಿದ್ಧಿಸಲ್ಪಟ್ಟ ಎಲ್ಲ ತರದ ಪುಸ್ತಕಗಳನ್ನು ಅಂ
ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸ ಬೋಧ
ನುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ಧಸ್ಥ
ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟೀಮ
ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ಠೋಕ ಹಾಗೂ ಕಿರುಕಳ ದರದಿ
ಸಿಗುತ್ತವೆ

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಪ
ಕಾಪಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ರಾಂಕಿತ
ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ತಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂ
ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯ
ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಹೆ
ಹಾಕುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತು ಮಾಡುತ್ತೇವೆ.

ಇದಲ್ಲದೆ ಫೂಲ್‌ಸ್ಕೇಪ, ಕ್ರವೂನ್, ಡೆಮಿ, ರಾಯಲ್, ಬಾಂಡ, ಅನ್‌ಗ್ಲೆ
ಹಾಗೂ ಗ್ಲೇಜಕಾಗದ ವ ಕಾರ್ಡಬೋರ್ಡ, ಇನ್ವಿಟೇಶನ್, ಕ್ಯಾಲಿಕೊ ಮುಂ
ಪ್ರಿಂಟಿಂಗ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು
ನಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

**ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ
ತೈಲಗಳೂ ಸಿಗುತ್ತವೆ.**

ಸಾತೆ ಬಿಸ್ಕೀಟು, ಪೇಪರಮಿಠಾಯಿ, ಮೈಸೂರ ಕಾಫೀ ಬೀಜ,
ಚಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ತಮ್ಮ,
ಈಶ್ವರಪ್ಪ ರಾಮಪ್ಪ ಆಕಳವಾಡಿ ಅ್ಯಂಡ ಸನ್ಸ.
ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ ಧಾರವಾ

Mr Sayed Nurullah, B A , and M Ed. (Leeds), Bar-at-Law
Assistant Director, Educational Dept , Bombay Presidency

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೭	ಮೇ ೧೯೩೮	ವರ್ಷ ೧೦ ಸಂ. ೨

ಮೆ. ಸೈಯ್ಯದ ನೂರುಲ್ಲಾ

ಬಿ.ಎ., (ಅಲಹಾಬಾದ) ಡಿ.ಎ. (ಲೀಡ್ಸ), ಎಮ್.ಈಡಿ. (ಲೀಡ್ಸ), ಬಾರ-ಅ್ಯಟ್-ಲಾ.,
ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ

ಸಂತಃ ಸ್ವತಃ ಪ್ರಕಾಶಂತೆ ಗುಣಾ ನ ಪರತೋ ನೃಣಾಮ್ ।
ಆಮೋದೋ ನಹಿ ಕಸ್ತೂರ್ಯಾಃ ಶಪಥೇನ ವಿಭಾವ್ಯತೆ ॥

(ಮನುಷ್ಯರ ಒಳ್ಳೆಯ ಗುಣಗಳು ತಾವಾಗಿಯೇ ಪ್ರಕಾಶಿಸುತ್ತವೆ; ಪರರಿಂದ
ಪ್ರಕಾಶಿತವಾಗಬೇಕಾಗಿಲ್ಲ. ಕಸ್ತೂರಿಯ ಸುವಾಸನೆಯನ್ನು
ನಾವು ಆಣೆತೊಟ್ಟು ಹೇಳಬೇಕಾಗಿಲ್ಲ.)

ಮೆ. ಸೈಯ್ಯದ ನೂರುಲ್ಲಾ ಸಾಹೇಬರು ಉರ್ದು ಮಾತೃಭಾಷೆಯವರಾದರೂ ಮಂಗಳೂರ ಪ್ರಾಂತದವರಾದುದರಿಂದ ಇವರ ದೇಶಭಾಷೆ ಕನ್ನಡ; ಇವರು ದಕ್ಷಿಣ ಕಾನಡಾ ಜಿಲ್ಲೆಯ ಕಾರಕಳ ಎಂಬ ಊರಲ್ಲಿ ೪-೧೦-೧೪೯೪ನೆಯ ಇಸವಿಯ ದಿವಸ ಜನ್ಮಿಸಿದರು.

ಮೇಲೆ ಬರೆದ ಸಂಸ್ಕೃತ ಶ್ಲೋಕದ ಅಭಿಪ್ರಾಯದಂತೆ ಈ ಮೇಧಾವಿಗಳು ಸ್ವತಃ ಉಜ್ವಲಗುಣಗಳಿಂದ ಪ್ರಕಾಶಮಾನರಾಗಿದ್ದಾರೆ. ಶ್ರೇಷ್ಠವಾದ ಬುದ್ಧಿ, ಸ್ವಾಭಾವಿಕವಾದ ಚಟುವಟಿಕೆ, ಯುಕ್ತವಾದ ಪ್ರಯತ್ನ ಇವೇ ಮೊದಲಾದ ಗುಣಗಳುಳ್ಳ ಇವರು ಚಿಕ್ಕಂದಿನಿಂದಲೂ ಚೆನ್ನಾಗಿ ವಿದ್ಯಾಭ್ಯಾಸಮಾಡಿ

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಮೇಲುನಂಬರು ಪಡೆದರು. ವಿದ್ಯಾರ್ಥಿವೇತನಗಳನ್ನು ಪಡೆದು ಕಾಲೇಜಿನಲ್ಲಿ ಅಭ್ಯಾಸಮಾಡಿ ಅಲಹಾಬಾದ ವಿಶ್ವವಿದ್ಯಾಲಯದ ಬಿ. ಎ. ಪದವೀಧರರಾದರು. ಮುಂದೆ ಇಂಗ್ಲಂಡಕ್ಕೆ ತೆರಳಿ ಕಾಯದೆಪಂಡಿತರಾಗಿ ಬಾರ-ಆಟ್-ಲಾ ಪದವಿಯನ್ನು ಹೊಂದಿದರು. ಶಿಕ್ಷಣಖಾತೆಯ ಜ್ಞಾನಕ್ಕಾಗಿ ಅಭ್ಯಾಸಮಾಡಿ ಡಿ. ಎ. ಮತ್ತು ಎಮ್. ಈಡಿ (ಲೀಡ್ಸ್) ಪದವಿಗಳನ್ನು ಹೊಂದಿದರು.

ಮುಂಬಯಿ ಸರಕಾರದವರು ಇವರ ಯೋಗ್ಯತೆಯನ್ನರಿತು ಇವರನ್ನು ೧೯೧೯ರಷ್ಟಿನೆಯ ಇಸ್ವಿಯಲ್ಲಿ ಸೆಂಟ್ರಲ್ ಡಿವಿಜನ್ನಿನ ಎಜ್ಯುಕೇಶನಲ್ ಇನಸ್ಪೆಕ್ಟರರನ್ನಾಗಿ ಮಾಡಿದರು. ಆ ಕೆಲಸವನ್ನು ಸಮರ್ಪಕವಾಗಿ ಮಾಡಿ ಮುಂದೆ ಕೆಲದಿನ ಡಿರೆಕ್ಟರರ ಆಫೀಸಿನಲ್ಲಿ ಅಸಿ. ಡೈರೆಕ್ಟರರಾಗಿ ಕೆಲಸಮಾಡಿ ೧೯೨೩ರಷ್ಟಿನೆಯ ಇಸವಿಯಲ್ಲಿ ಕನ್ನಡಿಗರ ಸುದೈವದಿಂದ ಕನ್ನಡಿಗರಾದ ಇವರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಬಂದರು. ವಯಸ್ಸಿನಿಂದ ಚಿಕ್ಕವರಾದರೂ ಜ್ಞಾನದಲ್ಲಿ ವೃದ್ಧರಾದುದರಿಂದ ಇವರು ಬೇಗನೆ ಇಂಥ ಯೋಗ್ಯತೆಗೇರಿದರು. ೧೯೩೪ನೆಯ ಇಸವಿಯ ದಿಶಂಬರ ತಿಂಗಳಿನಲ್ಲಿ ಧಾರವಾಡದಲ್ಲಿ ನೆರೆದ ಧಾರವಾಡ ಡಿ॥ ನ ಪ್ರಾಥಮಿಕ ಶಿಕ್ಷಕರ ಸಮ್ಮೇಲನದಲ್ಲಿ ಜ್ಞಾನಾನುಭವ ಪೂರಿತವಾದ ಭಾಷಣದಿಂದ ಸಭಿಕರನ್ನೂ, ಪ್ರಾಥಮಿಕ ಶಿಕ್ಷಕರನ್ನೂ ಸಂತೋಷಗೊಳಿಸಿದರು. ತಮ್ಮ ಆ ಭಾಷಣದಲ್ಲಿ ನೂತನ ಶಿಕ್ಷಣಪದ್ಧತಿ, ಬಾಲಕರ ವರ್ಗದಲ್ಲಿ ಉಪಕರಣಗಳ ಆವಶ್ಯಕತೆ ಮುಂತಾದ ಮಹತ್ವದ ವಿಷಯಗಳನ್ನು ಕುರಿತು ಉತ್ತಮವಾಗಿ ಚರ್ಚಿಸಿದರು. ಇದಲ್ಲದೆ ಅಂಟ್ರೇಂಡ್ ಶಿಕ್ಷಕರಿಗೆ ಪದ್ಧತಿಗಳ ಜ್ಞಾನವಿರದ್ದರಿಂದ ಶಿಕ್ಷಣಕಾರ್ಯದಲ್ಲಿ ಆಗುವ ತೊಂದರೆಯನ್ನು ವ್ಯಕ್ತಪಡಿಸಿ ಟ್ರೇನಿಂಗಿನ ಆವಶ್ಯಕತೆಯನ್ನೂ ಸ್ಪಷ್ಟಪಡಿಸಿ ಟ್ರೇಂಡರು ಸಹ ಶಿಕ್ಷಣ ತತ್ವಗಳಿಗನುಸರಿಸಿ ಕೆಲಸಮಾಡಿದರೆ ಮಾತ್ರ ಟ್ರೇಂಡರೆನಿಸುವರೆಂದೂ ಹೇಳಿದರು. ವಿಶೇಷವಾಗಿ ಆರಂಭದ ಇಯತ್ತೆಗಳಲ್ಲಿ ಅನುಸರಿಸಲ್ಪಡುವ ಪದ್ಧತಿಗಳಲ್ಲಿ ಹೆಚ್ಚುಕಡಿಮೆಗಳು ಮೇಲಿಂದಮೇಲೆ ಆಗುತ್ತಿರುವದರಿಂದ ಟ್ರೇಂಡ ಶಿಕ್ಷಕರು ತಾವೂ ವಿದ್ಯಾರ್ಥಿಗಳೆಂದು ತಿಳಿದು ಹೊಸಪದ್ಧತಿಗಳ ಪರಿಚಯವನ್ನು ಕಾಲಕಾಲಕ್ಕೆ ಮಾಡಿಕೊಳ್ಳುತ್ತಿರಬೇಕೆಂಬದನ್ನು ಎಲ್ಲ ಶಿಕ್ಷಕರಿಗೆ ಮನದಟ್ಟಾಗುವಂತೆ ಬೋಧಿಸಿದರು. ಇದಲ್ಲದೆ ವಿದ್ಯಾಖಾತೆಯ ಅಧಿಕಾರಿಗಳ ಕರ್ತವ್ಯವನ್ನು ಜವಾಬುದಾರಿಯನ್ನೂ ಚೆನ್ನಾಗಿ ವ್ಯಕ್ತಪಡಿಸಿದರು. ಗದಗ, ವಿಜಾಪುರ ಮೊದಲಾದ ಕಡೆಗಳಲ್ಲಿ ಕಾಲಕಾಲಕ್ಕೆ ನೆರೆದ ಸಮ್ಮೇಲನಗಳ ಪ್ರವರ್ತಕರು ಇವರು ಅಧ್ಯಕ್ಷರಾಗಿ ಬರುವದರಿಂದ ಶಿಕ್ಷಕವೃಂದಕ್ಕೆ ವಿಶೇಷವಾಗಿ ಲಾಭವಾಗುವದೆಂಬದನ್ನು ಮನಗಂಡು ಇವರನ್ನೇ ಅಧ್ಯಕ್ಷರನ್ನಾಗಿ ಕರೆಯುತ್ತ ಬಂದರು; ಅವರ ಜನ್ನಹ

ವನ್ನು ಮನ್ನಿಸಿ ಇವರಾದರೂ ಆ ಸಮ್ಮೇಲನಗಳಿಗೆ ಆದರದಿಂದ ಹೋಗಿ ಅಲ್ಲಿ ನಡೆಯುವ ಕಾರ್ಯಗಳನ್ನೆಲ್ಲ ಸಮರ್ಪಕವಾಗಿ ಜರುಗಿಸಿ ಸಮ್ಮೇಲನಗಳು ಸಾರ್ಥಕವಾಗುವಂತೆ ಯತ್ನಮಾಡಿದರು.

ಇವರ ಕಾಲಕ್ಕೆ ಸರಕಾರದವರು ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಬಹುದಿನಗಳಿಂದ ನಿಂತುಹೋದ ಮೂರು ವರ್ಷಗಳ ವಿದ್ಯಾಭ್ಯಾಸ ಕ್ರಮವನ್ನು ಪುನಃ ಆರಂಭಿಸಿದರು.

ವರ್ನಾಕ್ಯುಲರ್ ಪರೀಕ್ಷೆಗೆ ಈ ವರೆಗೆ ಒಂದೇ ಇನಾಮು ಇದ್ದದರಿಂದ ಉಮೇದವಾರರು ಹೆಚ್ಚಿಗೆ ಕೂಡುವದಿಲ್ಲವೆಂದು ಕಂಡುಬಂದದ್ದರಿಂದ ಅದನ್ನು ಬದಲಿಸಿ ಆ ರಕಮನ್ನೇ ವಿಭಾಗಿಸಿ ಎರಡು ಇನಾಮುಗಳು ಇರಬೇಕೆಂದೂ ಒಂದು ವೇಳೆ ಯಾವದೇ ಇನಾಮಿನಲ್ಲಿ ಸಮಾನ ಗುಣಗಳನ್ನು ಉಮೇದವಾರರು ದೊರಕಿಸಿದರೆ ಅದನ್ನು ಸರಿಯಾಗಿ ವಿಭಜಿಸಿ ಹಂಚಬೇಕೆಂದೂ ಸರಕಾರದವರಿಂದ ತಿದ್ದುಪಡಿ ಮಾಡಿಸಿದರು. ಈ ತಿದ್ದುಪಡಿಯಿಂದ ಆ ಪರೀಕ್ಷೆಗೆ ಹೆಚ್ಚುಜನ ಉಮೇದವಾರರು ಕೂಡಲಿಕ್ಕೆ ಆಸ್ಪದವಾಯಿತು.

ಕಾಲೇಜು ಹಾಯಸ್ಕೂಲುಗಳಂಥ ಹೆಚ್ಚಿನ ಸಂಸ್ಥೆಗಳ ಕಡೆಗೆ ಲಕ್ಷ್ಯಗೊಟ್ಟಂತೆ ಪಳ್ಳಿಯ ಶಾಲೆಗಳ ತಪಾಸಣೆಗೆ ಹೋದಾಗ ಸಹ ಸೂಕ್ಷ್ಮವಾಗಿ ನಿರೀಕ್ಷಿಸಿ ಕಂಡುಕೊರತೆಗಳನ್ನು ಕಂಡುಹಿಡಿದು ಆ ಪರಿಸ್ಥಿತಿಗೆ ತಕ್ಕಂತೆ ಸುಧಾರಣೋಪಾಯಗಳನ್ನು ಶಿಕ್ಷಕರಿಗೆ ಸೂಚಿಸುತ್ತಿದ್ದರು. ಆ ಸುಧಾರಣೆಗಳಿಗೆ ಬೋರ್ಡಿನ ನೆರವು ಬೇಕಾಗಿದ್ದರೆ ಬೋರ್ಡಿಗೆ ಬರೆದು ಸಹಾಯಮಾಡುತ್ತಿದ್ದರು. ಬಡಶಿಕ್ಷಕರು ಪಳ್ಳಿಯಲ್ಲಿ ತಮಗೊದಗಿದ ತೊಂದರೆಗಳನ್ನು ತಪಾಸಣೆಗೆ ಬಂದಾಗ ವಿದಿತಪಡಿಸಿದರೆ ಶಾಂತರೀತಿಯಿಂದ ಕೇಳಿಕೊಂಡು ಅವರ ಬದಲಿ, ರಜೆ, ಉಪಕರಣಗಳ ಅನುಕೂಲತೆ ಮುಂತಾದ ಕೆಲಸಗಳಿಗೆ ಸಹಾಯವಾಗುವಂತೆ ಬೋರ್ಡಿಗೆ ಬರೆಯುತ್ತಿದ್ದರು. ಇವರು, ಮೇಲೆ ದರ್ಪವಂತರಾಗಿ ತೋರುತ್ತಿದ್ದರೂ ಇವರ ಅಂತಃಕರಣವು ಕೋಮಲವಾಗಿರುವದೆಂಬುದು ಬಹುಜನರ ಅನುಭವಕ್ಕೆ ಬಂದಿದೆ.

ಹೀಗೆ ತಮ್ಮ ಬುದ್ಧಿ, ಗುಣ, ಕರ್ತವ್ಯದಕ್ಷತೆ, ದಯೆ ಇತ್ಯಾದಿ ಗುಣಗಳಿಂದ ಭೂಷಿತರಾಗಿ ೪೦-೪೫ ವರ್ಷಗಳ ವರೆಗೆ ದಕ್ಷಿಣಭಾಗದ ಎಜು ಇಲಾಖೆಯಲ್ಲಿ ಕೆಲಸ ಮಾಡಿ ಇದಕ್ಕೂ ಹೆಚ್ಚಿನ ಪದವಿಗೆ ಎಂದರೆ ಅಸಿಸ್ಟಾಂಟ ಡಾಯರೆಕ್ಟರರ ಪದಕ್ಕೆ ಪೂರ್ಣವಾಗಿ ತೆರಳಿದರೆಂದು ನಮ್ಮೆಲ್ಲರಿಗೆ ಸಂತೋಷವೆನಿಸಿದರೂ ಅವರು ಅಗಲಿ ಹೋದುದಕ್ಕೆ ವಿಷಾದವೂ ಆಗಿರುವದು.

ದೇವರು ಅವರಿಗೆ ಆಯುರಾರೋಗ್ಯಗಳನ್ನು ಹೆಚ್ಚಿಸಿ ಇನ್ನೂ ಚೆನ್ನಾಗಿ ಸೇವೆಯನ್ನು ಮಾಡಲೆಂದು ಹಾರೈಸುತ್ತೇನೆ.

ಮೈ. ಸೈಯ್ಯದ ನೂರುಲ್ಲಾ ಸಾಹೇಬರ ಸ್ಥಳಕ್ಕೆ ಮೈ॥ **ಶಾಸ್ತ್ರಿ**ಯವರು ವಿರಾಜಮಾನರಾಗಿದ್ದಾರೆ. ಅವರ ಸಂಕ್ಷಿಪ್ತ ಚರಿತ್ರವನ್ನು ಪ್ರಾಥಮಿಕ ವಾಚಕರಿಗಾಗಿ ಕೆಳಗೆ ಕೊಟ್ಟಿರುತ್ತೇವೆ.

ರಾವಬಹಾದ್ದೂರ ಭೂಪತರಾವು ಜಮ್ಮೈತರಾವು ಜಿ. ಶಾಸ್ತ್ರಿ

ಎಮ್. ಎ., (ಆನರ್ಸ), ಎಸ್. ಟಿ. ಸಿ. ಡಿ.

ಎಜ್ಯುಕೇಶನಲ್ ಇನಸ್ಪೆಕ್ಟರರು, ದಕ್ಷಿಣಭಾಗ.

ರಾ. ಬ. ಶಾಸ್ತ್ರಿಯವರು ತಮ್ಮ ಸರಕಾರಿ ಕೆಲಸದಲ್ಲಿಯೂ, ಬಿಡುವಿತ್ತ ಕಾಲ್ಯದಲ್ಲಿಯೂ ಲೋಕಾಭಿರಾಮರಾದುದರಿಂದ ರಾವಬಹಾದ್ದೂರ ಎಂಬ ಮನ್ನಣೆಯ ಬಿರುದನ್ನು ಸರಕಾರದವರಿಂದ ಪಡೆದಿದ್ದಾರೆ. ಇವರ ಗ್ರಾಮವು ಸುರತವು. ಸುರತದಲ್ಲಿ ೩-೧೧-೧೮೮೪ನೆಯ ದಿವಸ ಜನ್ಮವೆತ್ತಿದರು. ಚಿಕ್ಕಂದಿನಿಂದ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಉದ್ಯೋಗಿಗಳಾಗಿ ಎಂ. ಏ. (ಆನರ್ಸ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು. ಮುಂದೆ ೧೯೧೦ನೆಯ ಇಸವಿಯಲ್ಲಿ ಸರಕಾರದ ವಿದ್ಯಾಖಾತೆಯ ಅಧಿಕಾರಪದವಿಯಲ್ಲಿ ವಿರಾಜಮಾನರಾದರು.

ತರುವಾಯ ಸುರತ, ಭಡೋಚ, ಅಹಮ್ಮದಾಬಾದ ಜಿಲ್ಲೆಗಳಲ್ಲಿ ಮೊದಲಾದ ಎಜ್ಯುಕೇಶನಲ್ ಇನಸ್ಪೆಕ್ಟರರ ಕೆಲಸ ಮಾಡಿ ಅನುಭವ ಪಡೆದರು. ಬಳಿಕ ಭಡೋಚ ಗವರ್ನಮೆಂಟ ಹಾಯಸ್ಕೂಲಿನ ಹೆಡ್‌ಮಾಸ್ತರರಾದರು (೧೯೧೭). ಹಾಗೆಯೇ ಅಹಮ್ಮದಾಬಾದ ಹೈಸ್ಕೂಲಿನ ಹೆಡ್‌ಮಾಸ್ತರರ ಕೆಲಸವನ್ನು ಮಾಡಿದರು. ೩-೫-೧೯೩೩ರಿಂದ ಉತ್ತರಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಪದವಿಯನ್ನು ಏರಿ ಅಲ್ಲಿ ಚೆನ್ನಾಗಿ ಕೆಲಸ ಮಾಡಿ ೧೯೩೫ನೆಯ ಮೇ ತಿಂಗಳಿನಿಂದ ನಮ್ಮ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದಾರೆ.

ಈ ವರೆಗೆ ತಮ್ಮ ಅನುಭವಕ್ಕೂ ವಿದ್ಯೆಗೂ ಅನುರೂಪವಾಗಿ ಗೌರವಶಾಲಿಗಳಾದ ಹಾಗೆ ನಮ್ಮಲ್ಲಿಯೂ ಯಶಸ್ವಿಗಳಾಗುವಂತೆ ದೇವರು ಅವರಿಗೆ ಮೇಲ್ಮೆಯನ್ನು ದಯಪಾಲಿಸಲಿ.

ಗುಣಾಕಾರ

—ಂಃಂ—

ಲೇಖಕ:—ಶ್ರೀ. ತಟ್ಟೆ ಶಾಮರಾಯರು ಬಿ. ಏ.

ಕೂಡಿಸಬೇಕಾದ ಸಂಖ್ಯೆಗಳೆಲ್ಲ ಒಂದಕ್ಕೊಂದು ಸರಿ ಇರುವ ಬೇರೀಜಿನ ಪ್ರಕಾರಕ್ಕೆ ಗುಣಾಕಾರವೆಂಬ ಹೆಸರು. ಗುಣಾಕಾರವು ಬೇರೀಜಿನ ಪ್ರಕಾರವೇ ಆದುದರಿಂದ ಈ ಪ್ರಕಾರದ ಲೆಕ್ಕವನ್ನು ಬೇರೀಜಿನಂತೆಯೂ ಮಾಡಬಹುದು, ಗುಣಾಕಾರದಂತೆಯೂ ಮಾಡಬಹುದು. ಆದರೆ ಅದನ್ನು ಬೇರೀಜಿನಂತೆ ಮಾಡುವ ಶ್ರಮಕ್ಕಿಂತ ಗುಣಾಕಾರಕ್ಕೆ ಕಡಿಮೆ ವೇಳೆಯೂ ಶ್ರಮವೂ ಹತ್ತುವದರ ಕಾರಣವೇನು? ಬೇರೀಜಿನ ಲೆಕ್ಕವು ಹೆಚ್ಚು ಹೆಚ್ಚು ದೊಡ್ಡದಿದ್ದಂತೆ ಅದಕ್ಕೂ ಗುಣಾಕಾರದ ರೀತಿಗೂ ಸುಗಮತೆಯ ದೃಷ್ಟಿಯಿಂದ ಹೆಚ್ಚು ಹೆಚ್ಚು ವ್ಯತ್ಯಾಸವು ಬೀಳುತ್ತಹೋಗುವದು; ಅಂದರೆ ಬೇರೀಜಿನಂತೆ ಮಾಡುವದು ದುಃಸಾಧ್ಯವಾಗಿಯೇ ಕಾಣಹತ್ತುವದು. ೩ಳಲ×೫೬೭ ಇಂಥ ಲೆಕ್ಕವನ್ನು ಬೇರೀಜಿನಂತೆ ಮಾಡಿದರೆ ಹೇಗಾಗುವದೆಂಬ ವಿಚಾರವನ್ನು ಮನಸ್ಸಿನಲ್ಲಿ ತನ್ನಿರಿ; ಆದರೆ ಇದನ್ನು ಗುಣಾಕಾರದಂತೆ ೮ ವರ್ಷದ ಮಗುವು ಮಾಡಿ ಉತ್ತರ ಹೇಳಬಲ್ಲದು. ಗುಣಾಕಾರವು ಸುಲಭವಾಗುವದಕ್ಕೆ ಮಗ್ಗಿಗಳ ಉಪಯೋಗವೊಂದೇ ಕಾರಣವಲ್ಲ; ಆದರೆ ಮೂರು ಮುಖ್ಯ ಕಾರಣಗಳಿರುವವು.

(೧) ಮಗ್ಗಿಗಳ ಉಪಯೋಗ (ಕೆಲವು ಬೇರೀಜಿನ ಲೆಕ್ಕಗಳನ್ನೂ ಅವುಗಳ ಉತ್ತರಗಳನ್ನೂ ಪಾಠಮಾಡಿ ಇಟ್ಟಿರುವದರಿಂದ ಗುಣಾಕಾರವು ಸುಲಭವಾಗಿ ತೋರುವದು ಆಶ್ಚರ್ಯವಲ್ಲ.)

(೨) ೧೦, ೧೦೦ ಇತ್ಯಾದಿ ಸಂಖ್ಯೆಗಳ (ಒಂದಕ್ಕೊಂದು ಸರಿಯಿರುವ) ಬೇರೀಜನ್ನು ಒಮ್ಮೆಲೆ ಮಾಡುವ ಅನುಕೂಲತೆ (ನಾವು ದಶಕಪದ್ಧತಿಯಲ್ಲಿ ನಮ್ಮ ಸಂಖ್ಯೆಗಳನ್ನು ಬರೆಯುವದೇ ಇದಕ್ಕೆ ಕಾರಣ)

(೩) ಲೆಕ್ಕವನ್ನು ಸಂಕ್ಷೇಪವಾಗಿ ಬರೆದುಕೊಳ್ಳುವ ಹೊಸ ಲೇಖನ ಸಂಕೇತ ಅಂದರೆ, ೩ಳಲ+೩ಳಲ+೩ಳಲ+.....೫೬೭ ಸಂಖ್ಯೆಗಳವರೆಗೆ—ಇದನ್ನು ೩ಳಲ ‹ ೫೬೭ ಹೀಗೆ ಬರೆಯುವದು.

(೨) ರಲ್ಲಿ (೩) ರಲ್ಲಿ ವರ್ಣಿಸಿದ ಉಪಾಯಗಳಿಂದ ೩ಳಲ×೫೬೭ ಈ ಲೆಕ್ಕವನ್ನು **ಬೇರೀಜಿನಂತೆಯೇ** ಅತ್ಯಲ್ಪ ಸ್ಥಳದಲ್ಲಿ ಬರೆದು ತೋರಿಸಲಿಕ್ಕೆ ಬರುವದು. ಹೇಗೆಂದರೆ (೨) ನೆಯ ಉಪಾಯದಿಂದ.

(೩೪೮೦+೩೪೮೦+೩೪೮೦+೩೪೮೦+೩೪೮೦)

+ (೩೪೮೦+೩೪೮೦+೩೪೮೦+೩೪೮೦+೩೪೮೦+೩೪೮೦)

+ (೩೪೮+೩೪೮+೩೪೮+೩೪೮+೩೪೮+೩೪೮+೩೪೮) ಹೀಗಾಯಿತು

(೩) ನೆಯ ಉಪಾಯದಿಂದ

೩೪೮೦೦×೫

+ ೩೪೮೦×೬

+ ೩೪೮×೭ ಹೀಗಾಯಿತು.

ಇನ್ನು (೧)ನೇ ಉಪಾಯ– ಅಂದರೆ ಮಗ್ಗಿಗಳ ಸಹಾಯದಿಂದ ಇದನ್ನು ಹಾಂ, ಹಾಂ ಅನ್ನುವಷ್ಟರಲ್ಲಿ ಮಾಡಿ ಚೆಲ್ಲಬಹುದು. ಗುಣಾಕಾರವೆಂಬ ಮಂತ್ರದಲ್ಲಿ ಕಾಣುವ ಅದ್ಭುತಸಾಮರ್ಥ್ಯದ ಗುಟ್ಟು ತಿಳಿಯಬೇಕೆಂದು ಸ್ವಲ್ಪ ಮೊದಾದ ಲೆಕ್ಕವನ್ನು ತಕ್ಕೊಂಡು ಉದಾಹರಿಸಿ ಇದೆ. ಶಿಕ್ಷಕರು ಹುಡುಗರ ಮುಂದೆ ಗುಣಾಕಾರವು ಬೇರೀಜಿಗಿಂತ ಎಷ್ಟು ಬೇಗನೆ ಆಗುವದು ಎಂಬದನ್ನು ತೋರಿಸಲಿಕೆ

೩
+ ೩
+ ೩
+ ೩
= ೧೨

} ೩×೪=೧೨

ಇಂಥ ಉದಾಹರಣೆಯನ್ನು ತಕ್ಕೊಳ್ಳುವದುಂಟು. ಇದರಿಂದ ಗುಣಾಕಾರ ಸೌಲಭ್ಯವನ್ನು ಹೇಗೆ ಪ್ರದರ್ಶಿಸಿದಂತಾಯಿತು? ಬಲಕ್ಕೆ ಬರೆದ ಲೆಕ್ಕವು ಬೇಗ ಆದದ್ದು ಏನೂ ಸೋಜಿಗವಲ್ಲ; ಯಾಕೆಂದರೆ ಆ ಲೆಕ್ಕದ ಉತ್ತರವನ್ನೇ ಬಾಯಿಪಾಠ ಮಾಡಿರುತ್ತೇವೆ. ಎಡಕ್ಕೆ ತೋರಿಸಿದಂತೆ ಬರೆದರೇನು? ಬಲಕ್ಕಿನಂತೆ ಬರೆದರೇನು? ಹೇಗಾದರೂ ೧೨ ಎಂದು ತಟ್ಟನೆ ಬಾಯಿಪಾಠದ ಬಲದಿಂದ ಹೇಳಬಹುದಲ್ಲ! ಇನ್ನೇನು, ಗುಣಾಕಾರ ಚಿಹ್ನವನ್ನು ಹಾಕಿರುವದರಿಂದ ಬರಹದಲ್ಲಿ ಸಂಕ್ಷೇಪವಾಗಿದೆ ಎಂಬದೇನೋ ನಿಜ. ಆದರೆ ಗುಣನಚಿಹ್ನವನ್ನು ಹಾಕುವದೊಂದೇ ಗುಣಾಕಾರದ ಮುಖ್ಯ ಗುಟ್ಟಲ್ಲ. ಈ ಎಲ್ಲ ಕಾರಣಗಳ ದೆಶೆಯಿಂದ ಉದಾಹರಣೆಯನ್ನು ಆರಿಸುವಾಗ ಇದಕ್ಕೂ ಸ್ವಲ್ಪ ದೊಡ್ಡ ಉದಾಹರಣೆಯನ್ನು ಆರಿಸಿದರೆ ಗುಣಾಕಾರದ ಮಹತ್ವವು ಹೆಚ್ಚು ಸ್ಪುಟವಾಗಿ ತಿಳಿಯುವದು. (ಒಂದಕ್ಕೊಂದು ಸರಿಯಿರುವ) ೧೨ ಸಂಖ್ಯೆಗಳ ಬೇರೀಜನ್ನು ಹೇಗೆ ಒಮ್ಮೆಲೆ ಬರೆಯಬಹುದೆಂಬದನ್ನು ಹುಡುಗರು ತಾವಾಗಿ ಹುಡುಕಿತೆಗೆಯಬಹುದು. ಉದಾಹರಣೆಗೆ ಮೇಲೆ ೪೪×೩ ಇಂಥ ಉದಾಹರಣೆಯನ್ನು ತಕ್ಕೊಳ್ಳಬಹುದು. ಇದರಲ್ಲಿ

ಗುಣಚಿಹ್ನವನ್ನು ಹಾಕುವದರಿಂದ ಆಗುವ ಉಳಿತಾಯವೂ ಅಷ್ಟು ಕಣ್ಣಲ್ಲಿ ಬಂಬುವದಿಲ್ಲ. ಆದ್ದರಿಂದ ಈ ಉದಾಹರಣೆಯನ್ನು ಬೇರೀಜಿನಂತೆ ಬರೆದುಕೊಂಡು ಮಾಡಿದರೂ ಅಡ್ಡಿಯಿಲ್ಲ.

ಳಲ
+ ಳಲ
+ ಳಲ
= ೧ಳಳ

ಲ ಬಿಡಿವಸ್ತುಗಳು ೩ ಸಾರೆ ಬಂದಿರುವದರಿಂದ ಲ×೩=೨ಳ;

ಹ ಹ ಹ ಹ ಹ
ಳ×೩=೧೬; ೧೬ + ೨ = ೧ಳ

ಇನ್ನು ಗುಣಾಕಾರದ ವಿಚಿತ್ರವಾದ ಸೌಕರ್ಯವನ್ನು ನೋಡಿ ತಿಳುಕೊಳ್ಳಲಿಕ್ಕೆ ಸಿದ್ಧರಾದೆವು. ಈಗ ಳಲ×೧೩ ಇಂಥ ಉದಾಹರಣೆಯನ್ನು ತಕ್ಕೊಳ್ಳಬಹುದು.

ಳಲ
× ೧೩
= ಳಲ೦ = ಳಲ × ೧೦
+ ೧ಳಳ + ಳಲ × ೩
= ೬೨ಳ

ಭಾ ಗಾ ಕಾ ರ

ಇದರ ವಿಷಯವಾಗಿ ಶಿಕ್ಷಕರು ಲಕ್ಷ್ಯದಲ್ಲಿಡಬೇಕಾದ ಹಲವು ಸಂಗತಿಗಳಿರುವವು.

(೧) ವಜಾಬಾಕಿಯು ಬೇರೀಜಿನ ವ್ಯಸ್ತವಿಧಿಯಾಗಿರುವಂತೆ ಭಾಗಾಕಾರವು ಗುಣಾಕಾರದ ವ್ಯಸ್ತವಿಧಿಯಾಗಿರುವದು. ಗುಣಾಕಾರವು ಬೇರೀಜಿನ ವಿಶೇಷ ಪ್ರಕಾರವಾಗಿರುವಂತೆ ಭಾಗಾಕಾರವು ವಜಾಬಾಕಿಯ ವಿಶೇಷ ಪ್ರಕಾರವೆಂದೂ ತಿಳಿಯಬಹುದು. ಹೀಗೆ ಭಾಗಾಕಾರವು ಒಂದು ಕಡೆ ಗುಣಾಕಾರಕ್ಕೂ ಒಂದು ಕಡೆ ವಜಾಬಾಕಿಗೂ ಸಂಬಂಧಪಟ್ಟಿರುತ್ತದೆ. ಆದ್ದರಿಂದ ಭಾಗಾಕಾರ ಮಾಡುವಾಗ ಈ ಎರಡೂ ಕೃತಿಗಳ ಅಭ್ಯಾಸವು ಚನ್ನಾಗಿ ಆಗಿರಬೇಕು.

(೨) ಭಾಗಾಕಾರವು ಹೀಗೆ ಗುಣಾಕಾರ ವಜಾಬಾಕಿ ಇವೆರಡಕ್ಕೂ ಸಂಬಂಧಪಟ್ಟಿರುವದರಿಂದ ಎರಡು ಬೇರೆ ಬೇರೆ ಪ್ರಶ್ನೆಗಳಿಂದ ಭಾಗಾಕಾರವು ಹುಟ್ಟುತ್ತದೆ.

ಉದಾ : (ಅ) ೨೪ ರೂಪಾಯಿಗಳನ್ನು ೪ ಮಂದಿಯಲ್ಲಿ ಸರಿಯಾಗಿ ಹಂಚಿರಿ

(ಬ) ೨೪ ರೂಪಾಯಿಗಳಲ್ಲಿ ೪ ರೂಪಾಯಿಯು ಅಳತೆಗಳೆಷ್ಟಾಗುವವು

ಮೊದಲನೆಯ ಪ್ರಕಾರಕ್ಕೆ ಹಂಚುವ ಭಾಗಾಕಾರವೆಂದೂ, ಎರಡನೆಯದಕ್ಕೆ ಅಳತೆಯ ಭಾಗಾಕಾರವೆಂದೂ ಹೆಸರಿಡಬಹುದು. ಅಂಕಿಗಳಿಂದ ಮಾಡುವ ಭಾಗಾಕಾರದ ಕೃತಿಯು ಒಂದೇ ಆದರೂ ಕೊಟ್ಟ ಪ್ರಶ್ನೆಯ ಮೇಲಿಂದ ಕೃತಿಯ ಬರಹವು ಬೇರೆಬೇರೆಯಾಗುವದು. ಹೀಗೆ

(ಅ) ೨೪ ರೂ ÷ ೪ = ೬ ರೂ.

(ಬ) ೨೪ ರೂ ÷ ೪ ರೂ = ೬.

(ಬ) ಪ್ರಕಾರದ ಪ್ರಶ್ನೆಯಲ್ಲಿ, ಹೇಳಿದ ವಿಶೇಷ ಸಂದರ್ಭದ ಮೇಲಿಂದ ಉತ್ತರದಲ್ಲಿ ಬಂದ ೬ ಎಂಬದಕ್ಕೆ ಯಾವ ವಸ್ತುಗಳಿಗೆ ಸಂಬಂಧಿಸಿ ಅರ್ಥ ಕೊಡಬೇಕು ಎಂಬದನ್ನು ನಿರ್ಣಯಿಸಬೇಕಾಗುವದು. ಕೆಳಗಿನ ಉದಾಹರಣೆಗಳನ್ನು ನೋಡಿರಿ.

(i) ೪ ರೂಪಾಯಿಗೆ ಒಂದು ವರಹವೆಂದರೆ ೨೪ ರೂ. ಗಳಿಗೆ ಎಷ್ಟು ವರಹಗಳು ?

(ii) ೪ ರೂ. ಒಂದು ದಿವಸದ ಕೂಲಿಯಾದರೆ ೨೪ ರೂ. ಎಷ್ಟು ದಿವಸದ ಕೂಲಿ ?

(iii) ೪ ರೂ. ಗೆ ಒಂದು ಮಣ ಬೆಲ್ಲವಾದರೆ ೨೪ ರೂ. ಗಳಿಗೆ ಎಷ್ಟು ಮಣ ?

(iv) ೪ ರೂ. ಒಬ್ಬ ಮನುಷ್ಯನ ಪಗಾರವಾದರೆ ೨೪ ರೂ. ಎಷ್ಟು ಜನರ ಪಗಾರ ?

ಇತ್ಯಾದಿ.

(೩) ಭಾಗಾಕಾರವು ಭಾಜ್ಯದ ಹೆಚ್ಚಿನ ಸ್ಥಾನದ ಅಂಕಿಯಿಂದ ಪ್ರಾರಂಭವಾಗುತ್ತದೆ ಉಳಿದ ಎಲ್ಲ ಕೃತಿಗಳು ಎಕ್ಕಂ ಸ್ಥಾನದಿಂದ ಪ್ರಾರಂಭವಾಗುತ್ತವೆ.

(೪) ಭಾಗಾಕಾರದ ಉತ್ತರದಲ್ಲಿ ಬರುವ ಒಂದೊಂದೇ ಅಂಕೆಯು ಮೊದಲು ನಿಶ್ಚಿತವಾಗಿ ತಿಳಿಯುವದಿಲ್ಲ. **ಉದಾ** : ೨೪೧ ÷ ೬೧. ಇಲ್ಲಿ ಉತ್ತರದ ಮೊದಲನೆಯ ಅಂಕೆಯು ೪ 'ಬರಬಹುದು' ಎಂದು ಮೊದಲು ತಿಳಿದುಕೊಂಡು

ಮೇಲೆ ಅದನ್ನು ಪರೀಕ್ಷಿಸಿ ನೋಡಿ ಬಿಟ್ಟು ಉತ್ತರದ ಮೊದಲನೆಯ ಅಂಕಿಯು ಎಂದು ನಿಶ್ಚಯಿಸುತ್ತೇವೆ. ಹಿಂದೆ ಕಲಿತ ಯಾವ ಲೆಕ್ಕಗಳಲ್ಲಿಯೂ ಹೀಗೆ ಪರೀಕ್ಷಿಸಿ ನೋಡುವ ಕೆಲಸವು ಬೀಳುವದಿಲ್ಲ.

(೫) ಉತ್ತರದ ಒಂದೊಂದೇ ಅಂಕಿಯು ಸಿಕ್ಕಹಾಗೆ ಉತ್ತರಕ್ಕೆ ಹೆಚ್ಚು ಹೆಚ್ಚು ಸವಿಾಪವಿರುವ ಬೆಲೆಗಳು ಬರುತ್ತವೆ. ವ್ಯವಹಾರದಲ್ಲಿ ಈತರದ ಸ್ಥೂಲ ಮಾನದ ಉತ್ತರಗಳು ಬೇಕಾಗುವವು. **ಉದಾ:** ೨೩೪ ಘೂಟು ಎತ್ತರವಿರುವ ಕಂಬದ ಅಳತೆಯು ೨೦೦ ಘೂಟು ; ೨೩೦ ಘೂಟು ; ೨೩೪ ಘೂಟು ಪ್ರಸಂಗಾನುಸಾರವಾಗಿ ಇಷ್ಟಿಷ್ಟು ಇರುವದೆಂದು ಹೇಳುವೆವು.

(೬) ಭಾಗಾಕಾರದಲ್ಲಿ ಅಪೂರ್ಣಾಂಕದ ಕಲ್ಪನೆಯು ಮೊದಲು ಬರುವ ಹಂಪು ಶಿಕ್ಷಕರು ತಿಳಿದುಕೊಳ್ಳಬೇಕು. ೨೪ ರೂ ÷ ೩ = ೮ ರೂ. ೨೪ ರೂಪಾಯಿಗಳಲ್ಲಿ ೩ ಸರಿಯಾದ ಭಾಗಗಳನ್ನು ಮಾಡಿ ಅಂಥ ೧ ಭಾಗವನ್ನು ತಕ್ಕೊಂಡರೆ ೮ ರೂ. ಬರುವದು. ಈ ಭಾಗಾಕಾರವನ್ನು $\frac{೧}{೩}$ = ೮ ಹೀಗೆ ಬರೆಯಲಿಕ್ಕೂ ಕಲಿಸಬೇಕು ; ಅಥವಾ ೨೪ರ $\frac{೧}{೩}$ = ೮ ಹೀಗೂ ಒರೆಯಿಸಬೇಕು. ಹೀಗೆ ಅರಿಸಬೇಕು – " ೨೪ರ ಒಂದು ಮೂರನೆಯ ಭಾಗವು ೮ ಆಗುವದು ". ಒಂದು ಕಾಗದದ ಪಟ್ಟಿಯನ್ನು ಮಡಿಚಿ ೩ ಸರಿಯಾದ ಭಾಗಗಳನ್ನು ಮಾಡಿ ೧ ಭಾಗವನ್ನು ತೋರಿಸಿ ಇದು ೧ ಕಾಗದದ ಪಟ್ಟಿಯ ಒಂದು ಮೂರನೆಯ ಭಾಗವೆಂದು ಹೇಳಬಹುದು. ಮುಂದೆ ಅಪೂರ್ಣಾಂಕಗಳನ್ನು ಕಲಿಯುವಾಗ ೧ ಕ್ಕಿಂತ ಹೆಚ್ಚು ಭಾಗಗಳನ್ನು ತಕ್ಕೊಂಡು ಅವುಗಳನ್ನು ' ಒಂದು ತಿನೆಯ ಭಾಗ, ಎರಡು ತಿನೆಯ ಭಾಗಗಳು, ಮೂರು ತಿನೆಯ ಭಾಗಗಳು, ನಾಲ್ಕು ತಿನೆಯ ಭಾಗಗಳು ' ಹೀಗೆ ಎಣಿಸಲಿಕ್ಕೆ ಕಲಿಯುವರು.

(೭) ಭಾಗಾಕಾರದ ಲೆಕ್ಕದಲ್ಲಿ ಭಾಗಾಕಾರ. ಬಾಕಿ ಎಂದು ಎರಡು ಸಂಜ್ಞೆಗಳನ್ನು ತೆಗೆಯುವದಿರುವದು. ತಿ) $\frac{೨೦}{೬\text{ಬಾಕಿ}೨}$ ಮುಂದೆ ಅಪೂರ್ಣಾಂಕಗಳನ್ನು ಕಲಿತ ಮೇಲೆ ೨೦ ÷ ತಿ = ೬ $\frac{೨}{೩}$ ಹೀಗೆ ೨೦ ಕ್ಕೆ ತಿ ರಿಂದ ಭಾಗಿಸಿ ಬಂದ ಸಂಪೂರ್ಣ ಭಾಗಾಕಾರವನ್ನು ಹೇಳಲಿಕ್ಕೆ ಕಲಿಯುವರು.

(೮) ಭಾಗಾಕಾರವನ್ನು ಕಲಿಸುವಾಗ 'ಭಾಜ್ಯ' ' ಭಾಜಕ ' ಶಬ್ದಗಳನ್ನು ಸರಿಯಾಗಿ ವಾಕ್ಯಗಳಲ್ಲಿ ಉಪಯೋಗಿಸಲಿಕ್ಕೆ ಕಲಿಸಬಹುದು. ಹೀಗೆ ೨೪ ರ ಭಾಜಕವು ತಿ; ತಿ ರ ಭಾಜ್ಯವು ೨೪ ಇರುವದು.

(೯) (೮) ಭಾಜ್ಯ ಭಾಜಕಗಳೆರಡಕ್ಕೂ ಒಂದೇ ಸಂಖ್ಯೆಯಿಂದ ಗುಣಿಸಿದರೆ ಭಾಗಾಕಾರದಲ್ಲಿ ಹೆಚ್ಚು ಕಡಿವೆಯಾಗುವದಿಲ್ಲ.

ಉದಾ : $\frac{೨೪}{೪} = \frac{೨೪}{೪} = ೬$. (ದಶಾಂಶ ಅಪೂರ್ಣಾಂಕಗಳನ್ನು ತಕ್ಕೊಂಡಿಲ್ಲ ಉದಾಹರಿಸಬೇಕೆಂಬ ನಿಯಮವಿಲ್ಲ).

(ಬ, ಭಾಜ್ಯ ಭಾಜಕಗಳೆರಡಕ್ಕೂ
ಒಂದೇ ಸಂಖ್ಯೆಯಿಂದ ಭಾಗಿಸಿದರೆ ಉತ್ತರದಲ್ಲಿ ಹೆಚ್ಚು ಕಡಿಮೆ ಇಲ್ಲ.

ಉದಾ : $\frac{೨೪೦೦}{೪೦೦} = \frac{೨೪}{೪} = ೬$.

(೧೨) ಗುಣಾಕಾರ ಭಾಗಾಕಾರದ ಪಾಠಗಳ ಕ್ರಮ.

(ಅ) ಒಂಟಿ ಅಂಕಿಯಿಂದ ಗುಣಿಸುವದು, ಭಾಗಿಸುವದು.

(ಬ) ೧೦ ರಿಂದ ಗುಣಿಸುವದು, ಭಾಗಿಸುವದು.

(ಕ) ದಶಕಗಳಿಂದ ಗುಣಿಸುವದು, ಭಾಗಿಸುವದು.

(ಡ) ಜೋಡಂಕಿಯ ಸಂಖ್ಯೆಯಿಂದ ಗುಣಿಸುವದು ಭಾಗಿಸುವದು

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು

ಶಿಕ್ಷಣ ವಿಷಯದಲ್ಲಿ ಹೊಸ ಹೊಸ ವಿಚಾರಗಳು ಸೇರಲಿರುವವು. ಶಿಕ್ಷಣ ಪದ್ಧತಿಗಳು ಕಾಲಕ್ಕೆ ಅನುರೂಪವಾದ ಮಾರ್ಪಾಟುಗಳನ್ನು ಹೊಂದಲಿರುವವು ಯಾವ ಯಾವ ವಿಷಯಗಳನ್ನು ಕಲಿಸಬೇಕೆಂಬದನ್ನು ಕುರಿತು ಶಿಕ್ಷಕರೂ ಶಿಕ್ಷಣ ಶಾಸ್ತ್ರಜ್ಞರೂ ವಿಚಾರಿಸುತ್ತಲಿರುವರು. ಹಿಂದಿನಂತೆ ವಿಷಯಜ್ಞಾನವೇ ಶಿಕ್ಷಕನ ಕರ್ತವ್ಯವೆಂದು ಇಂದಿನ ಶಿಕ್ಷಕನು ತಿಳಿದಿರುವದಿಲ್ಲ. ಇಂದಿನ ವಿದ್ಯಾರ್ಥಿಗಳೇ ಕೇವಲ ವಿಷಯಜ್ಞಾನ ಬಲ್ಲವರಾಗಿರದೆ ಆ ಜ್ಞಾನವನ್ನು ವ್ಯವಹಾರದಲ್ಲಿ ರೂಪಾಂತರಿಸಲು ಶಕ್ತರಾಗಿರಬೇಕೆಂದು ಎಲ್ಲರೂ ಪ್ರಯತ್ನಿಸಬೇಕಾಗಿದೆ. ಬಾಲಕರು ಜ್ಞಾನವನ್ನು ಸಂಪಾದಿಸಲಿರುವಾಗ ರೂಢಿಯಲ್ಲಿ ತರುತ್ತಿರಬೇಕು. ಹಿಂದಿನ ಕಾಲದ ಪರೀಕ್ಷೆಯ ಪ್ರಶ್ನೆಕಾಗದಗಳನ್ನು ತೆಗೆದು ನೋಡಿದರೆ ಬಾಲಕರ ಸ್ಮರಣ ಬಲವನ್ನು ಪರೀಕ್ಷಿಸುವ ಪ್ರಶ್ನೆಗಳು ವಿಶೇಷವಾಗಿದ್ದವೆಂಬದನ್ನು ಸಾಕ ಇಂದಿಗೂ ಕಾಣಬಹುದು. ಅಂಥ ಜ್ಞಾನವು ಸಾಕಾಗದೆಂದು ಶಿಕ್ಷಣಶಾಸ್ತ್ರ ಏಕಕಂಠದಿಂದ ಕೂಗುತ್ತಿರುವದು. ಬಾಲಕರು ಚಟುವಟಿಕೆಯುಳ್ಳವರಾಗಬೇಕ ಅವರ ನಿರ್ಣಯಬಲವು ಪ್ರಬಲವಾಗಿರಬೇಕು. ಬಿಕ್ಕಟ್ಟಿನ ಪ್ರಸಂಗವನ್ನು ಕೂಡ ನಿರ್ವಹಿಸಲು ಸಮರ್ಥರಾಗಿರಬೇಕು. ಅಚ್ಚುಕಟ್ಟುತನ, ಓರಣ ಮೊದಲಾ

ಣಗಳು ಬಾಲಕರಲ್ಲಿ ಚಟದ ರೂಪವನ್ನು ಹೊಂದಿರಬೇಕು. ಈ ರೀತಿ ಂಟಾಗುವಹಾಗೆ ಪ್ರತಿನಿತ್ಯ ಪಾಠಗಳ ಕ್ರಮದಲ್ಲಿ ಪ್ರಶ್ನಗಳಿರಬೇಕು. ಕಾಲ ಲಕ್ಕೆ ಆಗುವ ಪರೀಕ್ಷೆಗಳಲ್ಲಿಯೂ ಅಂಥ ಪ್ರಶ್ನಗಳಿರಬೇಕು. ಸಾರಾಂಶ ಸಂದರೆ— **ಬುದ್ಧಿಮಾಪನದಲ್ಲಿ** ಹೇಳಿದಂತೆ ಪ್ರಶ್ನಗಳ ಸ್ವರೂಪದಲ್ಲಿ ತಕ್ಕ ಸ್ಥಲಾವಣೆಗಳಾಗಬೇಕು.

ಪರೀಕ್ಷೆಯ ಪ್ರಶ್ನಕಾಗದವೇ ಉತ್ತರವನ್ನು ಬರೆಯುವ ಕಾಗದವಾಗಿರ ಕು. ತುಸ ಪ್ರಶ್ನಗಳ ಬದಲಾಗಿ ಅನೇಕ ಪ್ರಶ್ನಗಳನ್ನು ಒಳಗೊಂಡಿರಬೇಕು. ತ್ತರಗಳನ್ನು ತುಸ ಶಬ್ದಗಳಲ್ಲಿ ಹೇಳಲು ಸಾಧ್ಯವಿರಬೇಕು. ಕೇಳಿದ ಪ್ರಶ್ನಗಳು ಲಕರ ವಿಷಯಜ್ಞಾನವನ್ನೂ ಅವರ ಬುದ್ಧಿಯನ್ನೂ ಪರೀಕ್ಷಿಸಬೇಕು. ದು ಪ್ರಶ್ನಕ್ಕೆ ಅನೇಕ ಉತ್ತರಗಳನ್ನು ಅಲ್ಲಿಯೇ ಕೊಟ್ಟು ಅವುಗಳಲ್ಲಿ ಯಾದವು ಯಾವವು ಎಂಬದನ್ನು ಕಂಡುಹಿಡಿಯಲು ಹಚ್ಚಬೇಕು. ತುಸು ಳೆಯಲ್ಲಿಯೇ ತಟ್ಟನೆ ಬರೆಯುವ ರೂಢಿಯಿರಬೇಕು.

ಹೊಸ ಶಿಕ್ಷಣದ ಯೋಜನೆಯಲ್ಲಿ ಹೇಳುವ ಮೇರೆಗೆ ಕಳೆದ ಸಾರೆಯ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನಗಳಿರುವವು. ನಮ್ಮ ಓದುಗರಿಗಾಗಿ ಅವುಗಳನ್ನು ನಾವು ಇಲ್ಲಿ ಕೊಟ್ಟಿರುವೆವು. ಶಿಕ್ಷಕಮಾತ್ರರು ಅವುಗಳನ್ನು ಓದಿಕೊಂಡು ಈ ಹೊಸರೀತಿಯ ಅಭ್ಯಸನಗಳನ್ನು ತಮ್ಮ ತಮ್ಮ ಬಾಲಕರಿಗಾಗಿ ಮಾಡಿ ಡುವರೆಂದು ನಾವು ಕೋರುತ್ತೇವೆ.

Department of Public Instruction, Bombay

Middle School Scholarship Examination.

1938

೧ನೇ ಪ್ರಶ್ನಕಾಗದ

ಶುಕ್ರವಾರ ತಾ. ೨೫ನೆಯ ಫೆಬ್ರುವರಿ ಸನ್ ೧೯೩೮ ಇಸವಿ.

(ವೇಳೆ: ೨–೩೦ರಿಂದ ೩–೩೦ ವರೆಗೆ)

ಅಂಕಗಣಿತ

ಉಮೇದವಾರರಿಗೆ ಸೂಚನೆ.

ಈ ಪುಸ್ತಕವನ್ನು ತೆರೆದು ನೋಡಿರಿ ಎಂದು ಹೇಳುವ ವರೆಗೆ ಅದನ್ನು ತೆರೆಯಬಾರದು.

ಕೂಡಲೆ ಮುಂದಿನ ಸಂಗತಿಗಳನ್ನು ತುಂಬಿರಿ: —

ಹೆಸರು, ತಂದೆಯ ಹೆಸರು, ಅಡ್ಡಹೆಸರು.....

ಉಮೇದವಾರನ ನಂಬರು.....ವಯಸ್ಸು....ವರ್ಷ....ತಿಂಗಳು.

ಹುಟ್ಟಿದ ದಿವಸ.....ಶಾಲೆ.....

ಧರ್ಮ ಮತ್ತು ಜಾತಿ.....

ಈ ಪುಸ್ತಕವನ್ನು ತೆರೆದು ನೋಡಿರಿ ಎಂದು ಹೇಳಿದಾಗಿನಿಂದ ಉತ್ತರ ಬರೆಯಲಿಕ್ಕೆ ನಿಮಗೆ ಸರಿಯಾಗಿ ಒಂದು ತಾಸು ಅವಧಿಯು ದೊರೆಯುವುದು; ಎಲ್ಲ ಪ್ರಶ್ನೆಗಳನ್ನು ಅಷ್ಟು ಹೊತ್ತಿನಲ್ಲಿಯೇ ಬಿಡಿಸಬೇಕು.

ಎಲ್ಲ ಕೆಲಸವನ್ನು ಈ ಪುಸ್ತಕದಲ್ಲಿಯೇ ಮಾಡಬೇಕು. ಉತ್ತರಗಳನ್ನು ಟಿಪ್ಪಿನ ಗೆರೆಗಳ ಮೇಲ್ಬದಿಯಲ್ಲೇ ಬರೆಯಬೇಕು. ಕಚ್ಚಾ ಕೆಲಸವನ್ನು ಮಾಡಲೇಬೇಕಾದರೆ, ಬೀಗಡೆಗೆ ತೆಗೆದ ಗೆರೆಯ ಬಲಕ್ಕೆ ಅದನ್ನು ಮಾಡಿರಿ.

ಆದಷ್ಟು ತೀವ್ರ ಕೆಲಸಮಾಡಿರಿ. ಯಾವದೊಂದು ಲೆಕ್ಕವು ಗಡಚೆನಿಸಿದರೆ, ಅದನ್ನು ಬಿಟ್ಟು, ಮುಂದಿನ ಲೆಕ್ಕವನ್ನು ಮಾಡಿರಿ.

ಪರೀಕ್ಷೆ ನಡೆದಾಗ ಪ್ರಶ್ನೆಗಳನ್ನು ಕೇಳಬಾರದು.

ಇನ್ನು ಪುಸ್ತಕ ತೆರೆಯುವ ಬಗ್ಗೆ ಪರೀಕ್ಷಕರು ಅಪ್ಪಣೆ ಕೊಡುವರು; ಅದನ್ನು ನಿರೀಕ್ಷಿಸುತ್ತ ಕೂಡಿರಿ.

೧. (೧) ಕೂಡಿಸಿರಿ:—

೫೭೫
೬೫೭
೧೪೨
೫೦೪
———
.....

(೨) ಕಳೆಯಿರಿ:—

೪೦೦೩೦
−೩೮೦೬೪
